# ಯುಗರಶ್ಮಿ

ತ್ರೈಮಾಸಿಕ







100

## ಅಹ್ಮದಿಯಾ ಖಿಲಾಫತ್ ಶತಾಬ್ದ

## ವಿಶೇಷ ಸಂಚಿಕೆ 2008



ಪವಿತ್ರ ಕಅ್‌ಬ, ಮಕ್ಕ



ಮಸ್‌ಜಿದ್ ನಬ್‌ವಿ, ಮದೀನ

بِسۡمِ اللّٰہِ الرَّحۡمٰنِ الرَّحِیۡمِ

نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِى الْاَرْضِ كَمَا اسْتَخْلَفَ الَّذِيْنَ مِنْ قَبْلِهِمْ وَلَيُمَكِّنَنَّ لَهُمْ دِيْنَهُمُ الَّذِى ارْتَضٰى لَهُمْ وَلَيُبَدِّلَنَّهُمْ مِّنْۢ بَعْدِ خَوْفِهِمْ اَمْنًا يَعْبُدُوْنَنِىْ لَا يُشْرِكُوْنَ بِىْ شَيْـًٔا وَمَنْ كَفَرَ بَعْدَ ذٰلِكَ فَاُولٰٓئِكَ هُمُ الْفٰسِقُوْنَ ۝

"ನಿಮ್ಮ ಪೈಕಿ ಸತ್ಯವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು". (ಪವಿತ್ರ ಖುರ್‌ಆನ್ 24 : 56)


# ಯುಗರಶ್ಮಿ

ನಿಗಾವಣೆ :
ಮುಹಮ್ಮದ್ ಶಫೀಉಲ್ಲಾಹ್
ಅಮೀರ್, ಅಹ್ಮದಿಯಾ ಮುಸ್ಲಿಂ ಜಮಾಅತ್, ಕರ್ನಾಟಕ

ಸಂಪಾದಕ :
ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 25 | ಡಿಸೆಂಬರ್ 2008 | ಫತಹ್ 1387 | ಸಂಚಿಕೆ : 3 - 4 |
|---|---|---|---|---|


## ವಿಷಯ ಸೂಚಿಕೆ

ಪುಟ


- ✧ ಖಿಲಾಫತ್ : ದ್ವಿತೀಯ ದಿವ್ಯಶಕ್ತಿ 1
- ✧ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
- ✧ ಸಂದೇಶಗಳು 3
- ✧ ನೂರು ವರ್ಷಗಳು ತುಂಬಿದ ಅಹ್ಮದಿಯಾ ಖಿಲಾಫತ್ 11
- ✧ ಖಿಲಾಫತ್‌ನಿಂದ ಲೋಕಶಾಂತಿ 12
- ✧ ಅಹ್ಮದಿಯಾ ಖಿಲಾಫತ್ – ಆಧ್ಯಾತ್ಮಿಕ ನೇತೃತ್ವದ ನೂರು ವರ್ಷಗಳು 26
- ✧ ಮುಸ್ಲಿಂ ಲೋಕ ಮತ್ತು ಖಿಲಾಫತ್ 30
- ✧ ಇಸ್ಲಾಮ್ ಧರ್ಮದಲ್ಲಿ ಖಿಲಾಫತ್ 34
- ✧ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ಪ್ರವಾದಿತ್ವ ಮಾರ್ಗದಲ್ಲಿ ಸ್ಥಾಪಿತ ಖಿಲಾಫತ್) 46
- ✧ ಖಿಲಾಫತ್ ಅನುಗ್ರಹಗಳು 50
- ✧ ಇಸ್ಲಾಮಿನ ಪ್ರಾಥಮಿಕ ಪಾಠಗಳು 57
- ✧ ಇಸ್ಲಾಂ ಕುರಿತು ಅಜ್ಞತೆ 59
- ✧ ಅಹ್ಮದಿಯಾ ಜಮಾಅತಿನ ಮುನ್ನಡೆ 60
- ✧ ಅಹ್ಮದಿಯಾ ವಾರ್ತೆಗಳು 61
- ✧ ಸಂಪಾದಕರಿಗೆ ಪತ್ರ 63
- ✧ ನಿಧನ ವಾರ್ತೆಗಳು 64

# ಅಮೃತ ವಾಣಿಗಳು

(ನಿರಪರಾಧಿಯಾದ) ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುತ್ತದೆ. ಯಾರಾದರೂ ಒಬ್ಬನ ಜೀವವನ್ನು ರಕ್ಷಿಸಿದರೆ ಆತನು ಮನುಷ್ಯರೆಲ್ಲರನ್ನೂ ರಕ್ಷಿಸಿದಂತಾಗುತ್ತದೆ.

– ಪವಿತ್ರ ಖುರ್‌ಆನ್ (5 : 33)

ನಿಮ್ಮ ರಕ್ತ, ನಿಮ್ಮ ಸಂಪತ್ತು, ನಿಮ್ಮ ಗೌರವವು ಈ ಹಜ್ಜ್ ದಿನ, ಈ ತಿಂಗಳು, ಈ ನಗರ ಗೌರವಾರ್ಹವಾಗಿರುವ ಹಾಗೆಯೇ ಗೌರವಿಸಲ್ಪಡಲು ಕಡ್ಡಾಯಗೊಳಿಸಲ್ಪಟ್ಟಿದೆ. ಯಾರಾದರೊಬ್ಬನ ಜೀವಹತ್ಯೆ ಮಾಡುವುದು, ಅವನ ಸ್ವತ್ತುಗಳನ್ನು ಸ್ವಾಧೀನಪಡಿಸುವುದು, ಅವನ ಗೌರವಕ್ಕೆ ಕುಂದುಂಟುಮಾಡುವುದು ಅನ್ಯಾಯಕರವೂ ಪಾಪದೋಷ ಉಂಟುಮಾಡುವುದೂ ಆಗಿದೆ.

– ಹಝ್ರತ್ ಮುಹಮ್ಮದ್ ಪೈಗಂಬರ್(ಸ)

ಯಾರು ದಯೆಯನ್ನು ತ್ಯಜಿಸುತ್ತಾನೋ ಅವನು ಧರ್ಮವನ್ನು ತ್ಯಜಿಸುತ್ತಾನೆ. ಯಾರಾದರೂ ತನ್ನ ಸಹೋದರನಿಗೆ ಕರುಣೆ ತೋರಿಸದಿದ್ದರೆ ಅವನು ಮಾನವ ಕುಲದೊಂದಿಗೆ ನಿಷ್ಕರುಣೆಯಿಂದ ವರ್ತಿಸಿದವನ ಹಾಗೆ ಆಗುತ್ತಾನೆ.

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)

**LOVE FOR ALL HATRED FOR NONE.**

ಎಲ್ಲರೊಡನೆ ಸ್ನೇಹ, ಯಾರೊಡನೆಯೂ ದ್ವೇಷವಿಲ್ಲ.

– ಹಝ್ರತ್ ಖಲೀಫತುಲ್ ಮಸೀಹ್ III

ಖಡ್ಗ ಭೂಪ್ರದೇಶಗಳನ್ನು ಜಯಿಸಬಹುದು, ಆದರೆ ಹೃದಯಗಳನ್ನಲ್ಲ;
ಬಲಾತ್ಕಾರದಿಂದ ತಲೆಯನ್ನು ಬಗ್ಗಿಸಬಹುದು, ಆದರೆ ಮನಸ್ಸನ್ನಲ್ಲ.

– ಹಝ್ರತ್ ಖಲೀಫತುಲ್ ಮಸೀಹ್ IV

ಖಿಲಾಫತ್ ವ್ಯವಸ್ಥೆಗೂ ವಸೀಯತ್ ವ್ಯವಸ್ಥೆಗೂ ಬಹಳ ಗಾಢವಾದ ಸಂಬಂಧವಿದೆ. ವಸೀಯತ್ ವ್ಯವಸ್ಥೆಯಲ್ಲಿ ಸೇರಿದವರು ಎಲ್ಲೆಲ್ಲ ಭಯಭಕ್ತಿಯಲ್ಲಿ ಪ್ರಗತಿ ಹೊಂದುತ್ತಾರೋ ಅಲ್ಲೆಲ್ಲ ಜಮಾಅತ್ ಬಲಗೊಳ್ಳಲು ಕಾರಣವಾಗುತ್ತದೆ.

– ಹಝ್ರತ್ ಖಲೀಫತುಲ್ ಮಸೀಹ್ V

# ಖಿಲಾಫತ್ : ದ್ವಿತೀಯ ದಿವ್ಯಶಕ್ತಿ



ಅಲ್ಲಾಹನು ಎರಡು ವಿಧಗಳ ಶಕ್ತಿ ಪ್ರದರ್ಶನ ಮಾಡುತ್ತಾನೆ. ಮೊದಲನೆಯದಾಗಿ, ಪ್ರವಾದಿಗಳ ಮೂಲಕ ಅಲ್ಲಾಹನು ತನ್ನ ಶಕ್ತಿಯ ಹಸ್ತವನ್ನು ತೋರಿಸುತ್ತಾನೆ. ಎರಡನೆಯದಾಗಿ, ಪ್ರವಾದಿಗಳು ಮೃತರಾದ ನಂತರ ಅವರ ಅನುಯಾಯಿಗಳ ಸಮುದಾಯ ವಿವಿಧ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ ಮತ್ತು ಶತ್ರುಗಳು ತೀವ್ರವಾಗಿ ವಿರೋಧಿಸುತ್ತಾ ಕೆಲಸ ಬಿಗಡಾಯಿಸಿತೆಂದು ಭಾವಿಸುತ್ತಾ ಈ ಜಮಾಅತ್ ನಾಶವಾಗುವುದೆಂದು ದೃಢನಂಬಿಕೆ ಹೊಂದುತ್ತಾರೆ. ಜಮಾಅತಿನ ಒಳಗಿರುವವರು ಸಹ ಸಂಶಯಗಳಿಗೆ ತುತ್ತಾಗಿ ಬಲಗುಂದಿದವರಾಗುತ್ತಾರೆ. ಕೆಲವು ದುರದೃಷ್ಟವಂತರು ಜಮಾಅತನ್ನು ಬಿಟ್ಟುಹೋಗುತ್ತಾರೆ. ಆಗ ಅಲ್ಲಾಹನು ಎರಡನೆಯ ಸಾರಿ ತನ್ನ ಶಕ್ತಿಯನ್ನು ಬಲಯುತವಾಗಿ ಪ್ರದರ್ಶಿಸುತ್ತಾನೆ. ಕುಸಿದು ಹೋಗುವ ಜಮಾಅತನ್ನು ಅವನು ಹಿಡಿದು ನಿಲ್ಲಿಸುತ್ತಾನೆ.

ಯಾರು ಕೊನೆಯ ವರೆಗೆ ಸಹನೆ ತೋರುತ್ತಾನೋ ಅವನು ಅಲ್ಲಾಹನ ಈ ಅದ್ಭುತ ದೃಷ್ಟಾಂತವನ್ನು ಕಾಣುತ್ತಾನೆ. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಹೀಗೆಯೇ ಸಂಭವಿಸಿತು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಮೃತರಾದುದು ಅಕಾಲದಲ್ಲಿಯೆಂದು ಗ್ರಹಿಸಲಾಗಿತ್ತು. ಗ್ರಾಮವಾಸಿಗಳಾದ ಅನೇಕ ತಿಳಿಗೇಡಿಗಳು ಧರ್ಮತ್ಯಾಗ ಮಾಡಿದರು. ಸಹಾಬ (ಪೈಗಂಬರರ ಶಿಷ್ಯರು) ದುಃಖದಿಂದ ಮತಿಭ್ರಷ್ಟರ ಹಾಗೆ ಆಗಿದ್ದರು. ಆಗ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರನ್ನು ಅಲ್ಲಾಹನು ನಿಲ್ಲಿಸಿ ತನ್ನ ದಿವ್ಯ ಶಕ್ತಿಯನ್ನು ಎರಡನೆಯ ಸಾರಿ ಪ್ರಕಟಿಸುತ್ತಾ ನಾಶೋನ್ಮುಖವಾಗಿದ್ದ ಇಸ್ಲಾಮನ್ನು ರಕ್ಷಿಸಿದನು ಮತ್ತು "ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿಕೊಡುವನು ಹಾಗೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನು" ಎಂಬ ತನ್ನ ವಾಗ್ದಾನವನ್ನು ಈಡೇರಿಸಿದನು.

ಹಝ್ರತ್ ಮೂಸಾ ಅಲೈಹಿಸ್ಸಲಾಮ್‌ರವರ ಕಾಲದಲ್ಲಿ ಸಹ ಹೀಗೆಯೇ ಸಂಭವಿಸಿತು. ಬನೀ ಇಸ್ರಾಈಲ್ ಜನರನ್ನು ಅವರಿಗೆ ವಾಗ್ದಾನ ನೀಡಲ್ಪಟ್ಟ ಭೂಪ್ರದೇಶಕ್ಕೆ ಕೊಂಡೊಯ್ದು ತಲಪಿಸುವ ಮೊದಲೇ ಹಝ್ರತ್ ಮೂಸಾ ಅಲೈಹಿಸ್ಸಲಾಮ್‌ರವರು ಈಜಿಪ್ಟ್ ಮತ್ತು ಕನ್‌ಆನದ ಮಧ್ಯದ ಮಾರ್ಗದಲ್ಲಿ ಮೃತರಾದರು. ಅವರು ಮೃತರಾದಾಗ ಬನೀ ಇಸ್ರಾಈಲ್ ಜನರಲ್ಲಿ ಈ ಅಕಾಲಿಕ ಮರಣದಿಂದಾಗಿ ಅಗಾಧವಾದ ಶೋಕ ಉಂಟಾಯಿತು. ಅವರು ನಲ್ವತ್ತು ದಿವಸಗಳು ರೋಧಿಸುತ್ತಾ ಇದ್ದರೆಂದು ತೌರಾತ್ ಗ್ರಂಥದಲ್ಲಿ ಬರೆಯಲಾಗಿದೆ.

ಹಝ್ರತ್ ಈಸಾ ಅಲೈಹಿಸ್ಸಲಾಮ್‌ರವರು ಶಿಲುಬೆಗೆ ಏರಿಸಲ್ಪಟ್ಟಾಗ ಹೀಗೆಯೇ ಸಂಭವಿಸಿತು. ಎಲ್ಲಾ ಶಿಷ್ಯರು ಚದುರಿ ಓಡಿಹೋದರು. ಅವರಲ್ಲೊಬ್ಬ ಧರ್ಮಭ್ರಷ್ಟನೂ ಆದನು.

ಆದುದರಿಂದ ಪ್ರಿಯರೇ, ಪುರಾತನ ಕಾಲದಿಂದಲೂ ಅಲ್ಲಾಹನ ನಡವಳಿಕೆ ಹೀಗೆ ಇದೆ: ಅವನು ಎರಡು ದಿವ್ಯಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕವೆಂದು ತೋರಿಸಿಕೊಡುತ್ತಾನೆ. ಅಲ್ಲಾಹನು ತನ್ನ ಪುರಾತನವಾದ ನಡೆವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗ ಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟಣೆಯನ್ನು ನೀವು ನೋಡುವುದು ಆವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಏಕೆಂದರೆ, ಅದು ಶಾಶ್ವತವಾಗಿದೆ. ಅದರ ಪರಂಪರೆ ಖಿಯಾಮತ್ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿಕೊಡುವನು. "ಬರಾಹೀನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿ ಉಲ್ಲೇಖಿಸಲಾದ ಅಲ್ಲಾಹನ ವಾಗ್ದಾನ ಪ್ರಕಾರ ದ್ವಿತೀಯ ದಿವ್ಯಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದಾನ ನನ್ನ ಬಗ್ಗೆಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: "ನಿನ್ನ ಅನುಯಾಯಿಗಳ ಈ ಜಮಾಅತಿಗೆ ಲೋಕಾಂತ್ಯ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು."

ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಆವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ದಾಕ್ಷಿಣ್ಯವಂತನೂ ಸತ್ಯವಂತನೂ ಆಗಿರುವನು. ಅವನು ವಾಗ್ದಾನ ಮಾಡಿದುದೆಲ್ಲವನ್ನೂ ನಿಮಗೆ ತೋರಿಸುವನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲಾ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು.

ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯ ಶಕ್ತಿಯ ಪ್ರತೀಕವಾಗಿರುವೆನು. ನನ್ನ ಅನಂತರ

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

✳ "ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ನಿಮ್ಮಲ್ಲಿ ಪ್ರವಾದಿತ್ವ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಮೇಲೆತ್ತುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತ್ ನೆಲೆಗೊಳ್ಳುವುದು; ಬಳಿಕ ಅದು ಕೊನೆಗೊಳ್ಳುವುದು. ಅನಂತರ ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಸ್ವೇಚ್ಛಾಧಿಪತ್ಯ ನೆಲೆಗೊಳ್ಳುವುದು; ಬಳಿಕ ಅದು ಕೊನೆಗೊಳ್ಳುವುದು. ಅನಂತರ ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಬಲಾತ್ಕಾರದಿಂದ ಕೂಡಿದ ಆಡಳಿತೆ ನೆಲೆಗೊಳ್ಳುವುದು; ಬಳಿಕ ಅದು ಕೂಡ ಕೊನೆಗೊಳ್ಳುವುದು. ಅನಂತರ "ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್" (ಪ್ರವಾದಿತ್ವದ ಪಥದಲ್ಲಿರುವ ಖಿಲಾಫತ್) ಸ್ಥಾಪಿತವಾಗುವುದು. (ಮಿಶ್ಕಾತ್)

✳ ಪ್ರವಾದಿತ್ವದ ಬಳಿಕ ಖಿಲಾಫತ್ ಸ್ಥಾಪನೆಯಾಗದೆ ಇರುವುದಿಲ್ಲ. (ಕನ್‌ಝುಲ್ ಉಮ್ಮಾಲ್)

✳ ಆಯಾ ಕಾಲದ ಇಮಾಮರಿಗೆ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡದೆ ಮೃತನಾಗುವವನು ಅಜ್ಞಾನದಲ್ಲಿ ಮೃತನಾದವನಂತೆ ಆಗುವನು. (ಮುಸ್ಲಿಂ – ಕಿತಾಬುಲ್ ಇಮಾರತ್)

✳ ನೀವು ಮಹ್‌ದಿಯನ್ನು ಕಂಡಾಗ ಅವರ ಕೈಯಲ್ಲಿ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಿರಿ. ನೀವು ಹಿಮಾವೃತ ಪರ್ವತಗಳನ್ನು ಮೊಣಕಾಲು ಊರುತ್ತಾ ದಾಟಬೇಕಾಗಿ ಬಂದರೂ ನೀವು ಅವರ ಬಳಿಗೆ ಹೋಗಿರಿ. ಅವರು ಮಹ್‌ದಿ ಮತ್ತು ಅಲ್ಲಾಹನ ಖಲೀಫರಾಗಿದ್ದಾರೆ. (ಇಬ್ನು ಮಾಜ)

✳ ನೀವು ನನ್ನ ನಡವಳಿಕೆ ಕ್ರಮವನ್ನು ಮತ್ತು ಸನ್ಮಾರ್ಗಿಗಳೂ ಮಾರ್ಗದರ್ಶನ ಲಭಿಸಿದವರೂ ಆದ ನನ್ನ ಖಲೀಫರ ನಡವಳಿಕೆ ಕ್ರಮವನ್ನು ಸ್ವೀಕರಿಸಿರಿ.

✳ ಯಾರು ಖಲೀಫರ ಅನುಸರಣೆಯನ್ನು ಕೈಬಿಡುವನೋ, ಅವನು ನ್ಯಾಯ ವಿಚಾರಣೆ ದಿನದಂದು ದೇವ ಸನ್ನಿಧಿಯಲ್ಲಿ ಯಾವುದೇ ರಕ್ಷಾಮಾರ್ಗವಿಲ್ಲದ ಸ್ಥಿತಿಯಲ್ಲಿ ಹಾಜರಾಗುವನು. ಖಲೀಫರ ಬೈಅತ್ ಮತ್ತು ಅನುಸರಣೆ ಇಲ್ಲದೆ ಯಾವೊಬ್ಬ ಮುಸ್ಲಿಂ ಇಹಲೋಕ ವಾಸವನ್ನು ತ್ಯಜಿಸುವನೋ ಅವನು ಖಂಡಿತವಾಗಿಯೂ ಜಾಹಿಲಿಯ್ಯತಿನ ಮರಣವನ್ನು ಹೊಂದುವನು.

✳ ನನ್ನ ಅನಂತರ ವಾಗ್ದತ್ತ ಮಸೀಹ್ ನನ್ನ ಅನುಯಾಯಿಗಳ ಪೈಕಿ ನನ್ನ ಖಲೀಫರಾಗುವರು. ಯಾರು ಅವರನ್ನು ಭೇಟಿಯಾಗುವ ಸೌಭಾಗ್ಯ ಪಡೆಯುತ್ತಾರೋ ಅವರು ಅವರಿಗೆ ನನ್ನ ಸಲಾಂ ಹೇಳಬೇಕು.

✳ ನಾನು ನೇಮಿಸಿದ ಅಮೀರರನ್ನು ಅನುಸರಿಸುವವರು ನನ್ನನ್ನು ಅನುಸರಿಸಿದಂತೆ; ನನ್ನ ಅಮೀರರನ್ನು ತಿರಸ್ಕರಿಸಿದವರು ನನ್ನನ್ನು ತಿರಸ್ಕರಿಸದಂತೆಯೇ ಆಗುವುದು.

---

ಕೆಲವರು ಅಲ್ಲಾಹನ ದ್ವಿತೀಯ ದಿವ್ಯ ಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯ ಶಕ್ತಿಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. ಪ್ರತಿಯೊಂದು ದೇಶದಲ್ಲಿರುವ ಸಾತ್ವಿಕರಾದ ಜನರ ಪ್ರತಿಯೊಂದು ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಇರಬೇಕು. ಅದರ ಫಲ ಸ್ವರೂಪವಾಗಿ ದ್ವಿತೀಯ ದಿವ್ಯ ಶಕ್ತಿ ಆಕಾಶದಿಂದ ಅವತೀರ್ಣವಾಗಿ ನಿಮ್ಮ ದೇವನು ಇಷ್ಟು ಶಕ್ತಿಶಾಲಿಯಾದ ದೇವನೆಂದು ತೋರಿಸಿ ಕೊಡುವಂತಾಗಲಿ. ನಿಮ್ಮ ಮರಣವು ಸಮೀಪವಾಗಿದೆ ಎಂದು ನೀವು ಗ್ರಹಿಸಿರಿ. ಆ ಘಳಿಗೆ ಯಾವಾಗ ಬರುವುದೆಂದು ನಿಮಗೆ ತಿಳಿಯದು.

ಶುದ್ಧ ಹೃದಯವನ್ನು ಹೊಂದಿದ ಮಹಾನುಭಾವರು ನನ್ನ ಮರಣದ ನಂತರ ನನ್ನ ಹೆಸರಿನಲ್ಲಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲಿ.

ಲೋಕದ ವಿವಿಧ ಭಾಗಗಳಲ್ಲಿ ವಾಸಿಸುವ ಜನರಲ್ಲಿ ಒಳ್ಳೆಯ ಪ್ರಕೃತಿಯನ್ನು ಹೊಂದಿರುವವರನ್ನು – ಅವರು ಯುರೋಪಿನಲ್ಲಿರಲಿ ಅಥವಾ ಏಶಿಯಾದಲ್ಲಿರಲಿ – ಏಕದೇವ ವಿಶ್ವಾಸದ (ಎಂದರೆ ತೌಹೀದ್) ಕಡೆಗೆ ಎಳೆದು ತನ್ನ ದಾಸರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನ ಇದೇ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ನಾನು ಕಳುಹಿಸಲ್ಪಟ್ಟಿದ್ದೇನೆ. ನೀವು ಈ ಉದ್ದೇಶ ಲಕ್ಷ್ಯವನ್ನು ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಮೂಲಕ ಈಡೇರುವಂತೆ ಮಾಡಿರಿ. ಅಲ್ಲಾಹನಿಂದ ಪರಿಶುದ್ಧ ಆತ್ಮವನ್ನು ಪಡೆದುಕೊಂಡು ಒಬ್ಬ ವ್ಯಕ್ತಿ ಎದ್ದು ನಿಲ್ಲುವ ತನಕ ನೀವೆಲ್ಲರೂ ನನ್ನ ಅನಂತರ ಒಟ್ಟಿಗೆ ಸೇರಿಕೊಂಡು ಕಾರ್ಯನಿರತರಾಗಿರಿ. (ಅಲ್‌ವಸಿಯ್ಯತ್)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು.

MIRZA MASROOR AHMAD
HEAD OF THE AHMADIYYA COMMUNITY
IN ISLAM



بسم الله الرحمن الرحيم
نحمده ونصلی علی رسوله الکریم
وعلی عبده المسیح الموعود
خدا کے فضل اور رحم کے ساتھ
ھوالناصر

ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫ

## ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸಂದರ್ಭದಲ್ಲಿ "ಯುಗರಶ್ಮಿ"ಯ ಓದುಗರಿಗೆ ಸಂದೇಶ

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರವರು ವಾಗ್ದತ್ತ ಮಸೀಹರೂ ಈ ಯುಗದಲ್ಲಿ ಪ್ರತೀಕ್ಷಿಸಲ್ಪಟ್ಟ ಉದ್ಧಾರಕರೂ ಆಗಿರುವರು. ಅವರು ತನ್ನ ಅನುಯಾಯಿಗಳಿಗೆ ಹೀಗೆ ಉಪದೇಶಿಸಿದರು:

"ನೀವು ಕೆಡುಕಿನಿಂದ ದೂರಸರಿಯಿರಿ. ನೀವು ಮಾನವರಿಗೆ ದಯೆ ತೋರಿಸುವವರಾಗಿರಿ. ನೀವು ನಿಮ್ಮ ಹೃದಯಗಳನ್ನು ದ್ವೇಷದಿಂದಲೂ ಅಸೂಯೆಯಿಂದಲೂ ಮುಕ್ತರಾಗಿಸಿ ಪರಿಶುದ್ಧಗೊಳಿಸಿರಿ. ನೀವು ಈ ನಡೆವಳಿಕೆಯಿಂದ ದೇವದೂತರ ಹಾಗೆ ಆಗುವಿರಿ. ಮನುಷ್ಯರ ಕುರಿತು ಸಹಾನುಭೂತಿ ಸೂಚಿಸದ ಧರ್ಮ ಎಷ್ಟು ಕೊಳಕು ಮತ್ತು ಮಲಿನಭರಿತವಾಗಿದೆ. ಸ್ವಾರ್ಥಭರಿತ ದ್ವೇಷದ ಮುಳ್ಳುಗಳಿಂದ ತುಂಬಿದ ಮಾರ್ಗವು ಎಷ್ಟು ಅಪವಿತ್ರವಾಗಿದೆ. ನನ್ನ ಜೊತೆಗೆ ಸೇರಿರುವ ನೀವು ಹಾಗೆ ಆಗಬಾರದು.... ನೀವು ದೇವನ ಪ್ರೀತಿಗಾಗಿ ಎಲ್ಲರಿಗೂ ದಯೆದೋರಿರಿ. ಹಾಗೆ ಮಾಡಿದರೆ ನೀವು ಆಕಾಶದಿಂದ ದಯೆಯನ್ನು ಗಳಿಸುವಿರಿ. ನೀವು ಬನ್ನಿರಿ, ನಿಮ್ಮ ಪ್ರಕಾಶವು ಇತರ ಎಲ್ಲರ ಪ್ರಕಾಶಗಳ ಮೇಲೆ ಜಯಗಳಿಸುವ ಒಂದು ದಾರಿಯನ್ನು ನಾನು ನಿಮಗೆ ಹೇಳಿಕೊಡುವೆನು. ಅದು ಏನೆಂದರೆ, ನೀವು ಎಲ್ಲಾ ರೀತಿಯ ಕೀಳು ಅಸೂಯೆಯನ್ನೂ ದ್ವೇಷವನ್ನೂ ಬಿಟ್ಟುಬಿಡಬೇಕು. ನೀವು ಮಾನವರಿಗೆ ಸಹಾನುಭೂತಿ ತೋರಿಸುವವರಾಗಬೇಕು ಮತ್ತು ನೀವು ನಿಮ್ಮನ್ನು ದೇವನಲ್ಲಿ ವಿಲೀನಗೊಳಿಸಬೇಕು. ನನ್ನ ಸೈನ್ಯಕ್ಕೆ ಸೇರಿದವರು ಭೂಮಿಯಲ್ಲಿ ಶಾಂತಿಯನ್ನು ಹರಡಬೇಕು. ಅದರ ಫಲಸ್ವರೂಪವಾಗಿ ಅವರ ಧರ್ಮವು ಹರಡುವುದು." (ಗೌರ್ನಮೆಂಟ್ ಅಂಗ್ರೇಝಿ ಔರ್ ಜಿಹಾದ್)


ನಾವು ವಾಗ್ದತ್ತ ಮಸೀಹರ ಖಿಲಾಫತಿನ ಆಧ್ಯಾತ್ಮಿಕ ನೇತೃತ್ವದಲ್ಲಿ ಒಂದು ಸರಪಳಿಯ ಕೊಂಡಿಯ ಹಾಗೆ ಜೋಡಿಸಲ್ಪಟ್ಟಿದ್ದೇವೆ. ಅಹ್ಮದಿಯಾ ಜಮಾಅತಿನ ಸದಸ್ಯರು ಖಿಲಾಫತ್‌ನೊಂದಿಗೆ ಹೊಂದಿದ ಆಧ್ಯಾತ್ಮಿಕ ಸಂಬಂಧವು ಅವರನ್ನು ಮುಹಮ್ಮದೀ ಮಸೀಹರ ಉಪದೇಶಗಳನ್ನು ಅನುಸರಿಸಲು ನಿರ್ಬಂಧಿಸುತ್ತದೆ. ಆ ಉಪದೇಶಗಳ ಸಂಕ್ಷಿಪ್ತ ರೂಪ ಹೀಗಿದೆ:

ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನೂ ಅಲ್ಲಾಹನ ಸೃಷ್ಟಿಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನೂ ಗೌರವಿಸಿ ಅವುಗಳನ್ನು ಅನುಷ್ಠಾನಕ್ಕೆ ತರಬೇಕು.

ದ್ವೇಷದ ಗೋಡೆಗಳನ್ನು ಕೆಡವಿಹಾಕಬೇಕು. ಪ್ರೀತಿ ಮತ್ತು ವಾತ್ಸಲ್ಯದ ಸುವಾಸನೆಯನ್ನು ಲೋಕದಾದ್ಯಂತ ಹರಡಬೇಕು.

ಖಿಲಾಫತ್ ಅನುಗ್ರಹಗಳು "ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ" ದೊರಕುವುವು. ಅಲ್ಲಾಹನು ಅವರ ಕುರಿತು ಹೀಗೆ ಹೇಳುತ್ತಾನೆ : "ಅವರು ನನ್ನನ್ನು ಮಾತ್ರ ಆರಾಧಿಸುವರು. ನನಗೆ ಯಾರನ್ನೂ ಸಹಭಾಗಿಗಳನ್ನಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು." (ಪವಿತ್ರ ಖುರ್‌ಆನ್ 24 : 56)

ಪವಿತ್ರ ಖುರ್‌ಆನಿನ ಈ ವಚನ ಅಹ್ಮದಿಯರ ಮೇಲೆ ಕರ್ತವ್ಯಗಳನ್ನು ಕಡ್ಡಾಯಗೊಳಿಸುತ್ತದೆ. ಎಲ್ಲರೂ ತಮ್ಮ ನಮಾಝ್‌ಗಳ ಅನುಷ್ಠಾನವನ್ನು ಉತ್ತಮಗೊಳಿಸುವರೆಂದೂ ಅಲ್ಲಾಹನ ಎಲ್ಲಾ ಆಜ್ಞೆಗಳನ್ನು ಪಾಲಿಸುವರೆಂದೂ ಸತ್ಕರ್ಮಗಳನ್ನು ಹೆಚ್ಚು ಹೆಚ್ಚಾಗಿ ಮಾಡುವರೆಂದೂ ನಾನು ಆಶಿಸಿ ಅದರ ಬಗ್ಗೆ ಅಲ್ಲಾಹನನ್ನು ಬೇಡಿಕೊಳ್ಳುತ್ತೇನೆ. ✡






ಹಾಫಿಝ್ ಸಾಲಿಹ್ ಮುಹಮ್ಮದ್ ಇಲಾಹ್‌ದೀನ್ ಸಾಹೇಬ್
ಅಧ್ಯಕ್ಷ, ಸದರ್ ಅಂಜುಮನ್ ಅಹ್ಮದಿಯಾ


ಅಲ್ಲಾಹನು "ಯುಗರಶ್ಮಿ"ಯ ವಿಶೇಷಾಂಕವನ್ನು ಬಹಳ ಅನುಗ್ರಹಿಸಲಿ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

"ಅಲ್ಲಾಹು ನೂರುಸ್ಸಮಾವಾತಿ ವಲ್ ಅರ್‌ಝಿ" – ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. ವಾಸ್ತವಿಕ ಸಂಗತಿಯೇನೆಂದರೆ ಅಲ್ಲಾಹನು ಎಲ್ಲ ಪ್ರಕಾಶಗಳ ಉದ್ಭವ ಸ್ಥಾನವಾಗಿದ್ದಾನೆ. ಅವನು ನಮ್ಮ ಪ್ರಿಯ ನೇತಾರರಾದ ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಮೂಲಕ ಲೋಕವನ್ನು ಪ್ರಕಾಶಮಾನವನ್ನಾಗಿ ಮಾಡಿದನು. ಈಗಿನ ಕಾಲದಲ್ಲಿ ಅವರ ನೈಜ ಪ್ರೇಮಿಯಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸಲ್ಲಾಮ್‌ರವರ ಮೂಲಕ ಲೋಕವನ್ನು ಬೆಳಗಿದನು. ಅವರು ನಿಧನ ಹೊಂದಿದ ನಂತರ ಅವರ ಖಲೀಫರ ಮೂಲಕ ಲೋಕಕ್ಕೆ ಪ್ರಕಾಶ ನೀಡುತ್ತಿದ್ದಾನೆ. ಅಲ್ಲಾಹನಿಗೆ ಸರ್ವಸ್ತುತಿಗಳು.

ಅಲ್ಲಾಹನು ನಮ್ಮನ್ನು ಖಿಲಾಫತ್‌ನೊಂದಿಗೆ ಜೋಡಿಸಿ ಕಳೆದ ನೂರುವರ್ಷಗಳಲ್ಲಿ ಐವರು ವೈಭವಶಾಲಿ ಮತ್ತು ನಮಗೆ ಬೇಕಾಗಿ ಪ್ರಾರ್ಥಿಸುವ ಭಕ್ತರಾದ ಖಲೀಫರ ನಾಯಕತ್ವ ನಮಗೆ ದಯಪಾಲಿಸಿದುದು ಅವನ ಬಹಳ ದೊಡ್ಡ ಅನುಗ್ರಹವಾಗಿದೆ – ಅಲ್‌ಹಮ್ದುಲಿಲ್ಲಾಹ್. ಅವರ ಮೂಲಕ 193 ದೇಶಗಳಲ್ಲಿ ಜಮಾಅತ್ ಸ್ಥಾಪಿತವಾಗಿದೆ. 68 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರ ಪ್ರಕಟಿಸುವ ಭಾಗ್ಯ ದೊರೆತಿದೆ. ಅನೇಕ ಮಸ್‌ಜಿದ್‌ಗಳನ್ನು ನಿರ್ಮಿಸಲಾಗಿದೆ. MTA ಮೂಲಕ ನಾವು ಹಝ್‌ರತ್ ಖಲೀಫತುಲ್ ಮಸೀಹ್‌ರವರ ಮನ ಮುಟ್ಟುವ ಖುತ್‌ಬಗಳನ್ನು ಆಲಿಸುತ್ತೇವೆ. ಅಲ್‌ಹಮ್ದುಲಿಲ್ಲಾಹ್.

ನಾವು ಪ್ರಾರ್ಥಿಸುತ್ತೇವೆ: ಅಲ್ಲಾಹನು ಯಾವಾಗಲೂ ತನ್ನ ಖಲೀಫರನ್ನು ಸಂರಕ್ಷಿಸಲಿ ಮತ್ತು ಅವರಿಗೆ ಸಹಾಯವನ್ನು ದಯಪಾಲಿಸಲಿ. ನಮ್ಮನ್ನು ಮತ್ತು ನಮ್ಮ ಸಂತಾನವನ್ನು ಯಾವಾಗಲೂ ಆಯಾಕಾಲದ ಖಲೀಫರನ್ನು ನಿಷ್ಠೆಯಿಂದ ಅನುಸರಿಸುವವರನ್ನಾಗಿ ಮಾಡಲಿ. ಲೋಕದಲ್ಲಿ ಪರಿಶುದ್ಧ ಕ್ರಾಂತಿ ಬೇಗನೇ ಉಂಟಾಗಲಿ. – ಅಲ್ಲಾಹುಮ್ಮ ಆಮೀನ್. ✡






ಮೌಲಾನ ಮುಹಮ್ಮದ್ ಉಮರ್ ಸಾಹೇಬ್,

ನಾಝಿರ್ ಇಸ್ಲಾಹೋ ಇರ್‌ಶಾದ್

ಖಿಲಾಫತ್ ಶತವಾರ್ಷಿಕ ಜೂಬಿಲಿ 2008ರ ಚಾರಿತ್ರಿಕ ಸಂದರ್ಭದಲ್ಲಿ "ಯುಗರಶ್ಮಿ"ಯ ಒಂದು ವಿಶೇಷಾಂಕವನ್ನು ಪ್ರಕಟಿಸಲಾಗುತ್ತದೆ ಎಂದು ತಿಳಿದು ನನಗೆ ಅತೀವ ಸಂತೋಷವಾಯಿತು. ಅಲ್ಲಾಹನು ಈ ಕಾರ್ಯೋದ್ಯಮವನ್ನು ಎಲ್ಲಾ ರೀತಿಗಳಲ್ಲೂ ಅನುಗ್ರಹಿಸಲಿ ಎಂದೂ ಅದು ಅನೇಕರಿಗೆ ಮಾರ್ಗದರ್ಶನ ನೀಡುವುದರಲ್ಲಿ ಜಯಶಾಲಿಯಾಗಲೆಂದೂ ನಾನು ಪ್ರಾರ್ಥಿಸುತ್ತೇನೆ. ಆಮೀನ್.

ಖಿಲಾಫತ್ ಅತ್ಯಂತ ಮಹತ್ವಪೂರ್ಣವಾದ ದೈವಿಕ ಅನುಗ್ರಹವಾಗಿದೆ. ಆದರೆ ಕೋಟಿಗಟ್ಟಲೆ ಮುಸ್ಲಿಮರು ಈ ಅನುಗ್ರಹವನ್ನು ಪಡೆಯದವರಾಗಿದ್ದಾರೆ. ಅವರು ಜಾಗತಿಕವಾದ ಒಂದು ನಾಯಕತ್ವವನ್ನು ಗಳಿಸದವರಾದ ಕಾರಣ ಚದುರಿಹೋದವರೂ ಗಾಬರಿಗೊಂಡವರೂ ಅನಾಥರೂ ಆಗಿ ಅಲೆದಾಡುತ್ತಿದ್ದಾರೆ. ಇನ್ನೊಂದು ಕಡೆ ನೋಡುವುದಾದರೆ ಕೋಟಿಗಟ್ಟಲೆ ಅಹ್ಮದೀ ಮುಸ್ಲಿಮರು ಖಿಲಾಫತ್‌ನೊಂದಿಗೆ ಸಂಬಂಧವನ್ನು ಸ್ಥಾಪಿಸಿರುವ ಕಾರಣ ತಾವು ಖಿಲಾಫತ್ ಎಂಬ ಬಲಿಷ್ಠ ಕೋಟೆಯೊಳಗೆ ಸುರಕ್ಷಿತವಾಗಿರುವೆವು ಎಂದು ಮನವರಿಕೆ ಮಾಡಿಕೊಳ್ಳುತ್ತಿದ್ದಾರೆ. ಅವರು ಪ್ರತಿಕ್ಷಣ ಅಲ್ಲಾಹನ ನೆರವಿನ ದೃಶ್ಯಗಳನ್ನು ಕಾಣುತ್ತಾ ಇದ್ದಾರೆ.

ಇದಕ್ಕೆ ಸಂಬಂಧಿಸಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲ್ಲಾಹು ತಆಲಾ – ಅಲ್ಲಾಹನು ಅವರಿಗೆ ಸಹಾಯ ದಯಪಾಲಿಸಲಿ) ಅವರು ಒಂದು ಸಂದೇಶದಲ್ಲಿ ಹೀಗೆ ಹೇಳುತ್ತಾರೆ:

"ಅಹ್ಮದಿಯರಾದ ನೀವು ಭಾಗ್ಯಶಾಲಿಗಳು. ಈ ಕಾಲದ ಇಮಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜಮಾಅತ್‌ನಲ್ಲಿ ಸೇರಿರುವುದರಿಂದ ನೀವು ಖಿಲಾಫತ್ ವ್ಯವಸ್ಥೆಯೊಂದಿಗೆ ಸಂಬಂಧ ಜೋಡಿಸುವ ಔದಾರ್ಯವನ್ನು ಅಲ್ಲಾಹನು ನಿಮಗೆ ದಯಪಾಲಿಸಿದನು. ಅಲ್ಲಾಹನ ಅನುಗ್ರಹದಿಂದ ಖಿಲಾಫತ್ ವ್ಯವಸ್ಥೆ ಶಾಶ್ವತವಾಗಿ ಮುಂದುವರಿಯುವುದು. ನೀವು ಆಯಾಕಾಲದ ಖಲೀಫರೊಂದಿಗೆ ಎಷ್ಟು ನಿಕಟ ಸಂಬಂಧ ಹೊಂದುತ್ತೀರೋ ಅದಕ್ಕೆ ಅನುಸಾರವಾಗಿ ನೀವು ಧಾರ್ಮಿಕ ಮತ್ತು ಲೌಕಿಕ ಒಳಿತುಗಳ ಪಾಲನ್ನು ಗಳಿಸುವಿರಿ. ನಿಮ್ಮ ಪರಸ್ಪರ ಸಂಬಂಧಗಳು ಸಹ ಉತ್ತಮಗೊಳ್ಳುವುದು. ಸಮಾಜದಲ್ಲಿಯೂ ಶಾಂತಿಯ ವಾತಾವರಣ ಸ್ಥಾಪಿತವಾಗುವುದು. ಆದುದರಿಂದ ಸಂರಕ್ಷಣೆಯ ಈ ಕೋಟೆಯಿಂದ ಲಾಭಪಡೆಯಲು ನೀವೆಲ್ಲರೂ ಖಿಲಾಫತ್‌ನೊಂದಿಗೆ ನಿಮ್ಮ ಸಂಬಂಧವನ್ನು ಬಲಪಡಿಸುತ್ತಾ ಹೋಗಬೇಕು. ನೀವು ಇಸ್ಲಾಮಿನ ವಿಜಯಕ್ಕಾಗಿಯೂ ಜಾಗತಿಕ ಶಾಂತಿಗಾಗಿಯೂ ಪ್ರಾರ್ಥಿಸುತ್ತಾ ಇರಬೇಕು; ಖಿಲಾಫತನ್ನು ಅನುಸರಿಸುವುದರ ನಿಮ್ಮ ಅನುಷ್ಠಾನ ಮಟ್ಟವನ್ನು ಉನ್ನತಗೊಳಿಸಬೇಕು. ನೀವು ನಿಮ್ಮ ಜಮಾಅತಿನ ಹುದ್ದೇದಾರರೊಂದಿಗೆ ಸಹಕರಿಸುತ್ತಾ ಖಿಲಾಫತಿನ ಹಸ್ತ ಮತ್ತು ಬಾಹು ಹಾಗೂ ಆಯಾ ಕಾಲದ ಖಲೀಫರಿಗೆ ಸುಲ್ತಾನೇ ನಸೀರ್ (ಶಕ್ತಿಶಾಲಿಯಾದ ಸಹಾಯಕ) ಆಗಬೇಕು."

ನಾನು ಪ್ರಾರ್ಥಿಸುತ್ತೇನೆ: ಅಲ್ಲಾಹನು ನಮಗೆಲ್ಲರಿಗೂ ಆಯಾ ಕಾಲದ ಖಲೀಫರು ಉದ್ದೇಶಿಸುವ ಪ್ರಕಾರ ಅಹ್ಮದಿಯಾ ಖಿಲಾಫತಿನೊಂದಿಗೆ ಪರಿಪೂರ್ಣ ಸಂಬಂಧ ಜೋಡಿಸಿ ನಿಷ್ಠೆಯಿಂದ ಕಾರ್ಯಪ್ರವೃತ್ತರಾಗಲು ಮತ್ತು ಖಲೀಫರ ಕರೆಗೆ ಯಾವುದೇ ಅಡ್ಡಿ ಆತಂಕವಿಲ್ಲದೆ ಸದಾ ಓಗೊಡಲು ಸೌಭಾಗ್ಯವನ್ನು ದಯಪಾಲಿಸಲಿ, ಆಮೀನ್.

ಈ ಸಂದರ್ಭದಲ್ಲಿ ನಾನು "ಯುಗರಶ್ಮಿ"ಗೋಸ್ಕರ ಪ್ರಾರ್ಥಿಸುತ್ತೇನೆ: ಅಲ್ಲಾಹನು ಈ ಪತ್ರಿಕೆಗೆ ಎಲ್ಲಾ ವಿಧ ಪ್ರಗತಿಯನ್ನು ದಯಪಾಲಿಸಲಿ ಮತ್ತು ಈ ಪತ್ರಿಕೆಯ ಪುರೋಭಿವೃದ್ಧಿಗೋಸ್ಕರ ಪ್ರಯತ್ನಿಸುವ ಪ್ರತಿಯೊಬ್ಬರಿಗೂ ಉತ್ತಮ ಪ್ರತಿಫಲವನ್ನು ನೀಡಲಿ. ಆಮೀನ್. ✡






ಮೌಲಾನ ಬುರ್‌ಹಾನ್ ಅಹ್ಮದ್ ಝಫರ್ ಸಾಹೇಬ್
ನಾಝಿರ್ ನಶ್ರೋ ಇಶಾಅತ್

"ಯುಗರಶ್ಮಿ"ಯ ಸನ್ಮಾನ್ಯ ಸಂಪಾದಕರೆ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು.


ನೀವು "ಯುಗರಶ್ಮಿ"ಯ ಖಿಲಾಫತ್ ಶತವಾರ್ಷಿಕ ಜೂಬಿಲಿ ವಿಶೇಷಾಂಕ ಪ್ರಕಟಿಸುವ ಭಾಗ್ಯವನ್ನು ಗಳಿಸುತ್ತಿರುವಿರಿ ಎಂದು ತಿಳಿದು ತುಂಬಾ ಸಂತೋಷವಾಯಿತು. ಅದನ್ನು ಉತ್ತಮ ರೀತಿಯಲ್ಲಿ ಪ್ರಕಟಿಸುವಂತೆ ಅಲ್ಲಾಹನು ಅನುಗ್ರಹಿಸಲಿ. ಆ ಬಗ್ಗೆ ಕಾರ್ಯೋನ್ಮುಖರಾಗಿರುವವರಿಗೆ ಅಲ್ಲಾಹನು ತನ್ನ ವರದಾನಗಳನ್ನು ದಯಪಾಲಿಸಲಿ. ಈ ಕಾಲದಲ್ಲಿ ಇಸ್ಲಾಮಿನ ಸಂದೇಶವನ್ನು ತಲಪಿಸುವ ಕಾರ್ಯವನ್ನು ಮಾಡುವ ಸೌಭಾಗ್ಯ ನಿಮಗೆ ಲಭಿಸಿದೆ. "ಯುಗರಶ್ಮಿ" ಪ್ರಕಟಗೊಳ್ಳುವ ಪ್ರದೇಶದಲ್ಲಿ ಈ ಉತ್ತಮ ಕೆಲಸವನ್ನು ಅದು ಮಾಡುತ್ತಾ ಇದೆ.

ವಾಸ್ತವಿಕ ಸಂಗತಿ ಏನೆಂದರೆ, ಅಲ್ಲಾಹನು ನಮ್ಮನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಸೇವಕರನ್ನಾಗಿ ಮಾಡಿ ಅಹ್ಮದಿಯಾ ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿ, ಅದರ ಮಾರ್ಗದರ್ಶನದಲ್ಲಿ ಸೇವೆ ಮಾಡುವ ಸಂದರ್ಭ ನೀಡಿರುವನು. ಇದೊಂದು ಚಾರಿತ್ರಿಕವಾದ ಅನುಗ್ರಹವಾಗಿದೆ. ಎಲ್ಲಾ ಅಭಿವೃದ್ಧಿ ಮತ್ತು ಯಶಸ್ಸು ಖಿಲಾಫತ್‌ನೊಂದಿಗೆ ಪ್ರೀತಿ ಮತ್ತು ಅನುಸರಣೆಯಲ್ಲಿಯೇ ಇದೆ. ಈ ಅನುಗ್ರಹದಿಂದ ಅಹ್ಮದಿಯೇತರ ಮುಸ್ಲಿಮರು ವಂಚಿತರಾಗಿದ್ದಾರೆ. ನಾವು ಖಿಲಾಫತಿನ ಅನುಗ್ರಹಗಳಿಂದ ಪಾಲನ್ನು ಪಡೆಯುತ್ತಾ ಇದ್ದೇವೆ. ಆ ಬಗ್ಗೆ ಸರ್ವಸ್ತುತಿಗಳೂ ಅಲ್ಲಾಹನಿಗೆ ಸಲ್ಲುತ್ತವೆ.

ಖಿಲಾಫತಿನ ಮಾರ್ಗದರ್ಶನಗಳ ಪ್ರಕಾರವೇ ನಮ್ಮ ಯೋಚನೆಗಳನ್ನೂ ಕೆಲಸಗಳನ್ನೂ ಮಾಡಬೇಕಾಗಿದೆ. ಮುಂದಿನ ಪೀಳಿಗೆಗಳಲ್ಲಿ ಈ ಭಾವನೆ ಮೊದಲಿಗಿಂತ ಹೆಚ್ಚು ಶಕ್ತಿಯುತವಾಗುವ ಹಾಗೆ ಪ್ರಯತ್ನಿಸಬೇಕು.

ಈ ಕಾಲದಲ್ಲಿ ಆಧ್ಯಾತ್ಮಿಕ ಲೋಕದಲ್ಲಿ ಎಲ್ಲಾ ದಿಕ್ಕುಗಳಲ್ಲಿಯೂ ಅಂಧಕಾರವು ಕವಿದಿರುವಾಗ ನಮ್ಮ ಪತ್ರಿಕೆಗಳು ಪ್ರಕಾಶದ ಕಿರಣಗಳನ್ನು ಹಾಯಿಸಬಲ್ಲವು. ಪತ್ರಿಕೆಗಳನ್ನು ನಾವು ಪ್ರಕಟಿಸುವುದರ ಉದ್ದೇಶವು ಇದೇ ಆಗಿದೆ.

ಈ ಪತ್ರಿಕೆಯ ಪ್ರಕಟಣೆಯ ಮೂಲಕ ಅಲ್ಲಾಹನು ಸನ್ಮಾರ್ಗದ ಸೌಭಾಗ್ಯ ನೀಡಲಿ. ಎಲ್ಲಾ ಓದುಗರಿಗೆ ಖಿಲಾಫತ್ ಅಹ್ಮದಿಯಾ ಶತವಾರ್ಷಿಕ ಜೂಬಿಲಿಯ ಅನೇಕ ಶುಭಾಶಯಗಳು. ✡







ಮೌಲಾನ ಮುಹಮ್ಮದ್ ಕರೀಮುದ್ದೀನ್ ಶಾಹಿದ್ ಸಾಹೇಬ್
ಎಡಿಶನಲ್ ನಾಝಿಮ್ ವಖ್ಫೆ ಜದೀದ್ ಬೇರೂನ್

ಸನ್ಮಾನ್ಯ ಮುಹಮ್ಮದ್ ಯೂಸುಫ್ ಸಾಹೇಬ್, ಸಂಪಾದಕ "ಯುಗರಶ್ಮಿ" ಅವರು ಖಿಲಾಫತ್ ಶತವಾರ್ಷಿಕ ಜೂಬಿಲಿ ವಿಶೇಷಾಂಕಕ್ಕಾಗಿ ಸಂದೇಶವನ್ನು ಕಳುಹಿಸಲು ಅಪೇಕ್ಷಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಪ್ರಕಟವಾಗುವ "ಯುಗರಶ್ಮಿ" ಜೂಬಿಲಿ ವಿಶೇಷಾಂಕವನ್ನು ಪ್ರಕಟಿಸಲಿದೆಯೆಂದು ತಿಳಿದು ನನಗೆ ಬಹಳ ಸಂತೋಷವಾಯಿತು. ಅಹ್ಮದಿಯಾ ಖಿಲಾಫತ್ ಬಗ್ಗೆ ಆವಶ್ಯಕ ಮತ್ತು ಮುಖ್ಯ ಮಾಹಿತಿಗಳನ್ನು ಈ ವಿಶೇಷಾಂಕದ ಮೂಲಕ ಕನ್ನಡ ಭಾಷೆ ತಿಳಿದವರು ಮನವರಿಕೆ ಮಾಡಿಕೊಳ್ಳುವರು ಎಂದು ನಾನು ಆಶಿಸುತ್ತೇನೆ. ಅಹ್ಮದಿಯಾ ಜಮಾಅತಿಗೆ ಸೇರಿದವರು ಮತ್ತು ಅಹ್ಮದಿಯೇತರ ಮುಸ್ಲಿಮರು ಈ ವಿಶೇಷಾಂಕದ ಮೂಲಕ ತಿಳಿದುಕೊಳ್ಳುವುದೇನೆಂದರೆ, ಈಗಿನ ಕಾಲದಲ್ಲಿ ಮುಸ್ಲಿಮರ ಎಲ್ಲಾ ರೀತಿಯ ಯಶಸ್ಸು, ಅವರ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಸಮಸ್ಯೆಗಳ ಪರಿಹಾರ ಖಿಲಾಫತ್ ವ್ಯವಸ್ಥೆಯೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಅಡಕವಾಗಿದೆ. ಈ ಅನುಗ್ರಹಿಸಲ್ಪಟ್ಟ ಖಿಲಾಫತ್ ವ್ಯವಸ್ಥೆಯ ಕುರಿತು ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಶುಭವಾರ್ತೆ ನೀಡಿದ್ದರು. ಇಮಾಮ್ ಮಹ್‌ದೀ ಮೂಲಕ ಪುನಃ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತ್) ಸ್ಥಾಪಿತವಾಗುವುದು ಎಂದು ಅವರು ಶುಭವಾರ್ತೆ ನೀಡಿದ್ದರು.

ಈ ಖಿಲಾಫತ್ ಕುರಿತು ಹಝ್ರ್‌ರತ್ ಇಮಾಮ್ ಮಹ್‌ದೀ ಅಲೈಹಿಸ್ಸಲಾಮ್‌ರವರು ಹೀಗೆ ಶುಭವಾರ್ತೆ ನೀಡಿರುವರು: "ಈ ಖಿಲಾಫತ್ ಶಾಶ್ವತವಾಗಿರುವುದು. ಅದರ ಸರಪಳಿ ಖಿಯಾಮತ್ ದಿನದ ತನಕ ಮುರಿದು ಹೋಗಲಾರದು."

ಅಲ್ಲಾಹನು ಸ್ಥಾಪಿಸಿದ ಖಿಲಾಫತ್ ವ್ಯವಸ್ಥೆಯೊಂದಿಗೆ ಸಂಬಂಧ ಜೋಡಿಸಿ ಇಸ್ಲಾಮಿನ ವಿಜಯಕ್ಕಾಗಿ ಕಠಿಣ ಪ್ರಯತ್ನ ಮಾಡುವವರು ಭಾಗ್ಯಶಾಲಿಗಳು. ಈ ಖಿಲಾಫತ್ ವ್ಯವಸ್ಥೆಯೊಂದಿಗೆ ಸಂಬಂಧ ಜೋಡಿಸದೆ ಇರುವವರಿಗೆ ಸತ್ಯವನ್ನು ಗುರುತಿಸಿ ಈ ವ್ಯವಸ್ಥೆಯೊಂದಿಗೆ ಸೇರುವ ಸೌಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ.

ಕೊನೆಯದಾಗಿ, "ಯುಗರಶ್ಮಿ" ಸಂಪಾದಕರಿಗೂ ಅವರಿಗೆ ಸಹಾಯಕರಾಗಿರುವವರಿಗೂ ಈ ವಿಶೇಷಾಂಕದ ಪ್ರಕಟಣೆಯ ಬಗ್ಗೆ ಶುಭಾಶಯಗಳನ್ನು ಕೋರುತ್ತೇನೆ. ಅಲ್ಲಾಹನು ಈ ಪತ್ರಿಕೆಯ ಮೂಲಕ ಅನೇಕರಿಗೆ ಸನ್ಮಾರ್ಗವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ. – ಆಮೀನ್. ✡






ಮೌಲಾನ ಖುರ್‌ಶೀದ್ ಅಹ್ಮದ್ ಅನ್ವರ್ ಸಾಹೇಬ್
ವಕೀಲುಲ್ ಮಾಲ್ ತಹ್‌ರೀಕ್ ಜದೀದ್

ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿಯ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಇತರ ಪತ್ರಿಕೆಗಳ ಹಾಗೆ ಮಂಗಳೂರಿನ "ಯುಗರಶ್ಮಿ" ಪತ್ರಿಕೆ ಸಹ ಒಂದು ವಿಶೇಷಾಂಕವನ್ನು ಪ್ರಕಟಿಸುತ್ತಿದೆ ಎಂದು ತಿಳಿದು ಸಂತೋಷವಾಯಿತು. ನಮ್ಮ ಸಹೋದರ ಸನ್ಮಾನ್ಯ ಮುಹಮ್ಮದ್ ಯೂಸುಫ್ ಸಾಹೆಬ್ (ಸಂಪಾದಕ, "ಯುಗರಶ್ಮಿ") ಅವರ ನಿಷ್ಠಾವಂತ ಪ್ರಯತ್ನವನ್ನು ಅಲ್ಲಾಹನು ಅನುಗ್ರಹಿಸಲಿ ಮತ್ತು ಅದರ ಉತ್ತಮ ಪರಿಣಾಮ ಉಂಟುಮಾಡಲಿ– ಆಮೀನ್.

ವಿಶ್ವದ ಧರ್ಮಗಳ ಚರಿತ್ರೆ ಹೀಗೆ ಸಾಕ್ಷ್ಯ ನುಡಿಯುತ್ತಿದೆ: ಈ ಲೋಕದಲ್ಲಿ ದೇವಸೃಷ್ಟಿಗಳಲ್ಲಿ ಶ್ರೇಷ್ಠವಾದ ಮನುಷ್ಯನು ಸೃಷ್ಟಿಸಲ್ಪಟ್ಟ ಕಾಲದಿಂದ ಮೊದಲುಗೊಂಡು ಮನುಷ್ಯರ ಮಾರ್ಗದರ್ಶನಕ್ಕಾಗಿ ಪ್ರವಾದಿಗಳ ಆಗಮನವಾಗಲು ತೊಡಗಿತು. ಆಗಿನ ಕಾಲದಿಂದಲೇ ಅಲ್ಲಾಹನ ಇನ್ನೊಂದು ನಡೆವಳಿಕೆ ಸಹ ಜಾರಿಯಲ್ಲಿದೆ. ಪ್ರತಿಯೊಬ್ಬ ಪ್ರವಾದಿಯ ನಿಧನದ ನಂತರ ಪ್ರವಾದಿಯ ಆಗಮನೋದ್ದೇಶವನ್ನು ಪರಿಪೂರ್ಣಗೊಳಿಸಲು ನುಬುವ್ವತಿನ ಮಾರ್ಗದಲ್ಲಿ ಖಿಲಾಫತನ್ನು ಅಲ್ಲಾಹನು ಜಾರಿಗೊಳಿಸುತ್ತಾ ಇದ್ದನು. ಪುರಾತನ ಕಾಲದಿಂದ ಜಾರಿಯಲ್ಲಿದ್ದ ಅಲ್ಲಾಹನ ಈ ನಡೆವಳಿಕೆಯ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ಹೀಗೆ ಹೇಳಿದರು:

"ಮಾ ಕಾನತ್ ನುಬುವ್ವತನ್ ಖತ್ತು ಇಲ್ಲಾ ತಬಿಅತ್‌ಹಾ ಖಿಲಾಫತುನ್ –

"ಲೋಕದಲ್ಲಿ ಯಾವುದೇ ಒಬ್ಬ ಪ್ರವಾದಿ ಆಗಮಿಸಿ ಮೃತರಾದ ನಂತರ ನುಬುವ್ವತಿನ ಮಾರ್ಗದಲ್ಲಿ ಖಿಲಾಫತ್ ಸ್ಥಾಪಿತವಾಗದೆ ಇರಲಿಲ್ಲ."

ಅಲ್ಲಾಹನ ಈ ನಡೆವಳಿಕೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಸಹ ತನ್ನ ಸಮುದಾಯದ ಆದ್ಯಕಾಲದಲ್ಲಿಯೂ ಅಂತಿಮ ಕಾಲದಲ್ಲಿಯೂ ನುಬುವ್ವತಿನ ಮಾರ್ಗದಲ್ಲಿ ಖಿಲಾಫತ್ ಸ್ಥಾಪಿತವಾಗುವ ಬಗ್ಗೆ ಶುಭವಾರ್ತೆ ನೀಡಿದ್ದರು:

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಹೇಳಿದುದು ಅಕ್ಷರಶಃ ಈಡೇರಿತು. ಅವರು ನಿಧನಹೊಂದಿದ ನಂತರ ಖಿಲಾಫತೆ ರಾಶಿದ ಸ್ಥಾಪಿತವಾಯಿತು. ಹಝ್ರತ್ ಅಬೂಬಕರ್ ಸಿದ್ದೀಖ್ (ರಝಿಯಲ್ಲಾಹು ಅನ್‌ಹು) ಅವರು ಚುನಾಯಿತರಾದ ಕಾಲದಿಂದ ಮೊದಲುಗೊಂಡು ಹಝ್ರತ್ ಅಲಿ (ಕರ್ರಮಲ್ಲಾಹು ವಜ್‌ಹಹೂ) ಅವರು ಹುತಾತ್ಮರಾಗುವ ತನಕ ಮೂವತ್ತು ವರ್ಷಗಳ ಕಾಲ ಅದು ಜಾರಿಯಲ್ಲಿತ್ತು. ಅನಂತರ ಬನೂ ಉಮಯ್ಯ, ಬನೂ ಅಬ್ಬಾಸ್ ಮತ್ತು ತುರ್ಕಿಯ ಉಸ್ಮಾನಿಯಾ ವಂಶದ ದೊರೆಗಳ ನಿರಂಕುಶ ಅಧಿಕಾರ ಜಾರಿಯಲ್ಲಿತ್ತು. ಶತಮಾನಗಳ ಕಾಲದ ದೌರ್ಜನ್ಯ ಕಾಲಘಟ್ಟದ ನಂತರ ಅಲ್ಲಾಹನು ಪುನಃ ದಯೆದೋರಿದನು. ಅವನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಶುಭವಾರ್ತೆ ಪ್ರಕಾರ ಇಸ್ಲಾಮಿನ ಪುನರುತ್ಥಾನಕ್ಕಾಗಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರವರಿಗೆ ಮಸೀಹ್ ಮತ್ತು ಮಹ್‌ದೀ ಎಂಬ ಅತ್ಯುನ್ನತ ಆಧ್ಯಾತ್ಮಿಕ ಪದವಿಯನ್ನು ನೀಡಿ ಕಳುಹಿಸಿದನು. ಅವರು ನಿಧನಹೊಂದಿದ ನಂತರ 1908ರ ಮೇ ದಿನಾಂಕ 27ರಂದು ಅಲ್ಲಾಹನ ದಿವ್ಯಶಕ್ತಿಯ ದ್ವಿತೀಯ ಪ್ರಕಟಣೆಯ ರೂಪದಲ್ಲಿ ನುಬುವ್ವತಿನ ಮಾರ್ಗದಲ್ಲಿ ಖಿಲಾಫತ್ ಸ್ಥಾಪಿಸಲ್ಪಟ್ಟಿತು. ಹಝ್ರತ್ ಮೌಲಾನ ಹಕೀಮ್ ನೂರುದ್ದೀನ್ ಸಾಹೇಬರು ಪ್ರಥಮ ಖಲೀಫರಾದರು. ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹೇಬರು ದ್ವಿತೀಯ ಖಲೀಫರಾದರು. ಹಝ್ರತ್ ಹಾಫಿಝ್

ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ಎಂ.ಎ. (ಆಕ್ಸ್‌ಫರ್ಡ್) ತೃತೀಯ ಖಲೀಫರಾದರು. ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಚತುರ್ಥ ಖಲೀಫರಾದರು. ಈ ನಾಲ್ಕು ಖಲೀಫರ ಯಶಸ್ವೀ ಕಾಲಘಟ್ಟದ ನಂತರ ಈಗ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್‌ರವರ ಐದನೆಯ ಖಿಲಾಫತ್ ಕಾಲಘಟ್ಟದಲ್ಲಿ ನಾವು ಅವರ ನೇತೃತ್ವದಲ್ಲಿ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದೇವೆ – ಅಲ್ಲಾಹನಿಗೆ ಆ ಬಗ್ಗೆ ಸರ್ವಸ್ತುತಿಗಳು.

ಇಂದು ಮುಸ್ಲಿಮರು ಯಾವುದೇ ಸರ್ವ ಮಾನ್ಯ ಆಧ್ಯಾತ್ಮಿಕ ನೇತೃತ್ವದಿಂದ ವಂಚಿತರಾಗಿರುವ ಕಾರಣ ಐಕ್ಯತೆಯಿಲ್ಲದೆ ಚದುರಿಹೋಗಿರುವರು. ಐವತ್ತಕ್ಕಿಂತಲೂ ಹೆಚ್ಚು ಸರಕಾರಗಳನ್ನು ಹೊಂದಿದ್ದರೂ ಗಾಯಗೊಂಡು ರೆಕ್ಕೆ ಬಡಿಯುತ್ತಿರುವ ಪಕ್ಷಿಗಳ ಹಾಗೆ ಎಲ್ಲಾ ಕಡೆಗಳಿಂದ ಶತ್ರುಗಳ ಆಕ್ರಮಣಗಳಿಗೆ ಅವರು ಗುರಿಯಾಗುತ್ತಾ ಇದ್ದಾರೆ.

ಅಹ್ಮದಿಯಾ ಜಮಾಅತ್ ಮೇಲೆ ಅಲ್ಲಾಹನು ಅಪರಿಮಿತ ಅನುಗ್ರಹ ಸುರಿಸಿರುವನು. ಖಿಲಾಫತ್ ವ್ಯವಸ್ಥೆಯ ರೂಪದಲ್ಲಿ ಒಂದು ಆಧ್ಯಾತ್ಮಿಕ ನೇತೃತ್ವದೊಂದಿಗೆ ಸಂಬಂಧವನ್ನು ಜೋಡಿಸಿರುವ ಕಾರಣ ಬುದ್ಧಿಜೀವಿಗಳ ದೃಷ್ಟಿಯಲ್ಲಿ ಗಣ್ಯವೂ ಘನತೆಯುಳ್ಳದ್ದೂ ಆಗಿರುವ ಪದವಿ ಅಹ್ಮದಿಯರಾಗಿ ನಮಗೆ ದೊರೆತಿದೆ. ನಾವು ಸೀಮಿತ ಸಂಪನ್ಮೂಲಗಳನ್ನು ಹೊಂದಿದ್ದರೂ ಲೋಕದ 193 ದೇಶಗಳಲ್ಲಿ ಧರ್ಮಪ್ರಚಾರದ ಕೆಲಸ ನಡೆಸುತ್ತಾ ಇದ್ದೇವೆ. ಖಿಲಾಫತ್ ವ್ಯವಸ್ಥೆಯ ರೂಪದಲ್ಲಿ ನಮಗೆ ದೊರೆತಿರುವ ಅಮೂಲ್ಯವಾದ ಈ ದೈವಿಕ ಪಾರಿತೋಷಕ ನಮ್ಮೊಂದಿಗೆ ಆವಶ್ಯಪಡುವುದೇನೆಂದರೆ ನಾವು ಮತ್ತು ನಮ್ಮ ಸಂತಾನ ಯಾವಾಗಲೂ ಈ ಪರಿಶುದ್ಧ ಪ್ರತಿಜ್ಞೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. 2008 ಮೇ ದಿನಾಂಕ 27ರಂದು, ಎಂದರೆ ಅಹ್ಮದಿಯಾ ಖಿಲಾಫತ್ ಪ್ರಥಮ ಶತಮಾನವನ್ನು ಪೂರ್ತಿಗೊಳಿಸಿದ ಮತ್ತು ದ್ವಿತೀಯ ಶತಮಾನ ಆರಂಭಗೊಂಡ ದಿನ ಲೋಕದಾದ್ಯಂತ ಇರುವ ಅಹ್ಮದಿಯರಿಂದ ಈ ಕೆಳಗಿನ ಪ್ರತಿಜ್ಞೆಯನ್ನು ಗಂಭೀರ ಶಬ್ದಗಳಲ್ಲಿ ಉಚ್ಚರಿಸಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್, ಮಿರ್ಝಾ ಮಸ್‌ರೂರ್ ಅಹ್ಮದ್ (ಅಯ್ಯದಹುಲ್ಲಾಹು ತಆಲಾ) ಮಾಡಿಸಿದರು :

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ.

"ಇಂದು ಅಹ್ಮದಿಯಾ ಖಿಲಾಫತ್ ನೂರು ವರ್ಷಗಳನ್ನು ಪೂರ್ತಿಗೊಳಿಸಿದಾಗ ನಾವು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೀಗೆ ಪ್ರತಿಜ್ಞೆ ಮಾಡುತ್ತೇವೆ: ಇಸ್ಲಾಮ್ ಮತ್ತು ಅಹ್ಮದಿಯತಿನ ಪ್ರಚಾರ ಮತ್ತು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಹೆಸರನ್ನು ಲೋಕದ ಎಲ್ಲೆಗಳ ತನಕ ತಲಪಿಸಲಿಕ್ಕಾಗಿ ನಮ್ಮ ಜೀವಿತದ ಕೊನೆಯ ಕ್ಷಣಗಳ ತನಕ ಪ್ರಯತ್ನಿಸುತ್ತಾ ಹೋಗುವೆವು. ಈ ಪರಿಶುದ್ಧ ಕರ್ತವ್ಯವನ್ನು ಈಡೇರಿಸಲಿಕ್ಕಾಗಿ ನಮ್ಮ ಜೀವಿತವನ್ನು ಯಾವಾಗಲೂ ಅಲ್ಲಾಹನಿಗಾಗಿ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರಿಗಾಗಿ ಅರ್ಪಿಸುವೆವು. ದೊಡ್ಡ ದೊಡ್ಡ ಬಲಿದಾನಗಳನ್ನು ಅರ್ಪಿಸಿ ಖಿಯಾಮತ್ ದಿನದ ತನಕ ಇಸ್ಲಾಮಿನ ಪತಾಕೆಯನ್ನು ಲೋಕದ ಪ್ರತಿಯೊಂದು ದೇಶದಲ್ಲಿ ಎತ್ತರವಾಗಿ ಹಾರಿಸುವೆವು. ಖಿಲಾಫತ್ ವ್ಯವಸ್ಥೆಯ ರಕ್ಷಣೆಗಾಗಿ ನಮ್ಮ ಅಂತಿಮ ಶ್ವಾಸದ ತನಕ ತೀವ್ರವಾಗಿ ಪ್ರಯತ್ನಿಸುತ್ತಾ ಹೋಗುವೆವು ಎಂದೂ ಪ್ರತಿಜ್ಞೆ ಮಾಡುತ್ತೇವೆ. ನಮ್ಮ ಮಕ್ಕಳನ್ನೂ ಮುಂದಿನ ಪೀಳಿಗೆಯನ್ನೂ ಯಾವಾಗಲೂ ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿಡಲು ಮತ್ತು ಅದರ ಅನುಗ್ರಹದಿಂದ ಲಾಭಪಡೆಯಲು ಉಪದೇಶಿಸುತ್ತಾ ಇರುವೆವು. ಅದರ ಫಲಸ್ವರೂಪವಾಗಿ ಅಹ್ಮದಿಯಾ ಖಿಲಾಫತ್ ಖಿಯಾಮತ್ ದಿನದ ತನಕ ಸುರಕ್ಷಿತವಾಗಿ ನೆಲೆಗೊಳ್ಳಲಿ ಮತ್ತು ಲೋಕಾಂತ್ಯ ದಿನದ ತನಕ ಇಸ್ಲಾಮ್ ಧರ್ಮ ಪ್ರಚಾರ ಮುಂದುವರಿಯಲಿ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಪತಾಕೆ ಲೋಕದ ಎಲ್ಲಾ ಪತಾಕೆಗಳಿಗಿಂತ ಎತ್ತರವಾಗಿ ಹಾರಾಡುವಂತಾಗಲಿ.

ಓ ಅಲ್ಲಾಹ್ ಈ ಪ್ರತಿಜ್ಞೆಯನ್ನು ಈಡೇರಿಸುವ ಭಾಗ್ಯವನ್ನು ನೀನು ನಮಗೆ ದಯಪಾಲಿಸು.

ಅಲ್ಲಾಹುಮ್ಮ ಆಮೀನ್, ಅಲ್ಲಾಹುಮ್ಮ ಆಮೀನ್, ಅಲ್ಲಾಹುಮ್ಮ ಆಮೀನ್.

ಈ ಪರಿಶುದ್ಧ ಪ್ರತಿಜ್ಞೆಯನ್ನು ಯಾವಾಗಲೂ ನಮ್ಮ ಮನಸ್ಸಿನಲ್ಲಿ ಇರಿಸಲು ಮತ್ತು ಲೋಕಾಂತ್ಯದ ತನಕ ಖಿಲಾಫತ್ ವ್ಯವಸ್ಥೆಯ ಅನುಗ್ರಹ ಪಡೆಯುತ್ತಾ ಇರಲು ಅಲ್ಲಾಹನು ನಮಗೆ ಸೌಭಾಗ್ಯ ದಯಪಾಲಿಸಲಿ.

ಆಮೀನ್ ಬಿರಹ್‌ಮತಿಕ ಯಾ ಅರ್‌ಹಮುರ್ರಾಹಿಮೀನ್. ✡






ಮುಹಮ್ಮದ್ ಶಫೀಉಲ್ಲಾಹ್ ಸಾಹೇಬ್,
ಆಮೀರ್ ಜಮಾಅತ್ ಅಹ್ಮದಿಯಾ, ಕರ್ನಾಟಕ

ಬಹುಮಾನ್ಯರಾದ ಮುಹಮ್ಮದ್ ಯೂಸುಫ್ ಸಾಹೇಬ್, ಸಂಪಾದಕರು "ಯುಗರಶ್ಮಿ" ಮಂಗಳೂರು,

ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವ ಬರಕಾತುಹು

ಈ ವರ್ಷ ನೀವು "ಯುಗರಶ್ಮಿ"ಯ ಖಿಲಾಫತ್ ಜೂಬಿಲಿ ವಿಶೇಷಾಂಕ ಪ್ರಕಟಿಸುತ್ತಿದ್ದೀರಿ. ಅಲ್ ಹಮ್ದುಲಿಲ್ಲಾಹ್ (ಅಲ್ಲಾಹನಿಗೆ ಎಲ್ಲಾಸ್ತುತಿಗಳು ಸಲ್ಲುವುವು). ಈ ವಿಷಯ ತಿಳಿದು ಬಹಳ ಸಂತೋಷವಾಯಿತು. ನೀವು ಈ ವಿಶೇಷಾಂಕಕ್ಕೆ ಸಂದೇಶ ಕಳುಹಿಸಲು ಅಪೇಕ್ಷಿಸಿರುವಿರಿ. ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ (ಅಯ್ಯದಹುಲ್ಲಾಹು ತಆಲಾ ಬಿ ನಸ್ರಿಹಿಲ್ ಅಝೀಝ್– ಅಲ್ಲಾಹನು ಅವರಿಗೆ ಮಹತ್ತಾದ ನೆರವು ನೀಡಲಿ) ಅವರ ಜ್ಞಾನಭರಿತ ಸಂದೇಶವೇ ನಮಗೆ ದಾರಿದೀಪವಾಗಿದೆ. ನಮ್ಮ ಪ್ರಿಯ ಆಧ್ಯಾತ್ಮಿಕ ನಾಯಕರ ಮಾರ್ಗದರ್ಶನ ಮತ್ತು ಇಚ್ಛೆಗೆ ಅನುಸಾರವಾಗಿ ಸೇವೆಮಾಡುವ ಭಾಗ್ಯವನ್ನು ಅಲ್ಲಾಹನು ನಮಗೆಲ್ಲರಿಗೂ ದಯಪಾಲಿಸಲಿ – ಆಮೀನ್.

ನಿಮ್ಮ ಅಪೇಕ್ಷೆ ಪ್ರಕಾರ ಕೆಲವು ಮಾತುಗಳನ್ನು ಹೇಳುತ್ತೇನೆ: ಯುಗರಶ್ಮಿ ಅಲ್ಲಾಹನ ಅನುಗ್ರಹದಿಂದ ಸುಮಾರು 33 ವರ್ಷಗಳಿಂದ ಪ್ರಕಟವಾಗುತ್ತಿದೆ. ಉಪದೇಶ, ತರಬೇತಿ ಮತ್ತು ಪ್ರಚಾರದ ಕ್ಷೇತ್ರದಲ್ಲಿ ಈ ಪತ್ರಿಕೆ ಗಣ್ಯ ಸೇವೆ ಮಾಡುತ್ತಾ ಅಭಿವೃದ್ಧಿಯ ಮಜಲುಗಳ ಕಡೆಗೆ ಸಾಗುತ್ತಿದೆ.

ಅಹ್ಮದಿಯಾ ಖಿಲಾಫತಿನ ಶತವಾರ್ಷಿಕ ಜೂಬಿಲಿಯ ವರ್ಷ ಇದಾಗಿದೆ. ಲೋಕದವರೆಲ್ಲಾ ಖಿಲಾಫತಿನ ಮಹತ್ವ ವನ್ನು ಅರಿಯುವ ಭಾಗ್ಯವನ್ನು ಅಲ್ಲಾಹನು ಕರುಣಿಸಲಿ. ಇಂದು ಲೋಕದಲ್ಲಿ ಶಾಂತಿ ಸ್ಥಾಪನೆಯನ್ನು ಮಾಡುವುದು ಅಹ್ಮದಿಯಾ ಖಿಲಾಫತಿಗೆ ಮಾತ್ರ ಸಾಧ್ಯವಿದೆ. ಮುಂದೆ ದ್ವಿತೀಯ ಶತವಾರ್ಷಿಕ ಖಿಲಾಫತ್ ಜೂಬಿಲಿಯ ಸಂದರ್ಭದಲ್ಲಿ ನಾವು ಜೀವಿಸಿರಲಾರೆವು. ಆದರೆ ನಾವು ಪ್ರಾರ್ಥಿಸುತ್ತೇವೆ: ನಮ್ಮ ಸಂತಾನ ಪರಂಪರೆಯನ್ನು ಅಹ್ಮದಿಯಾ ಖಿಲಾಫತಿ ನೊಂದಿಗೆ ಹೃತ್ಪೂರ್ವಕ ಸಂಬಂಧವನ್ನು ಜೋಡಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ – ಆಮೀನ್.

ನಿಮ್ಮ ಪತ್ರಿಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮತ್ತು ಬಹುಮಾನ್ಯರಾದ ಆಯಾ ಕಾಲದ ಖಲೀಫರ ಉಪದೇಶಗಳಿಂದ ಯಾವಾಗಲೂ ಅಲಂಕರಿಸಲ್ಪಡುತ್ತಾ ಇರಲಿ. ಆ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಭವಿಷ್ಯವಾಣಿ ಪ್ರಕಾರ ಆಗಮಿಸಿದ ಇಮಾಮ್ ಮಹ್‌ದೀ ಹಾಗೂ ಮಸೀಹ್ ಮೌಊದ್ ಆಗಿರುವ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರವರನ್ನು ಸತ್ಯ ಹೃದಯದಿಂದ ಗುರುತಿಸುವ ಭಾಗ್ಯ ಜನರಿಗೆ ಲಭಿಸಲಿ.

ಅಲ್ಲಾಹನು ಈ ಪತ್ರಿಕೆಗೆ ಅಭಿವೃದ್ಧಿಯನ್ನು ಪ್ರತಿದಿನ ದಯಪಾಲಿಸಲಿ. ಈ ಪತ್ರಿಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಪದ್ಯದ ಪ್ರಕಾರ ಆಧ್ಯಾತ್ಮಿಕ ಮತ್ತು ಜ್ಞಾನ ಸಂಬಂಧವಾದ ಖಜಾನೆಯನ್ನು ಹಂಚುವ ಕಾರ್ಯ ನಿರ್ವಹಿಸುವಂತಾಗಲಿ:

"ಓ ಖಝಾಯಿನ್ ಜೋ ಹಝಾರೋಂ ಸಾಲ್ ಸೆ ಮದ್‌ಫೂನ್ ಥೆ
ಮೈ ಓ ದೇತಾ ಹೂಂ ಅಗರ್ ಕೋಯಿ ಮಿಲೇ ಉಮೇದ್‌ವಾರ್"
(ಸಾವಿರಾರು ವರ್ಷಗಳಿಂದ ದಫನುಗೊಳಿಸಲ್ಪಟ್ಟ ಖಜಾನೆಗಳನ್ನು ಯಾರಾದರೂ
ಬಯಸುವವರಿದ್ದರೆ ನಾನು ಅವರಿಗೆ ಅದನ್ನು ಕೊಡುವೆನು.)

ಅಲ್ಲಾಹನು ನಿಮಗೆ ಮತ್ತು ಈ ಕ್ಷೇತ್ರದಲ್ಲಿ ಲೇಖನಿ ಮೂಲಕ ಜಿಹಾದ್ ಮಾಡುವ ಎಲ್ಲರಿಗೂ ಮತ್ತು ಈ ಪತ್ರಿಕೆಯ ವಿಜಯಕ್ಕಾಗಿ ನಿರಂತರವಾಗಿ ಸೇವೆಸಲ್ಲಿಸುವ ಎಲ್ಲರಿಗೂ ಅತ್ಯುತ್ತಮ ಪ್ರತಿಫಲವನ್ನು ದಯಪಾಲಿಸಲಿ. – ಆಮೀನ್. ✡

# ನೂರು ವರ್ಷಗಳು ತುಂಬಿದ ಅಹ್ಮದಿಯಾ ಖಿಲಾಫತ್



❖ ಮುಹಮ್ಮದ್ ಯೂಸುಫ್
ಸಂಪಾದಕ

ಖಿಲಾಫತ್ ಸತ್ಯವಿಶ್ವಾಸಿಗಳಿಗೆ ಅಲ್ಲಾಹನ ವಾಗ್ದಾನದ ವರದಾನವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರವಾದಿಸಿದ ಪ್ರಕಾರ, ಇಸ್ಲಾಮಿನ ಪ್ರಥಮ ನಾಲ್ವರು ಖಲೀಫರ (ಖುಲಫಾಉರ್ರಾಶಿದೀನ್) ಸುವರ್ಣ ಕಾಲದ ಬಳಿಕ ಸ್ವೇಚ್ಛಾಧಿಪತ್ಯ ಮತ್ತು ಬಲಾತ್ಕಾರದಿಂದ ಕೂಡಿದ ಆಡಳಿತೆ ನೆಲೆಗೊಂಡಿದ್ದವು. ಅನಂತರ ಪ್ರವಾದಿ ನುಡಿಯಂತೆಯೇ "ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್" (ಪ್ರವಾದಿತ್ವದ ಪಥಲ್ಲಿರುವ ಖಿಲಾಫತ್), ಈ ಕಾಲದಲ್ಲಿ ಆಗಮಿಸಿದ ಇಮಾಂ ಮಹ್‌ದೀ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಮೂಲಕ ಪುನಃ ಸ್ಥಾಪಿತವಾಯಿತು.

ಎಪ್ಪತ್ತ ಮೂರು ಮುಸ್ಲಿಂ ಪಂಗಡಗಳ ಪೈಕಿ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಮಾತ್ರ ಖಿಲಾಫತ್ ಎಂಬ ಈ ಅನುಗ್ರಹವಿರುವುದು ಆ ಜಮಾಅತಿಗೆ ಸೇರಿದವರು ಯಥಾರ್ಥ ಸತ್ಯವಿಶ್ವಾಸಿಗಳೂ ಸತ್ಕರ್ಮಿಗಳೂ ಆಗಿದ್ದಾರೆಂಬುದಕ್ಕೆ ಬಲವಾದ ಸಾಕ್ಷ್ಯವಾಗಿದೆ.


1908 ಮೇ 27ರಂದು ಸ್ಥಾಪಿತವಾದ ಅಹ್ಮದಿಯಾ ಖಿಲಾಫತಿಗೆ ನೂರು ವರ್ಷಗಳು ತುಂಬಿದ ಈ ಸಂದರ್ಭದಲ್ಲಿ, ಅಹ್ಮದಿಯಾ ಜಮಾಅತ್, ಅಲ್ಲಾಹನಿಗೆ ಕೃತಜ್ಞತಾ ಸಮರ್ಪಣೆಯ ರೀತಿಯಲ್ಲಿ ಜನಸೇವೆಯ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜಮಾಅತಿನ ಪತ್ರಿಕೆಗಳು ವಿಶೇಷಾಂಕಗಳನ್ನು ಪ್ರಕಟಿಸಿ ಖಿಲಾಫತಿನ ಮಹತ್ವವನ್ನು ಲೋಕ ಜನರಿಗೆ ತಿಳಿಯಪಡಿಸುತ್ತಿವೆ. ಈ ನಿಟ್ಟಿನಲ್ಲಿ "ಯುಗರಶ್ಮಿ" ಕೂಡ ಪಾಲ್ಗೊಂಡು ತನ್ನ ಕಿಂಚಿತ್ ಸೇವೆಯನ್ನು ಸಲ್ಲಿಸುತ್ತಿದೆ. ಅಲ್‌ಹಮ್ದುಲಿಲ್ಲಾಹ್ (ಅಲ್ಲಾಹನಿಗೆ ಸರ್ವಸ್ತುತಿಗಳು).

ಖಿಲಾಫತಿನ ರೂಪಭೇದಗಳ ಬಗ್ಗೆ ಪ್ರವಾದಿಸಿದ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಕೊನೆಗೆ "ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್" ಪುನಃ ಸ್ಥಾಪಿತವಾಗುವುದೆಂದು ಹೇಳಿದರು. ಲೋಕಾಂತ್ಯ ದಿನದ ತನಕ ಅಹ್ಮದಿಯಾ ಖಿಲಾಫತ್ ನೆಲೆಗೊಳ್ಳುವುದು ಎಂದು ಅಲ್ಲಾಹನಿಂದ ತನಗೆ ಲಭಿಸಿದ ಜ್ಞಾನದ ಪ್ರಕಾರ, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್(ಅ) ಶುಭವಾರ್ತೆ ನೀಡಿದ್ದಾರೆ.

ಅಹ್ಮದಿಯಾ ಜಮಾಅತ್ ಈಗ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರ ನೇತೃತ್ವದಲ್ಲಿ ಜಗತ್ತಿನ 193 ರಾಷ್ಟ್ರಗಳಲ್ಲಿ ಮುನ್ನೇರುತ್ತಿದೆ. ಖಿಲಾಫತಿನ ನೆಲೆನಿಲ್ಲುವಿಕೆಗೋಸ್ಕರ ಸರ್ವತ್ಯಾಗಕ್ಕೂ ಸಿದ್ಧರಾಗಬೇಕೆಂದೂ ಇಸ್ಲಾಮಿನ ಶಾಂತಿ ಸಂದೇಶವನ್ನು ಲೋಕದಲ್ಲೆಲ್ಲೂ ಹರಡಲು ಕಂಕಣಬದ್ಧರಾಗಬೇಕೆಂದೂ ಖಿಲಾಫತ್ ಅನುಗ್ರಹಗಳನ್ನು ಪಡೆಯುತ್ತಿರುವ ಅಹ್ಮದಿಯರು ಅಲ್ಲಾಹನಿಗೆ ಸದಾ ಕೃತಜ್ಞತೆ ಸಮರ್ಪಿಸಬೇಕೆಂದೂ ಅವರು 2008 ಮೇ 27 ರಂದು ಮಾಡಿದ ಖಿಲಾಫತ್ ಶತವಾರ್ಷಿಕ ಜೂಬಿಲಿ ಭಾಷಣದಲ್ಲಿ ಉಪದೇಶಿಸಿದ್ದಾರೆ.

ಹಝ್ರತ್ ಖಲೀಫರ ಕರೆಗೆ ಓಗೊಟ್ಟು ನಾವು ನಮ್ಮ ಕರ್ತವ್ಯಗಳನ್ನು ನಿಭಾಯಿಸಲು ಅಲ್ಲಾಹನು ನಮಗೆ ಸೌಭಾಗ್ಯವನ್ನು ದಯಪಾಲಿಸಲಿ – ಆಮೀನ್.

# ಖಿಲಾಫತ್‌ನಿಂದ ಲೋಕಶಾಂತಿ



**ಲಂಡನಿನ ಎಕ್ಸೆಲ್ ಸೆಂಟರ್‌ನಲ್ಲಿ ದಿನಾಂಕ 27 - 05 - 2008 ರಂದು ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸ್ಸಮಾರಂಭದಲ್ಲಿ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಮಾಡಿದ ಭಾಷಣ**

ಅಲ್ಲಾಹನ ಅನುಗ್ರಹದಿಂದ ಈ ದಿನ ಅಹ್ಮದಿಯಾ ಖಿಲಾಫತ್ ನೂರು ವರ್ಷಗಳನ್ನು ಪೂರ್ಣಗೊಳಿಸುತ್ತಾ ಇರುವುದರಿಂದ ನಾವು ಅಲ್ಲಾಹನ ಮುಂದೆ ನಮ್ಮ ಕೃತಜ್ಞತೆಯನ್ನು ಅರ್ಪಿಸಲು ಇಲ್ಲಿ ಜಮಾಯಿಸಿದ್ದೇವೆ. M.T.A. (ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ) ಮೂಲಕ ಲೋಕದಾದ್ಯಂತ ಎಲ್ಲಾ ದೇಶಗಳಲ್ಲಿ ಇರುವ ಅಹ್ಮದಿಯರು ಈ ಸಮಾರಂಭದಲ್ಲಿ ಭಾಗವಹಿಸುತ್ತಾ ಇದ್ದಾರೆ. ಈ ಮಹತ್ವಪೂರ್ಣ ಸಂದರ್ಭದಲ್ಲಿ ನಾನು ನಿಮಗೆ ಮತ್ತು ಲೋಕದಲ್ಲಿರುವ ಎಲ್ಲಾ ಅಹ್ಮದಿಯರಿಗೆ ಶುಭಾಶಂಸೆಗಳನ್ನು ಕೋರುತ್ತೇನೆ.

ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ನುಡಿದ ಭವಿಷ್ಯವಾಣಿಗಳ ಪ್ರಕಾರ ಆಗಮಿಸಿದ ಮಸೀಹ್ ಮತ್ತು ಮಹ್‌ದಿಯವರ ಜಮಾಅತ್‌ನಲ್ಲಿ ನಾವು ಸೇರಿರುವ ಕಾರಣ ನಾವು ಒಂದು ಏಕತೆಯ ದೃಶ್ಯವನ್ನು ಕಾಣುತ್ತಿದ್ದೇವೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರಿಗೆ ಅಲ್ಲಾಹನು ಮಾಡಿದ ವಾಗ್ದಾನಗಳ ಪ್ರಕಾರ ಅಲ್ಲಾಹನು ಅನುಗ್ರಹಗಳ ಮಳೆಯನ್ನು ಸುರಿಸಿದ ಮತ್ತು ಸುರಿಸುತ್ತಾ ಇರುವ ಆ ಪಟ್ಟಣದ ದೃಶ್ಯಗಳನ್ನು ಸಹ ನಾವು ನೋಡುತ್ತಿದ್ದೇವೆ. (ನಿಮ್ಮ ಮುಂದೆ ಖಾದಿಯಾನಿನ ಆ ದೃಶ್ಯಗಳನ್ನು ತೋರಿಸುವ ಟೆಲಿವಿಷನ್ ಪರದೆ ಇಲ್ಲ. ಆದರೆ ನಾನು ನೋಡುತ್ತಾ ಇದ್ದೇನೆ. ಕೆಲವರು ಅದನ್ನು ನೋಡುತ್ತಾ ಇದ್ದಾರೆ.) ಖಾದಿಯಾನೆಂಬ ಆ ಪಟ್ಟಣ ಚಿಕ್ಕದಾಗಿತ್ತು. ಅದರ ಕುರಿತು ಯಾರೂ ಅರಿತಿರಲಿಲ್ಲ. ಮುಹಮ್ಮದೀ ಮಸೀಹರ ಈ ಪಟ್ಟಣದ ಬಗ್ಗೆ ಈಗ ಎಲ್ಲರೂ ತಿಳಿದಿರುವರು. ಈ ಪಟ್ಟಣದ ರಸ್ತೆಗಳನ್ನೂ ಅದರ ಬಡಾವಣೆಗಳನ್ನೂ ಮುಹಮ್ಮದೀ ಮಸೀಹರ ಆಗಮನವನ್ನು ಪ್ರಕಟಿಸಲು ಮತ್ತು ಅದರ ಚಿಹ್ನೆಯಾಗಿ ನಿರ್ಮಿಸಲಾದ ಬಿಳಿ ಮಿನಾರವನ್ನು ಲೋಕಾದಾದ್ಯಂತ ಇರುವ ಎಲ್ಲರೂ ಟೆಲಿವಿಷನ್ ಮೂಲಕ ನೋಡುತ್ತಾ ಇದ್ದಾರೆ. ಅಲ್ಲಾಹನು ತನ್ನ ಪ್ರೀತಿಗೆ ಪಾತ್ರರಾದ ಮಸೀಹರಿಗೆ ನೀಡಿದ ವಾಗ್ದಾನ ಪ್ರಕಾರ ಜನಿಸಿದ ವಾಗ್ದತ್ತ ಪುತ್ರ ಮುಸ್ಲಿಹ್ ಮೌಊದ್(ರ) ಅವರಿಂದ ಕಾರ್ಯಗತವಾದ ಅನೇಕ ಮಹತ್ಕಾರ್ಯಗಳಲ್ಲಿ ಒಂದಾದ ನೀರಿಲ್ಲದ ಬರಡು ಭೂಮಿಯಲ್ಲಿ ಹಸಿರು ವೃಕ್ಷಗಳಿಂದಲೂ ಹೂಗಳಿಂದಲೂ ತುಂಬಿದ ಉದ್ಯಾನಗಳನ್ನು ಹೊಂದಿದ ಒಂದು ನಗರವು ನಿರ್ಮಿಸಲ್ಪಟ್ಟದ್ದನ್ನು ಎಂದರೆ ರಬ್ವದ ದೃಶ್ಯಗಳನ್ನೂ ನಾವು ನೋಡುತ್ತಾ ಇದ್ದೇವೆ.

ಪೂರ್ವದಿಕ್ಕಿನಿಂದ ಪಶ್ಚಿಮ ದಿಕ್ಕಿನ ಕಡೆಗೆ ಬರುತ್ತಿರುವ ಈ ದೃಶ್ಯಗಳನ್ನು ಹಾಗೂ ಅಲ್ಲಾಹನ ವಾಗ್ದಾನಗಳ ಪ್ರಕಾರ ಪಶ್ಚಿಮದ ಕಡೆಯಿಂದ ಅವನ ಶಾಶ್ವತ ಶಕ್ತಿ ಸಾಮರ್ಥ್ಯಗಳ ದೃಶ್ಯಗಳನ್ನು ಮತ್ತು ಆಯಾ ಕಾಲದ ಖಲೀಫರ ಧ್ವನಿ ಮತ್ತು ಚಿತ್ರದೊಂದಿಗೆ ಅಲ್ಲಾಹನ ಅನುಗ್ರಹಗಳ ಸ್ಮರಣೆಯನ್ನು ಪೂರ್ವದಲ್ಲಿಯೂ ಪಶ್ಚಿಮದಲ್ಲಿಯೂ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಯುರೋಪಿನಲ್ಲಿಯೂ ಅಮೇರಿಕದಲ್ಲಿಯೂ ಏಶಿಯಾದಲ್ಲಿಯೂ ಆಫ್ರಿಕದಲ್ಲಿಯೂ ಜನರು ಆಲಿಸುತ್ತಿದ್ದಾರೆ ಮತ್ತು ನೋಡುತ್ತಿದ್ದಾರೆ. ಇದು ನಿಶ್ಚಯವಾಗಿಯೂ ಪ್ರತಿಯೊಬ್ಬ ಅಹ್ಮದಿಗೆ ಸೂಚನೆ ನೀಡುವುದೇನೆಂದರೆ, ಅಲ್ಲಾಹನು ತನ್ನ ವಾಗ್ದಾನಗಳನ್ನು ಈಡೇರಿಸಿದ್ದಾನೆ ಮತ್ತು ಈಡೇರಿಸುತ್ತಾ ಇದ್ದಾನೆ. ಹಝ್‌ರತ್ ಮಸೀಹ್ ಮೌಊದ್(ಅ) ಅವರ ಸಂದೇಶವನ್ನು ಅಲ್ಲಾಹನು ಭೂಲೋಕದ ಎಲ್ಲೆಗಳ ತನಕ ತಲಪಿಸಿರುವನು ಮತ್ತು ತಲಪಿಸುತ್ತಾ ಇದ್ದಾನೆ.

ಅಹ್ಮದಿಯಾ ಖಿಲಾಫತ್ ಸ್ಥಾಪಿತವಾದುದು ಮತ್ತು ಅದರ ಮೂಲಕ ಲಭಿಸಿದ ಅಲ್ಲಾಹನ ಸಹಾಯದಿಂದ ಜಮಾಅತ್ ಅಭಿವೃದ್ಧಿಹೊಂದುತ್ತಾ ಇದ್ದ ದೃಶ್ಯಗಳನ್ನು ನಾವು ನಮ್ಮ ಗತಕಾಲದ ಚರಿತ್ರೆಯಲ್ಲಿ ಕಾಣುತ್ತಾ ಇದ್ದೆವು ಮತ್ತು ಈಗಲೂ ಕಾಣುತ್ತಾ ಇದ್ದೇವೆ. ಅಲ್ಲಾಹನು ಅಹ್ಮದಿಯಾ ಖಿಲಾಫತ್‌ನೊಂದಿಗೆ ಹೇಗೆ ವರ್ತಿಸುತ್ತಾ ಇದ್ದನು ಎಂಬುದನ್ನು ಕಳೆದ ನೂರು ವರ್ಷಗಳ ಚರಿತ್ರೆ ಪ್ರಕಟಿಸುತ್ತಾ ಇದೆ. ಅದು ನಮ್ಮ ವಿಶ್ವಾಸವನ್ನು ದೃಢಪಡಿಸುತ್ತಾ ಇದೆ ಮತ್ತು ನಮ್ಮ ವಿಶ್ವಾಸವನ್ನು ಚೇತನಗೊಳಿಸುತ್ತಾ ಇದೆ. ಕಳೆದ ನೂರುವರ್ಷಗಳ ಘಟನೆಗಳು ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಇರುವ ದಾಸರಾಗಿ ಮುಂದುವರಿಯಲು ನಮ್ಮನ್ನು ನಿರ್ಬಂಧಿಸುತ್ತಾ ಇಲ್ಲವೆ? ಈ ದಿನದ ಸಮಾರಂಭವು ಅಲ್ಲಾಹನಿಗೆ ಅವನ ಅನುಗ್ರಹಗಳ ಬಗ್ಗೆ ಕೃತಜ್ಞತೆ ಅರ್ಪಿಸುತ್ತಾ ಇರಲಿಕ್ಕಾಗಿದೆ.

ನಮಗೆ ಅಲ್ಲಾಹನು ತೋರಿಸಿಕೊಟ್ಟ ಈ ದಿನವು ಇಸ್ಲಾಮಿನ ಚರಿತ್ರೆ ಮತ್ತು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಅವರ

ಸತ್ಯಸಂಧನಾದ ದಾಸನಾದ ಹಝ್ರತ್ ಮಸೀಹ್ ಮೌಊದ್(ಅ) ಅವರ ಜಮಾಅತ್‌ಗೆ ಒಂದು ಹೊಸ ಮತ್ತು ಸುವರ್ಣ ಅಧ್ಯಾಯವನ್ನು ಬರೆಯುತ್ತಾ ಇದೆ. ಈ ಸಂಕಲ್ಪದಿಂದ ಮತ್ತು ಅಲ್ಲಾಹನ ಅನುಗ್ರಹಗಳಿಗಾಗಿ ಕೃತಜ್ಞತೆ ಅರ್ಪಿಸಲು ನಾವು ಇಲ್ಲಿ ಮತ್ತು ಲೋಕದ ವಿವಿಧ ದೇಶಗಳಲ್ಲಿ ಈ ಬಗ್ಗೆ ಸಮಾರಂಭಗಳನ್ನು ನಡೆಸುತ್ತಾ ಇರುವುದು ಧಾರ್ಮಿಕ ದೃಷ್ಟಿಯಲ್ಲಿ ಅನುಮತಿಸಲ್ಪಟ್ಟದ್ದು ಮಾತ್ರವಲ್ಲ, ಅಲ್ಲಾಹನ ಆಜ್ಞೆಗೆ ಅನುಸಾರವಾಗಿಯೂ ಆಗಿದೆ.

ಅಲ್ಲಾಹನು ಹೀಗೆ ಹೇಳಿದ್ದಾನೆ: "ವ ಅಮ್ಮಾ ಬಿನಿಅ್‌ಮತಿ ರಬ್ಬಿಕ ಫಹದ್ದಿಸ್." (ಅಝ್ಝುಹಾ: ವಚನ 12) ಅಂದರೆ, "ನೀನು ನಿನ್ನ ಪ್ರಭುವಿನ ಅನುಗ್ರಹಗಳನ್ನು ಸ್ಮರಿಸು." ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ನಾವು ಅಲ್ಲಾಹನ ದಾಸರು ಎಂಬುದರ ಪ್ರಕಟಣೆಗೆ ವಿನಯ ಮತ್ತು ವಿಧೇಯತೆ ಆವಶ್ಯಕವಾಗಿದೆ. ಆದರೆ ಅಲ್ಲಾಹನ ಆಜ್ಞೆ 'ವ ಅಮ್ಮಾ ಬಿನಿಅ್‌ಮತಿ ಫಹದ್ದಿಸ್' ಪ್ರಕಾರ ಅಲ್ಲಾಹನು ನೀಡಿದ ಅನುಗ್ರಹಗಳನ್ನು ಸ್ಮರಿಸುವುದು ಸಹ ಅತ್ಯಾವಶ್ಯಕವಾಗಿದೆ."

(ಮಕ್ತೂಬಾತೆ ಅಹ್ಮದಿಯಾ ಸಂಪುಟ 5 ಭಾಗ 2 – ತಫ್ಸೀರ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ – ಅಝ್ಝುಹಾ ವಚನ 12)

ಅವರು ಪುನಃ ಹೇಳುತ್ತಾರೆ:

"ವ ಅಮ್ಮಾ ಬಿನಿಅ್‌ಮತಿ ರಬ್ಬಿಕ ಫಹದ್ದಿಸ್ ಎಂದು ಅಲ್ಲಾಹನು ಆಜ್ಞಾಪಿಸಿದುದರಿಂದ ಕೃಪಾಮಯನೂ ದಯಾಳುವೂ ಆಗಿರುವ ಅಲ್ಲಾಹನು ನನಗೆ ನೀಡಿದ ಅನುಗ್ರಹಗಳನ್ನು ವಿನೀತನಾಗಿ ಸ್ಮರಿಸುತ್ತೇನೆ. ಅವನು ಈ ವಿನೀತನಿಗೆ ಧಾರಾಳವಾಗಿ ಅನುಗ್ರಹಗಳನ್ನು ದಯಪಾಲಿಸಿದ್ದಾನೆ. ಅವನು ನನ್ನನ್ನು ಬರಿಗೈಯಲ್ಲಿ ಕಳುಹಿಸಿಲ್ಲ. ಅವನು ಚಿಹ್ನೆಗಳನ್ನು ತೋರಿಸದೆ ನನ್ನನ್ನು ನೇಮಿಸಲಿಲ್ಲ. ನನ್ನ ಪರವಾಗಿ ಈ ಎಲ್ಲಾ ಕುರುಹುಗಳನ್ನು ಪ್ರಕಟಿಸುತ್ತಾ ಇದ್ದಾನೆ ಮತ್ತು ಇನ್ನು ಮುಂದೆ ಸಹ ಪ್ರಕಟಿಸುವನು. ಅಲ್ಲಾಹನು ಬಹಿರಂಗವಾಗಿ ನನ್ನ ಸತ್ಯಕ್ಕೆ ಸಾಕ್ಷ್ಯಾಧಾರಗಳನ್ನು ಸ್ಥಾಪಿಸುವ ತನಕ ಈ ದೃಷ್ಟಾಂತಗಳನ್ನು ಪ್ರಕಟಿಸುತ್ತಾ ಹೋಗುವನು." (ಇಝಾಲಯೆ ಅವ್‌ಹಾಮ್ – ರೂಹಾನಿ ಖಝಾಯಿನ್ ಸಂಪುಟ 3 ಪುಟ 338-339)

ಅವರು ಪುನಃ ಹೇಳುತ್ತಾರೆ:

"ನೆನಪಿಡಿರಿ, ಮನುಷ್ಯನು ಯಾವಾಗಲೂ ಎಲ್ಲಾ ಸಂದರ್ಭಗಳಲ್ಲಿಯೂ ಪ್ರಾರ್ಥಿಸುತ್ತಾ ಇರಬೇಕು ಮತ್ತು 'ವ ಅಮ್ಮಾ ಬಿನಿಅ್‌ಮತಿ ಫಹದ್ದಿಸ್' ಎಂಬ ಆಜ್ಞೆಯನ್ನು ಪಾಲಿಸುತ್ತಾ ಇರಬೇಕು. ಅಲ್ಲಾಹನು ದಯಪಾಲಿಸಿದ ಅನುಗ್ರಹಗಳನ್ನು ಸ್ಮರಿಸುತ್ತಾ ಇರಬೇಕು. ಹಾಗೆ ಮಾಡಿದರೆ ಅಲ್ಲಾಹನ ಬಗ್ಗೆ ಪ್ರೀತಿ ಹೆಚ್ಚುತ್ತದೆ ಮತ್ತು ಅವನಿಗೆ ವಿಧೇಯತೆ ಮತ್ತು ಅವನ ಆಜ್ಞಾ ಪಾಲನೆಯ ಹೊಸ ಉತ್ಸಾಹ ಉಂಟಾಗುತ್ತದೆ. ತಹ್‌ದೀಸ್ ಎಂದರೆ ಕೇವಲ ನಾಲಗೆಯಲ್ಲಿ ಅಲ್ಲಾಹನನ್ನು ಸ್ಮರಿಸುತ್ತಾ ಇರುವುದು ಮಾತ್ರವಲ್ಲ, ಮನುಷ್ಯನ ಶರೀರದ ಮೇಲೆಯೂ ಅದರ ಪ್ರಭಾವ ಉಂಟಾಗಬೇಕು." (ತಫ್ಸೀರ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ – ಅಝ್ಝುಹಾ ವಚನ 13)

ಅಲ್ಲಾಹನು ನಮಗೆ ಯಾವ ಅನುಗ್ರಹಗಳನ್ನು ನೀಡಿರುವನೋ ಮತ್ತು ಅದನ್ನು ತಡೆಗಟ್ಟದೆ ಜಾರಿಗೊಳಿಸುತ್ತಾ ಇರುವನೋ ಮತ್ತು ಮುಂದೆ ಸಹ ಜಾರಿಗೊಳಿಸುವ ವಾಗ್ದಾನ ನೀಡಿರುವನೋ ಆ ಅನುಗ್ರಹಗಳಿಗಾಗಿ ಕೃತಜ್ಞತೆ ಅರ್ಪಿಸುವ ದಾಸರಾಗಿ ಅವನ ಅನುಗ್ರಹಗಳನ್ನು ಪ್ರಕಟಿಸಿರಿ. ಅವನ ಅನುಗ್ರಹಗಳಲ್ಲಿ ಯಾವ ಕೊರತೆಯೂ ಉಂಟಾಗದಿರಲಿ ಮತ್ತು ಪ್ರತಿಯೊಂದು ಹೊಸದಿನ ಹೊಸದಾದ ಅನುಗ್ರಹದ ಚಿಹ್ನೆ ಅವನು ತೋರಿಸುವವನಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ವಿನಯ ಮತ್ತು ವಿಧೇಯತೆ ಶರತ್ತಾಗಿದೆ. ಪ್ರತಿಯೊಬ್ಬ ಅಹ್ಮದಿ ಈ ಮುಖ್ಯ ಶರತ್ತನ್ನು ನೆನಪಿನಲ್ಲಿಡಬೇಕು. ನಾವು ಅಲ್ಲಾಹನ ಸನ್ನಿಧಿಯಲ್ಲಿ ಎಷ್ಟು ಬಾಗುತ್ತೇವೋ ನಾವು ಬಾಹ್ಯವಾಗಿ ಮಾತ್ರವಲ್ಲ, ಹೃದಯದ ಆಳಗಳಿಂದ ಭಯಭಕ್ತಿಯನ್ನು ಹೊಂದಿ ಆ ಪ್ರಕಾರ ವರ್ತಿಸುತ್ತಾ ಹೇಗೆ ಮುಂದೆ ಸಾಗುವೆವೋ ಅದಕ್ಕೆ ಅನುಸಾರವಾಗಿ ಅಲ್ಲಾಹನ ಅನುಗ್ರಹಗಳ ಪಾಲನ್ನು ಪಡೆಯುತ್ತಾ ಹೋಗುವೆವು.

ಅಹ್ಮದಿಯಾ ಖಿಲಾಫತ್ ನೂರುವರ್ಷಗಳನ್ನು ಪೂರ್ಣಗೊಳಿಸಿದುದಕ್ಕಾಗಿ ವಿಶಿಷ್ಟವಾಗಿ ಆಚರಿಸುತ್ತಿರುವ ಈ ದಿನ ಮತ್ತು ಪ್ರತಿವರ್ಷ ಸಾಮಾನ್ಯವಾಗಿ ಆಚರಿಸುವ ಖಿಲಾಫತ್ ದಿನ ಒಂದು ವಿಷಯವನ್ನು ನೆನಪಿಸುವ ದಿನವಾಗಬೇಕು. ಅದೇನೆಂದರೆ, ನಾವು ಭಯಭಕ್ತಿಯನ್ನು (ತಖ್ವವನ್ನು) ಹೊಂದಿದವರಾಗಿ ಅಲ್ಲಾಹನ ಆಜ್ಞೆಗಳನ್ನೂ ವಿನಯದಿಂದ ಪೂರ್ಣವಾಗಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುವೆವು.

ಪದ್ಯಗಳನ್ನು ಹಾಡುವುದು, ಪುಗ್ಗೆಗಳನ್ನು ಹಾರಿಸುವುದು, ವಿವಿಧ ಕಾರ್ಯಕ್ರಮಗಳನ್ನು ಮಾಡುವುದು, ಸಂತೋಷದಿಂದ ಮೃಷ್ಟಾನ್ನಗಳನ್ನು ಉಣ್ಣುವುದು ಮತ್ತು ಸಿಹಿತಿಂಡಿ ತಿನ್ನುವುದು ಇವುಗಳು ಮಾತ್ರ ಈ ದಿನ ನಮ್ಮ ಉದ್ದೇಶಲಕ್ಷ್ಯವಲ್ಲ. ಇಲ್ಲಿ ನಡೆಸಲಾಗುವ ಕಾರ್ಯಕ್ರಮಗಳು ಮತ್ತು ವಿವಿಧ ಜಮಾಅತ್‌ಗಳಲ್ಲಿ ನಡೆಸಲಿರುವ ಕಾರ್ಯಕ್ರಮಗಳು ಕೇವಲ ಸಂತೋಷ ಸೂಚಿಸಲಿಕ್ಕಾಗಿ ಅಲ್ಲ. ಇದು ಸಹ ಒಂದು ಉದ್ದೇಶವೆಂಬುದು ಸರಿಯಾದ ಮಾತೇ ಆಗಿದೆ. ನಾನು ಈ ಮೊದಲು ಹೇಳಿದ ಹಾಗೆ ಅಲ್ಲಾಹನ ಅನುಗ್ರಹಗಳನ್ನು ಸಂತೋಷದಿಂದ ಈ ದಿನ ಪ್ರಕಟಿಸಲಾಗುತ್ತದೆ. ಆದರೆ ನಾವು ಭಯಭಕ್ತಿಯ ಕಡೆಗೆ ನಮ್ಮ ಗಮನವನ್ನು ಹರಿಸಬೇಕು. ಗೌಜಿಗದ್ದಲಗಳು, ಕೃತಕ ಸಿಂಗಾರಗಳು, ಕಾರ್ಯಕ್ರಮಗಳಲ್ಲಿ ಲೌಕಿಕ ಹಿರಿಮೆಗಾಗಿ ಪರಸ್ಪರ ಸ್ಪರ್ಧಿಸಲು ಪ್ರಯತ್ನಿಸುವುದು ಇವುಗಳೆಲ್ಲಾ ಅತೃಪ್ತಿಕರವಾಗಿದೆ. ಜಲ್ಸಾ ಸಾಲಾನದಲ್ಲಿ ಭಾಗವಹಿಸಿ ಯಾವುದೇ ಪರಿಶುದ್ಧ ಬದಲಾವಣೆ ಉಂಟಾಗದೆ ಮರಳುವ ಹಾಗೆ ಅಥವಾ ಅಲ್ಲಾಹನ ಸಂತೃಪ್ತಿ ಗಳಿಸದ ಸಾತ್ವಿಕವಲ್ಲದ ಕೆಲಸದ ಹಾಗೆ ಇವುಗಳಾಗಿವೆ.

ಈ ದಿನ ಒಂದು ಹೊಸ ಪ್ರತಿಜ್ಞೆ ಕೈಗೊಳ್ಳುವ ದಿನವಾಗಿದೆ. ಈ ದಿನ ನಮ್ಮ ಚರಿತ್ರೆಯನ್ನು ಸ್ಮರಿಸುವ ದಿನವಾಗಿದೆ. ಈ ದಿನ ಎಂತಹ ದಿನವೆಂದರೆ ನೂರು ವರ್ಷಗಳ ಹಿಂದೆ ಜಮಾಅತಿನ ಸದಸ್ಯರ ಮೇಲೆ ಒಂದು ಭೂಕಂಪ ಬಂದೆರಗಿದ ದಿನಾಂಕವಾಗಿದೆ. ನೂರು ವರ್ಷಗಳ ಹಿಂದೆ ಇಂದಿನ ದಿನಾಂಕದ ಹಿಂದಿನ ದಿನ ಒಂದು ಘಟನೆ ಸಂಭವಿಸಿ ಜಮಾಅತನ್ನು ಅಲುಗಾಡಿಸಿತು. 1908ರ ಮೇ 26ನೇ ದಿನಾಂಕ ಅಲ್ಲಾಹನ ಪ್ರಿಯ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತನ್ನ ಯಜಮಾನನಾದ ಅಲ್ಲಾಹನ ಮುಂದೆ ಹಾಜರಾದರು. ಅದರ ಬಗ್ಗೆ ಅಲ್ಲಾಹನು ಮುಂಚಿತವಾಗಿ ಅವರಿಗೆ ತಿಳಿಸುತ್ತಾ ಇದ್ದನು. ಅದರ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಜಮಾಅತ್ ಮುಂದೆ ಹೇಳುತ್ತಾ

ಇದ್ದರು. 'ಅಲ್‌ವಸಿಯ್ಯತ್' ಎಂಬ ಪುಸ್ತಕದಲ್ಲಿ ಅವರು ಬಹಳ ಸ್ಪಷ್ಟವಾಗಿ ತಾನು ಮೃತನಾಗುವ ಬಗ್ಗೆ ಪ್ರಸ್ತಾಪಿಸಿ ಜಮಾಅತಿನ ಸದಸ್ಯರು ಭಯಭಕ್ತಿಯಲ್ಲಿ ಮುಂದೆ ಸಾಗಲು ವಿಶೇಷವಾಗಿ ಒತ್ತಿ ಹೇಳಿದರು. ಅವರು ಜಮಾಅತ್‌ಗೆ ಹೀಗೆ ಸಮಾಧಾನ ಹೇಳಿದರು: "ನಾನು ಹೋದ ನಂತರ ಅಲ್ಲಾಹನ ನೆರವಿನ ಹಸ್ತ ನಿಮಗೆ ಲಭಿಸದು ಎಂದು ಗ್ರಹಿಸಬೇಡಿರಿ. ನಾನು ನಿರ್ಗಮಿಸಿದ ನಂತರ ಸಹ ಅಲ್ಲಾಹನ ವಾಗ್ದಾನವು ನೆರವೇರುತ್ತಾ ಹೋಗುವುದು. ಪ್ರತಿಯೊಬ್ಬ ಈ ಲೋಕಕ್ಕೆ ಬಂದರೆ ಮರಳಿ ಹೋಗಲೇ ಬೇಕು ಎಂಬುದು ಅಲ್ಲಾಹನ ನಿಯಮವಾಗಿದೆ. ಎಲ್ಲಾ ಪ್ರವಾದಿಗಳು ಈ ದೇವನಿಯಮಕ್ಕೆ ಅನುಸಾರವಾಗಿ ಗತಿಸಿಹೋದರು ಮತ್ತು ತಮ್ಮ ಪ್ರಭುವಿನ ಶಾಶ್ವತ ಸ್ವರ್ಗದ ವಾರೀಸುದಾರರಾದರು. ಅದನ್ನು ಪ್ರವೇಶಿಸಲು ಅವರು ಆತುರಪಡುತ್ತಿದ್ದರು." ಹಝ್ರತ್ ಮಸೀಹ್ ಮೌಊದ್[ಅ] ಅವರ ಜೀವಿತದ ಪ್ರತಿ ಕ್ಷಣದಲ್ಲಿಯೂ ಅವರು ಶಾಶ್ವತವಾದ ಆ ಸ್ವರ್ಗೀಯ ಜೀವಿತವನ್ನು ಆಶಿಸುತ್ತಾ ಇದ್ದುದಾಗಿ ಕಾಣುತ್ತೇವೆ. ಅವರು ನಿಧನ ಹೊಂದಿದಾಗ ಅವರು ಇಹಲೋಕವನ್ನು ಬಿಟ್ಟುಹೋಗಿರುವರು ಎಂದು ದೃಢವಾಗಿ ನಂಬಲು ಜಮಾಅತಿನ ಸದಸ್ಯರಿಗೆ ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಅದೊಂದು ವಾಸ್ತವಿಕ ಸಂಗತಿ ಎಂದು ಆಮೇಲೆ ತಿಳಿಯಿತು. ಹಝ್ರತ್ ಮಸೀಹ್ ಮೌಊದ್[ಅ] ಈ ಸಮಾಚಾರವನ್ನು ಆಲಿಸಲು ಜಮಾಅತನ್ನು ಕೆಲಕಾಲದಿಂದ ಸಿದ್ಧಪಡಿಸುತ್ತಿದ್ದರು. ಆ ಬಗ್ಗೆ ಇಲ್‌ಹಾಮ್ (ದೇವಸಂದೇಶ) ದೊರಕುತ್ತಾ ಇತ್ತು. 1908ರ ಮೇ ದಿನಾಂಕ 20ರಂದು ಹೀಗೆ ಒಂದು ಇಲ್‌ಹಾಮ್ ಅವತೀರ್ಣವಾಯಿತು. "ಅರ್‌ರಹೀಲು, ಸುಮ್ಮರ್‌ರಹೀಲು ವಲ್ ಮೌತು ಖರೀಬ್." (ತಝ್‌ಕಿರ ಪುಟ 640 – ನಾಲ್ಕನೆಯ ಮುದ್ರಣ 2004) ಅರ್ಥ: "ಪ್ರಯಾಣ ಹೊರಡುವ ಸಮಯವಾಗಿದೆ. ಹೌದು ಪ್ರಯಾಣ ಹೊರಡುವ ಸಮಯವಾಗಿದೆ. ಮೃತ್ಯುವು ಸಮೀಪವಾಗಿದೆ."

ಹಝ್ರತ್ ಮಸೀಹ್ ಮೌಊದ್[ಅ] ನಿಧನ ಹೊಂದಿರುವರೆಂದು ಜಮಾಅತಿನ ಸದಸ್ಯರಿಗೆ ದೃಢವಾಗಿ ತಿಳಿದಾಗ ಅವರ ಸ್ಥಿತಿ ಹೇಗಿತ್ತೆಂದು ಒಬ್ಬರು ಹೀಗೆ ವರದಿಮಾಡುತ್ತಾರೆ: ಮಸ್‌ಜಿದ್ ಮುಬಾರಕ್‌ನಲ್ಲಿ ಮುಗ್‌ರಿಬ್ ನಮಾಝಿಗೆ ಜಮಾಯಿಸಿದವರು ರೋದಿಸುತ್ತಾ ಇದ್ದರು. ಇನ್ನೊಂದು ಕಡೆ ಶತ್ರುಗಳ ನಾಚಿಕೆಗೇಡಿನ ಕೆಲಸ ಬಹಳ ತೀವ್ರವಾಗಿತ್ತು. ಲಾಹೋರಿನ ಅಹ್ಮದಿಯಾ ಬಿಲ್ಡಿಂಗ್ ಕಟ್ಟಡದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಅವರ ಮೃತದೇಹವನ್ನು ಇರಿಸಲಾಗಿತ್ತು. ನಗರದ ಪುಂಡು ಪೋಕರಿಗಳನ್ನು ಶತ್ರುಗಳು ಆ ಕಟ್ಟಡದ ಸುತ್ತಲೂ ಜಮಾಯಿಸಿ ಸಂತೋಷದಿಂದ ಘೋಷಣೆಗಳನ್ನು ಕೂಗುತ್ತಾ ಹಾಡುತ್ತಾ ಇದ್ದರು. ಅವರು ಅತ್ಯಂತ ನಾಚಿಕೆಗೇಡಿನಿಂದ ವರ್ತಿಸುತ್ತಿದ್ದರು. ಪುಂಡು ಪೋಕರಿಗಳಿಂದ ಇಂತಹ ವರ್ತನೆಯೇ ಪ್ರತೀಕ್ಷಿಸಬಹುದಿತ್ತು. ಆದರೆ ಕೆಲವು ಹೀನ ಪತ್ರಕರ್ತರು ಸಹ ಹಝ್ರತ್ ಮಸೀಹ್ ಮೌಊದ್[ಅ] ನಿಧನ ಹೊಂದಿದ ಬಗ್ಗೆ ಸಂತೋಷ ಸೂಚಿಸುತ್ತಾ ಬರೆದರು. ತಾವು ಸಂಕುಚಿತ ಮನೋಭಾವ ಹೊಂದಿದವರೆಂದು ಅವರು ಸಾಬೀತುಗೊಳಿಸಿದರು. ಅವರು ಹೀಗೆ ಬರೆದರು: ಮಿರ್ಝಾ ಸಾಹೇಬರು ನಿಧನಹೊಂದಿದ ನಂತರ ಈ ಜಮಾಅತ್ ನಾಶವಾಗುವುದು. (ನವೂಧುಬಿಲ್ಲಾಹ್). ಆದರೆ ಆ ಮೂರ್ಖ ಜನರಿಗೆ ಅದು ತಮ್ಮ ನಿರರ್ಥಕ ಆಶೆ ಎಂದು ತಿಳಿದಿರಲಿಲ್ಲ. ಅದು ಈ ಲೋಕದ ಆ ಕ್ರಿಮಿಕೀಟಗಳ ಕೆಟ್ಟ ಅಭಿಲಾಷೆಯಾಗಿತ್ತು. ಅಲ್ಲಾಹನು ತಾನು ಕಳುಹಿಸಿದ ತನ್ನ ಪ್ರತಿನಿಧಿಯ ಬಗ್ಗೆ ಅಭಿಮಾನ ಹೊಂದಿರುವನೆಂದು ಅವರಿಗೆ ತಿಳಿದಿರಲಿಲ್ಲ. ಅವರ ಬುದ್ಧಿಗೆ ಪರದೆ ಹಾಕಲಾಗಿತ್ತು. ಅವರ ಕಣ್ಣುಗಳು ಅಂಧವಾಗಿದ್ದುವು. ಈ ದಿನ ಇಹಲೋಕದಿಂದ ಹೋದ ಆ ಮಹಾನುಭಾವರು ತನ್ನ ಯಜಮಾನರಾದ ಮುಹಮ್ಮದ್ ಮುಸ್ತಫಾ[ಸ] ಅವರು ಹದಿನಾಲ್ಕು ನೂರು ವರ್ಷಗಳ ಹಿಂದೆ ನುಡಿದ ಭವಿಷ್ಯವಾಣಿಯ ಪ್ರಕಾರ ಆಗಮಿಸಿದವರೆಂದು ಅವರಿಗೆ ತಿಳಿದಿರಲಿಲ್ಲ. ಆ ಮಹಾನುಭಾವರು ಸತ್ಯವಿಶ್ವಾಸಿಗಳ ಎಂತಹ ಜಮಾಅತನ್ನು ಸ್ಥಾಪಿಸಿದರೆಂದರೆ ಅದರ ಬಗ್ಗೆ ಅಲ್ಲಾಹನು, "ನಾನು ಅಂತಹ ಜನರ ಭಯದ ಸ್ಥಿತಿಯನ್ನು ನೆಮ್ಮದಿಯ ಸ್ಥಿತಿಗೆ ಬದಲಾಯಿಸುವೆನು ಮತ್ತು ನನ್ನ ಸಹಾಯವನ್ನು ಅವರಿಗೆ ದಯಪಾಲಿಸುವೆನು" ಎಂದು ಬಹಳ ಸ್ಪಷ್ಟವಾಗಿ ಹೇಳಿರುವನು.

ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಮೂಲಕ ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿದ್ದನು. ಮಹ್‌ದೀ ಮಸೀಹ್ ಈ ಲೋಕದಿಂದ ಮೃತರಾಗಿ ಹೋದಾಗ ಶತ್ರುಗಳು ತಾತ್ಕಾಲಿಕವಾಗಿ ಸಂತೋಷಪಡುವರು. ಆಗ ಅಲ್ಲಾಹನು ತನ್ನ ಅನುಗ್ರಹದ ಚಾದರದಿಂದ ಮಹ್‌ದೀ ಮಸೀಹರ ಗುಲಾಮರನ್ನು ಸುತ್ತುವನು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ತನ್ನ ಕಾಲದ ಮೊದಲುಗೊಂಡು ಅಂತಿಮ ಕಾಲದವರೆಗಿನ ಚಿತ್ರವನ್ನು ಬರೆಯುತ್ತಾ ಹೇಳಿದುದನ್ನು ಹಝ್ರತ್ ಹುಝೈಫ ರಝಿಯಲ್ಲಾಹು ಅನ್‌ಹುರವರು ಹೀಗೆ ವರದಿ ಮಾಡುತ್ತಾರೆ:

"ಅಲ್ಲಾಹನು ಇಚ್ಛಿಸುವ ತನಕ ನಿಮ್ಮಲ್ಲಿ ನುಬುವ್ವತ್ ಇರುವುದು. ಅನಂತರ ಅದನ್ನು ಅಲ್ಲಾಹನು ಎತ್ತಿಬಿಡುವನು ಮತ್ತು ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್) ಸ್ಥಾಪಿತವಾಗುವುದು. ಅಲ್ಲಾಹನು ಇಚ್ಛಿಸುವಾಗ ಈ ಅನುಗ್ರಹವನ್ನೂ ಎತ್ತಿಬಿಡುವನು. ಅನಂತರ ಅಲ್ಲಾಹನ ವಿಧಿಯ ಪ್ರಕಾರ ದೌರ್ಜನ್ಯಗಾರರಾದ ರಾಜರ ಆಡಳಿತೆ ಸ್ಥಾಪಿತವಾಗುವುದು. ಅನಂತರ ಅದನ್ನು ಅಲ್ಲಾಹನು ಎತ್ತಿಬಿಡುವನು. ಅನಂತರ ಅಲ್ಲಾಹನ ಇನ್ನೊಂದು ವಿಧಿಯಪ್ರಕಾರ ಹೆಚ್ಚು ದೌರ್ಜನ್ಯಗಾರರಾದ ರಾಜರ ಆಡಳಿತೆ ಸ್ಥಾಪಿತವಾಗುವುದು. ಅನಂತರ ಅಲ್ಲಾಹನು ದಯೆತೋರುವನು. ದೌರ್ಜನ್ಯದ ಕಾಲವು ಕೊನೆಗೊಳ್ಳುವುದು. ಅನಂತರ ಪುನಃ ಖಿಲಾಫತ್ ಅಲಾಮಿನ್‌ಹಾಜಿನ್ನುಬುವ್ವತ್ (ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್) ಸ್ಥಾಪಿಸಲ್ಪಡುವುದು. ಹೀಗೆ ಹೇಳಿದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ಮೌನವನ್ನು ಅವಲಂಬಿಸಿದರು." (ಮಿಶ್ಕಾತ್)

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಸತ್ಯವಿಶ್ವಾಸಿಗಳನ್ನು ಸಮಾಧಾನಪಡಿಸಲು ಹೇಳಿದ ಮಾತುಗಳು ಮೇಲಿನವುಗಳಾಗಿವೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರನ್ನು[ಸ] ನಿಜವಾಗಿಯೂ ಪ್ರೀತಿಸುತ್ತಿದ್ದ ಪ್ರೇಮಿಯ ಜಮಾಅತಿಗೆ ಸೇರುವವರಿಗೆ ಹೀಗೆ ಸಮಾಧಾನ ಹೇಳಲಾಗಿದೆ. ಹಝ್ರತ್ ಮಹ್‌ದೀ ಮಸೀಹರನ್ನು ನಂಬುವವರ ಪರವಾಗಿ ಈ ಭವಿಷ್ಯವಾಣಿಯನ್ನು ನುಡಿಯಲಾಗಿದೆ. ಶತ್ರುಗಳು ಎಷ್ಟು ವಿರೋಧಿಸಿದರೂ ಶತ್ರುಗಳು ಸಂತೋಷದಿಂದ ಎಷ್ಟು ವಾದ್ಯಘೋಷ ಮಾಡುತ್ತಾ ಇದ್ದರೂ ಆಹ್ಲಾದದ ಅಟ್ಟಹಾಸ ಮಾಡುತ್ತಾ ಇದ್ದರೂ ಈ ಶಾಶ್ವತ ಖಿಲಾಫತ್ ಅಲಾಮಿನ್‌ಹಾಜಿನ್ನುಬುವ್ವತ್ (ನುಬುವ್ವತಿನ ಮಾರ್ಗದಲ್ಲಿ ಖಿಲಾಫತ್) ಮಹ್‌ದೀ ಮಸೀಹರನ್ನು ನಂಬುವವರೊಂದಿಗೆ ಜೋಡಿಸಲಾಗಿದೆ. ಅದು ಪ್ರತಿಯೊಂದು ಭಯದ ಕಾಲದಲ್ಲಿ ಅವರಿಗೆ ಸಮಾಧಾನ ಪ್ರದಾನ ಮಾಡುತ್ತಾ ಬಂದಿದೆ. ಇದು ಅಲ್ಲಾಹನ ವಿಧಿಯಾಗಿದೆ. ಇದು ಬದಲಾವಣೆಗೊಳ್ಳದ ವಿಧಿಯಾಗಿದೆ. ಇದು ನೈಜ ಸತ್ಯವಿಶ್ವಾಸಿಗಳಿಗೆ ನಿಗದಿತವಾಗಿದೆ. ಕೆಲವು ಪುಂಡರು ಮತ್ತು ತಾವು ಬುದ್ಧಿಶಾಲಿಗಳೂ ಜ್ಞಾನಿಗಳೂ ಎಂದು ತಮ್ಮನ್ನೇ ತಾವು ಗಣಿಸಿರುವ ಅವಿವೇಕಿಗಳು ಈ ವಿಧಿಯನ್ನು ಬದಲಾಯಿಸಲು ಶಕ್ತರಾಗಲಾರರು.

ಹಝ್‌ರತ್ ಮಸೀಹ್ ಮೌಊದ್[ಅ] ಈ ವಿಷಯವನ್ನು ಸ್ಪಷ್ಟವಾಗಿ ಅಲ್‌ವಸಿಯ್ಯತ್ ಎಂಬ ಪುಸ್ತಕದಲ್ಲಿ ವಿವರಿಸಿ ಜಮಾಅತಿಗೆ ಸಮಾಧಾನ ನೀಡಿರುವರು. ಅವರಿಗೆ ಈ ಸಂಗತಿ ತಿಳಿದಿತ್ತು: ಪ್ರವಾದಿಗಳು ನಿಧನಹೊಂದಿದಾಗ ಶತ್ರುಗಳು "ಈ ಜಮಾಅತ್ ನಾಶ ಹೊಂದುವುದು" ಎಂದು ಯೋಚಿಸುತ್ತಾರೆ. ಶತ್ರುಗಳು ಮತ್ತು ಕಪಟ ವಿಶ್ವಾಸಿಗಳು ಜಮಾಅತ್ ಯಾವ ರೀತಿ ಛಿನ್ನಛಿನ್ನವಾಗುವುದು ಎಂಬುದನ್ನು ನೋಡಲು ಉತ್ಸುಕರಾಗಿರುತ್ತಾರೆ. ಆದರೆ ಪ್ರವಾದಿಗಳನ್ನು ಕಳುಹಿಸುತ್ತಿರುವ ಅಲ್ಲಾಹನು ತನ್ನ ವಿಧಿನಿರ್ಣಯವನ್ನು ಜಾರಿಗೊಳಿಸುತ್ತಾನೆ. ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರಾದ ಖಾತಮುನ್ನಬಿಯ್ಯೀನ್ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರನ್ನು ಕಳುಹಿಸಿದಾಗ, ಅವರು ತಂದ ಶರೀಅತ್ ಸದಾ ನೆಲೆನಿಲ್ಲುವ ಶಾಶ್ವತ ಶರೀಅತ್ ಆಗಿದೆ ಎಂದು ಪ್ರಕಟಿಸಿದನು. ಅವರು ನಿಧನಹೊಂದಿದ ನಂತರ ಅವರ ಸಮುದಾಯ ಕೆಲವು ಪರೀಕ್ಷೆಗಳಿಗೆ ಗುರಿಯಾಗುವುದಾದರೂ ಹದೀಸುಗಳಲ್ಲಿ ಸ್ಪಷ್ಟವಾಗಿ ವಿವರಿಸಿರುವ ಹಾಗೆ ಕೊನೆಗೆ ಮುಹಮ್ಮದೀ ಮಸೀಹರ ಆಗಮನದ ನಂತರ ಇಸ್ಲಾಮಿನ ವಿಜಯದ ಹೊಸ ಕಾಲಘಟ್ಟ ಪ್ರಾರಂಭವಾಗುವುದು. ಅದು ಲೋಕಾಂತ್ಯ ದಿನದ ತನಕ ಮುಂದುವರಿಯುವುದು. ವಿರೋಧಗಳು ಉಂಟಾಗುವುದಾದರೂ ಮಾರ್ಗದಲ್ಲಿರುವ ಧೂಳಿನ ಹಾಗೆ ಅವು ವಾತಾವರಣದಲ್ಲಿ ಹರಡಿ ಹೋಗುವುವು.

ಹಝ್‌ರತ್ ಮಸೀಹ್ ಮೌಊದ್‌ರಿಗೆ[ಅ] ಅಲ್ಲಾಹನು ಈ ವಿಚಾರವನ್ನು ತಿಳಿಸಿದುದರಿಂದ, ಅವರು ಜಮಾಅತ್‌ಗೆ ಹೀಗೆ ಸಮಾಧಾನ ನೀಡಿದ್ದರು: "ಶತ್ರುಗಳು ನಕ್ಕು ಪರಿಹಾಸ ಮಾಡಿದರೆ ನೀವು ಗಾಬರಿಗೊಳ್ಳಬೇಡಿರಿ." ಅವರು ಅಲ್‌ವಸಿಯ್ಯತ್ ಪುಸ್ತಕದಲ್ಲಿ ಹೀಗೆ ಹೇಳಿದರು:

"ಅಲ್ಲಾಹನು ತನ್ನ ಪ್ರವಾದಿಗಳಿಗೂ ಸಂದೇಶವಾಹಕರಿಗೂ ಸಹಾಯಮಾಡುತ್ತಾನೆ ಮತ್ತು ಅವರಿಗೆ ಜಯ ನೀಡುತ್ತಾನೆ ಎಂಬುದು ಅಲ್ಲಾಹನು ಮನುಷ್ಯರನ್ನು ಭೂಮಿಯಲ್ಲಿ ಸೃಷ್ಟಿಸಿದ ಕಾಲದಿಂದ ಯಾವಾಗಲೂ ಪ್ರಕಟಿಸುತ್ತಿದ್ದ ಅವನ ನಡೆವಳಿಕೆ ಆಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: 'ಕತಬಲ್ಲಾಹು ಲ ಅಗ್‌ಲಿಬನ್ನ ಅನ ವರುಸುಲಿ.' – ನಾನು ಮತ್ತು ನನ್ನ ಸಂದೇಶವಾಹಕರು ಖಂಡಿತವಾಗಿಯೂ ವಿಜಯಶಾಲಿಗಳಾಗುವೆವು ಎಂದು ಅಲ್ಲಾಹನು (ವಿಧಿ) ಬರೆದಿರುವನು." **(58:22)**

"ಜಯಗಳಿಸುವುದು ಎಂದರೆ ಅಲ್ಲಾಹನ ಅಸ್ತಿತ್ವದ ಸಾಕ್ಷ್ಯಾಧಾರ ಭೂಮಿಯಲ್ಲಿ ಸ್ಥಾಪಿಸಲ್ಪಡುವುದಾಗಿದೆ. ಅದನ್ನು ಎದುರಿಸಲು ಯಾರಿಗೂ ಸಾಧ್ಯವಾಗಲಾರದು. ಪ್ರವಾದಿಗಳ ಆಗಮನದ ಉದ್ದೇಶವು ಇದೇ ಆಗಿರುತ್ತದೆ. ಅಲ್ಲಾಹನು ಬಲಯುತವಾದ ದೃಷ್ಟಾಂತಗಳ ಮೂಲಕ ಪ್ರವಾದಿಗಳು ಸತ್ಯವಂತರೆಂದು ಪ್ರಕಟಿಸುತ್ತಾನೆ. ಪ್ರವಾದಿಗಳು ಯಾವ ಸಾತ್ವಿಕತೆಯನ್ನು ಲೋಕದಲ್ಲಿ ಹರಡಲು ಇಚ್ಛಿಸುತ್ತಾರೋ ಅದರ ಬೀಜವನ್ನು ಅವರ ಕೈಗಳಿಂದ ಬಿತ್ತುವಂತೆ ಮಾಡುತ್ತಾನೆ. ಆದರೆ ಅದನ್ನು ಅವರ ಕೈಗಳಿಂದ ಪರಿಪೂರ್ಣಗೊಳಿಸುವುದಿಲ್ಲ. ಅವರನ್ನು ಎಂತಹ ಕಾಲದಲ್ಲಿ ಅಲ್ಲಾಹನು ಮೃತಪಡಿಸುತ್ತಾನೆಂದರೆ ಆಗ ಸೋಲಿನ ಭಯ ಇರುತ್ತದೆ. ಶತ್ರುಗಳಿಗೆ ಪರಿಹಾಸ ಮತ್ತು ನಿಂದಿಸುವ ಸಂದರ್ಭ ಸಿಗುವಂತೆ ಆಗುತ್ತದೆ. ಶತ್ರುಗಳು ಪರಿಹಾಸ ಮಾಡಿ ಮುಗಿಸಿದಾಗ ಅಲ್ಲಾಹನು ತನ್ನ ಶಕ್ತಿ ಸಾಮರ್ಥ್ಯದ ಎರಡನೇ ಹಸ್ತವನ್ನು ತೋರಿಸುತ್ತಾನೆ. ಪ್ರವಾದಿಗಳು ಉದ್ದೇಶಿಸಿದ ಗುರಿ ಪೂರ್ಣವಾಗಿ ಸಾಧಿಸಲ್ಪಡಲು ಆವಶ್ಯಕವಾದ ಮಾರ್ಗಗಳನ್ನು ಅಲ್ಲಾಹನು ಉಂಟುಮಾಡುತ್ತಾನೆ.

"ಅಲ್ಲಾಹನು ಎರಡು ವಿಧಗಳ ಶಕ್ತಿಸಾಮರ್ಥ್ಯಗಳನ್ನು ಪ್ರಕಟಿಸುತ್ತಾನೆ. ಪ್ರಥಮವಾಗಿ, ಅಲ್ಲಾಹನು ಪ್ರವಾದಿಗಳ ಮೂಲಕ ತನ್ನ ಶಕ್ತಿಸಾಮರ್ಥ್ಯದ ಹಸ್ತವನ್ನು ತೋರಿಸುತ್ತಾನೆ. ದ್ವಿತೀಯವಾಗಿ, ಪ್ರವಾದಿ ಮೃತರಾದಾಗ ಅವರ ಜಮಾಅತ್ ಕಷ್ಟಕ್ಕೆ ಗುರಿಯಾಗುವಾಗ ಶತ್ರುಗಳು ತೀವ್ರವಾಗಿ ವಿರೋಧಿಸುತ್ತಾರೆ. ಈಗ ಕೆಲಸ ಕೆಟ್ಟುಹೋಯಿತೆಂದೂ ಈ ಜಮಾಅತ್ ನಾಶವಾಗುವುದೆಂದೂ ಅವರು ದೃಢವಾಗಿ ನಂಬುತ್ತಾರೆ. ಜಮಾಅತಿನ ಜನರು ಸಹ ಸಂಶಯಕ್ಕೆ ಗುರಿಯಾಗುತ್ತಾರೆ. ಅವರು ಕುಸಿದು ಹೋಗುತ್ತಾರೆ. ಅನೇಕ ದುರದೃಷ್ಟಶಾಲಿಗಳು ಜಮಾಅತ್ ತ್ಯಜಿಸುತ್ತಾರೆ. ಆಗ ಅಲ್ಲಾಹನು ತನ್ನ ಶಕ್ತಿಸಾಮರ್ಥ್ಯವನ್ನು ಎರಡನೆಯ ಸಾರಿ ತೋರಿಸಿಕೊಡುತ್ತಾನೆ ಮತ್ತು ಕುಸಿದು ಬೀಳುತ್ತಿರುವ ಜಮಾಅತನ್ನು ಹಿಡಿದು ನಿಲ್ಲಿಸುತ್ತಾನೆ. ಯಾರು ಕೊನೆಯ ತನಕ ಸಹನೆದೋರುತ್ತಾರೋ ಅವರು ಅಲ್ಲಾಹನ ಅದ್ಭುತ ಕೃತ್ಯವನ್ನು ನೋಡುತ್ತಾರೆ. ಹಝ್‌ರತ್ ಅಬೂಬಕರ್ ರಳಿಯಲ್ಲಾಹು ರವರ ಕಾಲದಲ್ಲಿ ಹೀಗೆಯೇ ಸಂಭವಿಸಿತು. ಆಗ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ[ಸ] ಮರಣವನ್ನು ಅಕಾಲಿಕ ಮರಣ ಎಂದು ಗ್ರಹಿಸಲಾಯಿತು. ಅನೇಕ ಗ್ರಾಮೀಣ ಅರಬಿಗಳು ಧರ್ಮತ್ಯಾಗ ಮಾಡಿದರು. ಪೈಗಂಬರ್ ಶಿಷ್ಯರು ಸಹ ದುಃಖದಿಂದ ಭ್ರಾಂತರ ಹಾಗೆ ಆದರು. ಆಗ ಅಲ್ಲಾಹನು ಹಝ್‌ರತ್ ಅಬೂಬಕರ್ (ರಳಿಯಲ್ಲಾಹು ಅನ್‌ಹು) ರವರನ್ನು ಎಬ್ಬಿಸಿ ನಿಲ್ಲಿಸಿ ತನ್ನ ದ್ವಿತೀಯ ಶಕ್ತಿಸಾಮರ್ಥ್ಯವನ್ನು ತೋರಿಸಿದನು. ಇಸ್ಲಾಮನ್ನು ನಾಶದಿಂದ ರಕ್ಷಿಸಿದನು. ಅವನು ತನ್ನ ಈ ಕೆಳಗಿನ ವಾಗ್ದಾನವನ್ನು ಈಡೇರಿಸಿದನು.

وَلَيُمَكِّنَنَّ لَهُمْ دِينَهُمُ الَّذِي ارْتَضَى لَهُمْ وَلَيُبَدِّلَنَّهُمْ مِنْ بَعْدِ خَوْفِهِمْ أَمْنًا ط (ಸೂರತುನ್ನೂರ್ ವಚನ 56) ಎಂದರೆ ಭಯದ ನಂತರ ನಾವು ಅವರ ಪಾದಗಳನ್ನು ಸ್ಥಿರಪಡಿಸಿಕೊಡುವೆವು ಎಂದು ಅಲ್ಲಾಹನು ಹೇಳುತ್ತಾನೆ." (ಅಲ್‌ವಸಿಯ್ಯತ್)

ಹಝ್‌ರತ್ ಮಸೀಹ್ ಮೌಊದ್[ಅ] ಪುನಃ ಹೀಗೆ ಹೇಳಿದರು:

"ಪ್ರಿಯರೇ, ಅಲ್ಲಾಹನು ಎರಡು ವಿಧಗಳ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತಾ ಇರುವುದು ಪುರಾತನ ಕಾಲದಿಂದ ಅವನ ನಡೆವಳಿಕೆಯಾಗಿದೆ. ಆ ಮೂಲಕ ಅವನು ವಿರೋಧಿಗಳ ಎರಡು ವಿಧಗಳ ಸುಳ್ಳು ಸಂತೋಷ ಪ್ರದರ್ಶನಗಳನ್ನು ನಿರರ್ಥಕವೆಂದು ತೋರಿಸಿಕೊಡುತ್ತಾನೆ. ಅಲ್ಲಾಹನು ಪುರಾತನ ಕಾಲದಿಂದ ಜಾರಿಗೊಳಿಸುತ್ತಾ ಇದ್ದ ತನ್ನ ನಡೆವಳಿಕೆಯನ್ನು ಈಗ ತ್ಯಜಿಸುವುದು ಅಸಂಭಾವ್ಯವಾಗಿದೆ. ಆದುದರಿಂದ ನಾನು ನಿಮಗೆ ಹೇಳಿದ ಮಾತುಗಳ ಕಾರಣದಿಂದ ನೀವು ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ನೀವು ಅಲ್ಲಾಹನ ದ್ವಿತೀಯ ಶಕ್ತಿ ಸಾಮರ್ಥ್ಯದ ಪ್ರದರ್ಶನವನ್ನು ನೋಡುವುದು ಅತ್ಯಾವಶ್ಯಕವಾಗಿದೆ. ಅದು ಪ್ರಕಟವಾಗುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿ ನೆಲೆನಿಲ್ಲುವುದಾಗಿದೆ. ಅದರ ಸರಪಳಿ ಖಿಯಾಮತ್ ದಿನದ ತನಕ ಮುರಿದು ಹೋಗಲಾರರು. ಅಲ್ಲಾಹನ ದ್ವಿತೀಯ ಶಕ್ತಿಸಾಮರ್ಥ್ಯದ ಪ್ರದರ್ಶನವು ನಾನು ನಿಮ್ಮಿಂದ ಅಗಲಿ ಹೋಗುವ ತನಕ ಪ್ರಕಟವಾಗಲಾರರು. ಆದರೆ ನಾನು ನಿಮ್ಮಿಂದ ಅಗಲಿ ಹೋದ ನಂತರ ಅಲ್ಲಾಹನು ತನ್ನ ದ್ವಿತೀಯ ಶಕ್ತಿಸಾಮರ್ಥ್ಯವನ್ನು ನಿಮಗಾಗಿ ಪ್ರದರ್ಶಿಸುವನು. ಅದು ಯಾವಾಗಲೂ ನಿಮ್ಮ ಜೊತೆಗೂಡಿ ಇರುವುದು. ಅದರ ಕುರಿತು ಅಲ್ಲಾಹನು 'ಬರಾಹೀನೆ ಅಹ್ಮದಿಯಾ'ದಲ್ಲಿ ಸಹ ವಾಗ್ದಾನ ಮಾಡಿರುವನು. ಆ ವಾಗ್ದಾನ ನನ್ನ ವ್ಯಕ್ತಿತ್ವಕ್ಕೆ ಸಂಬಂಧಿಸಿರುವುದಲ್ಲ. ಅದು ನಿಮಗೆ ಸಂಬಂಧಿಸಿರುತ್ತದೆ. ಅಲ್ಲಾಹನು ಹೀಗೆ ಹೇಳಿರುವನು: 'ನಿನ್ನ ಜಮಾಅತಿಗೆ ಸೇರಿದ ನಿನ್ನ ಅನುಯಾಯಿಗಳಿಗೆ ಖಿಯಾಮತ್ ದಿನದ ತನಕ

ನಾನು ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು.' ನಾನು ನಿಮ್ಮಿಂದ ಅಗಲಿ ಹೋಗುವ ದಿನವು ಆಗಮಿಸುವುದು ಆವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಸತ್ಯವಾಗಿ ಈಡೇರಿಸುವವನೂ ಪ್ರಾಮಾಣಿಕನೂ ಸತ್ಯವಂತನೂ ಆಗಿದ್ದಾನೆ. ಅವನು ಯಾವುದನ್ನೆಲ್ಲಾ ವಾಗ್ದಾನ ಮಾಡಿರುವನೋ ಅವುಗಳನ್ನೆಲ್ಲಾ ಅವನು ನಿಮಗೆ ತೋರಿಸಿಕೊಡುವನು. ಈ ಕಾಲವು ಲೋಕದ ಅಂತಿಮ ಕಾಲಘಟ್ಟವಾಗಿದೆ. ಅನೇಕ ವಿಪತ್ತುಗಳು ಬಂದೆರಗಲಿವೆ. ಅವುಗಳು ಬಂದೆರಗುವ ಕಾಲ ಇದಾಗಿದೆ. ಆದರೆ ಅಲ್ಲಾಹನು ತಿಳಿಸಿದ ಎಲ್ಲಾ ಸಂಗತಿಗಳು ಈಡೇರುವ ತನಕ ಈ ಲೋಕವು ನೆಲೆನಿಲ್ಲುವುದು. ನಾನು ಅಲ್ಲಾಹನ ಶಕ್ತಿಸಾಮರ್ಥ್ಯದ ಒಂದು ಪ್ರದರ್ಶನದ ರೂಪದಲ್ಲಿ ಆಗಮಿಸಿದೆನು. ನಾನು ಅಲ್ಲಾಹನ ಶಕ್ತಿಸಾಮರ್ಥ್ಯವು ಆಕಾರ ಪಡೆದ ವ್ಯಕ್ತಿಯಾಗಿರುವೆನು. ನನ್ನ ಅನಂತರ ಅನೇಕರು ಆಗಮಿಸುವರು. ಅವರು ಅಲ್ಲಾಹನ ದ್ವಿತೀಯ ಶಕ್ತಿಸಾಮರ್ಥ್ಯವನ್ನು ಪ್ರಕಟಿಸುವವರಾಗುವರು." (ಅಲ್‌ವಸಿಯ್ಯತ್)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಪ್ರಸ್ತಾಪಿಸಿದ ಪವಿತ್ರ ಖುರ್‌ಆನಿನ ವಚನದ ಪೂರ್ಣರೂಪ ಹೀಗಿದೆ:

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ
لَيَسْتَخْلِفَنَّهُمْ فِي الْاَرْضِ كَمَا اسْتَخْلَفَ الَّذِيْنَ مِنْ قَبْلِهِمْ
وَلَيُمَكِّنَنَّ لَهُمْ دِيْنَهُمُ الَّذِى ارْتَضٰى لَهُمْ وَلَيُبَدِّلَنَّهُمْ مِّنْ
بَعْدِ خَوْفِهِمْ اَمْنًا ط يَعْبُدُوْنَنِيْ لَا يُشْرِكُوْنَ بِيْ شَيْئًا ؕ وَمَنْ
كَفَرَ بَعْدَ ذٰلِكَ فَاُولٰئِكَ هُمُ الْفٰسِقُوْنَ O (النور:٥٦)

'ಆಯತ್ ಇಸ್ತಿಖ್‌ಲಾಫ್' ಎಂದು ಕರೆಯಲ್ಪಡುವ ಈ ವಚನದ ಭಾಷಾಂತರ ಹೀಗಿದೆ:

"ನಿಮ್ಮ ಪೈಕಿ ವಿಶ್ವಾಸಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು." (24:56)

ಈ ವಚನ ಸತ್ಯವಿಶ್ವಾಸಿಗಳಿಗೆ ಒಂದು ಮಹತ್ತಾದ ಶುಭವಾರ್ತೆಯಾಗಿದೆ. ಅದು ಮನಸ್ಸಮಾಧಾನಕ್ಕೆ ಎಂತಹ ಔಷಧವಾಗಿದೆಯೆಂದರೆ, ಅದರ ಬಗ್ಗೆ ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯಾಗಿದೆ. ಆದರೆ ಇದು ನಮ್ಮನ್ನು ಚಿಂತೆಗೀಡು ಮಾಡುವ ಸಂಗತಿಯೂ ಆಗಿದೆ. ಅಲ್ಲಾಹನು ಹೀಗೆ ಹೇಳಿರುವನು: ನನ್ನ ಈ ವಾಗ್ದಾನ ಸತ್ಯವಿಶ್ವಾಸಿಗಳಿಗಾಗಿದೆ. ದೃಢವಾಗಿ ಸತ್ಯವಿಶ್ವಾಸಹೊಂದಿ ನಮಾಝ್ ಮಾಡುವವರಿಗಾಗಿದೆ, ಝಕಾತ್ ಕೊಡುವವರಿಗೂ ಅಲ್ಲಾಹನ ಎಲ್ಲಾ ಆಜ್ಞೆಗಳನ್ನು ಪಾಲಿಸುವವರಿಗೂ ಆಗಿದೆ.

ಸತ್ಯವಿಶ್ವಾಸದ ಕುರಿತು ಅಲ್ಲಾಹನು ವಿವಿಧ ಸ್ಥಳಗಳಲ್ಲಿ ವಿವರಿಸಿದ್ದಾನೆ. ಅದರಲ್ಲಿ ಮೊತ್ತಮೊದಲನೆಯದು ಅದೃಶ್ಯ ವಿಷಯಗಳನ್ನು ನಂಬುವುದಾಗಿದೆ. ಈ ವಿಶ್ವಾಸವು ಪರಿಪೂರ್ಣವಾದರೆ ಮನುಷ್ಯನು ಅಲ್ಲಾಹನ ಅಬ್ದ್ (ದಾಸ) ಎಂದು ಕರೆಯಲ್ಪಡಲು ಯೋಗ್ಯನಾಗುವನು. ಅಂತಹ ಮನುಷ್ಯನ ಎಲ್ಲಾ ಪ್ರೀತಿಗಳು ಅಲ್ಲಾಹನ ತೃಪ್ತಿಗಳಿಸಲಿಕ್ಕಾಗಿರುವುದು. ಅಂತಹ ಸತ್ಯವಿಶ್ವಾಸಿಗಳ ಹೃದಯ ಅಲ್ಲಾಹನ ಭಯದಿಂದ ಕಂಪಿಸುತ್ತಿರುವುದು. ಅವರು ತಖ್ವಾದ (ಭಯಭಕ್ತಿಯ) ಮಾರ್ಗದಲ್ಲಿ ಚಲಿಸುತ್ತಿರುವವರಾಗುವರು. ಅವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಪರಿಪೂರ್ಣ ವಿಧೇಯರಾಗಿ ಪಾಲಿಸುವವರಾಗುವರು.

ಅಲ್ಲಾಹನು ಸತ್ಯವಿಶ್ವಾಸಿಗಳ ಕುರಿತು ಅವರು ಸತ್ಯವಿಶ್ವಾಸಿಗಳಾಗಿ ಸತ್ಕಾರ್ಯಗಳನ್ನು ಮಾಡುವವರಾಗಿರುವರು ಎಂದು ಹೇಳಿದ್ದಾನೆ. ಕೇವಲ ನಮಾಝ್ ಮಾಡುವುದು ಸಾಕಾಗಲಾರದು, ಕೇವಲ ಉಪವಾಸ ಮಾಡುವುದು ಸಾಕಾಗಲಾರದು, ಕೇವಲ ಝಕಾತ್ ನೀಡುವುದು ಸಾಕಾಗಲಾರದು, ಕೇವಲ ಹಜ್ಜ್ ಮಾಡುವುದು ಸಾಕಾಗಲಾರದು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಪ್ರಸ್ತಾಪಿಸಿದ ಎಲ್ಲಾ ಸತ್ಕರ್ಮಗಳನ್ನು ಮಾಡುವುದರ ಕಡೆಗೆ ಗಮನ ಹರಿಸುವುದು ಸಹ ಆವಶ್ಯಕವಾಗಿದೆ. ವಾಸ್ತವಿಕ ಸಂಗತಿ ಏನೆಂದರೆ ಸತ್ಯವಿಶ್ವಾಸ ಮತ್ತು ಸತ್ಕಾರ್ಯ ಪರಸ್ಪರ ಅಭೇದ್ಯ ಬಂಧವನ್ನು ಹೊಂದಿವೆ. ಸತ್ಯವಿಶ್ವಾಸವಿಲ್ಲದಿದ್ದರೆ ಸತ್ಕಾರ್ಯಗಳು ಗಣ್ಯವಾಗಲಾರವು. ಸತ್ಕಾರ್ಯಗಳನ್ನು ಮಾಡದೆ ಸತ್ಯವಿಶ್ವಾಸವು ಪರಿಪೂರ್ಣವಾಗಲಾರದು. ಅಲ್ಲಾಹನು ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿ ಎಂತಹ ಸಮಾಜದ ಸ್ಥಾಪನೆಮಾಡಲು ಉದ್ದೇಶಿಸುತ್ತಾನೆಂದರೆ ಅದು ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವಂತಹದ್ದು ಮತ್ತು ಮನುಷ್ಯರಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವಂತಹದ್ದೂ ಆಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಸತ್ಯವಿಶ್ವಾಸ ಮತ್ತು ಸತ್ಕಾರ್ಯ ಮಾಡುವುದರ ಬಗ್ಗೆ ಹೀಗೆ ಹೇಳುತ್ತಾರೆ:

"ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸತ್ಯವಿಶ್ವಾಸದೊಂದಿಗೆ ಸತ್ಕಾರ್ಯಗಳನ್ನೂ ಇರಿಸಿದ್ದಾನೆ. ಅಮಲೆಸಾಲಿಹ್ (ಸತ್ಕಾರ್ಯ) ಎಂದರೆ ಅದರಲ್ಲಿ ಒಂದಿಷ್ಟು ಕೆಡುಕು ಕೂಡ ಇರಬಾರದು. ನೀವು ನೆನಪಿಡಿರಿ, ಮನುಷ್ಯನ ಕೃತ್ಯಗಳಲ್ಲಿ ಯಾವಾಗಲೂ ಕಳ್ಳತನ ಪ್ರವೇಶಿಸುತ್ತದೆ. ಅದು ಯಾವುದು? ತೋರಿಕೆಗಾಗಿ ಮಾಡುವ ಕೆಲಸ (ರಿಯಾ), ಹೆಮ್ಮೆಯಿಂದ ಸಂತೋಷ ಪಡುವುದು (ಉಜುಬ್), ವಿವಿಧ ರೀತಿಯ ಕೆಟ್ಟ ಮತ್ತು ಪಾಪಕೃತ್ಯಗಳು ಇವುಗಳಿಂದ ಅವರ ಕೆಲಸಗಳು ನಿಷ್ಫಲವಾಗುತ್ತವೆ. ಅಮಲೆಸಾಲಿಹ್ – ಸತ್ಕಾರ್ಯದಲ್ಲಿ ದೌರ್ಜನ್ಯ, ಆತ್ಮಪ್ರಶಂಸೆ, ತೋರಿಕೆ, ಅಹಂಕಾರ, ಜನರ ಹಕ್ಕುಗಳನ್ನು ಅಪಹರಿಸುವ ಚಿಂತೆ ಕೂಡ ಇರಬಾರದು. ಸತ್ಕಾರ್ಯಗಳ ಕಾರಣದಿಂದ ಪರಲೋಕದಲ್ಲಿ ಶಿಕ್ಷೆಯಿಂದ

ರಕ್ಷಿಸಲ್ಪಡುವ ಹಾಗೆ ಇಹಲೋಕದಲ್ಲಿಯೂ ಸತ್ಕಾರ್ಯ ನಿರತರು ರಕ್ಷಿಸಲ್ಪಡುತ್ತಾರೆ. ಮನೆಯಲ್ಲಿರುವ ಒಬ್ಬನಾದರೂ ಸತ್ಕಾರ್ಯ ಮಾಡುವವನಾಗಿದ್ದರೆ ಆ ಮನೆಯಲ್ಲಿರುವ ಎಲ್ಲರೂ ರಕ್ಷಿಸಲ್ಪಡುವರು. ನೀವು ಸತ್ಕಾರ್ಯ ಮಾಡದಿದ್ದರೆ ಕೇವಲ ನಂಬುವುದು ನಿಮಗೆ ಲಾಭದಾಯಕವಾಗಲಾರದು." (ಅಲ್‌ಬದರ್ 26-12-1902 – ಪುಟ 66)

ಹಝ್ರತ್ ಮಸೀಹ್ ಮೌಊದ್[ಅ] ಪುನಃ ಹೇಳುತ್ತಾರೆ:

"ಅಮಲೆಸಾಲಿಹ್ (ಸತ್ಕಾರ್ಯ) ನಮ್ಮ ಅಭಿಪ್ರಾಯ ಮತ್ತು ಅಂಗೀಕಾರದಿಂದ ನಿರ್ಧರಿಸಲ್ಪಡಲು ಸಾಧ್ಯವಾಗಲಾರದು. (ಸತ್ಕಾರ್ಯವೆಂಬುದು ಪ್ರತಿಯೊಬ್ಬನ ಇಷ್ಟಾನುಸಾರವಲ್ಲ. ಸತ್ಕಾರ್ಯದ ಬಗ್ಗೆ ಸ್ವಯಂ ವ್ಯಾಖ್ಯಾನ ಮಾಡಬಾರದು.) ಸತ್ಕಾರ್ಯದಲ್ಲಿ ಯಾವುದೇ ರೀತಿಯ ಕೆಡುಕು ಇರಬಾರದು. ಸತ್ಕಾರ್ಯವು ಕೆಡುಕಿಗೆ ವಿರುದ್ಧವಾಗಿದೆ. ಆಹಾರವು ಹಳಸಿಹೋಗದೆ ಇದ್ದರೆ ಪರಿಶುದ್ಧವಾಗಿರುತ್ತದೆ. ಅದು ಹೀನ ವರ್ಗಕ್ಕೆ ಸೇರಿದ ವಸ್ತುವಾಗಿರಲೂಬಾರದು. ಅದನ್ನು ತಿಂದ ಕೂಡಲೇ ಜೀರ್ಣವಾಗಿ ಶರೀರಕ್ಕೆ ಪುಷ್ಟಿ ನೀಡುವಂತಹದ್ದಾಗಿರಬೇಕು. ಇದೇ ರೀತಿ ಸತ್ಕಾರ್ಯದಲ್ಲಿಯೂ ಯಾವುದೇ ಕೆಡುಕು ಇರಬಾರದು. ಅದು ಅಲ್ಲಾಹನ ಆಜ್ಞೆ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಡೆವಳಿಕೆಗೆ ಅನುಸಾರವಾಗಿರಬೇಕು. ಅದರಲ್ಲಿ ಯಾವುದೇ ರೀತಿಯ ಉದಾಸೀನತೆ, ಆತ್ಮಪ್ರಶಂಸೆ, ತೋರಿಕೆ ಮತ್ತು ಸ್ವತಃ ಯೋಜಿಸಿದುದು ಆಗಿರಬಾರದು. ಇಂತಹ ಸತ್ಕಾರ್ಯವನ್ನು ಕಿಬ್ರಿಯತೆ ಅಹ್‌ಮರ್ ಎಂದೆನ್ನುತ್ತಾರೆ. ಅದು ಬಹಳ ಅಪೂರ್ವವೂ ಅಮೂಲ್ಯವೂ ಆಗಿದೆ. ಇಂತಹ ಸತ್ಕಾರ್ಯವನ್ನು ಸತ್ಯವಿಶ್ವಾಸಿ ಕೈಗೊಳ್ಳಬೇಕು." (ಅಲ್‌ಹಕಮ್ 30-04-1904)

ಇಂತಹ ಗುಣಸ್ವಭಾವಗಳನ್ನು ತಮ್ಮಲ್ಲಿ ಉಂಟುಮಾಡುವ ಜನರು ಖಿಲಾಫತ್‌ನಿಂದ ಅನುಗ್ರಹ ಪಡೆಯುತ್ತಾ ಹೋಗುವರು ಎಂದು ಅಲ್ಲಾಹನು ವಾಗ್ದಾನ ಮಾಡಿರುತ್ತಾನೆ. ಇಂತಹ ಜನರು ಖಿಲಾಫತನ್ನು ಸಂರಕ್ಷಿಸುವರು ಮತ್ತು ಖಿಲಾಫತ್ ಅವರನ್ನು ಸಂರಕ್ಷಿಸುವುದು. ಈ ಅನುಗ್ರಹ ಮತ್ತು ಸಂರಕ್ಷಣೆಯ ದೃಶ್ಯಗಳು ಅಲ್ಲಾಹನ ಧರ್ಮವನ್ನು ಬಲಯುತವಾಗಿ ಹಿಡಿದುಕೊಳ್ಳುವಾಗ ಮಾತ್ರ ಕಾಣಿಸಿಕೊಳ್ಳುವುವು. ತಮ್ಮ ಇಷ್ಟ ಪ್ರಕಾರ ವರ್ತಿಸುವವರಿಗೆ ಈ ವಾಗ್ದಾನವು ಅನ್ವಯಿಸಲಾರದು.

ಇಂದು ಮುಸ್ಲಿಮ್ ಸಮುದಾಯದಲ್ಲಿ ಖಿಲಾಫತ್ ಸ್ಥಾಪನೆಗಾಗಿ ಎಷ್ಟು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆದರೆ ಆ ಪ್ರಯತ್ನಗಳು ಸಫಲವಾಗಲಾರವು; ಎಂದಿಗೂ ಸಫಲವಾಗಲಾರವು. ಇದಕ್ಕೆ ಕಾರಣವೇನೆಂದರೆ, ಈ ಜನರು ಅಲ್ಲಾಹನ ಇಷ್ಟಕ್ಕೆ ವಿರುದ್ಧವಾಗಿ ತಮ್ಮ ಇಷ್ಟ ಪ್ರಕಾರದ ಧರ್ಮವನ್ನು ಜಾರಿಗೊಳಿಸಲು ಇಚ್ಛಿಸುತ್ತಾರೆ. ಅಲ್ಲಾಹನು ಕಳುಹಿಸಿದ ಖಿಲಾಫತನ್ನು ಅನುಸರಿಸದೆ ಜನರು ಮಾಡುವ ಖಿಲಾಫತನ್ನು ಸ್ಥಾಪಿಸಲು ಇಚ್ಛಿಸುತ್ತಾರೆ. ತಾವು ತಪ್ಪು ಮಾಡುತ್ತಿದ್ದೇವೆ ಎಂಬ ಭಾವನೆ ಅವರಿಗಿದ್ದರೂ ಅವರು ಅಲ್ಲಾಹನ ತೀರ್ಪನ್ನು ತಿರಸ್ಕರಿಸುತ್ತಾರೆ.

ಆದರೆ ಪವಿತ್ರ ಖುರ್‌ಆನಿನ ಆಯತೆ ಇಸ್ತಿಖ್‌ಲಾಫ್ (ಎಂದರೆ ಸೂರತುನ್ನೂರ್ ವಚನ 56) ಮೂಲಕ ಅಲ್ಲಾಹನು ಅಹ್ಮದಿಯಾ ಜಮಾಅತಿಗೆ ಸಮಾಧಾನ ನೀಡಿರುವನು. ಅದರ ವ್ಯಾಖ್ಯಾನವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾಡಿದ್ದಾರೆ. ಇಂದು ಅಹ್ಮದಿಯಾ ಜಮಾಅತಿನ ಚರಿತ್ರೆ ಮತ್ತು ವಿಶಿಷ್ಟವಾಗಿ ಅಹ್ಮದಿಯಾ ಖಿಲಾಫತಿನ ನೂರುವರ್ಷಗಳ ಚರಿತ್ರೆ ಪ್ರತಿಯೊಬ್ಬನಿಗೆ ಆಯತೆ ಇಸ್ತಿಖ್‌ಲಾಫ್‌ನ ನಿಜವಾದ ವ್ಯಾಖ್ಯಾನವನ್ನು ಒದಗಿಸಿ ಕೊಡುತ್ತದೆ. ಪ್ರತಿಯೊಬ್ಬ ಅಹ್ಮದಿಯನ್ನು ಅಲ್ಲಾಹನು ಅನುಗ್ರಹಗಳ ಮಳೆಯು ಸುರಿಸಲ್ಪಡಲು ಅರ್ಹನನ್ನಾಗಿ ಮಾಡಿರುವನು.

ಇಂದು ಪ್ರತಿಯೊಬ್ಬ ಅಹ್ಮದಿಗೆ ಸ್ಪಷ್ಟವಾಗಿದೆ ಮತ್ತು ಸ್ಪಷ್ಟವಾಗಿ ಇರಬೇಕಾಗಿದೆ. ಏನೆಂದರೆ, ಖಿಲಾಫತ್ ಅನುಗ್ರಹಗಳನ್ನು ಪಡೆಯಲು ಅರ್ಹರಾಗುವವರು ತಮ್ಮ ವಿಶ್ವಾಸವನ್ನು ಪರಿಪೂರ್ಣಗೊಳಿಸಲು ಪ್ರಯತ್ನಿಸುತ್ತಾ ಸತ್ಕಾರ್ಯಗಳನ್ನು ಮಾಡುವವರಾಗಿರುತ್ತಾರೆ. ಇಂದು ಅಹ್ಮದಿಯೇತರರು ಸಹ ನಮಗೆ ದೊರೆತ ಅನುಗ್ರಹಗಳ ದೃಶ್ಯಗಳನ್ನು ಕಂಡು ಬಹಿರಂಗವಾಗಿ ಹೇಳುತ್ತಾರೆ ಮತ್ತು ಹಾಗೆ ಹೇಳಲು ನಿರ್ಬಂಧಿತರಾಗುತ್ತಾರೆ. ಅವರು ಹೇಳುತ್ತಾರೆ: "ಭಯದ ಸ್ಥಿತಿಯನ್ನು ಶಾಂತಿ ಸಮಾಧಾನದ ಸ್ಥಿತಿಗೆ ಬದಲಾಯಿಸಿದುದನ್ನು ಈ ಕಾಲದಲ್ಲಿ ನೋಡಲು ಬಯಸುವುದಾದರೆ ಅಹ್ಮದಿಯಾ ಜಮಾಅತನ್ನು ನೋಡಬೇಕು." ನಾವು ಎಷ್ಟು ಭಾಗ್ಯಶಾಲಿಗಳು! ನಾವು ಹಝ್ರತ್ ಮಸೀಹ್ ಮೌಊದ್[ಅ] ಅವರ ಜಮಾಅತ್‌ಗೆ ಸೇರಿ ಈ ಪಾರಿತೋಷಕಕ್ಕೆ ಅರ್ಹರಾಗಿ ಅಲ್ಲಾಹನಿಂದ ಗಣಿಸಲ್ಪಟ್ಟೆವು.

ಆಯತೆ ಇಸ್ತಿಖ್‌ಲಾಫ್ (ಸೂರತುನ್ನೂರ್ ವಚನ 56) ಇದರ ಸ್ವಲ್ಪ ಭಾಗವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉದ್ಧರಣೆಗಳಿಂದ ಆಲಿಸಿದೆವು. ನಮ್ಮ ವಿಶ್ವಾಸ ಮತ್ತು ಸತ್ಕಾರ್ಯಗಳ ಕಡೆಗೆ ಗಮನ ನೀಡಲು ಅದು ನಮಗೆ ಸೂಚಿಸುತ್ತದೆ.

ನಾನು ಈ ಮೊದಲು ಹೇಳಿದ ಹಾಗೆ ಅಹ್ಮದಿಯೇತರರು ಸಹ ಖಿಲಾಫತ್ ಸ್ಥಾಪನೆಗೆ ಪ್ರಯತ್ನಿಸುತ್ತಾ ಇದ್ದಾರೆ. ಅದರ ಆವಶ್ಯಕತೆಯನ್ನು ಅವರು ಮನವರಿಕೆ ಮಾಡಿದ್ದಾರೆ. ಆದರೆ ಖಿಲಾಫತ್ ಅವರಲ್ಲಿ ಸ್ಥಾಪಿತವಾಗಲಾರದು. ಏಕೆಂದರೆ ಅವರು ತಮ್ಮ ಇಷ್ಟ ಪ್ರಕಾರ ಅದರ ವ್ಯಾಖ್ಯಾನವನ್ನು ಮಾಡುತ್ತಾರೆ. ಅವರು ಅಲ್ಲಾಹನ ಖಿಲಾಫತನ್ನು ಅಂಗೀಕರಿಸುವುದಕ್ಕೆ ಪ್ರತಿಯಾಗಿ ತಮ್ಮ ಖಿಲಾಫತನ್ನು ತುರುಕಲು ಬಯಸುತ್ತಾರೆ. ಹೀಗಿರುವಾಗ ಅವರ ಭಯದ ಸ್ಥಿತಿ ಶಾಂತಮಯ ಸ್ಥಿತಿಗೆ ಹೇಗೆ ತಾನೆ ಪರಿವರ್ತನೆಗೊಳ್ಳಬಲ್ಲುದು? ಅವರಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಗುವುದಾದರೂ ಹೇಗೆ? ಖಿಲಾಫತ್ ಅಲ್ಲಾಹನ ಪಾರಿತೋಷಕವಾಗಿದೆ. ಅಲ್ಲಾಹನು ಖಿಲಾಫತ್ ವ್ಯವಸ್ಥೆಯ ಮೂಲಕ ಸತ್ಯವಿಶ್ವಾಸಿಗಳ ಭಯದ ಸ್ಥಿತಿಯನ್ನು ಶಾಂತಿ ಸಮಾಧಾನದ ಸ್ಥಿತಿಗೆ ಬದಲಾಯಿಸುತ್ತಾನೆ. ಅಲ್ಲಾಹನು ತಾನು ನೇಮಿಸಿದ ಖಲೀಫರ ಹೃದಯದಿಂದ ಎಲ್ಲಾ ವಿಧಗಳ ಲೌಕಿಕ ಭಯವನ್ನು ಹೊರಹಾಕುತ್ತಾನೆ ಮತ್ತು ಭಯದ ಸ್ಥಿತಿಗಳನ್ನು ಎದುರಿಸಲು ಶಕ್ತಿ ಪ್ರದಾನ ಮಾಡುತ್ತಾನೆ. ಪ್ರತಿಯೊಂದು ಕಷ್ಟದ ಕಾಲದಲ್ಲಿ ತನ್ನ ಅನುಗ್ರಹದಿಂದ ನೆಮ್ಮದಿಯನ್ನು ನೀಡುತ್ತಾನೆ. ಆಗ ಆಯಾಕಾಲದ ಖಲೀಫರು ಜಮಾಅತಿಗೆ ಶಾಂತಿ ಸಮಾಧಾನವನ್ನು ನೀಡುತ್ತಾರೆ. ಏನು, ಲೌಕಿಕ ಕಾರ್ಯಯೋಜನೆಗಳು ದೈವಿಕ ಕಾರ್ಯಯೋಜನೆಗಳನ್ನು ಎದುರಿಸಲು ಸಾಧ್ಯವೇ?

ಅಲ್ಲಾಹನು ಆಯತೆ ಇಸ್ತಿಖ್‌ಲಾಫ್ ಮೂಲಕ ಉಪದೇಶಿಸುವುದೇನೆಂದರೆ, ನಿಮ್ಮ ಭಯವನ್ನು ಅಲ್ಲಾಹನು ನಿವಾರಿಸುವನು; ಆಯಾಕಾಲದ ಖಲೀಫರಿಗೆ ಮಾರ್ಗದರ್ಶನ ನೀಡುವನು; ಅಲ್ಲಾಹನ ಆರಾಧನೆಯ ಕಡೆಗೆ ಗಮನಹರಿಯುತ್ತಾ ಇರುವುದು; ಲೋಕದ ಎಲ್ಲಾ ಭಯಗಳನ್ನು ಮತ್ತು ಆಶಾಭಿಲಾಷೆಗಳನ್ನು ಅಲ್ಲಾಹನ ಮುಂದೆ ಭಾಗಿದಾರರನ್ನಾಗಿ ಖಲೀಫರು ನಿಲ್ಲಿಸಲಾರರು. ಅವರು ಕೃತಘ್ನತೆ ತೋರಿಸಲಾರರು. ಅಲ್ಲಾಹನ

ಸಹಾಯವು ಖಲೀಫರಿಗೆ ದೈವಿಕ ಸಹಾಯವಿರುವುದನ್ನು ಸಾಬೀತುಗೊಳಿಸುವುದು. ಮನುಷ್ಯ ಸಹಜವಾದ ಬಲಹೀನತೆಯ ಕಾರಣದಿಂದ ಯಾವುದಾದರೂ ಖಲೀಫರಲ್ಲಿ ಯಾವುದಾದರೂ ಕುಂದುಕೊರತೆ ಉಂಟಾದಲ್ಲಿ ಅಲ್ಲಾಹನು ಅವರು ಚಲಿಸುವ ದಿಕ್ಕನ್ನು ಸರಿಪಡಿಸುವನು. ಅಲ್ಲಾಹನು ತಾನು ನೀಡಿದ ಪಾರಿತೋಷಕದ ಕಾರಣದಿಂದ, ತಾನು ಮಾಡಿದ ಆಯ್ಕೆಯ ಕಾರಣದಿಂದ ಅಂತಹ ಪರಿಸ್ಥಿತಿಗಳಲ್ಲಿ ಕೂಡ ಉತ್ತಮ ಪರಿಣಾಮವನ್ನು ಉಂಟುಮಾಡುವನು. ಆದರೆ ಜಮಾಅತ್ ಸದಸ್ಯರು ಆರಾಧನೆಯ ಕಡೆಗೆ ಪೂರ್ಣ ಶ್ರದ್ಧೆ ನೀಡಬೇಕು. ಬಹುದೇವಾರಾಧನೆಯ ಸೂಚನೆ ನೀಡುವ ಅತ್ಯಂತ ಚಿಕ್ಕ ಸ್ಥಿತಿಯಿಂದಲೂ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಬೇಕು. ಅಲ್ಲಾಹನು ನೀಡಿದ ಪಾರಿತೋಷಕದ ಬಗ್ಗೆ ಅರ್ಹವಾದ ರೀತಿಯಲ್ಲಿ ಗೌರವ ಸೂಚಿಸುತ್ತಾ ಕೃತಜ್ಞರಾದ ದಾಸರಾಗಬೇಕು. ಹೀಗೆ ಆದರೆ ಅವರು ನಿರ್ಭಯರಾಗುವರು. ಅಲ್ಲಾಹನು ಅವರ ಮುಂದೆಯೂ ಹಿಂದೆಯೂ ಉಪಸ್ಥಿತನಾಗುವನು. ಅವನು ಅವರ ಬಲಭಾಗದಲ್ಲೂ ಎಡಭಾಗದಲ್ಲೂ ಹಾಜರಾಗುವನು. ಅವರಿಗೆ ಹಾನಿಯನ್ನುಂಟುಮಾಡಲು ಯಾರಿಗೂ ಸಾಧ್ಯವಾಗಲಾರದು.

ಹಝ್ರತ್ ಮಸೀಹ್ ಮೌಊದ್[ಅ] ನಿಧನಹೊಂದಿದಾಗ ಎಂತಹ ಪರಿಸ್ಥಿತಿ ಉಂಟಾಯಿತೆಂದರೆ ಪ್ರತಿಯೊಬ್ಬನ ಹೃದಯ ನಡುಗಿತು. ಪ್ರತಿಯೊಬ್ಬ ಅಹ್ಮದಿಯನ್ನು ಅದು ನಡುಗಿಸಿತು. ನಾನು ಹಿಂದೆ ಹೇಳಿದ ಹಾಗೆ ಶತ್ರುಗಳು ಸಂತೋಷದಿಂದ ವಾದ್ಯಘೋಷಗಳನ್ನು ಮೊಳಗಿಸಿದರು. ಈ ಜಮಾಅತ್ ನಾಶವಾಗಲಿದೆ ಎಂದು ಅವರು ಭಾವಿಸಿದರು. ಆ ಕಾಲದಲ್ಲಿ ಶತ್ರುಗಳು ಮಾಡಿದ ಸುಳ್ಳು ಪ್ರಚಾರಗಳ ಒಂದು ಉದಾಹರಣೆಯನ್ನು ಹೊಸ ಪೀಳಿಗೆಗೆ ಮತ್ತು ಹೊಸದಾಗಿ ಜಮಾಅತ್ ಸೇರುವವರ ತಿಳುವಳಿಕೆಗಾಗಿ ನೀಡುತ್ತೇನೆ.

ಪೀರ್ ಜಮಾಅತ್ ಅಲಿ ಶಾಹ್‌ರವರ ಶಿಷ್ಯರು ಹೀಗೆ ಹೇಳಿದರು: "ಮಿರ್ಝಾಯಿಗಳು ಅಹ್ಮದಿಯಾ ಜಮಾಅತ್ ಬಿಟ್ಟು ನಮ್ಮ ಬೈಅತ್ ಮಾಡುತ್ತಿದ್ದಾರೆ." (ಅಲ್‌ಮುಜದ್ದಿದ್, ಲಾಹೋರ್ ಜೂನ್ 1908).

ಅಹ್ಮದಿಯತ್ ಬಿಟ್ಟು ಅವರ ಇಸ್ಲಾಮನ್ನು ಪ್ರವೇಶಿಸುತ್ತಿದ್ದಾರೆ ಎಂದು ಇದರ ಅರ್ಥವಾಗಿದೆ. ಆದರೆ ನಿಜವಾದ ಇಸ್ಲಾಮ್ ಅಹ್ಮದಿಯತ್‌ನಲ್ಲಿ ಇದೆ. ಇಂದು ಸಹ ಶತ್ರುಗಳಾದ ಮೌಲವಿಗಳು ಈ ರೀತಿಯ ಮಾತುಗಳನ್ನು ಹೇಳುತ್ತಾರೆ. ಇದು ಅವರ ಆಶೆಗಳಾಗಿವೆ. ಅವರ ಆಶೆ ಹಿಂದೆ ಈಡೇರಿಲ್ಲ; ಈಗಲೂ ಈಡೇರಲಾರದು. ಇಂದು ಶತ್ರುಗಳು ನಮ್ಮ ಜಮಾಅತಿನ ಅಭಿವೃದ್ಧಿಯನ್ನು ಕಂಡು ತಬ್ಬಿಬ್ಬಾಗಿದ್ದಾರೆ. ಅವರು ಒಂದು ಕಡೆ, "ನಾವು ಅಹ್ಮದಿಯತನ್ನು ನಾಶಮಾಡಿದ್ದೇವೆ" ಎಂದು ಹೇಳುತ್ತಾರೆ. ಅದರೊಂದಿಗೆ, ಇಸ್ಲಾಮೀ ಸರಕಾರಗಳು ಖಾದಿಯಾನಿಯತಿನ ಅಭಿವೃದ್ಧಿಯನ್ನು ತಡೆಯಬೇಕು; ಇಲ್ಲದಿದ್ದರೆ ಅವರು ಮುಸ್ಲಿಮ್ ಸಮುದಾಯವನ್ನು ದಾರಿತಪ್ಪಿಸುವರು ಎಂದು ಸಹ ಹೇಳುತ್ತಾರೆ.

ಹಝ್ರತ್ ಮಸೀಹ್ ಮೌಊದ್[ಅ] ನಿಧನಹೊಂದಿದಾಗ ಈ ಜನರು ತಮ್ಮ ಹೃದಯಗಳ ಕೊಳಕನ್ನು ಹೇಗೆ ಹೊರಹಾಕಿದರು ಎಂಬುದರ ಒಂದೆರಡು ಉದಾಹರಣೆಗಳನ್ನು ನೋಡಿರಿ.

ಮೌಲವಿ ಸನಾವುಲ್ಲಾ ಹೀಗೆ ಬರೆದರು: "ಮಿರ್ಝಾರವರ ಎಲ್ಲಾ ಪುಸ್ತಕಗಳನ್ನು ಯಾವುದಾದರೂ ಸಮುದ್ರದಲ್ಲಿ, ಅಲ್ಲ ಯಾವುದಾದರೂ ಒಲೆಯಲ್ಲಿ ಹಾಕಿ ಸುಟ್ಟುಬಿಡಿರಿ. ಇದು ಸಾಲದು. ಮುಂದಿನ ಯಾವುದಾದರೂ ಮುಸ್ಲಿಮ್ ಅಥವಾ ಮುಸ್ಲಿಮೇತರ ಚರಿತ್ರೆಗಾರ ಭಾರತದ ಚರಿತ್ರೆಯಲ್ಲಿ ಅಥವಾ ಇಸ್ಲಾಮಿನ ಚರಿತ್ರೆಯಲ್ಲಿ ಅವರ ಹೆಸರನ್ನು ಕೂಡ ಬರೆಯಬಾರದು." ("ವಕೀಲ್", ಅಮೃತಸರ 13-06-1908)

ಹಸನ್ ನಿಝಾಮಿ ಬಾಹ್ಯವಾಗಿ ಸೌಮ್ಯವಾದಿಯಾಗಿದ್ದು ತಮ್ಮ ಬಗ್ಗೆಯೇ ಅಭಿಮಾನ ಹೊಂದಿದವರಾಗಿದ್ದರು. ಅವರು ಅಹ್ಮದಿಯರಿಗೆ ಹೀಗೆ ಸಲಹೆ ನೀಡಿದರು: "ಮಿರ್ಝಾ ಸಾಹೆಬರ ಮಹ್‌ದೀ ಮಸೀಹ್ ಎಂಬ ವಾದವನ್ನು ನಿರಾಕರಿಸಿರಿ. ಏಕೆಂದರೆ ಮಿರ್ಝಾ ಸಾಹೆಬರಂತಹ ತಿಳುವಳಿಕೆಯುಳ್ಳ ಮತ್ತು ಕಾರ್ಯಪಟು ಆಗಿರುವ ವ್ಯಕ್ತಿಯ ಅಭಾವದ ಕಾರಣದಿಂದ ಅಹ್ಮದಿಯಾ ಜಮಾಅತ್ ಶತ್ರುಗಳ ವಿರೋಧವನ್ನು ಎದುರಿಸಲು ಶಕ್ತವಾಗದ ಕಾರಣ ಅದರ ವ್ಯವಸ್ಥೆ ಕೆಟ್ಟುಹೋಗಬಹುದಾದ ಸಾಧ್ಯತೆ ಇದೆ." ("ಪೈಸಾ ಅಖ್‌ಬಾರ್", ಲಾಹೋರ್ 5-6-1908)

ಹಸನ್ ನಿಝಾಮಿ ಬಹಳ ಮೃದು ಶಬ್ದಗಳಲ್ಲಿ, ಆದರದಿಂದ ಅಹ್ಮದಿಯರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬೈಅತ್‌ನಿಂದ ಹೊರಬರಲು ಉಪದೇಶಿಸುತ್ತಾರೆ.

ಇದು ಆ ಕಾಲದ ಸ್ಥಿತಿಯಾಗಿತ್ತು. ಉಗ್ರವಾಗಿ ಎದುರಿಸುತ್ತಿದ್ದ ಜನರು ಮತ್ತು ಸೌಮ್ಯವಾದಿಗಳು ಅಹ್ಮದಿಯರಿಗೆ ಅಹ್ಮದಿಯತಿನಿಂದ ಹೊರಬರಲು ಉಪದೇಶಿಸುತ್ತಾ ಇದ್ದರು. ಆದರೆ ಲೌಕಿಕ ಕಣ್ಣುಗಳನ್ನು ಹೊಂದಿದ ಅವರು ದೈವಿಕ ವಾಗ್ದಾನಗಳ ಕಡೆಗೆ ದೃಷ್ಟಿಹಾಯಿಸಲಿಲ್ಲ, ಅದು ಅವರಿಗೆ ಸಾಧ್ಯವೂ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್ "ನಾನು ಹೋದ ನಂತರ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ತೋರಿಸುವನು" ಎಂದು ಹೇಳಿದ ಮಾತಿನ ಅರ್ಥ ತಿಳಿಯಲು ಅವರಿಗೆ ಸಾಧ್ಯವಿರಲಿಲ್ಲ. ಅಲ್ಲಾಹನ ವಾಗ್ದಾನವು ಮುಹಮ್ಮದೀ ಮಸೀಹರ ಪರವಾಗಿ ಹೇಗೆ ಈಡೇರಿತು ಎನ್ನುವುದನ್ನು ಲೋಕವು ಕಂಡಿತು. ಶತ್ರುಗಳ ಘೋಷಣೆಗಳು, ಅವರ ಕೆಟ್ಟ ಆಶೆಗಳು ಅವರ ಮುಖಕ್ಕೆ ಬಡಿದವು. ಯಾವ ಗ್ರಂಥಗಳನ್ನು ಸುಟ್ಟುಬಿಡಬೇಕೆಂದು ಹೇಳುತ್ತಿದ್ದರೋ ಆ ಗ್ರಂಥಗಳು ಲೋಕದ ಅನೇಕ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟು ಸಾತ್ವಿಕರಾದ ಜನರಿಗೆ ಮಾರ್ಗದರ್ಶನ ನೀಡುತ್ತಾ ಇದೆ. ಯಾವ ವ್ಯಕ್ತಿಯ ಹೆಸರನ್ನು ಚರಿತ್ರೆಯಿಂದ ತೆಗೆದುಬಿಡಲು ಹೇಳಲಾಗುತ್ತಿತ್ತೋ ಆ ವ್ಯಕ್ತಿಯ ಹೆಸರಿಗೆ ಇಂದು ಯುರೋಪು, ಅಮೇರಿಕ, ಏಶ್ಯಾ ಮತ್ತು ಆಫ್ರಿಕದ ದೇಶಗಳಲ್ಲಿ ಜಯಕಾರ ಹೇಳಲಾಗುತ್ತಿದೆ. ಇಂದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರವರ ಹೆಸರು, ಅವರ ಚಿತ್ರ ಮತ್ತು ಸಾಹಿತ್ಯಗಳು ಲೋಕದ ಪ್ರತಿಯೊಂದು ಪ್ರದೇಶಕ್ಕೆ ಮತ್ತು ಮನೆಗೆ ತಲಪುತ್ತಾ ಇದೆ. ಶತ್ರುಗಳ ಪ್ರತಿಭಟನೆಯನ್ನು ಅಹ್ಮದಿಯಾ ಜಮಾಅತ್ ಸಹಿಸಲಾರದು ಎಂದು ಹೇಳುತ್ತಿದ್ದವರು ಈಗ ಜೀವಿಸಿದ್ದರೆ ನೋಡುವರು: ಪ್ರತಿಭಟನೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಅಹ್ಮದಿಯತಿನ ಹೆಸರು ಲೋಕದ ಪ್ರತಿಯೊಂದು ಪಟ್ಟಣಕ್ಕೆ ತಲಪಿದೆ. ಶತ್ರುಗಳು ಅಹ್ಮದಿಯತಿನ ಹೆಸರನ್ನು ಆಲಿಸಿದ ಕೂಡಲೇ ಪ್ರತಿಯೊಂದು ದೇಶದಲ್ಲಿ ತಮ್ಮನ್ನು ರಕ್ಷಿಸಿಕೊಂಡು ಓಡಿಹೋಗುತ್ತಾರೆ. ಆದರೆ ಶತ್ರುಗಳ ಕೊಳಕು ಮಾತುಗಳನ್ನು ಆಲಿಸಬೇಕಾದಲ್ಲಿ ಆಲಿಸಿರಿ.

ಧೈರ್ಯವಿದ್ದರೆ ಪ್ರತಿಯೊಂದು ಇಸ್ಲಾಮೀ ದೇಶದ ಸರಕಾರಗಳು ನ್ಯಾಯಬದ್ಧವಾದ ರೀತಿಯಲ್ಲಿ ವರ್ತಿಸಿ ಅಹ್ಮದಿಯರಿಗೆ ಆ ದೇಶದ ರಾಷ್ಟ್ರೀಯ ಟೆಲಿವಿಷನ್ ಮತ್ತು ರೇಡಿಯೋದಲ್ಲಿ ತಮ್ಮ ನಿಲುವನ್ನು ಪ್ರಕಟಿಸುವ ಅನುಮತಿ ಮತ್ತು ಸೌಲಭ್ಯ ನೀಡಲಿ. ಸರಕಾರಗಳು

ನ್ಯಾಯಬದ್ಧವಾದ ರೀತಿಯಲ್ಲಿ ತಮ್ಮ ಜವಾಬ್ದಾರಿಗಳನ್ನು ಈಡೇರಿಸಬೇಕು ಮತ್ತು ಅಹ್ಮದಿಯರಿಗೆ ಸಂರಕ್ಷಣೆ ನೀಡಬೇಕು. ಧರ್ಮದ ವಿಷಯದಲ್ಲಿ ಯಾವುದೇ ಬಲಾತ್ಕಾರವಿರಬಾರದು. ಪ್ರತಿಯೊಬ್ಬ ಪ್ರಜ್ಞಾವಂತ ಪ್ರಾಪ್ತವಯಸ್ಕ ಒಳಿತು ಕೆಡುಕುಗಳನ್ನು, ಅಲ್ಲಾಹನ ಇಚ್ಛೆ ಪ್ರಕಾರ, ಅರಿಯಬಲ್ಲವನಾಗಿರುವಾಗ ಹೆದರಬೇಕಾದುದಾದರೂ ಏಕೆ? ಬಲಾತ್ಕಾರದಿಂದ ಯಾರನ್ನೂ ಅಹ್ಮದಿಯಾಗಿ ಮಾಡಲು ಸಾಧ್ಯವಿಲ್ಲ.

ಶತ್ರುಗಳು ಈಗ ನಮ್ಮ M.T.A. ಟೆಲಿವಿಷನ್ ಚ್ಯಾನೆಲನ್ನು ನಿಲ್ಲಿಸಲು ಘೋಷಣೆ ಕೂಗುತ್ತಿದ್ದಾರೆ. ಹಲವು ಕಡೆ ಈ ಬಗ್ಗೆ ಪ್ರಯತ್ನ ಸಹ ನಡೆಸುತ್ತಾ ಇದ್ದಾರೆ. ಆದರೆ ಅಲ್ಲಾಹನು ಹೇಗೆ ಸಂವಿಧಾನವನ್ನು ರೂಪಿಸಿರುವನೆಂದರೆ ಒಂದು ಕಡೆ ಅದನ್ನು ದಮನಿಸಲು ಪ್ರಯತ್ನಿಸಿದಾಗ ಇನ್ನೊಂದು ಕಡೆಯಿಂದ ಅದು ಶೋಭಾಯಮಾನವಾಗಿ ಮೇಲೆದ್ದು ಬರುತ್ತದೆ. ಶತ್ರುಗಳ ಬೊಬ್ಬೆಗಳು ಅಹ್ಮದಿಯಾ ಜಮಾಅತಿಗೆ ಹಾನಿ ಉಂಟುಮಾಡುವುದಾದರೂ ಹೇಗೆ? ಈಗ M.T.A. ಅವರನ್ನು ಭಯಭೀತರನ್ನಾಗಿ ಮಾಡಿದೆ. ಇವು ಅಲ್ಲಾಹನ ವಾಗ್ದಾನಗಳು ಈಡೇರುತ್ತಿರುವ ದೃಶ್ಯಗಳಾಗಿವೆ. ಅಲ್ಲಾಹನ ವಿರುದ್ಧ ಯಾರಿಗಾದರೂ ಯುದ್ಧ ಮಾಡುವ ಇಚ್ಛೆ ಇದ್ದಲ್ಲಿ ಹಾಗೆಯೇ ಮಾಡಲಿ. ಅವರು ಇದರ ಮೊದಲು ತಮ್ಮ ಪ್ರಯತ್ನಗಳ ಫಲವನ್ನು ನೋಡುತ್ತಾ ಬಂದಿದ್ದಾರೆ. ಇಂದು ಸಹ ಅವರು ಅದನ್ನು ನೋಡುವರು.

ಹಝ್ರತ್ ಮಸೀಹ್ ಮೌಊದ್(ಅ) ನಿಧನ ಹೊಂದಿದಾಗ ಶತ್ರುಗಳು ಅಹ್ಮದಿಯತಿನ ಗಿಡವನ್ನು ನಾಶಮಾಡಲು ಪೂರ್ಣ ಶಕ್ತಿ ಬಳಸಿ ಪ್ರಯತ್ನಿಸಿದರು. ಅವರು ಅದಕ್ಕಾಗಿ ಎಲ್ಲಾ ರೀತಿಯ ಆಯುಧಗಳನ್ನು ಪ್ರಯೋಗಿಸಿದರು. ಆದರೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರಿಗೆ ಹೀಗೆ ತಿಳಿಸಿದ್ದನು:

"ಗರಸ್ತು ಲಕ ಬಿಯದೀ ರಹ್‌ಮತೀ ವ ಖುದ್‌ರತೀ" (ತಝ್‌ಕಿರ ಪುಟ 72, 2004ರ ಮುದ್ರಣ)

ಅರ್ಥ: "ನಾನು ನಿನಗಾಗಿ ನನ್ನ ಕೈಗಳಿಂದ ನನ್ನ ಅನುಗ್ರಹದ ಮತ್ತು ನನ್ನ ಶಕ್ತಿ ಸಾಮರ್ಥ್ಯದ ವೃಕ್ಷವನ್ನು ನೆಟ್ಟಿರುವೆನು."

ಅಹ್ಮದಿಯತೆಂಬ ಗಿಡ ತನ್ನ ಆರಂಭದ ಸ್ಥಿತಿಯಲ್ಲಿದೆ; ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ನಿಧನದ ನಂತರ ನಾಶವಾಗುವುದು ಎಂದು ಶತ್ರುಗಳು ಭಾವಿಸಿದುದು ಅವರ ತಿಳಿಗೇಡಿತನವಾಗಿದೆ. ಅಲ್ಲಾಹನ ಹೇಳಿದುದು ಹೀಗೆ: ನಾನೇ ಈ ವೃಕ್ಷವನ್ನು ನೆಟ್ಟಿರುವೆನು. ನನ್ನ ಅನುಗ್ರಹದ ಮತ್ತು ಶಕ್ತಿ ಸಾಮರ್ಥ್ಯದ ಎಂತಹ ವೃಕ್ಷವನ್ನು ನೆಟ್ಟಿರುವೆನೆಂದರೆ ಅದು ಬೆಳವಣಿಗೆಗೆ ಹೊಂದುವುದು; ಅದರ ಬೇರುಗಳು ಭೂಮಿಯಲ್ಲಿ ಆಳವಾಗಿ ಬಲಿಷ್ಠವಾಗಿ ಇರುವುವು. ಅದರ ಶಾಖೆಗಳು ಆಕಾಶದೊಂದಿಗೆ ಮಾತುಕತೆ ನಡೆಸುತ್ತಿರುವುವು.

ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ದ್ವಿತೀಯ ಶಕ್ತಿಯ ಬಗ್ಗೆ ಶುಭವಾರ್ತೆ ನೀಡಿ ಅದು ಶಾಶ್ವತವಾಗಿ ಇರುವುದೆಂದು ಹೇಳಿದುದು ಅಲ್ಲಾಹನು ನೆಟ್ಟ ವೃಕ್ಷವು ಫಲವನ್ನು ನೀಡುವುದರ ಕುರಿತು ಮತ್ತು ಅದು ಬೃಹದಾಕಾರದಲ್ಲಿ ಬೆಳೆಯುವ ಕುರಿತಾಗಿತ್ತು.

ಅಲ್ಲಾಹನು ನೆಟ್ಟ ಈ ವೃಕ್ಷ ಲೋಕದಾದ್ಯಂತ ಇರುವ ಸಾತ್ವಿಕರಿಗೆ ತನ್ನ ನೆರಳಲ್ಲಿ ಆಶ್ರಯ ನೀಡುವಂತಹುದು ಆಗಿದ್ದು ಈಗಲೂ ಆಶ್ರಯ ನೀಡುತ್ತಾ ಇದೆ. ಅದು ಈ ತಿಳಿಗೇಡಿಗಳ ಒದೆತದಿಂದ ಹೇಗೆ ತಾನೆ ಅಲುಗಾಡಬಲ್ಲುದು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಹೀಗೆ ಹೇಳಿದ್ದನು:

"ಮೈಂ ತೇರೇ ಸಾಥ್ ಔರ್ ತೇರೇ ತಮಾಮ್ ಪ್ಯಾರೋಂಕೆ ಸಾಥ್" (ತಝ್‌ಕಿರ ಪುಟ 630)

ಅಂದರೆ, ನಾನು ನಿನ್ನೊಂದಿಗೆ ಮತ್ತು ನಿನ್ನನ್ನು ಪ್ರೀತಿಸುವ ಎಲ್ಲರೊಂದಿಗೆ ಇದ್ದೇನೆ.

ಅಲ್ಲಾಹನ ಈ ಸಂದೇಶವಾಣಿ ಪ್ರತಿದಿನ ಬಹಳ ವೈಭವಪೂರ್ಣವಾಗಿ ಈಡೇರುತ್ತಾ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನಹೊಂದಿದಾಗ ಸತ್ಯವಿಶ್ವಾಸಿಗಳಿಗೆ ಸಮಾಧಾನ ನೀಡುತ್ತಾ ಜಮಾಅತನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ (ಪ್ರಥಮ ಖಲೀಫರ) ಕೈಯಲ್ಲಿ ಅಲ್ಲಾಹನು ಜಮಾಯಿಸಿ ತನ್ನ ವಾಗ್ದಾನದ ಪ್ರಥಮ ಪ್ರಕಟಣೆಯನ್ನು ತೋರಿಸಿದನು. ಆಗ ಶತ್ರುಗಳು, "ಈ ಎಂಭತ್ತು ವರ್ಷದ ವೃದ್ಧ ಜಮಾಅತನ್ನು ಹೇಗೆ ನಡೆಸುವರು?" ಎಂದು ಸಂಶಯ ಸೂಚಿಸಿದ್ದರು. ಕರ್ಝನ್ ಗಝೆಟ್ ಎಂಬ ಪತ್ರಿಕೆ ಹೀಗೆ ಬರೆಯಿತು:

"ಈಗ ಮಿರ್ಝಾಯಿಗಳಿಗೆ ಬಾಕಿಯಾಗಿ ಉಳಿದುದಾದರೂ ಏನು? ಅವರ ಶಿರ ಕಡಿದು ಹೋಗಿದೆ. ಅವರ ಇಮಾಮ್ ಆಗಿರುವವರು ಬೇರೇನೂ ಮಾಡಲಾರರು. ಆದರೆ ಅವರು ನಿಮಗೆ ಯಾವುದಾದರೂ ಮುಸ್‌ಜಿದ್‌ನಲ್ಲಿ ಖುರ್‌ಆನ್ ಓದಿಹೇಳಬಲ್ಲರು." (ಬದರ್ 7-1-1909 – ಪುಟ 5)

ಏನನ್ನೂ ಮಾಡಲು ಅಸಮರ್ಥರಾಗಿರುವರು ಎಂದು ಶತ್ರುಗಳಿಂದ ಘೋಷಿಸಲ್ಪಟ್ಟ ಆ ಮಹಾನುಭಾವರು ಶತ್ರುಗಳ ದೃಷ್ಟಿಯಲ್ಲಿ ಮಹತ್ವವಿಲ್ಲದ ಆದರೆ ಧಾರ್ಮಿಕ ದೃಷ್ಟಿಯಲ್ಲಿ ಅತ್ಯಂತ ಮಹತ್ವಪೂರ್ಣ ಕೆಲಸಮಾಡುತ್ತಿದ್ದರು. ಅವರು ಪವಿತ್ರ ಖುರ್‌ಆನಿನ ವಚನಗಳಿಗೆ ವ್ಯಾಖ್ಯಾನ ನೀಡುತ್ತಾ ಅದರಲ್ಲಿ ಅಡಕವಾದ ಜ್ಞಾನವನ್ನು ವಿವರಿಸುತ್ತಿದ್ದರು. ಈ ಕೆಲಸವೇ ಅತ್ಯಂತ ಮುಖ್ಯ ಕೆಲಸವಾಗಿದೆ. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್‌ರವರ ಪ್ರಾರ್ಥನೆಯನ್ನು ಅಂಗೀಕರಿಸಿ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರನ್ನು(ಸ) ಈ ಕೆಲಸಕ್ಕಾಗಿ ನೇಮಿಸಿದನು. ಇದೇ ಕೆಲಸಮಾಡಲು ಅಲ್ಲಾಹನು ಕೊನೆಯ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್‌ರವರನ್ನು(ಅ) ಕಳುಹಿಸಿದನು. ಇದೇ ಕೆಲಸಮಾಡಲು ಅಲ್ಲಾಹನು ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತನ್ನು ಸ್ಥಾಪಿಸಿದನು. ಆದರೆ ಲೋಕದ ಜನರು ಈ ಮಹತ್ತಾದ ಕೆಲಸವನ್ನು ಅರ್ಥಮಾಡಿಕೊಳ್ಳುವುದಿಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ (ಪ್ರಥಮ ಖಲೀಫ) ಕರ್ಝನ್ ಗಝೆಟ್‌ನಲ್ಲಿ ಬಂದ ವಿಮರ್ಶೆಗೆ ಉತ್ತರವಾಗಿ ಹೀಗೆ ಹೇಳಿದರು: "ನಾನು ನಿಮಗೆ ಪವಿತ್ರ ಖುರ್‌ಆನನ್ನು ಓದಿ ಹೇಳುವ ಭಾಗ್ಯವನ್ನು ಅಲ್ಲಾಹನು ನನಗೆ ದಯಪಾಲಿಸಲಿ." (ಬದರ್ 7-1-1909 – ಪುಟ 5)

ಶತ್ರುಗಳು ಮತ್ತು ನಮ್ಮ ಜಮಾಅತಿನಲ್ಲಿದ್ದ ಕೆಲವು ಕಪಟವಿಶ್ವಾಸಿಗಳು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಬಗ್ಗೆ, ವೃದ್ಧರೂ ಬಲಹೀನರೂ ಆಗಿರುವ ಇವರು ಜಮಾಅತನ್ನು ಹೇಗೆ ನಡೆಸಬಲ್ಲರು? ಎಂದು ಯೋಚಿಸುತ್ತಿದ್ದರು.

ಜಮಾಅತನ್ನು ನಡೆಸುವ ವ್ಯವಸ್ಥೆಯ ಬಲಹೀನತೆಯ ಕಾರಣದಿಂದ ಜಮಾಅತ್ ಕ್ರಮೇಣ ನಾಶೋನ್ಮುಖವಾಗುವುದು ಎಂದು ಶತ್ರುಗಳು ಯೋಚಿಸುತ್ತಿದ್ದರು. ಕಪಟ ವಿಶ್ವಾಸಿಗಳು ತಮ್ಮನ್ನು ಜಮಾಅತಿನ ಸ್ತಂಭಗಳೆಂದು ಪರಿಗಣಿಸಿದ್ದರು. ಅವರ ದೃಷ್ಟಿಯಲ್ಲಿ ಅಂಜುಮನ್ ಹರ್ಖ್‌ರತ್ ಮಸೀಹ್ ಮೌಊದ್‌ರವರ(ಅ) ನಿಜವಾದ ಪ್ರತಿನಿಧಿ ಸಂಸ್ಥೆಯಾಗಿತ್ತು. ಜಮಾಅತಿನ ಎಲ್ಲಾ ಕೆಲಸಗಳು ಅವರ ಸುಪರ್ದಿಗೆ ವಹಿಸಿಕೊಡಬೇಕು ಎಂದು ಅವರು ಹೇಳುತ್ತಿದ್ದರು.

ಮೇಲಿನ ಎರಡು ರೀತಿಯ ಕಿರುಕುಳಗಳನ್ನು ಮತ್ತು ಆಕ್ರಮಣಗಳನ್ನು ಹರ್ಖ್‌ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರು ಶಕ್ತಿಯುತ ವಾಗಿ ಎದುರಿಸಿ ಸೋಲಿಸಿದರು. ಇದು ಅಲ್ಲಾಹನು ನೇಮಿಸಿದ ಖಲೀಫರ ಕೆಲಸವೇ ಆಗಿತ್ತು. ಅವರು ಖಲೀಫರಾಗಿ ಚುನಾಯಿಸಲ್ಪಟ್ಟಾಗ ಮಾಡಿದ ಪ್ರಥಮ ಭಾಷಣದ ಕೊನೆಯಲ್ಲಿ ಹೀಗೆ ಹೇಳಿದರು:

"ನಿಮ್ಮ ಯೋಚನೆಗಳು ಯಾವ ದಾರಿಯಲ್ಲಿ ಸಾಗುತ್ತಿದ್ದರೂ ನೀವು ನನ್ನ ಆಜ್ಞೆಗಳನ್ನು ಪಾಲಿಸಲೇ ಬೇಕು. ಈ ಸಂಗತಿ ನಿಮಗೆ ಸಮ್ಮತವಾಗಿದ್ದರೆ ನಾನು ಅನಿವಾರ್ಯವಾಗಿ ಈ ಭಾರವನ್ನು ಹೊರುತ್ತೇನೆ. ಬೈಅತ್‌ಗೆ ಸಂಬಂಧಿಸಿ ಹರ್ಖ್‌ರತ್ ಮಸೀಹ್ ಮೌಊದ್(ಅ) ಆದೇಶಿಸಿದ ಹತ್ತು ಶರತ್ತುಗಳನ್ನು ಪಾಲಿಸಬೇಕು. ಅವುಗಳೊಂದಿಗೆ ಪವಿತ್ರ ಖುರ್‌ಆನ್ ಕಲಿಯುವುದು, ಝಕಾತ್ ವ್ಯವಸ್ಥೆ ಮಾಡುವುದು, ಪ್ರಚಾರಕರನ್ನು ನೇಮಿಸುವುದು ಮತ್ತು ಬೇರೆ ಬೇರೆ ಕಾಲಗಳಲ್ಲಿ ಅಲ್ಲಾಹನು ನನ್ನ ಹೃದಯಕ್ಕೆ ಅವತೀರ್ಣಗೊಳಿಸುವ ವಿಷಯಗಳನ್ನು ನಾನು ಸೇರಿಸುತ್ತೇನೆ. ಧಾರ್ಮಿಕ ವಿದ್ಯಾಭ್ಯಾಸಕ್ಕಾಗಿ ಮದ್‌ರಸಗಳಲ್ಲಿ ಕಲಿಸುವ ವಿಷಯಗಳು ನನ್ನ ಇಚ್ಛೆಗೆ ಅನುಸಾರವಾಗಿ ಇರುವುದು. ನಾನು ಈ ಭಾರವನ್ನು ಅಲ್ಲಾಹನಿಗಾಗಿ ಮಾತ್ರ ಹೊರುತ್ತೇನೆ. ಅಲ್ಲಾಹನು ಹೀಗೆ ಹೇಳಿರುವನು:

"ವಲ್‌ತಕುನ್ ಮಿನ್‌ಕುಮ್ ಉಮ್ಮತುನ್ ಯದ್‌ಊನ ಇಲಲ್ ಖೈರಿ" (ಆಲಿ ಇಮ್ರಾನ್ ವಚನ 105)

"ಅಂದರೆ, 'ಒಳಿತಿನ ಕಡೆಗೆ ಕರೆಯುವ, ಒಳಿತನ್ನು ಉಪದೇಶಿಸಿ ಕೆಡುಕನ್ನು ವಿರೋಧಿಸುವ ಒಂದು ಗುಂಪು ನಿಮ್ಮಲ್ಲಿ ಇರಬೇಕಾಗಿದೆ.' ನೀವು ನೆನಪಿಡಿರಿ ಎಲ್ಲಾ ಒಳಿತುಗಳು ಐಕ್ಯದಲ್ಲಿದೆ. ಯಾರಿಗೆ ನಾಯಕನಿಲ್ಲವೋ ಆ ಸಂಸ್ಥೆ ಮೃತವಾಗಿದೆ." (ಅಲ್‌ಹಕಮ್ 6-6-1908 – ಪುಟ 8)

ಜಮಾಅತ್ ಒಡೆದು ಹೋಗಬೇಕೆಂಬ ಶತ್ರುಗಳ ಆಶೆ ಈಡೇರಲಿಲ್ಲ. ಹಾಗೆ ಆಗಲು ಸಾಧ್ಯವೂ ಇರಲಿಲ್ಲ, ಆದರೆ ಆಂತರಿಕ ಅಪಾಯಗಳು ಕಪಟ ವಿಶ್ವಾಸಿಗಳ ಕಾರಣದಿಂದ ಅಥವಾ ಅವರ ಕೈಗೊಂಬೆಗಳಾದವರಿಂದ ಆಗಾಗ ತಲೆದೋರುತ್ತಿದ್ದುವು. ಅದರ ಬಗ್ಗೆ ಖಲೀಫತುಲ್ ಮಸೀಹ್ ಅವ್ವಲ್(ರ) ಅವರಿಗೆ ತಿಳಿದಾಗ ಅವರು ಕಠಿಣವಾಗಿ ಪ್ರತಿಕ್ರಿಯಿಸಿದರು. ಒಮ್ಮೆ ಅವರು ಮಸ್‌ಜಿದ್ ಮುಬಾರಕ್‌ನಲ್ಲಿ ಬಹಳ ಉಗ್ರವಾಗಿ ಭಾಷಣ ಮಾಡುತ್ತಾ ಹೇಳಿದರು:

"ನೀವು ನನಗೆ ಎಷ್ಟು ನೋವನ್ನುಂಟು ಮಾಡಿರುವಿರೆಂದರೆ ನೀವು ಈ ಮಸ್‌ಜಿದ್‌ಗೆ ಸೇರಿಸಿ ನಿರ್ಮಿಸಿದ ಭಾಗದಲ್ಲಿ ಕೂಡ ನಾನು ನಿಲ್ಲಲಿಲ್ಲ."

ಮಸ್‌ಜಿದ್ ಮುಬಾರಕ್‌ಗೆ ಕೆಲ ಭಾಗಗಳನ್ನು ಸೇರಿಸುತ್ತಾ ಹೋಗಲಾಗಿತ್ತು. ಹರ್ಖ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೊದಲನೆಯ ಭಾಗ ನಿರ್ಮಿಸಿದ್ದರು. ಆ ಭಾಗದಲ್ಲಿ ಹರ್ಖ್‌ರತ್ ಖಲೀಫತುಲ್ ಮಸೀಹ್ ಅವ್ವಲ್ ನಿಂತು ಮಾತನಾಡಿದ್ದರು. ಅನಂತರ ನಿರ್ಮಿಸಿದ ಭಾಗ ಜಮಾಅತಿನಿಂದ ಚಂದಾ ಸಂಗ್ರಹಿಸಿ ನಿರ್ಮಿಸಲಾಗಿತ್ತು.

ಹರ್ಖ್‌ರತ್ ಖಲೀಫತುಲ್ ಮಸೀಹ್ ಅವ್ವಲ್ ಹೀಗೆ ಹೇಳಿದರು:

"ನೀವು ನನಗೆ ಎಷ್ಟು ನೋವನ್ನುಂಟುಮಾಡಿರುವಿರೆಂದರೆ ನೀವು ಈ ಮಸ್‌ಜಿದ್‌ಗೆ ಸೇರಿಸಿ ನಿರ್ಮಿಸಿದ ಭಾಗದಲ್ಲಿ ಕೂಡ ನಾನು ನಿಲ್ಲಲಿಲ್ಲ. ನಾನು ಮಿರ್ಝಾ ಸಾಹೆಬರು ನಿರ್ಮಿಸಿದ ಮಸ್‌ಜಿದ್‌ನಲ್ಲಿ ನಿಂತಿರುವೆನು. ನನ್ನ ತೀರ್ಮಾನ ಹೀಗಿದೆ: ಅಹ್ಮದಿಯಾ ಸಮುದಾಯ ಮತ್ತು ಅಂಜುಮನ್ ಖಲೀಫರ ಅಧೀನದಲ್ಲಿದ್ದಾರೆ. ಅವರು ಖಲೀಫರನ್ನು ಅನುಸರಿಸುವ ಸೇವಕರಾಗಿದ್ದಾರೆ. ಅಂಜುಮನ್ ಸಲಹೆಯ ಸಮಿತಿಯಾಗಿದೆ. ಅದನ್ನು ನೆಲೆನಿಲ್ಲಿಸುವುದು ಖಲೀಫರಿಗೆ ಆವಶ್ಯಕವಾಗಿದೆ."

ಅವರು ಪುನಃ ಹೇಳಿದರು:

"ಖಲೀಫರ ಕೆಲಸ ಬೈಅತ್ ತೆಗೆದುಕೊಳ್ಳುವುದಾಗಿದೆ; ವಾಸ್ತವಿಕ ಅಧಿಕಾರಿ ಅಂಜುಮನ್ ಆಗಿದೆ ಎಂದು ಬರೆದವನು ಪಶ್ಚಾತ್ತಾಪದಿಂದ ಕ್ಷಮೆ ಕೇಳಬೇಕು. ಅಲ್ಲಾಹನು ನನಗೆ ತಿಳಿಸಿರುವನು: 'ಯಾರಾದರೂ ಈ ಜಮಾಅತನ್ನು ತ್ಯಜಿಸಿಹೋಗುವುದಾದರೆ ನಾನು ಅದಕ್ಕೆ ಪ್ರತಿಯಾಗಿ ಜನರ ಒಂದು ಗುಂಪನ್ನು ನೀಡುವೆನು...'

ಅವರು ಹೀಗೆ ಮುಂದುವರಿಸಿದರು:

"ಖಲೀಫರ ಕೆಲಸ ನಮಾಝಿಗೆ ನೇತೃತ್ವವಹಿಸುವುದು, ಜನಾಝ ನಮಾಝ್ ಮಾಡುವುದು, ನಿಕಾಹ್ ಖುತ್‌ಬ ನಿರ್ವಹಿಸುವುದು ಮತ್ತು ಬೈಅತ್ ತೆಗೆದುಕೊಳ್ಳುವುದು ಮಾತ್ರ ಎಂದು ಹೇಳಲಾಗುತ್ತಿದೆ. ಈ ಕೆಲಸಗಳನ್ನು ಒಬ್ಬ ಮೌಲವಿ ಸಹ ಮಾಡಬಲ್ಲನು. ಅದಕ್ಕಾಗಿ ಒಬ್ಬ ಖಲೀಫರ ಆವಶ್ಯಕತೆ ಇಲ್ಲ, ನಾನು ಇಂತಹ ಬೈಅತ್‌ಗೆ ತೀರಾ ಬೆಲೆಕೊಡುವುದಿಲ್ಲ. ಬೈಅತ್ ಎಂದರೆ ಪರಿಪೂರ್ಣ ಅನುಸರಣೆಮಾಡುವುದಾಗಿದೆ. ಖಲೀಫರ ಒಂದು ಆಜ್ಞೆಯನ್ನು ಕೂಡ ನಿರಾಕರಿಸಬಾರದು." (ಅಲ್‌ಫರ್ಖ್ಲ್ 11-4-1914)

ಈ ಭಾಷಣ ಕೇಳಿದ ನಂತರ ಅಲ್ಲಿ ನೆರದಿದ್ದ ಜಮಾಅತಿನ ನೂರಾರು ಜನರು ಪ್ರಭಾವಿತರಾದರು. ಖಿಲಾಫತ್‌ಗೆ ವಿರುದ್ಧರಾಗಿದ್ದ ಜನರು ಈ ಜನರನ್ನು ತಮ್ಮ ನಿಲುವಿಗೆ ಬದಲಾಯಿಸಲು ಪ್ರಯತ್ನಿಸುತ್ತಾ ಇದ್ದರು. ಅಲ್ಲಿ ಸೇರಿದ ಜನರು ಅತ್ಯಂತ ದುಃಖಿತರಾಗಿ ಅಳಲು ಪ್ರಾರಂಭಿಸಿದರು. ನೀರಿಲ್ಲದೆ ಮೀನು ಚಡಪಡಿಸುವ ಹಾಗೆ ಅವರು ಮಸ್‌ಜಿದ್ ಮುಬಾರಕ್‌ನಲ್ಲಿ ಚಡಪಡಿಸಿದರು.

ಇದು ಅಹ್ಮದಿಯಾ ಜಮಾಅತ್‌ನಲ್ಲಿ ಭಯದ ಸ್ಥಿತಿಯನ್ನು ನಿರ್ಭಯಾವಸ್ಥೆಗೆ ಬದಲಾಯಿಸಿದ ಪ್ರಥಮ ದೃಶ್ಯವಾಗಿತ್ತು. ಅದು

ಅಹ್ಮದಿಯಾ ಜಮಾಅತಿಗೆ ಸೇರಿದವರಿಗೆ ಪ್ರಕಟವಾಯಿತು. ಆಗ ಖಲೀಫತುಲ್ ಮಸೀಹ್ ಅವ್ವಲ್(ಅ) ಅವರ ವ್ಯಕ್ತಿತ್ವ ಬಹಳ ವೈಭವ ಪೂರ್ಣವಾಗಿ ಪ್ರಕಟವಾಯಿತು. ಯಾವುದೇ ಭಯವಿಲ್ಲದೆ ಖಲೀಫತುಲ್ ಮಸೀಹ್ ಅವ್ವಲ್ ಹೀಗೆ ಹೇಳಿದರು: ಯಾರಾದರೂ ಜಮಾಅತನ್ನು ಬಿಟ್ಟು ಹೋಗುವುದಾದರೆ ಹೋಗಲಿ. ಅಲ್ಲಾಹನು ಅದಕ್ಕೆ ಪ್ರತಿಯಾಗಿ ಜನರ ಒಂದು ಗುಂಪನ್ನು ನನಗೆ ನೀಡುವನು. ಒಬ್ಬ ಹೋದರೆ ಒಂದು ಗುಂಪು ಒಳಗೆ ಬರುವುದು. ಹಝ್ರತ್ ಖಲೀಫತುಲ್ ಮಸೀಹ್‌ರವರ ಪ್ರಕಟಣೆಯಿಂದ ಸಾತ್ವಿಕರು ಸುಧಾರಣೆಗೊಂಡರು. ಅವರ ವಿಶ್ವಾಸ ವರ್ಧಿಸಿತು. ವಿರೋಧಿಗಳ ಗುಂಪು ಸಹ ಸ್ವಲ್ಪಕಾಲ ಸುಮ್ಮನಾಗಿತ್ತು. ಜಮಾಅತ್ ಅಭಿವೃದ್ಧಿಯ ಮಜಲುಗಳನ್ನು ದಾಟುತ್ತಾ ಹೋಯಿತು.

'ಕುಲ್ಲುಮನ್ ಅಲೈಹಾ ಫಾನ್' (ಭೂಮಿಯಲ್ಲಿ ಇರುವ ಎಲ್ಲವೂ ನಾಶವಾಗಲಿದೆ) ಎಂಬ ಅಲ್ಲಾಹನ ವಚನಕ್ಕೆ ಅನುಸಾರವಾಗಿ 1914 ಮಾರ್ಚ್ ದಿನಾಂಕ 13ರಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರು ತನ್ನ ಮಹೋನ್ನತ ಸ್ನೇಹಿತನಾದ ಅಲ್ಲಾಹನ ಸನ್ನಿಧಿಗೆ ತೆರಳಿದರು. ಆಗ ಜಮಾಅತ್‌ನಲ್ಲಿ ಪುನಃ ಒಂದು ಭೂಕಂಪದ ಸ್ಥಿತಿ ಉಂಟಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಕಾರಣದಿಂದ ಮೌನವನ್ನವಲಂಬಿಸಿದ್ದ ಅಂಜುಮನಿನ ನಾಯಕರು ಪುನಃ ತಲೆಎತ್ತಿದರು. ಖಿಲಾಫತ್‌ಗೆ ಬದಲಾಗಿ ಅಂಜುಮನಿಗೆ ಎಲ್ಲಾ ಅಧಿಕಾರ ನೀಡುವ ಪ್ರಯತ್ನಮಾಡಿದರು. ಅಂಜುಮನ್ ಎಲ್ಲಾ ಕೆಲಸಗಳನ್ನು ಮಾಡುವ ಅಧಿಕಾರ ಹೊಂದುವಂತೆ ಅವರು ಯತ್ನಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ನಿಧನದ ದುಃಖದ ಕಾರಣದಿಂದ ನಿಷ್ಠಾವಂತರು ಅಲ್ಲಾಹನ ಶಕ್ತಿಸಾಮರ್ಥ್ಯದ ಪ್ರಕಟನೆಗಾಗಿ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಆದರೆ ತಮ್ಮನ್ನು ಬಹಳ ವಿದ್ಯಾವಂತರೆಂದು ಗ್ರಹಿಸುತ್ತಿದ್ದ ಅಂಜುಮನಿಗೆ ಸೇರಿದ ನಾಯಕರು ತಂತ್ರಗಳನ್ನು ರೂಪಿಸಲು ತೊಡಗಿದರು. ಅವರು ಹಝ್ರತ್ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ರಝಿಯಲ್ಲಾಹು ಅನ್‌ಹುರವರನ್ನು ತಮ್ಮ ನಿಲುವಿನ ಕಡೆಗೆ ಸೆಳೆಯಲು ಪ್ರಯತ್ನಿಸಿದರು. ಆದರೆ ಅವರು ಹೇಳಿದರು: "ಜಮಾಅತಿಗೆ ಒಬ್ಬ ಖಲೀಫರು ಆವಶ್ಯಕವಾಗಿಯೂ ಬೇಕು. ಅಂಜುಮನ್‌ಗೆ ಆ ಕೆಲಸ ವಹಿಸಿ ಕೊಡಲಾಗದು. ಹಝ್ರತ್ ಮಸೀಹ್ ಮೌಊದ್ ಹಾಗೆ ಹೇಳಿರುವರು." ಅವರು ಹೀಗೆಯೂ ಹೇಳಿದರು: "ನೀವು ಯಾರ ಕೈಯಲ್ಲಿ ಖಿಲಾಫತಿನ ಬೈಅತ್ ಮಾಡುತ್ತೀರೋ ನಾನು ಮತ್ತು ನನ್ನ ಕುಟುಂಬ ಸತ್ಯಸಂಧವಾದ ಮನಸ್ಸಿನಿಂದ ಆ ಖಲೀಫರ ಬೈಅತ್ ಮಾಡುವೆವು. ನೀವು ನನ್ನ ಬಗ್ಗೆ ಹೆದರಬೇಡಿರಿ. ಖಲೀಫ ಆಗಬೇಕೆಂಬ ಆಶೆ ನನಗಿಲ್ಲ."

ಆದರೆ ತಮ್ಮನ್ನು ಪೂರ್ಣ ಬುದ್ಧಿಶಾಲಿಗಳೆಂದು ಭಾವಿಸುತ್ತಾ ಇದ್ದ, ತಾವು ಬಹಳ ದೊಡ್ಡ ವಿದ್ವಾಂಸರೆಂದು ಗಣಿಸುತ್ತಿದ್ದವರ ನಿಲುವು ಬದಲಾಗಲಿಲ್ಲ. ಅವರು ಹಝ್ರತ್ ಮಸೀಹ್ ಮೌಊದ್‌ರವರ(ಅ) ಪ್ರಾತಿನಿಧ್ಯಕ್ಕೆ ಹಕ್ಕುದಾರರು ಅಂಜುಮನ್ ಆಗಿದೆ ಎಂದು ಹೇಳಿದರು. ಕೊನೆಯ ಅವರ ತಂತ್ರ ವಿಫಲವಾದಾಗ, ಜಮಾಅತಿನ ಬಹಳ ದೊಡ್ಡದಾದೊಂದು ಭಾಗದ ಜನರು ಮಸ್‌ಜಿದ್ ನೂರ್‌ನಲ್ಲಿ ಜಮಾಯಿಸಿದರು. 1914ರ ಮಾರ್ಚ್ ದಿನಾಂಕ 14ರಂದು ದ್ವಿತೀಯ ಖಲೀಫರ ಚುನಾವಣೆ ನಡೆಯಿತು. ಎರಡು ಸಾವಿರ ಜನರು ಅಲ್ಲಿ ಸೇರಿದ್ದರು. ಎಲ್ಲಾ ಕಡೆಗಳಿಂದ ಹಝ್ರತ್ ಮಿಯಾಂ ಸಾಹೆಬ್, ಹಝ್ರತ್ ಮಿಯಾಂ ಸಾಹೆಬ್, ಎಂದರೆ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹೆಬರ ಹೆಸರು ಕೇಳಿಸುತ್ತಾ ಇತ್ತು. ಜನರು ಒಬ್ಬರಿನ್ನೊಬ್ಬರನ್ನು ಹಾದುಕೊಂಡು ಹಝ್ರತ್ ಸಾಹಿಬ್‌ಝಾದ ಮಿರ್ಝಾ ಮಹ್‌ಮೂದ್ ಅಹ್ಮದ್ ಸಾಹೆಬ್‌ರವರ ಕೈಹಿಡಿದು ಬೈಅತ್ ಮಾಡಲು ಪ್ರಯತ್ನಿಸುತ್ತಾ ಇದ್ದರು. ಆ ಘಟನೆಯ ಬಗ್ಗೆ ಬರೆದವರು ಹೀಗೆ ಹೇಳುತ್ತಾರೆ: ದೇವದೂತರು (ಮಲಾಯಿತ) ಜನರ ಹೃದಯಗಳನ್ನು ಹಿಡಿದು ಹಿಡಿದು ಅಲ್ಲಾಹನು ನಿರ್ಧರಿಸಿದ ಈ ಚನಾವಣೆಯ ಕಡೆಗೆ ತರುತ್ತಿದ್ದರು. ಈ ದೃಶ್ಯವನ್ನು ನೋಡಿ ಅಂಜುಮನ್ ಮತ್ತು ಅದರ ಹಣದ ಮಾಲಿಕರಾಗಿದ್ದವರು ಅಲ್ಲಿಂದ ಅದೃಶ್ಯರಾದರು. ಅಲ್ಲಾಹನು ತನ್ನ ವಾಗ್ದಾನದ ಪ್ರಕಾರ ಖಿಲಾಫತ್ ಅಹ್ಮದಿಯಾ ಮೂಲಕ ಜಮಾಅತಿಗೆ ಸ್ಥಿರತೆಯನ್ನು ದಯಪಾಲಿಸಿದನು. ಅವರ ಭಯವನ್ನು ನಿವಾರಿಸಿ ನೆಮ್ಮದಿ ನೀಡಿದನು. ಹಝ್ರತ್ ಮಸೀಹ್ ಮೌಊದ್‌ರವರ(ಅ) ದೃಢನಿರ್ಧಾರವಂತನಾದ ಪುತ್ರರಾಗಿದ್ದ ಮುಸ್ಲಿಹ್ ಮೌಊದ್‌ರವರ(ಅ) 52 ವರ್ಷಗಳ ಖಿಲಾಫತ್ ಕಾಲಘಟ್ಟದಲ್ಲಿ ಜಮಾಅತ್ ಎಂತಹ ದೃಶ್ಯಗಳನ್ನು ಕಂಡಿತೆಂದರೆ ಅಲ್ಲಾಹನ ಸಹಾಯದ ಹೊರತು ಅದು ಸಾಧ್ಯವಿರಲಿಲ್ಲ.

ಜಮಾಅತಿನ ಖಜಾನೆಯನ್ನು ಬರಿದು ಮಾಡಿ ಹೋದ ಆ ಜನರು ಹೇಳಿದರು: ಇನ್ನು ಮುಂದೆ ಖಾದಿಯಾನಿನಲ್ಲಿ ಕ್ರೈಸ್ತರು ಆಡಳಿತೆ ನಡೆಸುವರು ಎಂದು. ಹೀಗೆ ಹೇಳಿದವರು ಈಗ ಜೀವಿಸಿದ್ದರೆ ಅವರು ನೋಡಬಹುದು. ಖಾದಿಯಾನಿನಲ್ಲಿ ಕ್ರೈಸ್ತರು ಅಧಿಕಾರ ನಡೆಸುವ ಮಾತು ಬಿಡಿ, ಹಝ್ರತ್ ಮಸೀಹ್ ಮೌಊದ್‌ರವರ(ಅ) ಆ ಸುಪುತ್ರರು ಸಾವಿರಾರು ಕ್ರೈಸ್ತ ಧರ್ಮಕ್ಕೆ ಸೇರಿದವರನ್ನು ಮುಹಮ್ಮದೀ ಮಸೀಹರ ಪತಾಕೆಯ ಕೆಳಗೆ ಜಮಾಯಿಸಿದರು.

ಅಹ್‌ರಾರಿಗಳು ಚಳುವಳಿ ಪ್ರಾರಂಭಿಸಿದಾಗ ಹೇಳಿದರು: ನಾವು ಖಾದಿಯಾನನ್ನು ಧ್ವಂಸ ಮಾಡುವೆವು ಎಂದು. ಆಗ ಹಝ್ರತ್ ಮುಸ್ಲಿಹ್ ಮೌಊದ್‌ರವರು(ಅ) ತಹ್‌ರೀಕ್ ಜದೀದ್ ಎಂಬ ಆಭಿಯಾನವನ್ನು ಪ್ರಾರಂಭಿಸಿ ಲೋಕದ ವಿವಿಧ ರಾಜ್ಯಗಳಲ್ಲಿ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸುವ ಕೆಲಸಕ್ಕೆ ಅಸ್ತಿಭಾರ ಹಾಕಿದರು. ಪವಿತ್ರ ಖುರ್‌ಆನಿನ ಅವರ ವ್ಯಾಖ್ಯಾನ ಮತ್ತು ಅವರ ಇತರ ಗ್ರಂಥಗಳು, ಅವರು ಬಾಹ್ಯ ಮತ್ತು ಆಂತರಿಕ ಜ್ಞಾನಸಂಪನ್ನರಾಗುವರೆಂಬ ಭವಿಷ್ಯವಾಣಿಯನ್ನು ಈಡೇರಿಸುವ ಸಾಕ್ಷ್ಯಗಳಾದವು. ಅವು ಲೋಕದಲ್ಲೆಲ್ಲಾ ಹರಡಿದವು.

ಭಾರತದ ವಿಭಜನೆಯ ಕಾಲದಲ್ಲಿ ವಲಸೆಹೋಗಬೇಕಾಗಿ ಬಂದಾಗ ಆ ಮಹಾನುಭಾವರು ಜಮಾಅತ್‌ಗೆ ಹೇಗೆ ಮಾರ್ಗದರ್ಶನ ನೀಡಿದರೆಂದರೆ ಬಹಳ ಕಡಿಮೆ ಹಾನಿಗೊಳಗಾಗಿ ಜಮಾಅತಿನ ಸದಸ್ಯರು ಪಾಕಿಸ್ತಾನಕ್ಕೆ ವಲಸೆ ಹೋಗಿ ಪುನರ್ವಸತಿ ಹೊಂದಿದರು.

ಬಹಳ ಕಷ್ಟಕರ ಸ್ಥಿತಿಯಲ್ಲಿಯೂ ತನ್ನ ಪುತ್ರರೊಂದಿಗೆ ಅಲ್ಲಾಹನ ಚಿಹ್ನೆಗಳನ್ನು ಸಂರಕ್ಷಿಸಲಿಕ್ಕಾಗಿ ಎಲ್ಲಾ ತ್ಯಾಗಗಳಿಗೆ ಸಿದ್ಧರಾದ ಜನರನ್ನು ಆ ಮಹಾನುಭಾವರು ಖಾದಿಯಾನಿನಲ್ಲಿ ಇರಿಸಿದರು.

ಪಾಕಿಸ್ತಾನದಲ್ಲಿ ಅಹ್ಮದಿಯಾ ಕೇಂದ್ರ ಸ್ಥಾಪನೆಯ ಆವಶ್ಯಕತೆಯನ್ನು ಮನಗಂಡು ಬರಡು ಭೂಮಿಯಲ್ಲಿ ತನ್ನ ಮಾರ್ಗದರ್ಶನ ಪ್ರಕಾರ ಹಸಿರುಭರಿತ ಒಂದು ನಗರವನ್ನು ನಿರ್ಮಿಸಿದರು. ಅದರ ದೃಶ್ಯಗಳನ್ನು ನಾವು ಇಂದು ಕಾಣುತ್ತಿದ್ದೇವೆ.

ಅವರು ಖಲೀಫರಾದಾಗ ಅವರ ಪ್ರಾಯ 25 ವರ್ಷಗಳು. ಅವರನ್ನು ಎದುರಿಸುತ್ತಾ ಇದ್ದವರು ಬಹಳ ವಿದ್ವಾಂಸರಾದ ನಾಯಕರಾಗಿದ್ದರು. ಖಲೀಫ ಅಲ್ಲಾಹನ ಸಹಾಯಪಡೆದರು. ಅಲ್ಲಾಹನ ದೃಷ್ಟಿ ಖಿಲಾಫತ್‌ಗಾಗಿ ಅವರನ್ನು ಆರಿಸಿತು. ಅವರು ಅಲ್ಲಾಹನ ವಾಗ್ದಾನಗಳ ಪ್ರಕಾರ

ಅಲ್ಲಾಹನ ದ್ವಿತೀಯ ಶಕ್ತಿಯನ್ನು ಪ್ರಕಟಿಸುವವರಾದರು. ಅವರು ಜಯಶಾಲಿ ಸೇನಾ ನಾಯಕರ ಹಾಗೆ ರಣರಂಗದಿಂದ ರಣರಂಗಕ್ಕೆ ಜಯಗಳಿಸುತ್ತಾ ಹೋಧರು. ತನ್ನನ್ನು ಖಲೀಫರೆಂದು ನಂಬಿದ ಹಝ್ರತ್ ಮುಹಮ್ಮದೀ ಮಸೀಹರ ಗುಲಾಮರ ಸ್ಥಿತಿಯನ್ನು ಅಲ್ಲಾಹನ ಸಹಾಯದಿಂದ ಭಯದ ನಂತರ ಶಾಂತಿ ಮತ್ತು ನೆಮ್ಮದಿಗೆ ಬದಲಾಯಿಸಿದರು.

ಅಲ್ಲಾಹನ ವಿಧಿನಿರ್ಣಯದ ಪ್ರಕಾರ ಅವರು 1965ರ ನವೆಂಬರ್‌ನಲ್ಲಿ ಇಹಲೋಕವನ್ನು ಬಿಟ್ಟುಹೋದಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯ ಮೂರನೆಯ ಪ್ರಕಟಣೆಯ ಪ್ರಕಾಶವನ್ನು ತೋರಿಸಿದನು. ದ್ವಿತೀಯ ಖಿಲಾಫತ್ ಕಾಲ 52 ವರ್ಷ ದೀರ್ಘ ಕಾಲದ್ದಾಗಿದ್ದು ಆ ಖಿಲಾಫತ್‌ನಿಂದ ಅನೇಕ ಪೀಳಿಗೆಗಳು ಅನುಗ್ರಹ ಪಡೆದವು. ಆ ಕಾಲದಲ್ಲಿ ಪ್ರತಿಯೊಬ್ಬ ಅಹ್ಮದಿಯೊಂದಿಗೆ ಅವರಿಗೆ ವೈಯಕ್ತಿಕ ಸಂಬಂಧ ಸ್ಥಾಪಿತವಾಗಿತ್ತು. ಅವರು ನಿಧನಹೊಂದಿದುದರಿಂದ ಉಂಟಾದ ದುಃಖವು ಅಸಹನೀಯವಾಗಿತ್ತು. ಆದರೆ ಅಲ್ಲಾಹನ ವಾಗ್ದಾನ ಪ್ರಕಾರ ಕೂಡಲೇ ಅಲ್ಲಾಹನು ಭಯದಿಂದ ನಿರ್ಭಯಾವಸ್ಥೆಗೆ ಬದಲಾಯಿಸಿದನು. ತೃತೀಯ ಖಿಲಾಫತ್ ಕಾಲದಲ್ಲಿ ಈ ದೃಶ್ಯವನ್ನು ನಾವು ನೋಡಿದೆವು. ಜಮಾಅತ್ ಹೆಜ್ಜೆ ಹೆಜ್ಜೆಗೂ ಅಭಿವೃದ್ಧಿಯತ್ತ ಸಾಗಿತು. ಆಫ್ರಿಕದಲ್ಲಿ ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಪ್ರಾರಂಭಿಸಲಾಯಿತು. ಪ್ರಚಾರಕೇಂದ್ರಗಳನ್ನು ಹೊಸದಾಗಿ ಸ್ಥಾಪಿಸಲಾಯಿತು. 1974ರಲ್ಲಿ ಪಾಕಿಸ್ತಾನದಲ್ಲಿ ಅಹ್ಮದಿಯರು ಕಠಿಣ ಪರಿಸ್ಥಿತಿಯನ್ನು ಅನುಭವಿಸಬೇಕಾಯಿತು. ಖಲೀಫರು ಪಾಕಿಸ್ತಾನದಲ್ಲಿ ಇದ್ದ ಕಾರಣ ಲೋಕದಾದ್ಯಂತ ಅಹ್ಮದಿಯರು ಆತಂಕಗೊಂಡಿದ್ದರು. ಆದರೆ ಖಿಲಾಫತೆಂಬ ಗುರಾಣಿಯ ಹಿಂದೆ ನಿಂತು ಆ ಭಯಾನಕ ಪರಿಸ್ಥಿತಿಗಳನ್ನು ದಾಟಿ ಜಮಾಅತ್ ಅಭಿವೃದ್ಧಿಯ ಪಥದಲ್ಲಿ ಸಾಗಿತು.

1982ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ (ತೃತೀಯ ಖಲೀಫರು) ನಮ್ಮನ್ನು ಅಗಲಿ ಹೋದರು. ಅಲ್ಲಾಹನು ತನ್ನ ಜಮಾಅತಿಗೆ ಪುನಃ ಸಹಾಯ ನೀಡಿದನು. ಖಿಲಾಫತೆ ರಾಬಿಅ ಎಂದರೆ ಚತುರ್ಥ ಖಿಲಾಫತ್ ಚುನಾವಣೆ ನಡೆಯಿತು. ಚತುರ್ಥ ಖಲೀಫರ ಕಾಲದಲ್ಲಿ ಅಭಿವೃದ್ಧಿಯ ಹೊಸ ಕಾಲಘಟ್ಟ ಪ್ರಾರಂಭವಾಯಿತು. ಶತ್ರು ಜಮಾಅತಿನ ಅಭಿವೃದ್ಧಿಯನ್ನು ಕಂಡು ಮತಿಗೆಟ್ಟನು. ಖಿಲಾಫತ್ ಮೇಲೆ ಕೈಹಾಕಲು ಪ್ರಯತ್ನಿಸಿದನು. ಆತನು ಜಮಾಅತನ್ನು ತುಳಿದು ಹಾಕಲು ಯೋಚಿಸಿದನು. ಆದರೆ ಅಲ್ಲಾಹನು ತನ್ನ ವಾಗ್ದಾನಗಳನ್ನು ಈಡೇರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರನ್ನು ಪ್ರೀತಿಸುವವರಿಗೆ ಸಹಾಯ ಮಾಡುತ್ತಾ ಶತ್ರುವಿನ ಎಲ್ಲಾ ತಂತ್ರಗಳನ್ನು ಮಣ್ಣುಪಾಲು ಮಾಡಿ ಪವಾಡ ಸದೃಶವಾಗಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರನ್ನು ಇಲ್ಲಿಗೆ (ಎಂದರೆ ಲಂಡನಿಗೆ) ತಲಪಿಸಿದನು. ಖಿಲಾಫತಿನ ಶಿರವನ್ನು ತುಳಿದುಹಾಕಲು ಬಯಸಿದ್ದ ಶತ್ರುವನ್ನು ಅಲ್ಲಾಹನು ಹೇಗೆ ನಾಶಮಾಡಿದನೆಂದರೆ ಆತನ ಶರೀರದ ಒಂದು ಚೂರು ಸಹ ಬಾಕಿಯಾಗಿ ಉಳಿಯಲಿಲ್ಲ.

ಧರ್ಮ ಪ್ರಚಾರದ ಹೊಸ ಕಾಲಘಟ್ಟ ಚತುರ್ಥ ಖಲೀಫರು ಇಲ್ಲಿಗೆ ಬಂದ ನಂತರ ಪ್ರಾರಂಭವಾಯಿತು. M.T.A. ಜಾರಿಗೊಂಡಿತು. ಹಝ್ರತ್ ಮಸೀಹ್ ಮೌಊದ್‌ರವರ(ಅ) ಸಂದೇಶ ಹೊಸ ವೈಭವದೊಂದಿಗೆ ಭೂಮಿಯ ಎಲ್ಲೆಗಳ ತನಕ ತಲಪಿತು. ಹಝ್ರತ್ ಮಸೀಹ್ ಮೌಊದ್‌ರವರಿಗೆ(ಅ) ಅಲ್ಲಾಹನು ಮಾಡಿದ ವಾಗ್ದಾನಗಳು ವೈಭವಪೂರಿತವಾಗಿ ಈಡೇರಿದುವು. ಶತ್ರು ಖಿಲಾಫತ್‌ಗೆ ಕೈಹಾಕಿ ಅದನ್ನು ಸ್ಥಗಿತಗೊಂಡ ಅಂಗದ ಹಾಗೆ ಮಾಡಲು ಪ್ರಯತ್ನಿಸುತ್ತಾ ಇದ್ದನು. ಆದರೆ ಅಲ್ಲಾಹನ ಯೋಜನೆ ಹಝ್ರತ್ ಮಸೀಹ್ ಮೌಊದ್‌ರವರ(ಅ) ಸಂದೇಶವನ್ನು ಪ್ರತಿಯೊಂದು ಮನೆಗೆ ಯಾವುದೇ ಭೌಗೋಳಿಕ ತಡೆಯಿಲ್ಲದೆ ತಲಪಿಸುವುದಾಗಿತ್ತು. ನಮ್ಮ ಜಮಾಅತಿನ ಅಭಿವೃದ್ಧಿಯ ಕುರಿತು ಪ್ರಸ್ತಾಪಿಸಲು ತೊಡಗುವುದಾದರೆ ಅನೇಕ ಗಂಟೆಗಳ ಕಾಲ ಮಾತನಾಡಿದರೂ ಅದನ್ನು ಪೂರ್ಣಗೊಳಿಸಲು ಸಾಧ್ಯವಾಗಲಾರದು. ಜಲ್ಸದ ಭಾಷಣಗಳಲ್ಲಿ ಅದರ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಮುಂದೆಯೂ ಆಬಗ್ಗೆ ಇನ್‌ಶಾ ಅಲ್ಲಾಹ್ ಪ್ರಸ್ತಾಪಿಸಲಾಗುವುದು.

ಚತುರ್ಥ ಖಿಲಾಫತಿನ ಸುವರ್ಣ ಕಾಲಘಟ್ಟ 2003 ಎಪ್ರಿಲ್ ತನಕ ಮುಂದುವರಿಯಿತು. ಚತುರ್ಥ ಖಲೀಫರು ನಿಧನಹೊಂದಿದಾಗ ಭಯಭೀತಿಯಿಂದ ಜಮಾಅತ್ ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿತು. ಸತ್ಯವಿಶ್ವಾಸಿಗೆ ನೀಡಲ್ಪಟ್ಟ ಆಜ್ಞೆ ಇದೇ ಆಗಿದೆ. ಯಾವುದಾದರೂ ಕಷ್ಟ ಬಂದಾಗ ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಪ್ರಾರ್ಥಿಸಬೇಕು. ಅಲ್ಲಾಹನ ವಾಗ್ದಾನವು ಈಡೇರುವ ಕಾಲಘಟ್ಟಗಳು ಶಾಶ್ವತವಾಗಿರುವುವು. ಅಲ್ಲಾಹನು ಆ ಬಗ್ಗೆ ನಮಗೆ ಸಾಂತ್ವನ ನೀಡಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನಹೊಂದಿದಾಗ ಜಮಾಅತಿನಲ್ಲಿ ಉಂಟಾದ ಭಯದ ಸ್ಥಿತಿಯನ್ನು ಅಲ್ಲಾಹನು ಬದಲಾಯಿಸಿ ನಿರ್ಭಯಾವಸ್ಥೆಗೆ ಜಮಾಅತನ್ನು ತಲಪಿಸಿದ್ದನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವರು: "ಅಲ್ಲಾಹನ ವಾಗ್ದಾನ ನನ್ನ ಬಗ್ಗೆ ಅಲ್ಲ; ಅದು ನಿಮ್ಮ ಬಗ್ಗೆ, ಎಂದರೆ ಜಮಾಅತ್ ಬಗ್ಗೆಯಾಗಿದೆ." ಅವರು ಹೇಳಿದರು: "ಶತ್ರುಗಳ ಎರಡು ಸುಳ್ಳು ಸಂತೋಷಗಳನ್ನು ಹಾಳುಗೆಡವಲು ಎರಡು ಶಕ್ತಿಗಳನ್ನು ಅಲ್ಲಾಹನು ತೋರಿಸುತ್ತಾನೆ." (ಅಲ್‌ವಸಿಯ್ಯತ್)

ಚತುರ್ಥ ಖಲೀಫರು ನಿಧನಹೊಂದಿದ ನಂತರ ಅಲ್ಲಾಹನು ಪುನಃ ಜಮಾಅತನ್ನು ಶಾಂತಿ ಮತ್ತು ನೆಮ್ಮದಿಗೆ ತಂದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು: "ದ್ವಿತೀಯ ಶಕ್ತಿ (ಖುದ್‌ರತೆ ಸಾನಿಯ) ಶಾಶ್ವತವಾಗಿರುವುದಾಗಿದೆ." ಅದರ ದೃಶ್ಯಗಳನ್ನು M.T.A. ಮೂಲಕ ಲೋಕದ ಎಲ್ಲಾ ಜನರು ಪುನಃ ಒಮ್ಮೆ ನೋಡಿದರು.

ಇಸ್ಲಾಮಿನ ಆರಂಭ ಕಾಲದಲ್ಲಿ ಖಿಲಾಫತೆ ರಾಶಿದ ಕೆಲವು ವರ್ಷಗಳಿಗೆ ಸೀಮಿತವಾಗಿತ್ತು. ನಾಲ್ಕು ಖಿಲಾಫತ್‌ಗಳು ಮಾತ್ರ ಜಾರಿಗೊಂಡಿದ್ದವು. ಇದು ನಾನು ಈ ಮೊದಲು ಉಲ್ಲೇಖಿಸಿದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಹದೀಸು ಪ್ರಕಾರವೇ ಸಂಭವಿಸಿತ್ತು. ಆದರೆ ಹಝ್ರತ್ ಮಸೀಹ್ ಮೌಊದ್‌ರವರ(ಅ) ಆಗಮನದ ನಂತರ ಇಸ್ಲಾಮಿನ ಚರಿತ್ರೆ ಪ್ರತಿಯೊಂದು ಕ್ಷೇತ್ರದಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಲಿಕ್ಕಿದ್ದಿತು.

ಖುದ್‌ರತೆ ಸಾನಿಯದ (ದ್ವಿತೀಯ ಶಕ್ತಿಯ) ಐದನೆಯ ಕಾಲಘಟ್ಟ ಸಹ ಅಲ್ಲಾಹನ ವಾಗ್ದಾನಗಳ ಪ್ರಕಾರ ಒಂದು ಹೊಸ ಅಧ್ಯಾಯವಾಗಿದೆ; ಶತ್ರುವಿಗೆ ಒಂದು ಅಪಮಾನವಾಗಿದೆ; ಶತ್ರುವಿನ ಸಂತೋಷವನ್ನು ಮಣ್ಣುಪಾಲು ಮಾಡುವ ಒಂದು ಮಾರ್ಗವಾಗಿದೆ. ಇಂದು ಶತ್ರುವಿನ

ಕಣ್ಣುಗಳು ಹೆಚ್ಚು ಅಸೂಯೆಯಿಂದ ಜಮಾಅತಿನ ಅಭಿವೃದ್ಧಿಯನ್ನು ನೋಡುತ್ತಿವೆ. ಎಲ್ಲಾ ರೀತಿಯ ವಿರೋಧಗಳನ್ನು ಎದುರಿಸಿ ಅಹ್ಮದಿಯಾ ಜಮಾಅತ್ ಖಿಲಾಫತಿನ ನೆರಳಿನಲ್ಲಿ ಅಭಿವೃದ್ಧಿಹೊಂದುತ್ತಾ ಇದೆ ಎಂಬುದನ್ನು ಶತ್ರುಗಳು ಖೇದಭರಿತವಾಗಿ ನೋಡುತ್ತಾ ಇದ್ದಾರೆ.

ನಾನು ಸತ್ಯವಿಶ್ವಾಸಿಗಳಲ್ಲಿ ಖಿಲಾಫತ್ ಸ್ಥಾಪಿಸುವೆನು ಎಂದು ಅಲ್ಲಾಹನು ಮಾಡಿದ ವಾಗ್ದಾನದ ವಾರೀಸುದಾರರಾಗಿ ಜಮಾಅತ್ ಮುಂದೆ ಸಾಗುತ್ತಿದೆ. ಅಲ್ಲಾಹನು ಜಮಾಅತಿಗೆ ಶಾಂತಿಯನ್ನೂ ನೆಮ್ಮದಿಯನ್ನೂ ನೀಡುತ್ತಾ ಹೋಗುತ್ತಿದ್ದಾನೆ. ಪ್ರತಿದಿನ ಅದರ ಬೇರುಗಳು ಬಲಿಷ್ಠವಾಗುತ್ತಾ ಹೋಗುತ್ತಿವೆ. ಅಲ್ಲಾಹನು ಪ್ರತಿಯೊಂದು ಭಯವನ್ನು ಖಿಲಾಫತ್ ಎಂಬ ಗುರಾಣಿಯ ಮೂಲಕ ನಿವಾರಿಸುತ್ತಾ ಇದ್ದಾನೆ. ಶತ್ರುಗಳು ಎಷ್ಟು ವಿರೋಧಿಸಿದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರವರ ಸಂದೇಶವನ್ನು ಲೋಕದ ಮೂಲೆ ಮೂಲೆಗಳಿಗೆ ಖಿಲಾಫತ್ ಎಂಬ ಅಲ್ಲಾಹನ ಪಾಶವನ್ನು ಹಿಡಿದುಕೊಂಡು ಅಹ್ಮದಿಯರು ತಲಪಿಸುತ್ತಾರೆ ಮತ್ತು ದಾರಿತಪ್ಪಿದ ಜನರನ್ನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ(ಸ) ಪತಾಕೆಯ ಕೆಳಗೆ ತರುತ್ತಿದ್ದಾರೆ. ಅವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವಂತೆ ಮಾಡುತ್ತಿದ್ದಾರೆ.

ಖಿಲಾಫತ್ ಇಲ್ಲದೆ ಮುಸ್ಲಿಮ್ ಸಮುದಾಯದಲ್ಲಿ ಐಕ್ಯತೆ ಉಂಟಾಗದೆಂದು ನಮ್ಮ ಶತ್ರುಗಳು ಸಹ ಅಂಗೀಕರಿಸುತ್ತಾರೆ. ಇಸ್ಲಾಮಿನ ಅಭಿವೃದ್ಧಿ ಮತ್ತು ಐಕ್ಯತೆ ಖಿಲಾಫತ್ ರಹಿತವಾಗಿ ಸಾಧ್ಯವಾಗದು ಎಂದು ಅವರು ಹೇಳುತ್ತಾರೆ. ಆದರೆ ಅಲ್ಲಾಹನು ಖಾತಮುಲ್‌ಖುಲಫಾ ಆಗಿ ಯಾರನ್ನು ಕಳುಹಿಸಿದನೋ ಅವರ ನಂತರ ಯಾವ ಖಿಲಾಫತನ್ನು ಅಲ್ಲಾಹನು ಜಾರಿಗೊಳಿಸಿದನೋ ಆ ಖಿಲಾಫತನ್ನು ಅವರ ಕಣ್ಣುಗಳ ಮೇಲೆ ಪರದೆ ಬಿದ್ದಿರುವ ಕಾರಣದಿಂದ ಅವರು ನಿರಾಕರಿಸುತ್ತಾರೆ.

ಖಿಲಾಫತ್ ಬಗ್ಗೆ ಅವರಿಗಿರುವ ಶೋಕ ವಿಲಾಪದ ಬಗ್ಗೆ ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ:

ಜಾಮಿಅ ಅಶ್ರಫಿಯ ಕರಾಚಿ ಇದರ ಆಡಳಿತಾಧಿಕಾರಿ ಮೌಲಾನ ಅಬ್ದುರ್ರಹ್ಮಾನ್ ಹೀಗೆ ಹೇಳುತ್ತಾರೆ: "ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತಿನ ಮಾರ್ಗದಲ್ಲಿ ಸ್ಥಾಪಿತವಾದ ಖಿಲಾಫತ್) ಇದಕ್ಕಿಂತ ಉತ್ತಮವಾದ ವ್ಯವಸ್ಥೆ ಬೇರೆ ಇಲ್ಲ. ಅಲ್ಲಾಹನು ಸತ್ಯವಿಶ್ವಾಸಿಗಳ ಜೀವವನ್ನೂ ಸಂಪತ್ತನ್ನೂ ಸ್ವರ್ಗವನ್ನು ಪ್ರತಿಫಲವಾಗಿ ನೀಡುವ ವಾಗ್ದಾನದ ಪ್ರಕಾರ ಖರೀದಿ ಮಾಡಿದ್ದಾನೆ. ಆದರೆ ಮುಸ್ಲಿಮರಲ್ಲಿ ಪರಸ್ಪರ ಜಗಳ ಮಿತಿಮೀರಿದೆ. ಖಿಲಾಫತ್ ಸಂಬಂಧವಾಗಿ ಹೇಳುವುದಾದರೆ ಖಲೀಫ ಎಂದು ಯಾರನ್ನು ಅಂಗೀಕರಿಸಬಹುದು ಎಂಬ ಪ್ರಶ್ನೆ ಉದಿಸುತ್ತದೆ. ಮಕ್ಕದಲ್ಲಿ ಖಲೀಫರನ್ನು ಚುನಾಯಿಸಿದರೆ ಎಲ್ಲರಿಗಿಂತಲೂ ಮೊದಲು ಬರೇಲ್ವಿಗಳು ವಿರೋಧಿಸುವರು. ನಾನು ಖಿಲಾಫತ್ ಬಗ್ಗೆ ನನ್ನ ಸಂಗಡಿಗರೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ಆಗ, ಪಾಕಿಸ್ತಾನದಲ್ಲಿ ಖಿಲಾಫತ್ ವ್ಯವಸ್ಥೆಯ ಸ್ಥಾಪನೆ ಅಸಾಧ್ಯವೆಂದು ತಿಳಿಯಿತು." ("ಝುರಬೆ ಹಖ್" ಮಾಸಪತ್ರಿಕೆ, ಕರಾಚಿ, ಎಪ್ರಿಲ್ 2004 – ಪುಟ 4)

ಒಬ್ಬ ವಿದ್ವಾಂಸ ಹುಮಾಯೂನ್ ಗೌಹರ್ ಹೀಗೆ ಬರೆಯುತ್ತಾರೆ:

"ಇಂದು ನಾವು ಅಂಧವಿಶ್ವಾಸ, ಅನಾಚಾರ ಮತ್ತು ಅಜ್ಞಾನದ ಪಾತಾಳದಲ್ಲಿ ಬಿದ್ದಿದ್ದೇವೆ. ಸಾಮಾಜಿಕ ಕೆಡುಕುಗಳು ನಮ್ಮನ್ನು ಸುತ್ತುವರಿದಿವೆ. ಅನ್ಯಾಯ ಮೇಲ್ಗೈ ಸಾಧಿಸಿದೆ. ಪರಿಸರ ಮಾಲಿನ್ಯ ದಿನಗಳೆದಂತೆ ಹೆಚ್ಚುತ್ತಾ ಹೋಗುತ್ತಿದೆ. ಆದುದರಿಂದ ನಮಗೆ ತಾಜಾ ಗಾಳಿಯ ಬೀಸುವಿಕೆ ಆವಶ್ಯಕವಾಗಿದೆ. ಅದು ನಮ್ಮ ಸಮುದಾಯದವನ್ನು ಪರಿಷ್ಕರಿಸಬೇಕು. ಅದಕ್ಕಾಗಿ ಬಹಳ ಹೆಚ್ಚು ಧೈರ್ಯ ಮತ್ತು ಭಾವಾವೇಶ ಆವಶ್ಯಕವಾಗಿದೆ. ಅದಕ್ಕಾಗಿ ನಿರ್ಧಾರದ ದೃಢತೆ ಮತ್ತು ವಿಶ್ವಾಸ ಬಲಿಷ್ಠಗೊಳ್ಳುವುದು ಆವಶ್ಯಕವಾಗಿದೆ. ಇದು ಮುಸ್ಲಿಮರ ಖಿಲಾಫತಿನ ಹಾಗೆ ಇರುವ ವ್ಯವಸ್ಥೆಯಿಂದ ಸಾಧ್ಯವಾಗುವುದು." (ನವಾಯೆ ವಖ್ತ್ 19-12-2005)

ಇದು ಅವರ ಶೋಕ ವಿಲಾಪಗಳಾಗಿವೆ. ಅವರು ಖಿಲಾಫತಿನ ಆವಶ್ಯಕತೆ ಮನವರಿಕೆ ಮಾಡಿಕೊಳ್ಳುತ್ತಾರೆ. ಆದರೆ ಅವರು ಅವನ್ನು ಸ್ಥಾಪಿಸಲು ಸಮರ್ಥರಾಗಲಾರರು.

ಖಿಲಾಫತೆ ಖಾಮಿಸ (ಐದನೇ ಖಿಲಾಫತ್) ಇದರ ಚುನಾವಣೆ ಮತ್ತು ಬೈಅತಿನ ದೃಶ್ಯಗಳನ್ನು M.T.A. ಲೋಕದಲ್ಲೆಲ್ಲಾ ತೋರಿಸಿತು. ಅಹ್ಮದಿಯಾ ಜಮಾಅತ್ ಒಂದು ಕೈಯಲ್ಲಿ ಒಗ್ಗೂಡಿದೆ ಎಂಬುದನ್ನು ಈ ಜನರು ನೋಡಿದರು. ಅವರಲ್ಲಿ ಕೆಲವರು ಹೀಗೆ ಹೇಳಿದರು: "ಅಲ್ಲಾಹನ ಕ್ರಿಯಾರೂಪದ ಸಾಕ್ಷ್ಯ ನಿಮ್ಮೊಂದಿಗೆ ಇದೆ." ಆದರೆ ಈ ಸಂಗತಿ ಅವರನ್ನು ಸುಧಾರಣೆ ಮಾಡುವುದಕ್ಕೆ ಬದಲಾಗಿ ಅವರ ಅಸೂಯೆಯನ್ನು ವರ್ಧಿಸಿತು. ಈಗ ಪಾಕಿಸ್ತಾನದಲ್ಲಿ ಮುಲ್ಲಾಗಳು ಅಹ್ಮದಿಯಾ ಜಮಾಅತ್ ವಿರುದ್ಧ ಸಭೆಗಳನ್ನು ಜರುಗಿಸುತ್ತಾ ಇರುವುದು ಜಮಾಅತಿನ ಐಕ್ಯತೆ ಮತ್ತು ಅಭಿವೃದ್ಧಿಯನ್ನು ಅವರು ಸಹಿಸಲಾರರು ಎಂಬುದಕ್ಕಾಗಿದೆ. ಈ ಶೋಕ ವಿಲಾಪಗಳು ಅವರಿಗೆ ವಿಧಿಸಲ್ಪಟ್ಟಿವೆ. ಅಲ್ಲಾಹನ ಸಹಾಯದ ಗಾಳಿ ಬಹಳ ಬಿರುಸಾಗಿ ಅಹ್ಮದಿಯಾ ಜಮಾಅತಿನ ಪರವಾಗಿ ಬೀಸುತ್ತಾ ಇದೆ. ಇನ್‌ಶಾ ಅಲ್ಲಾಹ್ – ಶತ್ರುಗಳ ಎಲ್ಲಾ ಆಶೆಗಳು ಮತ್ತು ಪ್ರಯತ್ನಗಳು ಗಾಳಿಯಲ್ಲಿ ತೇಲಿಹೋಗುವುವು.

ಅಹ್ಮದಿಯತಿನ ಶತ್ರುಗಳೇ, ನಾನು ನಿಮಗೆ ಸ್ಪಷ್ಟವಾಗಿ ಹೀಗೆ ಹೇಳಲು ಬಯಸುತ್ತೇನೆ: ನೀವು ಖಿಲಾಫತ್ ಸ್ಥಾಪನೆ ಕುರಿತು ಒಳ್ಳೆಯ ಸಂಕಲ್ಪ ಹೊಂದಿದ್ದರೆ ಬನ್ನಿರಿ. ಮುಹಮ್ಮದೀ ಮಸೀಹರ ದಾಸ್ಯವನ್ನು ಅಂಗೀಕರಿಸಿ ಅವರ ಖಿಲಾಫತಿನ ಜಾರಿಗೊಂಡಿರುವ ಮತ್ತು ಶಾಶ್ವತವಾದ ವ್ಯವಸ್ಥೆಯ ಭಾಗವಾಗಿರಿ. ಹಾಗೆ ಮಾಡದಿದ್ದರೆ ನೀವು ಪ್ರಯತ್ನಮಾಡುತ್ತಾ ತೀರಿಹೋಗುವಿರಿ. ನೀವು ಖಿಲಾಫತನ್ನು ಸ್ಥಾಪಿಸಲು ಶಕ್ತರಾಗಲಾರಿರಿ. ನಿಮ್ಮ ಸಂತಾನ ಸಹ ನಿಮ್ಮ ಹಾಗೆಯೇ ವರ್ತಿಸುವುದಾದರೆ ಅವರು ಸಹ ಯಾವುದೇ ಖಿಲಾಫತನ್ನು ಸ್ಥಾಪಿಸಲು ಶಕ್ತರಾಗಲಾರರು. ಖಿಯಾಮತ್ ದಿನದ ತನಕ ನಿಮ್ಮ ಮಕ್ಕಳು, ನಿಮ್ಮ ಮಕ್ಕಳ ಮಕ್ಕಳು ಮತ್ತು ಮುಂದಿನ ಪೀಳಿಗೆಗಳು ತಮ್ಮ ಪ್ರಯತ್ನ ಮುಂದುವರಿಸಿದರೂ ಅವರು ಜಯಶಾಲಿಗಳಾಗಲಾರರು. ನೀವು ಅಲ್ಲಾಹನಿಗೆ ಭಯಪಡಿರಿ. ಅವನನ್ನು ವಿರೋಧಿಸಬೇಡಿರಿ. ನೀವು ನಿಮ್ಮ ಮತ್ತು ನಿಮ್ಮ ಸಂತಾನ ಪರಂಪರೆಗಳ ಸಂರಕ್ಷಣೆಗೆ ಸಾಮಗ್ರಿಗಳನ್ನು ಸಂಗ್ರಹಿಸುವ ಪ್ರಯತ್ನ ಮಾಡಿರಿ.

ನಾನು ಅಹ್ಮದಿಯೇತರರ ಕುರಿತು ನಿಮಗೆ ವಿವರಿಸಿದ ವಿಷಯಗಳು ಅವರ ಶೋಕ ವಿಲಾಪದ ಕಾರಣ ನಾವು ಸಂತೋಷಪಡಲು ಕಾರಣವಾಗಬಾರದು. ಅಥವಾ ಕೆಲವು ಹಿತೈಷಿಗಳ ಹೃದಯದಲ್ಲಿ ಅವರ ಬಗ್ಗೆ ಹಿತಕರವಾದ ಭಾವನೆ ಉಂಟಾಗದಿರಲಿ ಎಂಬುದಕ್ಕಾಗಿಯೂ ಅಲ್ಲ.

ಅಸೂಯೆಯ ಯಾವ ಬೆಂಕಿಯಲ್ಲಿ ಶತ್ರುವು ಜ್ವಲಿಸುತ್ತಾ ಇದ್ದಾನೋ ಅವನು ಹಾನಿ ಉಂಟುಮಾಡಲು ಪ್ರಯತ್ನ ಸಹ ಮಾಡುತ್ತಾನೆ. ಬಲಹೀನರಾದ ಅಹ್ಮದಿಯರನ್ನು ಕಂಡರೆ ಅವರ ಮೇಲೆ ಆಕ್ರಮಣ ಸಹ ಮಾಡುತ್ತಾನೆ. ಆದುದರಿಂದ ಖಿಲಾಫತ್‌ನೊಂದಿಗೆ ಅಂಟಿಕೊಂಡಿರುವ ಅಹ್ಮದಿಯರ ಕರ್ತವ್ಯವೇನೆಂದರೆ, ಖಿಲಾಫತ್ ಬಲಯುತವಾಗಿ ಸ್ಥಾಪಿತವಾಗಿರಲು ದುಆ ಮಾಡಬೇಕಲ್ಲದೆ ಅಹ್ಮದಿಯರು ಪರಸ್ಪರರಿಗಾಗಿ ಸಹ ದುಆ ಮಾಡಬೇಕು. ಅಲ್ಲಾಹನು ಅಹ್ಮದಿಯರನ್ನೆಲ್ಲಾ ಅಸೂಯೆಗಾರರ ಮತ್ತು ದುಷ್ಕರ್ಮಿಗಳ ಅಸೂಯೆ ಮತ್ತು ಕೆಡುಕಿನಿಂದ ರಕ್ಷಿಸುವವನಾಗಲಿ.

ಪಂಚಮ ಖಿಲಾಫತಿನ ಜೊತೆಗೆ ನಾವು ಖಿಲಾಫತಿನ ಹೊಸ ಶತಮಾನವನ್ನು ಪ್ರವೇಶಿಸುತ್ತಾ ಇದ್ದೇವೆ. ಇದು ಇನ್‌ಶಾಅಲ್ಲಾಹ್ ಅಹ್ಮದಿಯತಿನ ಅಭಿವೃದ್ಧಿ ಮತ್ತು ಯಶಸ್ಸನ್ನು ಗಳಿಸುವ ಕಾಲಘಟ್ಟವಾಗಿದೆ. ನಾನು ನಿಮಗೆ ದೃಢವಾಗಿ ಹೇಳಬಯಸುತ್ತೇನೆ. ಅಲ್ಲಾಹನ ಸಹಾಯದ ಎಂತಹ ಬಾಗಿಲುಗಳು ತೆರೆದಿವೆ ಮತ್ತು ತೆರೆಯುತ್ತಾ ಇವೆ ಎಂದರೆ ಪ್ರತಿಯೊಂದು ಹೊಸ ದಿನ ಅಹ್ಮದಿಯತಿನ ಜಯದ ದಿನವನ್ನು ಸಮೀಪಗೊಳಿಸುತ್ತದೆ. ನಾನು ನನ್ನ ಬಗ್ಗೆ ಪರಿಶೀಲಿಸುವಾಗ ನಾನು ನಾಚಿಕೆಹೊಂದುತ್ತೇನೆ. ನಾನು ಒಬ್ಬ ಬಲಹೀನ, ಅಯೋಗ್ಯ, ಕುಂದು ಕೊರತೆಗಳಿಂದ ತುಂಬಿದ ವ್ಯಕ್ತಿಯಾಗಿದ್ದೇನೆ. ನನ್ನನ್ನು ಅಲ್ಲಾಹನು ಈ ಪದವಿಗೇರಿಸಿದುದರ ರಹಸ್ಯವೇನೆಂದು ನನಗೆ ತಿಳಿದಿಲ್ಲ. ಆದರೆ ನಾನು ಪ್ರಜ್ಞಾಪೂರ್ವಕವಾಗಿ ಹೇಳುತ್ತೇನೆ: ಅಲ್ಲಾಹನು ತನ್ನ ಅಪರಿಮಿತ ಸಹಾಯದ ಮೂಲಕ ಅನುಗ್ರಹಿಸಿ ಅಹ್ಮದಿಯಾ ಜಮಾಅತನ್ನು ಅಭಿವೃದ್ಧಿಯ ರಾಜಮಾರ್ಗದಲ್ಲಿ ಮುಂದೆ ಸಾಗಿಸುತ್ತಾ ಹೋಗುವನು – ಇನ್‌ಶಾ ಅಲ್ಲಾಹ್. ಈ ಕಾಲಘಟ್ಟದಲ್ಲಿ ಅಹ್ಮದಿಯತಿನ ಅಭಿವೃದ್ಧಿಯನ್ನು ತಡೆಯಲು ಶಕ್ತರಾಗುವವರು ಯಾರೂ ಇಲ್ಲ. ಇನ್ನು ಮುಂದೆ ಸಹ ಅಹ್ಮದಿಯತಿನ ಅಭಿವೃದ್ಧಿ ಎಂದೂ ನಿಂತುಹೋಗಲಾರದು. ಖಲೀಫರ ಪರಂಪರೆ ಮುಂದುವರಿಯುತ್ತಾ ಹೋಗುವುದು. ಅಹ್ಮದಿಯತಿನ ಹೆಜ್ಜೆ ಮುಂದೆ ಮುಂದೆ ಸಾಗುತ್ತಾ ಹೋಗುವುದು – ಇನ್‌ಶಾ ಅಲ್ಲಾಹ್.

ಕಳೆದ ಐದು ವರ್ಷಗಳಲ್ಲಿ ಅಲ್ಲಾಹನ ಅನುಗ್ರಹಗಳ ಮಳೆಯ ಬಗ್ಗೆ ಜಲ್ಸದ ಭಾಷಣಗಳಲ್ಲಿ ಪ್ರಸ್ತಾಪಿಸುತ್ತಾ ಬರಲಾಗಿದೆ. ಇನ್ನು ಮುಂದೆ ಸಹ ಇದು ಮುಂದುವರಿಯುವುದು – ಇನ್‌ಶಾ ಅಲ್ಲಾಹ್. ಖಿಲಾಫತ್‌ನೊಂದಿಗೆ ಅಭಿವೃದ್ಧಿಯನ್ನು ಜೋಡಿಸಲಾಗಿದೆ. ಇದರ ಬಗ್ಗೆ ಅಲ್‌ವಸಿಯ್ಯತ್‌ನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಸಹ ಪ್ರಸ್ತಾಪಿಸಿದ್ದಾರೆ. ಇದು ಮುಗಿದು ಹೋಗಲಾರದ ಒಂದು ಪರಂಪರೆಯಾಗಿದೆ. ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿದ ಪ್ರತಿಯೊಬ್ಬ ವ್ಯಕ್ತಿ ತನ್ನ ವಿಶ್ವಾಸ ಮತ್ತು ಸತ್ಕಾರ್ಯಗಳಲ್ಲಿ ಅಭಿವೃದ್ಧಿಗಳಿಸುವನು. ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸುವ ಪ್ರತಿಯೊಬ್ಬನಿಗೆ ಅಲ್ಲಾಹನು ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿದ ಕಾರಣದಿಂದ ಲಭಿಸುವ ಅನುಗ್ರಹಗಳ ದೃಶ್ಯಗಳನ್ನು ತೋರಿಸುವನು. ಅಲ್ಲಾಹನು ಅಹ್ಮದಿಯಾ ಖಿಲಾಫತ್‌ಗೆ ಎಂತಹ ಜನರನ್ನು ದಯಪಾಲಿಸುವನು ಎಂದರೆ ಅವರು ನಿಷ್ಠೆಯಲ್ಲಿ ವೃದ್ಧಿಹೊಂದುತ್ತಾ ಹೋಗುವರು. ಅವರು ಖಿಲಾಫತ್ ಸ್ಥಾಪನೆ ಮತ್ತು ಸಂರಕ್ಷಣೆಗೆ ತಮ್ಮ ಜೀವವನ್ನು ಅರ್ಪಿಸುವವರಾಗುವರು. ಅಂತಹ ಜನರ ಹೃದಯದಲ್ಲಿ ಖಿಲಾಫತ್ ಬಗ್ಗೆ ಪ್ರೀತಿಯನ್ನು ಅಲ್ಲಾಹನು ತುಂಬುತ್ತಾನೆ. ಅವನು ತುಂಬಿಸುತ್ತಾ ಇದ್ದಾನೆ ಮತ್ತು ಮುಂದೆ ಸಹ ತುಂಬಿಸುವನು. ನಾನು ಅಂತಹ ದೃಶ್ಯಗಳನ್ನು ಪ್ರತಿಯೊಂದು ಜನಾಂಗದಲ್ಲಿ ಮತ್ತು ದೇಶದಲ್ಲಿ ಪ್ರತಿದಿನ ನೋಡುತ್ತಾ ಇದ್ದೇನೆ. ಆಫ್ರಿಕಾದಲ್ಲಿ ನನ್ನ ಪ್ರವಾಸದ ದೃಶ್ಯಗಳನ್ನು ನೀವು ನೋಡಿರುವಿರಿ –ಅವರು ಎಷ್ಟು ಗಾಢವಾಗಿ ಪ್ರೀತಿಸುತ್ತಾರೆಂದು.

ಬಹಳ ಸಮಯದ ಹಿಂದೆ ಅಲ್ಲಾಹನು ನನಗೆ ಸಮಾಧಾನ ನೀಡಿದ್ದನು – ಈ ಕಾಲಘಟ್ಟದಲ್ಲಿ ನಿಷ್ಠಾವಂತರನ್ನು ಅಲ್ಲಾಹನು ಸ್ವತಃ ಸಿದ್ಧಪಡಿಸಿ ಕಳುಹಿಸುವನೆಂದು. ನೀವು ಮುಂದೆ ಬನ್ನಿರಿ; ನಿಮ್ಮ ವಿಶ್ವಾಸ ಮತ್ತು ಕೆಲಸಗಳನ್ನು ಪರಿಶೀಲಿಸುತ್ತಾ ನೀವು ಆ ಅನುಗ್ರಹೀತ ವ್ಯಕ್ತಿಗಳಲ್ಲಿ ಸೇರಿರಿ. ಅವರನ್ನು ಸ್ವತಃ ಅಲ್ಲಾಹನು ಖಿಲಾಫತ್ ಸಂರಕ್ಷಣೆಗಾಗಿ ಒರೆಯಿಂದ ಹೊರತೆಗೆದ ಖಡ್ಗಗಳನ್ನಾಗಿ ನಿಲ್ಲಿಸುವನು.

ಕೆಲದಿನಗಳ ಹಿಂದೆ ಒಬ್ಬ ಸ್ನೇಹಿತರು ನನಗೆ ಹೀಗೆ ಬರೆದರು: ನಾವು ಖಿಲಾಫತಿನ ನೂರು ವರ್ಷಗಳನ್ನು ಪೂರ್ಣಗೊಳಿಸುವ ಸಂತೋಷ ಹೊಂದಿದ್ದೇವೆ. ಆದರೆ ಅದರೊಂದಿಗೆ ಚಿಂತೆಯೂ ಇದೆ. ನಾವು ಹಝ್ರತ್ ಮಸೀಹ್ ಮೌಊದ್‌ರವರ(ಅ) ಕಾಲದಿಂದ ನೂರುವರ್ಷ ದೂರ ಹೋಗಿದ್ದೇವೆ. ಆ ಕಾರಣದಿಂದ ನಮ್ಮಲ್ಲಿ ಬಲಹೀನತೆಗಳು ಹೆಚ್ಚುತ್ತಾ ಹೋಗದಿರಲಿ. ಚಿಂತಿಸುವುದು ಅನುಮತಿಸಲಾಗಿದೆ. ಆದರೆ ಅಲ್ಲಾಹನ ವಾಗ್ದಾನ, ಹಝ್ರತ್ ಮಸೀಹ್ ಮೌಊದ್‌ರವರ(ಅ) ಹೇಳಿಕೆಗಳನ್ನು ನಮ್ಮ ಮುಂದೆ ಇರಿಸಿದರೆ ಅಲ್ಲಾಹನ ಅನುಗ್ರಹಗಳನ್ನು ಹೀರುತ್ತಾ ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿಡುವ ಕಾರಣ ನಾವು ಅಲ್ಲಾಹನ ಬಹುಮಾನಗಳಿಗೆ ವಾರಿಸುದಾರರಾಗುತ್ತಾ ಹೋಗುವೆವು – ಇನ್‌ಶಾ ಅಲ್ಲಾಹ್.

ಇದೊಂದು ದೈವಿಕ ಪ್ರೇರಣೆ ಎಂದು ನಾನು ಭಾವಿಸುತ್ತೇನೆ. ಈ ಪತ್ರ ಬಂದಾಗ ಅಮೇರಿಕದಿಂದ ನಮ್ಮ ಒಬ್ಬ ಮುಬಲ್ಲಿಗ್ ನನಗೊಂದು ಪತ್ರ ಬರೆದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಒಂದು ಪ್ರತಿಜ್ಞೆಯ ಕಡೆಗೆ ನನ್ನ ಗಮನವನ್ನು ಆ ಪತ್ರದಲ್ಲಿ ಸೆಳೆದರು. ಹಝ್ರತ್ ಮುಸ್ಲಿಹ್ ಮೌಊದ್‌ರವರು(ರ) 1959ರಲ್ಲಿ ಖುದ್ದಾಮುಲ್ ಅಹ್ಮದಿಯಾ ಇಜ್ತಿಮಾದ ಸಂದರ್ಭದಲ್ಲಿ ಈ ಪ್ರತಿಜ್ಞೆಯನ್ನು ಖುದ್ದಾಮ್‌ಗಳಿಂದ ಮಾಡಿಸಿದರು. ಇಂತಹ ಪ್ರತಿಜ್ಞೆಯನ್ನು ಅನ್‌ಸಾರ್‌ಗಳು ಸಹ ಉಚ್ಚರಿಸಬೇಕೆಂದೂ ಉಚ್ಚರಿಸುತ್ತಾ ಇರಬೇಕೆಂದೂ ಎಲ್ಲಾ ಜಲ್ಸಗಳಲ್ಲಿ ಪುನರಾವರ್ತಿಸಬೇಕೆಂದೂ ಮುಂದಿನ ಪೀಳಿಗೆಗೆ ಈ ಪ್ರತಿಜ್ಞೆಯನ್ನು ತಲಪಿಸುತ್ತಾ ಹೋಗಬೇಕೆಂದೂ ಅದರ ಫಲಸ್ವರೂಪವಾಗಿ ಇಸ್ಲಾಮ್ ಮತ್ತು ಅಹ್ಮದಿಯತಿನ ವಿಜಯ ಲೋಕದ ಪ್ರತಿಯೊಂದು ಪ್ರದೇಶದಲ್ಲಿ ಆಗಬೇಕೆಂದೂ ಅವರು ಆಶಿಸಿದರು.

ಮೊದಲು ಪ್ರಸ್ತಾಪಿಸಿದ ಸ್ನೇಹಿತನ ಪತ್ರದ ಕಾರಣ ನನ್ನ ಗಮನ ಆ ಕಡೆಗೆ ಹರಿದಿತ್ತು. ಎರಡನೆಯ ಪತ್ರ ಬಂದಾಗ ನನಗೆ ಅವರ ಸಲಹೆ ಒಳ್ಳೆಯದಾಗಿ ಕಂಡಿತು. ಅಹ್ಮದಿಯಾ ಖಿಲಾಫತ್‌ಗೆ ನೂರುವರ್ಷ ತುಂಬುವ ಈ ಶುಭಸಂದರ್ಭದಲ್ಲಿ ಲೋಕದಲ್ಲೆಲ್ಲಾ ಇರುವ ಅಹ್ಮದಿಯರು ಈ ಪ್ರತಿಜ್ಞೆಯನ್ನು ಪುನರಾವರ್ತಿಸಬೇಕು.

ನಾನು ಸ್ವಲ್ಪ ಬದಲಾವಣೆಯೊಂದಿಗೆ ಅಹ್ಮದಿಯಾ ಖಿಲಾಫತಿನ ಶತವಾರ್ಷಿಕ ಜೂಬಿಲಿಯ ಈ ದಿನ ನಿಮ್ಮೆಲ್ಲರಿಂದ ಈ ಪ್ರತಿಜ್ಞೆ ಪಡೆಯುತ್ತೇನೆ. ನಾವು ಹಝ್ರತ್ ಮಸೀಹ್ ಮೌಊದ್‌ರವರ(ಅ) ಕಾಲದಿಂದ ನೂರು ವರ್ಷಗಳಷ್ಟು ದೂರವಿರುವೆವೆಯಾದರೂ ಅವರ

ಉಪದೇಶ, ಅಲ್ಲಾಹನ ಆಜ್ಞೆ ಮತ್ತು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ[ಅ] ನಡೆವಳಿಕೆಯಿಂದ ನಾವು ದೂರ ಸರಿದು ವರ್ತಿಸುವವರಾಗಬಾರದು. ನಾವು ಪ್ರತಿದಿನ ಅಲ್ಲಾಹನ ವಾಗ್ದಾನಗಳ ಕುರಿತು ಸಾಕಷ್ಟು ಗಮನ ನೀಡುವವರಾಗಬೇಕು. ಇದಕ್ಕಾಗಿ ನಾನು ನಿಮ್ಮಿಂದ ಪ್ರತಿಜ್ಞೆ ಪಡೆಯುತ್ತೇನೆ. ನೀವೆಲ್ಲರೂ ಮತ್ತು ಮಹಿಳೆಯರೂ ಎದ್ದು ನಿಲ್ಲಬೇಕೆಂದು ನಾನು ಅಪೇಕ್ಷಿಸುತ್ತೇನೆ. ಲೋಕದ ವಿವಿಧ ಸ್ಥಳಗಳಲ್ಲಿ ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಾ ಇರುವವರು ಸಹ ಎದ್ದು ನಿಂತು ನಾನು ಉಚ್ಚರಿಸುವ ಪ್ರತಿಜ್ಞೆಯನ್ನು ಪುನರಾವರ್ತಿಸಲಿ:

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ. ಇಂದು ಅಹ್ಮದಿಯಾ ಜಮಾಅತ್ ನೂರುವರ್ಷಗಳನ್ನು ಪೂರ್ತಿಗೊಳಿಸಿದಾಗ ನಾವು ಅಲ್ಲಾಹನ ಹೆಸರಲ್ಲಿ ಆಣೆಹಾಕಿ ಹೀಗೆ ಪ್ರತಿಜ್ಞೆ ಮಾಡುತ್ತೇವೆ: ಇಸ್ಲಾಮ್ ಮತ್ತು ಅಹ್ಮದಿಯತಿನ ಪ್ರಚಾರ ಮತ್ತು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಹೆಸರನ್ನು ಲೋಕದ ಎಲ್ಲೆಗಳ ತನಕ ತಲುಪಿಸಲಿಕ್ಕಾಗಿ ನಮ್ಮ ಜೀವಿತದ ಕೊನೆಯ ಕ್ಷಣಗಳ ತನಕ ಪ್ರಯತ್ನಿಸುತ್ತಾ ಹೋಗುವೆವು. ಈ ಪರಿಶುದ್ಧ ಕರ್ತವ್ಯವನ್ನು ಈಡೇರಿಸಲಿಕ್ಕಾಗಿ ನಮ್ಮ ಜೀವಿತವನ್ನು ಯಾವಾಗಲೂ ಅಲ್ಲಾಹನಿಗಾಗಿ ಮತ್ತು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗಾಗಿ ಅರ್ಪಿಸುವೆವು. ದೊಡ್ಡ ದೊಡ್ಡ ಬಲಿದಾನಗಳನ್ನು ಅರ್ಪಿಸಿ ಖಿಯಾಮತ್ ದಿನದ ತನಕ ಇಸ್ಲಾಮಿನ ಪತಾಕೆಯನ್ನು ಲೋಕದ ಪ್ರತಿಯೊಂದು ದೇಶದಲ್ಲಿ ಎತ್ತರವಾಗಿ ಹಾರಿಸುವೆವು. ಖಿಲಾಫತ್ ವ್ಯವಸ್ಥೆಯ ರಕ್ಷಣೆಗಾಗಿ ನಮ್ಮ ಅಂತಿಮ ಶ್ವಾಸದ ತನಕ ತೀವ್ರವಾಗಿ ಪ್ರಯತ್ನಿಸುತ್ತಾ ಹೋಗುವೆವು ಎಂದೂ ಪ್ರತಿಜ್ಞೆ ಮಾಡುತ್ತೇವೆ. ನಮ್ಮ ಮಕ್ಕಳನ್ನೂ ಮುಂದಿನ ಪೀಳಿಗೆಯನ್ನೂ ಯಾವಾಗಲೂ ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಲು ಮತ್ತು ಅದರ ಅನುಗ್ರಹದಿಂದ ಫಲ ಪಡೆಯಲು ಉಪದೇಶಿಸುತ್ತಾ ಇರುವೆವು. ಅದರ ಫಲಸ್ವರೂಪವಾಗಿ ಅಹ್ಮದಿಯಾ ಖಿಲಾಫತ್ ಖಿಯಾಮತ್ ದಿನದ ತನಕ ಸುರಕ್ಷಿತವಾಗಿ ನೆಲೆಗೊಳ್ಳಲಿ ಮತ್ತು ಲೋಕಾಂತ್ಯ ದಿನದ ತನಕ ಇಸ್ಲಾಮ್ ಧರ್ಮ ಪ್ರಚಾರ ಮುಂದುವರಿಯಲಿ. ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಪತಾಕೆ ಲೋಕದ ಎಲ್ಲಾ ಪತಾಕೆಗಳಿಗಿಂತ ಎತ್ತರವಾಗಿ ಹಾರಾಡುವಂತಾಗಲಿ. ಓ ಅಲ್ಲಾಹ್, ಈ ಪ್ರತಿಜ್ಞೆಯನ್ನು ಈಡೇರಿಸುವ ಭಾಗ್ಯವನ್ನು ನೀನು ನಮಗೆ ದಯಪಾಲಿಸು. ಅಲ್ಲಾಹುಮ್ಮ ಆಮೀನ್, ಅಲ್ಲಾಹುಮ್ಮ ಆಮೀನ್, ಅಲ್ಲಾಹುಮ್ಮ ಆಮೀನ್.

(ಪ್ರತಿಜ್ಞೆಗಾಗಿ ನಿಂತಿದ್ದ ಜನರನ್ನು ಕುಳಿತುಕೊಳ್ಳಲು ಹೇಳಿದ ನಂತರ ಹುಝೂರ್‌ರವರು ಹೀಗೆಂದರು:)

ಮುಹಮ್ಮದೀ ಮಸೀಹರ ಗುಲಾಮರೇ, ಅವರ ವೃಕ್ಷದ ಹಚ್ಚಹಸುರಾದ ಶಾಖೆಗಳೇ, ಈ ಪ್ರತಿಜ್ಞೆ ನಿಮ್ಮಲ್ಲಿ ಒಂದು ಹೊಸ ಉತ್ಸಾಹವನ್ನೂ ಹುಮ್ಮಸ್ಸನ್ನೂ ಉಂಟುಮಾಡಿರಬಹುದೆಂದು ನಾನು ಭಾವಿಸುತ್ತೇನೆ. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಲು ಈ ಮೊದಲಿಗಿಂತ ಹೆಚ್ಚು ಭಾವಾವೇಶ ನೀವು ಹೊಂದಿರಬಹುದು. ನೀವು ಈ ಉತ್ಸಾಹ, ಹುಮ್ಮಸ್ಸು ಮತ್ತು ಕೃತಜ್ಞತಾ ಸಮರ್ಪಣೆಯ ಭಾವಾವೇಶದೊಂದಿಗೆ ಅಹ್ಮದಿಯಾ ಖಿಲಾಫತಿನ ಹೊಸ ಶತಮಾನವನ್ನು ಪ್ರವೇಶಿಸಿರಿ. ಈ ಮೇ ದಿನಾಂಕ 27 ನಮ್ಮೊಳಗೆ ಒಂದು ಹೊಸ ಆತ್ಮವನ್ನು ಊದುವಂತಾಗಲಿ. ಒಂದು ಹೊಸ ಕ್ರಾಂತಿ ಉಂಟಾಗಲಿ. ನಮ್ಮ ಸಂತಾನ ಪರಂಪರೆಯಲ್ಲೂ ಖಿಯಾಮತ್ ತನಕ ಈ ಕ್ರಾಂತಿ ಉಂಟಾಗುತ್ತಾ ಹೋಗಲಿ. ನಮ್ಮನ್ನು ಅಲ್ಲಾಹನು ಈ ಕಾಲಘಟ್ಟಕ್ಕೆ ಪ್ರವೇಶಗೊಳಿಸಿದುದು ಸ್ಪಷ್ಟಗೊಳಿಸುವುದೇನೆಂದರೆ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ವೃಕ್ಷದ ಜೀವಂತ ಶಾಖೆಗಳಾಗಲು ನಾವು ಪ್ರಯತ್ನಿಸುತ್ತಾ ಇದ್ದೇವೆ ಮತ್ತು ಮುಂದೆಯೂ ಪ್ರಯತ್ನಿಸುವೆವು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತನ್ನು ಎಷ್ಟು ಪ್ರೀತಿಯಿಂದ ನೋಡುತ್ತಾರೆ ಮತ್ತು ಎಂತಹ ಶುಭ ಪ್ರತೀಕ್ಷೆ ಹೊಂದಿದ್ದಾರೆ ಎಂಬುದನ್ನು ಈ ಕೆಳಗಿನ ಅವರ ಮಾತುಗಳಿಂದ ತಿಳಿಯಿರಿ: "ನಮ್ಮ ಜಮಾಅತಿನಲ್ಲಿ ಕಂಡು ಬರುವ ಅಭಿವೃದ್ಧಿ ಮತ್ತು ಬದಲಾವಣೆ ಈ ಕಾಲದಲ್ಲಿ ಬೇರೆ ಯಾರಲ್ಲಿಯೂ ಕಂಡು ಬರುವುದಿಲ್ಲ." (ಮಲ್‌ಫೂಝಾತ್ ಸಂಪುಟ 5 ಪುಟ 536 – ಹೊಸ ಮುದ್ರಣ)

ಹಝ್‌ರತ್ ಮಸೀಹ್ ಮೌಊದ್‌ರವರು[ಅ] ಹೊಂದಿದ ಶುಭ ಪ್ರತೀಕ್ಷೆ ನಾವು ನಮ್ಮ ಒಳಗೆ ಕ್ರಾಂತಿಯನ್ನುಂಟು ಮಾಡಲು ಮೊದಲಿಗಿಂತ ಹೆಚ್ಚು ಹೆಚ್ಚಾಗಿ ಪ್ರಯತ್ನ ಮಾಡುವುದನ್ನು ಆವಶ್ಯಪಡುತ್ತದೆ. ನೀವು ನಿಮ್ಮ ಪ್ರತಿಜ್ಞೆ ಈಡೇರಿಸಲು ಎಲ್ಲಾ ರೀತಿಯ ಬಲಿದಾನಗಳಿಗೆ ಸಿದ್ಧರಾಗಿರಿ. ಖಿಲಾಫತ್ ಮೂಲಕ ಅಲ್ಲಾಹನು ನಮಗೆ ಮಾಡಿದ ಉಪಕಾರಕ್ಕಾಗಿ ನಾವು ನಮ್ಮ ಆಧ್ಯಾತ್ಮಿಕ ಪ್ರಗತಿಯ ಹೊಸ ಹಂತಗಳನ್ನು ನಿಶ್ಚಯಿಸಬೇಕು. ನೀವು ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಲು ಮೊದಲಿಗಿಂತ ಹೆಚ್ಚು ಪ್ರಯತ್ನಿಸಿರಿ. ಅಲ್ಲಾಹನ ಉಪಕಾರಕ್ಕಾಗಿ ಖಿಲಾಫತ್‌ನೊಂದಿಗೆ ನಿಷ್ಠೆ ಮತ್ತು ಅನುಸರಣೆಯ ಮಟ್ಟವನ್ನು ಉನ್ನತಗೊಳಿಸುತ್ತಾ ಹೋಗಿರಿ. ಈ ಉಪಕಾರಕ್ಕಾಗಿ ಕೃತಜ್ಞತೆ ಸೂಚಿಸಲು ನಿಮ್ಮವರಲ್ಲಿ ಮತ್ತು ಅನ್ಯರಲ್ಲಿ ಪ್ರೀತಿಯ ಹಾಡುಗಳನ್ನು ಹರಡುತ್ತಾ ಹೋಗಿರಿ. ನಿಶ್ಚಯವಾಗಿಯೂ ಈ ಒಳ್ಳೆಯ ಕೆಲಸಗಳು ಮತ್ತು ಕೃತಜ್ಞತೆ ಅರ್ಪಣೆ ನಮ್ಮ ಗುರಿಯಾಗಬೇಕು. ನಿಶ್ಚಯವಾಗಿಯೂ ಪ್ರೀತಿಯ ಕಾರಂಜಿ ನಮ್ಮ ಹೃದಯಗಳಿಂದ ಉಕ್ಕಬೇಕು. ಪ್ರೀತಿ ಮತ್ತು ನಿಷ್ಠೆಯ ಹೊಸ ಹೊಸ ಮಾರ್ಗಗಳನ್ನು ನಿರ್ಧರಿಸುವುದು ನಮ್ಮ ಜೀವಿತದ ಉದ್ದೇಶವಾಗಬೇಕು. ಹೀಗಾದರೆ ನಾವು ಅಲ್ಲಾಹನ ಪಾರಿತೋಷಕದ ಬಗ್ಗೆ ಗಮನ ಕೊಡುವವರಾಗುವೆವು. ಆಗ ನಾವು ಶಾಶ್ವತ ಖಿಲಾಫತಿನ ಅನುಗ್ರಹ ಪಡೆಯುತ್ತಾ ಹೋಗುವೆವು. ಅಲ್ಲಾಹನು ಅನುಗ್ರಹ ಮತ್ತು ಪಾರಿತೋಷಕಗಳ ಎಂದೂ ಮುಗಿದು ಹೋಗದ ಮಳೆಗಳನ್ನು ನಮ್ಮ ಮೇಲೆ ಸುರಿಸುವನು.

ನನ್ನ ಪ್ರೀತಿಗೆ ಪಾತ್ರರಾದವರೇ ಮತ್ತು ಪ್ರೀತಿಗೆ ಪಾತ್ರರಾದವರ ಪ್ರೀತಿಗೆ ಪಾತ್ರರಾದವರೇ, ನೀವು ಎದ್ದೇಳಿರಿ. ನೀವು ಈ ಬಹುಮಾನದ ರಕ್ಷಣೆಗಾಗಿ ಹೊಸ ನಿರ್ಧಾರ ಮತ್ತು ಧೈರ್ಯದಿಂದ ನಿಮ್ಮ ಪ್ರತಿಜ್ಞೆ ಈಡೇರಿಸಲು ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಅವನಿಂದ ಸಹಾಯ ಬೇಡುತ್ತಾ ಮೈದಾನಕ್ಕೆ ನೆಗೆಯಿರಿ. ಅದರಲ್ಲಿಯೇ ನಿಮ್ಮ ಉಳಿವು, ನಿಮ್ಮ ಸಂತಾನಗಳ ಉಳಿವು ಮತ್ತು ಮನುಷ್ಯತ್ವದ ಉಳಿವು ಅವಲಂಬಿಸಿದೆ. ನಮ್ಮ ಪ್ರತಿಜ್ಞೆ ಈಡೇರಿಸಲು ಅಲ್ಲಾಹನು ನನಗೂ ನಿಮಗೂ ಸೌಭಾಗ್ಯವನ್ನು ದಯಪಾಲಿಸಲಿ. ಅಲ್ಲಾಹುಮ್ಮ ಆಮೀನ್.

ಭಾಷಾಂತರ : ಎಂ. ಉಬೈದುಲ್ಲಾ

**ಇನ್‌ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

# ಅಹ್ಮದಿಯಾ ಖಿಲಾಫತ್

## ಆಧ್ಯಾತ್ಮಿಕ ನೇತೃತ್ವದ ನೂರು ವರ್ಷಗಳು



❖ ಅಹ್ಮದ್ ಶಾಫಿ

ಅಹ್ಮದಿಯಾ ಖಿಲಾಫತಿಗೆ ದೇವಾನುಗ್ರಹದಿಂದ ನೂರು ವರ್ಷಗಳು ತುಂಬಿವೆ. ಪ್ರವಾದಿತ್ವದ ಮಾರ್ಗದಲ್ಲಿ ಪುನಃ ಸ್ಥಾಪಿಸಲ್ಪಡುವುದೆಂದು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ಭವಿಷ್ಯ ನುಡಿದ ಖಿಲಾಫತಿನ ನೂರು ವರ್ಷಗಳು ತುಂಬಿದ ಸಂಭ್ರಮದಲ್ಲಿ ಅಹ್ಮದಿಯಾ ಜಮಾಅತ್ ಒಂದು ಚಾರಿತ್ರಿಕ ಮುಹೂರ್ತವನ್ನು ದಾಖಲಿಸುತ್ತದೆ. ನುಬುವ್ವತ್‌ನಿಂದ ಅನುಗ್ರಹೀತ ಮಸೀಹರ ನಂತರ ಸ್ಥಾಪಿತವಾದ ಈ ಮಹಾಸ್ಥಾಪನೆ ಅನೇಕ ದಿವ್ಯ ನಿಯೋಗಗಳಿರುವ ಇತಿಹಾಸ ಪಥದಲ್ಲಿ ಇಸ್ಲಾಮಿನ ಜೀವಂತ ದೃಷ್ಟಾಂತವಾಗಿ ಮುನ್ನೇರುತ್ತಿದೆ.

ನೂರು ವರ್ಷಗಳು, ಐವರು ಖಲೀಫರು, ಕಠಿಣವಾದ ಸವಾಲುಗಳು, ನಿರ್ಣಾಯಕ ತೀರ್ಮಾನಗಳು, ಭವಿಷ್ಯ ನುಡಿಗಳು, ಮುನ್ನೆಚ್ಚರಿಕೆಗಳು, ಮಾರ್ಗ ನಿರ್ದೇಶನಗಳು, ದೂರದೃಷ್ಟಿಯಿಂದ ಕೂಡಿದ ಯೋಜನೆಗಳು, ಹಾಗೆ 1908ರಲ್ಲಿ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರ ವಿಯೋಗದ ಬಳಿಕ ಪ್ರಕಟಗೊಂಡ ಖುದ್‌ರತೆ ಸಾನಿಯದ (ದ್ವಿತೀಯ ದಿವ್ಯ ಶಕ್ತಿಯ) ಈ ಕಾಲಘಟ್ಟ ಅಹ್ಮದಿಯಾ ಜಮಾಅತಿನ ಉತ್ತರೋತ್ತರ ಪುರೋಗತಿಯ ಉಜ್ವಲ ನಿಮಿಷಗಳಾಗಿದ್ದವು.

ಖಿಲಾಫತ್ ಮೂಲಕ ಅಲ್ಲಾಹನು ಈ ಭೂಮಿಯಲ್ಲಿ ಆಧಿಪತ್ಯ ಸ್ಥಾಪಿಸುತ್ತಾನೆ. ಅದು ಅಲ್ಲಾಹನ ಏಕತ್ವದ ಸಾಕಾರ ಪ್ರಕಟಣೆಯಾಗಿದೆ. ಚುನಾಯಿಸಲ್ಪಡುವ ಖಲೀಫರಾದರೋ, ಆ ದೈವಿಕ ವಿಧಿಯ ಜೀವಂತ ಸಾಕ್ಷ್ಯವಾಗಿ ನೆಲೆಗೊಳ್ಳುತ್ತಾರೆ. ಪ್ರಥಮ ಖಲೀಫ ಹಝ್ರತ್ ಮೌಲಾನ ಹಕೀಂ ನೂರುದ್ದೀನ್ (ರಝಿಯಲ್ಲಾಹು ಅನ್‌ಹು) ಅವರಿಂದ ಆರಂಭಿಸಿ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ (ಅಯ್ಯದಹುಲ್ಲಾಹ್) ವರೆಗೆ ತಲಪಿರುವ ಈ ದೈವಿಕ ನೇತೃತ್ವದ ಪರಂಪರೆ, ಅವರು ನಿರ್ವಹಿಸಿದ ನಿರ್ಣಾಯಕ ದೌತ್ಯಗಳಿಂದಲೂ ಇಸ್ಲಾಮಿನ ಪುನರುಜ್ಜೀವನಕ್ಕೆ ಮತ್ತು ಮುಸ್ಲಿಂ ಸಮುದಾಯದ ರಕ್ಷೆಗಿರುವ ಕೊಡುಗೆಗಳಿಂದಲೂ ಚಿರಕಾಲ ಸ್ಮರಿಸಲ್ಪಡುವುದು. ಆ ಮಹಾನ್ ವ್ಯಕ್ತಿಗಳ ಮೂಲಕ, ಅವರು ಹಿಂದಿಕ್ಕಿದ ಆ ಚರಿತ್ರೆ ಪಥದ ಮೂಲಕ ಒಂದು ಹ್ರಸ್ವ ಯಾತ್ರೆ.



**ಹಝ್ರತ್ ಅಲ್‌ಹಾಜ್ ಹಕೀಂ ಮೌಲಾನಾ ನೂರುದ್ದೀನ್ (ರಝಿಯಲ್ಲಾಹು ಅನ್‌ಹು) ಪ್ರಥಮ ಖಲೀಫ (1908 ಮೇ 27 - 1914 ಮಾರ್ಚ್ 13)**

ಖಿಲಾಫತಿನ ಪುನಃಸ್ಥಾಪನೆ ಆರಂಭವಾದುದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅಲೈಹಿಸ್ಸಲಾಂ) ಅವರ ಆಪ್ತ ಶಿಷ್ಯ ಮೌಲಾನಾ ಹಕೀಂ ನೂರುದ್ದೀನ್(ರ) ಅವರಿಂದಾಗಿದೆ. ಓರ್ವ ಪ್ರವಾದಿಯ ವಿಯೋಗದಿಂದ ಉಂಟಾದ ದೊಡ್ಡ ಶೂನ್ಯತೆ ಮತ್ತು ಆಶಂಕೆ ಮೂಡಿರುವಾಗ ಜಮಾಅತಿನ ಸಾರಥ್ಯವನ್ನು ಅಲ್ಲಾಹನು ಅವರಿಗೆ ಒಪ್ಪಿಸಿದನು. ವಿರೋಧಿಗಳು ಜಮಾಅತಿನ ಅಂತ್ಯವನ್ನು ಘೋಷಿಸಿದ ಮತ್ತು ಕಪಟ ವಿಶ್ವಾಸಿಗಳು ಗಲಭೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದ ಸಂದರ್ಭ. ವಿಶ್ವಾಸಿಗಳಲ್ಲಿ ಕೂಡ ನಿರಾಶೆಯ ಛಾಯೆ. ಈ ಒಂದು ವಿಷಮಾವಸ್ಥೆಯನ್ನು ನಿವಾರಿಸಿ ಜಮಾಅತಿನ ಸದಸ್ಯರಲ್ಲಿ ವಿಶ್ವಾಸದೃಢತೆ ಮತ್ತು ಖಿಲಾಫತಿನೊಡನಿರುವ ಅನುಸರಣೆ ಮತ್ತು ಪ್ರೀತಿಯನ್ನು ನೆಲೆನಿಲ್ಲಿಸುವುದು ಪ್ರಥಮ ಖಲೀಫರ ಅತಿ ದೊಡ್ಡ ಸವಾಲಾಗಿತ್ತು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮರಣದ ಬಳಿಕ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಅವರ ಮೇಲೆ ಹೊರಿಸಲ್ಪಟ್ಟ ಜವಾಬ್ದಾರಿಕೆಗೆ ಸಮಾನವಾಗಿತ್ತು ಖಲೀಫತುಲ್ ಮಸೀಹ್ ಅವ್ವಲ್(ರ) ಅವರ ದೌತ್ಯ.

ಕಾಶ್ಮೀರ ಮಹಾರಾಜನ ಅರಮನೆ ವೈದ್ಯರಾಗಿದ್ದ ಅವರು ಆ ಕಾಲದ ಇಮಾಮರನ್ನು ಗುರುತಿಸಿದಾಗ ಎಲ್ಲ ಭೌತಿಕ ಕಟ್ಟುಪಾಡುಗಳನ್ನು ತೊರೆದು ತನ್ನ ಜೀವಿತವನ್ನು ಅಲ್ಲಾಹನ ಮಾರ್ಗದಲ್ಲಿ ಪೂರ್ಣವಾಗಿ ಸಮರ್ಪಿಸಿದರು. ತನ್ನ ಅನುಯಾಯಿಗಳೆಲ್ಲ ನೂರುದ್ದೀನ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಒಂದು ಪರ್ಶಿಯನ್ ಕವಿತೆಯಲ್ಲಿ ಮಸೀಹ್ ಮೌಊದ್(ಅ) ಬರೆದದ್ದು ಅವರ ಆತ್ಮಸಮರ್ಪಣೆಯ ದ್ಯೋತಕವಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರ ಪಿತ ಹಝ್ರತ್ ಉಮರ್(ರ) ಅವರ ವಂಶ ಪರಂಪರೆಯಲ್ಲಿ ಮತ್ತು ಮಾತೆ ಹಝ್ರತ್ ಅಲಿ(ರ) ಅವರ ವಂಶ ಪರಂಪರೆಯಲ್ಲಿ ಸೇರಿದವರು.

ಅವರು ಖಲೀಫ ಆಗಿದ್ದ ಆರು ವರ್ಷಕಾಲ ಜಮಾಅತಿನ ಸ್ಥಿರತೆಗೂ ಬೆಳವಣಿಗೆಗೂ ಬೇಕಾದಷ್ಟು ಪ್ರಯತ್ನಿಸಿದರು. ಆ ಕಾಲದಲ್ಲಿ ಖಿಲಾಫತನ್ನು ಬಲಹೀನಗೊಳಿಸಲು ನಡೆಸಲಾದ ಪ್ರಯತ್ನಗಳನ್ನು ಶಕ್ತಿಯುತವಾಗಿ ಎದುರಿಸಿದರು. ಜಮಾಅತಿನ ತಅ್‌ಲೀಂ ತರ್ಬಿಯತ್ ಕಾರ್ಯಗಳಲ್ಲೂ ಮಸೀಹ್ ಮೌಊದ್‌ರವರ(ಅ) ಸಂದೇಶವನ್ನು ಪ್ರಚಾರಗೊಳಿಸುವುದರಲ್ಲೂ ಅತೀವ ಶ್ರದ್ಧೆವಹಿಸಿದರು.

ಬೈತುಲ್ ಮಾಲ್ ವ್ಯವಸ್ಥೆಯನ್ನು ಆರಂಭಿಸಿದ ಅವರು 1909 ಮಾರ್ಚ್ 1ರಂದು ಮದ್ರಸ ಅಹ್ಮದಿಯಾವನ್ನು ಸ್ಥಾಪಿಸಿದರು. ಅವರ ಕಾಲದಲ್ಲೇ ನೂರ್ ಮಸ್ಜಿದ್ ಮತ್ತು ನೂರ್ ಆಸ್ಪತ್ರೆ ಆರಂಭಗೊಂಡವು. ಅವರೇ ಲಂಡನಿನಲ್ಲಿ ಮೊತ್ತಮೊದಲ ಪ್ರಚಾರ ಕೇಂದ್ರ ಸ್ಥಾಪಿಸಿದರು. 1912 ಜುಲಾಯಿ 25ರಂದು ತಅ್‌ಲೀಮುಲ್ ಇಸ್ಲಾಂ ಹೈಸ್ಕೂಲಿಗೆ ಶಿಲಾಸ್ಥಾಪನೆ ಮಾಡಲಾಯಿತು. 1913 ಜೂನ್ 19ರಂದು ಅಲ್‌ಫಝ್ಲ್ ಪತ್ರಿಕೆಯ ಪ್ರಕಟಣೆಯನ್ನು ಆರಂಭಿಸಿದರು. ಖಾದಿಯಾನಿನಿಂದ ನೂರ್, ದಿಲ್ಲಿಯಿಂದ ಅಲ್‌ಹಖ್, ಲಾಹೋರ್‌ನಿಂದ ಪೈಗಾಮೆ ಸುಲ್ಹ್ ಎಂಬೀ ಪತ್ರಿಕೆಗಳನ್ನು ಆರಂಭಿಸಿ ಜಮಾಅತಿನ ಪ್ರಚಾರವನ್ನು ತ್ವರಿತಗೊಳಿಸಿದರು.

1914 ಮಾರ್ಚ್ 13ರಂದು ಹಝ್ರತ್ ಅಲ್‌ಹಾಜ್ ಹಕೀಂ ಮೌಲಾನ ನೂರುದ್ದೀನ್ ಎಂಬ ದೈವಿಕ ಪ್ರಕಾಶ ನಂದುವಾಗ ಖಿಲಾಫತ್ ಎಂಬ ವ್ಯವಸ್ಥೆಯ ಪುನಃಸ್ಥಾಪನೆಯ ತಾಯಿಬೇರು ದೃಢಗೊಂಡಿತ್ತು.



**ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**
**(ರಝಿಯಲ್ಲಾಹು ಅನ್‌ಹು)**
**ದ್ವಿತೀಯ ಖಲೀಫ (1914 ಮಾರ್ಚ್ 14 - 1965 ನವೆಂಬರ 8)**

25ನೇ ವಯಸ್ಸಿನಲ್ಲಿ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್(ರ) ಒಂದು ಜಾಗತಿಕ ಸಂಘಟನೆಯ ಸಾರಥ್ಯವನ್ನು ದೇವ ನಿಯೋಗವಾಗಿ ಗಣಿಸಿ ವಹಿಸಿಕೊಂಡಾಗ ಓರ್ವ ವಾಗ್ದತ್ತ ಪುತ್ರನ (ಮುಸ್ಲಿಹ್ ಮೌಊದ್) ಬಗ್ಗೆ ವಾಗ್ದತ್ತ ಮಸೀಹರಿಗೆ(ಅ) ಲಭಿಸಿದ ಸುವಾರ್ತೆ ಈಡೇರಿತು. ಸುತ್ತಮುತ್ತು ಪ್ರಾಯದಲ್ಲಿ, ಪಕ್ವತೆಯಲ್ಲಿ ಮತ್ತು ಪಾಂಡಿತ್ಯದಲ್ಲಿ ಉನ್ನತ ವ್ಯಕ್ತಿಗಳು. ಮಸೀಹ್ ಮೌಊದ್‌ರಿಂದ(ಅ) ನೇರವಾಗಿ ಬೋಧನೆ ಲಭಿಸಿದ ಪ್ರಮುಖ ಶಿಷ್ಯರು. ಅಲ್ಲದೆ, ಸಂಖ್ಯೆಯಲ್ಲಿ ಕಡಿಮೆಯಾದರೂ ಪಾಂಡಿತ್ಯದಲ್ಲಿ ಏನೂ ಕೊರತೆಯಿಲ್ಲದ, ಖಿಲಾಫತನ್ನು ಅಳಿಸಲು ಕುಪ್ರಚಾರ ಮಾಡುತ್ತಿದ್ದ ಒಂದು ವರ್ಗ. ಎಲ್ಲ ಸವಾಲುಗಳನ್ನು ಎದುರಿಸುತ್ತಾ, ಅಹ್ಮದಿಯಾ ಖಿಲಾಫತ್ ದೈವಿಕ ವ್ಯವಸ್ಥೆಯ ಅಂಶವೆಂದು ಪ್ರಕಟವಾಗುವಂತೆ, ಅಲ್ಲಾಹನ ಅಮಿತ ಅನುಗ್ರಹದಿಂದ ಆ ಯುವ ನೇತಾರ ಜಮಾಅತನ್ನು ಜಾಗತಿಕ ನೆಲೆಯಲ್ಲಿ ವಿಜಯ ಪೀಠಕ್ಕೇರಿಸಿದರು. ಕಪಟವಿಶ್ವಾಸಿಗಳು ಹೆಡೆ ಮಡಚಿ ಸ್ಥಳ ಬಿಟ್ಟರು. ಖಿಲಾಫತಿನ ಪತನದ ಕನಸು ಕಂಡ ಶತ್ರುಗಳು ನಿರಾಶರಾದರು. ಧೈರ್ಯವಂತನೂ ಬುದ್ಧಿಶಾಲಿಯೂ ವಿದ್ವಾಂಸನೂ ಆಗಿದ್ದ ಖಲೀಫತುಲ್ ಮಸೀಹ್ ಸಾನಿ(ರ) ತನ್ನ ಕಾರ್ಯಶೀಲತೆ ಮತ್ತು ತೀರ್ಮಾನಗಳ ಮೂಲಕ ಜಮಾಅತಿನ ಬೆಳವಣಿಗೆಗೆ ವೇಗ ನೀಡಿದರು.

ಬಾಲ್ಯಕಾಲದ ಅನಾರೋಗ್ಯ ಕಾರಣದಿಂದ ಕಲಿಯುವಿಕೆಯಲ್ಲಿ ಹಿಂದೆ ಬಿದ್ದಿದ್ದ ಅವರು ಮೆಟ್ರಿಕ್ಯುಲೇಶನ್ ಪೂರ್ಣಗೊಳಿಸಲಾಗದೆ 1905ರಲ್ಲಿ ಔಪಚಾರಿಕ ವಿದ್ಯಾಭ್ಯಾಸವನ್ನು ಕೊನೆಗೊಳಿಸಬೇಕಾಯಿತು. ಅನಂತರ ದೇವಾನುಗ್ರಹದಿಂದ ಭೌತಿಕ ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಸಿದ್ಧಿಸಿದರು. ಪ್ರಥಮ ಖಲೀಫರಿಗೆ ಮೊತ್ತಮೊದಲು ಬೈಅತ್ (ಅನುಸರಣೆಯ ಪ್ರತಿಜ್ಞೆ) ಮಾಡಿದ್ದು ಅವರೇ ಆಗಿದ್ದರು.

1914ರಲ್ಲಿ ಖಿಲಾಫತ್ ವಹಿಸಿದ ಮೊದಲ್ಗೊಂಡು ಇಸ್ಲಾಮಿನ ಸಂದೇಶವನ್ನು ಜಗತ್ತಿನ ಮೂಲೆಮೂಲೆಗಳಿಗೆ ತಲಪಿಸುವ ಕಾರ್ಯದಲ್ಲಿ ಅವರು ಅತ್ಯಂತ ಶ್ರದ್ಧೆವಹಿಸಿದರು. 1920 ಪೂರ್ಣಗೊಳ್ಳುವಾಗ ಅಮೇರಿಕ ಸೇರಿ ಲೋಕದ ವಿವಿಧ ಕಡೆಗಳಲ್ಲಿ ವ್ಯವಸ್ಥಾಪಿತವಾದ ರೀತಿಯಲ್ಲಿ ಮಿಷನರಿ ಚಟುವಟಿಕೆಗಳನ್ನು ಆರಂಭಿಸಿದರು. ಅದಕ್ಕೋಸ್ಕರ ಧನ ಸಂಗ್ರಹಕ್ಕೆ ತಹ್ರೀಕ್ ಜದೀದ್, ವಖ್ಫ್ ಜದೀದ್ ಎಂಬ ಎರಡು ಯೋಜನೆಗಳನ್ನು ಅವರು ಆರಂಭಿಸಿದರು. 1919ರಲ್ಲಿ ನಝಾರತ್ ದಲ್‌ವತೋ ತಬ್ಲೀಗ್ ಸ್ಥಾಪಿಸಿ ಮಿಷನರಿಗಳಿಗೆ ತರಬೇತಿ ನೀಡುವ ಕೇಂದ್ರವಾಗಿ ಜಾಮಿಅ ಅಹ್ಮದಿಯಾವನ್ನು ರೂಪಿಸಿದರು.

ಚಟುವಟಿಕೆಗಳನ್ನು ಹೆಚ್ಚುಗೊಳಿಸಲಿಕ್ಕಾಗಿ ಮಕ್ಕಳಿಗೂ ಯುವಜನರಿಗೂ ಹಿರಿಯರಿಗೂ ಸ್ತ್ರೀಯರಿಗೂ ಅತ್‌ಫಾಲುಲ್ ಅಹ್ಮದಿಯಾ, ಖುದ್ದಾಮುಲ್ ಅಹ್ಮದಿಯಾ, ಅನ್ಸಾರುಲ್ಲಾಹ್, ಲಜ್ನಾ ಇಮಾಇಲ್ಲಾಹ್ ಎಂಬ ಪ್ರತ್ಯೇಕ ಘಟಕಗಳಿಗೆ ಅವರು ರೂಪಕೊಟ್ಟರು.

ಅವರಿಗೆ 19 ವರ್ಷ ಪ್ರಾಯವಾಗಿದ್ದಾಗ ಮಸೀಹ್ ಮೌಊದ್(ಅ) ನಿಧನರಾದರು. ಆ ಸಂದರ್ಭದಲ್ಲಿ ತನ್ನ ಪಿತನ ಮೃತದೇಹದ ಸಮೀಪ ನಿಂತುಕೊಂಡು ಆ ಯುವಕ ಒಂದು ಪ್ರತಿಜ್ಞೆಮಾಡಿದರು. ಅದು ಹೀಗಿದೆ:

"ಎಲ್ಲರೂ ತಮ್ಮನ್ನು ಬಿಟ್ಟು ಹೋಗಿ ನಾನು ಮಾತ್ರ ಬಾಕಿಯಾದರೂ ನಾನು ಒಬ್ಬಂಟಿಗನಾಗಿ ನಿಂತುಕೊಂಡು ತಮ್ಮ ದೌತ್ಯಕ್ಕೆ ವಿರುದ್ಧವಾದ ಎದುರಾಳಿಗಳ ಎಲ್ಲ ಆಕ್ರಮಣಗಳನ್ನು ಎದುರಿಸುವೆನು."


ಅವರ ಚಟುವಟಿಕೆಗಳೆಲ್ಲ ತಾನು ಒಬ್ಬಂಟಿಗನೆಂಬಂತೆಯೇ ಈ ಪ್ರತಿಜ್ಞೆ ಈಡೇರುವಂತೆ ತೀಕ್ಷ್ಣವೂ ತೀವ್ರವೂ ಆಗಿದ್ದವು. ಪವಿತ್ರ ಖುರ್‌ಆನಿನ ಅಗಾಧ ಜ್ಞಾನವನ್ನು ಪಡೆದ ಅವರು ಖುರ್‌ಆನಿನ ಉರ್ದು ವ್ಯಾಖ್ಯಾನ "ತಫ್ಸೀರ್ ಕಬೀರ್" ಎಂಬ ಹೆಸರಿನಲ್ಲಿ 10 ಸಂಪುಟಗಳಲ್ಲಿ ಬರೆದರು. "ತಫ್ಸೀರ್ ಸಗೀರ್" ಎಂಬ ಖುರ್‌ಆನಿನ ಒಂದು ಕಿರು ವ್ಯಾಖ್ಯಾನವನ್ನು ಸಹ ಅವರು ಪ್ರಕಟಿಸಿದರು.

1944ರಲ್ಲಿ ದಿಲ್ಲಿಯಲ್ಲಿ ನಡೆದ ಒಂದು ಸಾರ್ವನಿಕ ಸಭೆಯಲ್ಲಿ ಅವರು ತಾನು ಮುಸ್ಲಿಹ್ ಮೌಊದ್ (ವಾಗ್ದತ್ತ ಸುಧಾರಕ) ಎಂದು ಘೋಷಿಸಿದರು.

1947ರ ಭಾರತ–ಪಾಕಿಸ್ತಾನ ವಿಭಜನೆ ಅವರ ಖಿಲಾಫತ್ ಕಾಲದ ಮತ್ತೊಂದು ನಿರ್ಣಾಯಕ ಘಟ್ಟವಾಗಿತ್ತು. ಲಕ್ಷಗಟ್ಟಲೆ ಅಹ್ಮದೀ ಮುಸ್ಲಿಮರು ಪಾಕಿಸ್ತಾನಕ್ಕೆ ವಲಸೆ ಹೋದರು. ಆಗ ಭಾರತದ ಅಹ್ಮದಿಯಾ ಕೇಂದ್ರವಾದ ಖಾದಿಯಾನಿನ ಸಂರಕ್ಷಣೆಯ ಹೊಣೆ 313 ದರ್ವೇಶ್ ಗಳಿಗೆ ಒಪ್ಪಿಸಿ ಪಾಕಿಸ್ತಾನದ ರಬ್ವ ಎಂಬ ಸ್ಥಳವನ್ನು ಜಮಾಅತಿನ ಕೇಂದ್ರವನ್ನಾಗಿ ಮಾಡಿದ ಘಟನೆಗಳು ಖಿಲಾಫತಿನ ಅಗಣಿತ ಅನುಗ್ರಹಗಳನ್ನು ಸ್ಮರಿಸುವ ಐತಿಹಾಸಿಕ ಮುಹೂರ್ತಗಳಾಗಿದ್ದವು.

ಅವರ ಖಿಲಾಫತ್ ಕಾಲದಲ್ಲಿ 46 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಯಿತು. ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನ್ ಅನುವಾದಿಸಲ್ಪಟ್ಟಿತು. ಎರಡು ಸಲ ಅವರು ಯುರೋಪಿನ ಪರ್ಯಟನೆ ಮಾಡಿದರು. 1954ರಲ್ಲಿ ಅವರನ್ನು ಕೊಲೆಮಾಡಲು ವಿಫಲ ಶ್ರಮ ನಡೆಸಲಾಯಿತು. 1965 ನವೆಂಬರ್ 8 ಮತ್ತು 9ರ ಮಧ್ಯರಾತ್ರಿಯಲ್ಲಿ ಅವರು ನಿಧನರಾದರು. ಅವರ ಪಾರ್ಥಿವ ಶರೀರವನ್ನು ರಬ್‌ವದ ಬಿಹಿಶ್ತಿ ಮಖ್‌ಬರದಲ್ಲಿ ದಫನ ಮಾಡಲಾಯಿತು.

52 ವರ್ಷಗಳ ಸುದೀರ್ಘ ಎರಡನೇ ಖಿಲಾಫತ್ ಕಾಲಘಟ್ಟ ಅಕ್ಷರಾರ್ಥದಲ್ಲಿ ವಾಗ್ದತ್ತ ಸುಧಾರಕ ಎಂಬ ವಿಶೇಷಣ ಅನ್ವರ್ಥಕವಾಗುವಂತೆ ಸಂಭವ ಬಹುಲವಾಗಿತ್ತು.



**ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ (ರಹಿಮಹುಲ್ಲಾಹ್)**
**ತೃತೀಯ ಖಲೀಫ (1965 ನವೆಂಬರ್ 9 - 1982 ಜೂನ್ 9)**

ವಾಗ್ದತ್ತ ಮಸೀಹರಿಗೆ ಒಬ್ಬ ಮೊಮ್ಮಗನ ಜನನದ ಕುರಿತು ಅಲ್ಲಾಹನಿಂದ ದಿವ್ಯಾರಿವು ಲಭಿಸಿತ್ತು. "ಹಖೀಖತುಲ್ ವಹ್ಯ್"ಯಲ್ಲಿ ಈ

ವಿಷಯವನ್ನು ಉಲ್ಲೇಖಿಸಲಾಗಿದೆ. ಖಲೀಫತುಲ್ ಮಸೀಹ್ ಸಾನಿ(ರ) ಅವರಿಗೆ ಹುಟ್ಟಿದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಎಂಬ ಪುತ್ರನ ಮೂಲಕ ಅದು ಈಡೇರಿತು. 1909ರಲ್ಲಿ ಅವರು ಜನಿಸಿದರು.

ಅವರು 13ನೇ ವಯಸ್ಸಿನಲ್ಲಿ ಖುರ್‌ಆನ್ ಹಾಫಿಝ್ ಆದರು. ಅವರು 1934ರಲ್ಲಿ ವಿವಾಹಿತರಾದ ಬಳಿಕ ಉನ್ನತ ವಿದ್ಯಾಭ್ಯಾಸ ಕ್ಕೋಸ್ಕರ ಇಂಗ್ಲೆಂಡಿಗೆ ಹೋದರು. ಆಕ್ಸ್‌ಫರ್ಡ್ ಯುನಿವರ್ಸಿಟಿಯಿಂದ ಸ್ನಾತಕೋತ್ತರ ಪದವಿ ಪಡೆದರು. 1938ರಲ್ಲಿ ಖಾದಿಯಾನಿಗೆ ಹಿಂತೆರಳಿದ ನಂತರ 1944ರ ವರೆಗೆ ಜಾಮಿಅ ಅಹ್ಮದಿಯಾದಲ್ಲಿ ಪ್ರೊಫೆಸರಾಗಿ ಸೇವೆಸಲ್ಲಿಸಿದರು. 1944ರಿಂದ, 1965ರಲ್ಲಿ ಖಲೀಫರಾಗಿ ಚುನಾಯಿತರಾಗುವವರೆಗೆ ರಬ್‌ವದಲ್ಲಿ ತಅ್‌ಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು.

ಖುದ್ದಾಮುಲ್ ಅಹ್ಮದಿಯಾ, ಅನ್ಸಾರುಲ್ಲಾಹ್, ಸದರ್ ಅಂಜುಮನ್ ಅಹ್ಮದಿಯಾ ಎಂಬೀ ಘಟಕಗಳ ಸದರ್ ಆಗಿಯೂ ಅವರು ಸೇವೆ ಸಲ್ಲಿಸಿದ್ದರು.

ಖಲೀಫತುಲ್ ಮಸೀಹ್ ಸಾಲಿಸ್ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್(ರಹ್) ಎರಡು ಮುಖ್ಯ ಯೋಜನೆಗಳನ್ನು ಘೋಷಿಸಿದರು. ಒಂದನೆಯದು, ಫಝ್ಲೆ ಉಮರ್ ಫೌಂಡೇಶನ್ ಫಂಡ್ – ಖಲೀಫತುಲ್ ಮಸೀಹ್ ಸಾನಿ(ರ) ಪ್ರಾರಂಭಿಸಿದ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಲಿಕ್ಕೋಸ್ಕರ ನಿಧಿ ಸಂಗ್ರಹಿಸುವ ಉದ್ದೇಶದಿಂದ ರೂಪಿಸಿದರು. ಎರಡನೆಯದು, ನುಸ್ರತ್ ಜಹಾನ್ ಫಂಡ್ – ಆ ಮೂಲಕ ಪಶ್ಚಿಮ ಆಫ್ರಿಕನ್ ರಾಷ್ಟ್ರಗಳಲ್ಲಿ ವಿದ್ಯಾಭ್ಯಾಸ ಮತ್ತು ಆರೋಗ್ಯ ಕೇಂದ್ರಗಳೂ ನೂರಾರು ಶಾಲೆಗಳೂ ಸ್ಥಾಪಿಸಲ್ಪಟ್ಟವು. ಅವರು ಅನೇಕ ಯುರೋಪ್ಯನ್ ಮತ್ತು ಆಫ್ರಿಕನ್ ರಾಷ್ಟ್ರಗಳಲ್ಲಿ ಪರ್ಯಟನೆ ಮಾಡಿದರು. ಸ್ಪೈನ್‌ನಲ್ಲಿ ಬಿಶಾರತ್ ಮಸ್‌ಜಿದ್ ಈ ಕಾಲದಲ್ಲಿ ನಿರ್ಮಿಸಲ್ಪಟ್ಟಿತು. ಈ ಮಸೀದಿಗೆ ಶಿಲಾಸ್ಥಾಪನೆ ಮಾಡುವ ಸಂದರ್ಭದಲ್ಲಿ Love For All Hatred For None ಎಂಬ ಘೋಷವಾಕ್ಯವನ್ನು ಸಾರಿದರು.

1974ರಲ್ಲಿ ಪಾಕಿಸ್ತಾನದ ಭುಟ್ಟೋ ಸರಕಾರ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಅಮುಸ್ಲಿಂ ಅಲ್ಪಸಂಖ್ಯಾತರಾಗಿ ಘೋಷಿಸಿತು. ಅಹ್ಮದಿಯರ ವಿಶ್ವಾಸ ಸ್ವಾತಂತ್ರ್ಯಕ್ಕೂ ಮುಖ್ಯಧಾರೆಯ ಸಾಮೂಹಿಕ ಜೀವಿತಕ್ಕೂ ಕಠಿಣ ಪ್ರತಿಬಂಧಕಗಳನ್ನು ಸೃಷ್ಟಿಸಿದ ಆ ಪರೀಕ್ಷಾ ಘಟ್ಟದಲ್ಲಿ ಸಂಯಮ ಪಾಲಿಸಲು ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರ ಮಹನೀಯ ನಾಯಕತ್ವ ಜಮಾಅತಿಗೆ ವರದಾನವಾಗಿತ್ತು.

1982 ಜೂನ್ 9ರಂದು ಅವರು ನಿಧನರಾದರು. ರಬ್‌ವದ ಬಿಹಿಶ್ತಿ ಮಖ್‌ಬರದಲ್ಲಿ ಅವರನ್ನು ದಫನಮಾಡಲಾಯಿತು.



**ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ (ರಹಿಮಹುಲ್ಲಾಹ್)**
**ಚತುರ್ಥ ಖಲೀಫ (1982 ನವೆಂಬರ್ 10 - 2003 ಎಪ್ರಿಲ್ 19)**

ಇತರ ಮೂರು ಖಿಲಾಫತಿನಲ್ಲಿದ್ದಂತೆ ಖಲೀಫತುಲ್ ಮಸೀಹ್ ರಾಬಿಅ್ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರಹ್) ಅವರ ಕಾಲ ಸಹ ಒಂದು ಸಂಘಟನೆಯ ಅಸ್ತಿತ್ವವನ್ನೇ ಬಾಧಿಸುವಂತಹ ಸತ್ವಪರೀಕ್ಷೆಗಳ ಮತ್ತು ವಿಧಿ ನಿರ್ಣಾಯಕ ತೀರ್ಮಾನಗಳದ್ದಾಗಿತ್ತು. ಆದರೆ ಖಿಲಾಫತಿನ ನೆಲೆನಿಲ್ಲುವಿಕೆ ಅಲ್ಲಾಹನ ಕೈಗಳಲ್ಲೆಂದೂ ಖಲೀಫರ ತೀರ್ಮಾನಗಳು ಅಲ್ಲಾಹನ ಇಂಗಿತಗಳ ಸಾರವೆಂದೂ ಆ ತೀರ್ಮಾನಗಳ ಪರಿಣಾಮ ಫಲಗಳು ನಮಗೆ ತಿಳಿಸಿಕೊಡುತ್ತವೆ.

ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರಹ್) ಖಿಲಾಫತ್ ವಹಿಸಿ ಸುಮಾರು ಒಂದೂವರೆ ವರ್ಷವಾದಾಗ 1984 ಎಪ್ರಿಲ್ 26ರಂದು ಪಾಕಿಸ್ತಾನದ ಅಧ್ಯಕ್ಷ ಝಿಯಾಉಲ್ ಹಖ್ ಅಹ್ಮದಿಯರ ವಿರುದ್ಧ ಆರ್ಡಿನೆನ್ಸ್ ಹೊರಡಿಸಿದರು. ಖಲೀಫತುಲ್ ಮಸೀಹ್ ರಾಬಿಅ್ ಪಾಕಿಸ್ತಾನದಲ್ಲಿದ್ದುಕೊಂಡು ಜಮಾಅತನ್ನು ನಡೆಸುವುದು ಅಸಾಧ್ಯವಾಯಿತು. ಆರ್ಡಿನೆನ್ಸ್ ಜಾರಿಗೆ ಬಂದ ಮೂರು ದಿವಸಗಳ ನಂತರ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಸಾಹಸಿಕವಾಗಿ ಅಲ್ಲಾಹನ ಸಂರಕ್ಷಣ ವಲಯದಲ್ಲಿ ಲಂಡನಿಗೆ ವಲಸೆ ಹೋದರು. ಆ ಬಳಿಕ ಖಿಲಾಫತಿನ ತಾತ್ಕಾಲಿಕ ಕೇಂದ್ರ ಯು.ಕೆ. ಆಯಿತು.

ಹಾಗೆ ಜಮಾಅತನ್ನು ನಿರ್ಮೂಲನ ಮಾಡುವ ಉದ್ದೇಶದಿಂದ ರೂಪಿಸಿದ ಆರ್ಡಿನೆನ್ಸ್ ಅಹ್ಮದಿಯತಿನ ತ್ವರಿತ ಪ್ರಗತಿಗೆ ಕಾರಣವಾಯಿತು. ಝಿಯಾಉಲ್ ಹಖ್‌ರ ಮರಣ ಮತ್ತು ಗಲ್ಫ್ ಯುದ್ಧದ ಕುರಿತು ಹಝ್ರತ್ ಖಲೀಫರು ನೀಡಿದ ಮುನ್ನೆಚ್ಚರಿಕೆಗಳು ಸರಿಯಾಗಿ ಈಡೇರಿದುದಕ್ಕೆ ಲೋಕವಿಡೀ ಸಾಕ್ಷಿಯಾಯಿತು.

1928ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತು ಸಯ್ಯಿದ ಮರ್ಯಮ್ ಬೇಗಂ ಅವರ ಪುತ್ರರಾಗಿ ಜನಿಸಿದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಭಾರತ, ಪಾಕಿಸ್ತಾನ ಮತ್ತು ಯುರೋಪಿನಲ್ಲಿ ವಿದ್ಯಾರ್ಜನೆ ಮಾಡಿದರು. ತಂದೆ ಎರಡನೇ ಖಲೀಫರಂತೆ ಅವರು ಪ್ರಗಲ್ಭ ಲೇಖಕರೂ ವಾಗ್ಮಿಯೂ ಆಗಿದ್ದರು. ಜಮಾಅತಿನ ವಿವಿಧ ವಿಭಾಗಗಳಲ್ಲಿ ಉನ್ನತ ಸ್ಥಾನಗಳನ್ನು ವಹಿಸಿದ್ದ ಅವರು ಅಸಾಮಾನ್ಯ ನಾಯಕತ್ವವನ್ನು ಪ್ರಕಟಿಸಿದ್ದರು.

ಲಂಡನ್ ಆಸ್ಥಾನ ಮಾಡಿ ನಾಲ್ಕನೆಯ ಖಲೀಫರ ಚಟುವಟಿಕೆಗಳು ಜಮಾಅತಿನ ಪ್ರಗತಿಗೆ ಹೊಸ ರೂಪವನ್ನು ನೀಡಿದವು. ಖಿಲಾಫತಿನ ಕೊನೆಯ ಹತ್ತು ವರ್ಷಗಳೊಳಗೆ 150 ಮಸೀದಿಗಳನ್ನೂ ಪ್ರಚಾರ ಕೇಂದ್ರಗಳನ್ನೂ ಸ್ಥಾಪಿಸಲಾಯಿತು. ಅವರು ಹೋಮಿಯೋಪಥಿ ಚಿಕಿತ್ಸಾ ಪದ್ಧತಿಯಲ್ಲಿ ನಿಪುಣರಾಗಿದ್ದರು. ಅವರ ಚಿಕಿತ್ಸಾ ಟಿಪ್ಪಣಿಗಳು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. ಅವರು ಪವಿತ್ರ ಖುರ್‌ಆನಿನ ಉರ್ದು ಭಾಷಾಂತರ ಮಾಡಿದ್ದಾರೆ. ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. Revelation, Rationality, Knowledge and Truth ಎಂಬ ಅವರ ಮಹದ್ಗ್ರಂಥ ಅವರ ಜ್ಞಾನಭಂಡಾರವನ್ನು ಸಾರುತ್ತದೆ.

ಆಧುನಿಕ ವಾರ್ತಾ ವಿನಿಮಯ ತಾಂತ್ರಿಕತೆಯನ್ನು ಯಥಾರ್ಥ ಇಸ್ಲಾಮಿನ ಪ್ರಚಾರಕ್ಕಾಗಿ ಖಲೀಫತುಲ್ ಮಸೀಹ್ ರಾಬಿಅ್(ರಹ್) ಫಲಪ್ರದವಾಗಿ ಉಪಯೋಗಿಸಿದರು. 1992ರಲ್ಲಿ ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ (MTA) ಎಂಬ ಸಂಪೂರ್ಣ ಇಸ್ಲಾಮಿಕ ಚಾನೆಲ್ ಸ್ಥಾಪಿಸಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮತ್ತು ಮಸೀಹ್ ಮೌಊದರ(ಅ) ಸಂದೇಶಗಳನ್ನು ಲೋಕದ ಎಲ್ಲ ಮೂಲೆಗಳಿಗೆ ತಲಪಿಸುವುದರಲ್ಲಿ ಕ್ರಾಂತಿಕಾರಕ ಸುಧಾರಣೆ ಮಾಡಿದರು. ಅವರ ಖುರ್‌ಆನ್ ದರ್ಸ್‌ಗಳು, ಹೋಮಿಯೋ ಕ್ಲಾಸ್‌ಗಳು, ಪ್ರಶ್ನೋತ್ತರ ಸಭೆಗಳು ಇತ್ಯಾದಿ ಜಗತ್ತಿನೆಲ್ಲೆಡೆ ಪ್ರಸಾರಗೊಳಿಸಲ್ಪಟ್ಟವು. ಕಾಲದ ಇಮಾಮರ ಜುಮುಅ ಖುತುಬಗಳನ್ನು ವಿಶ್ವಾಸಿಗಳು ನೇರವಾಗಿ ಶ್ರವಿಸಿದರು.

ಅವರು ಜಮಾಅತಿನ ಭಾವಿ ಬೇಡಿಕೆಯ ಮಾನವ ಸಂಪನ್ಮೂಲವನ್ನು ಅರಿತು ಕೊಂಡು ದೂರದೃಷ್ಟಿಯಿಂದ 1987ರಲ್ಲಿ ಘೋಷಿಸಿದ ಒಂದು ದಿವ್ಯ ಯೋಜನೆ "ವಖ್ಫೆ ನೌ" ಆಗಿದೆ. ಜಮಾಅತಿನ ಸೇವೆಗೆ ಸಮರ್ಪಿಸಲ್ಪಟ್ಟ ಜಗತ್ತಿನೆಲ್ಲೆಡೆ ಸಾವಿರಾರು ಮಕ್ಕಳು ಇಂದು "ವಖ್ಫೆ ನೌ" ನಲ್ಲಿ ಸೇರಿದ್ದಾರೆ.


ವಿವಿಧ ದೇಶಗಳನ್ನು ಸಂದರ್ಶಿಸಿ ಜಮಾಅತಿನ ಸದಸ್ಯರನ್ನು ಸಂಪರ್ಕಿಸಿದ ಅವರು ವಿಶ್ವಾಸಿಗಳಲ್ಲಿ ಖಿಲಾಫತಿನೊಂದಿಗಿರುವ ವಿಧೇಯತೆ ಮತ್ತು ಸ್ನೇಹವನ್ನು ವೃದ್ಧಿಗೊಳಿಸಿದರು. ಅವರು ತನ್ನ ಪರ್ಯಟನೆಗಳಲ್ಲಿ ಪ್ರಶ್ನೋತ್ತರ ಸಭೆಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಇಸ್ಲಾಮಿನ ಕುರಿತು ಇರುವ ಸಂಶಯಗಳನ್ನು ದೂರೀಕರಿಸುವುದರಲ್ಲಿ ಬಹಳ ಶ್ರದ್ಧೆವಹಿಸಿದ್ದರು.

ಖಾದಿಯಾನ್ ಜಲ್ಸಾ ಸಾಲಾನದ ಶತಾಬ್ದ ಆಚರಣೆ 1991ರಲ್ಲಿ ಖಲೀಫತುಲ್ ಮಸೀಹ್ ರಾಬಿಅ್(ರಹ್) ಭಾಗವಹಿಸಿದರು. ಹಾಗೆ ಭಾರತ–ಪಾಕ್ ವಿಭಜನೆಯ ನಂತರ ಮಸೀಹ್ ಮೌಊದರ(ಅ) ಜನ್ಮನಾಡನ್ನು ಸಂದರ್ಶಿಸಿದ ಮೊತ್ತಮೊದಲಿನ ಖಲೀಫ ಅವರಾದರು.

ಅವರು "ಮರ್ಯಮ್ ಶಾದಿ ಫಂಡ್" ರೂಪಿಸಿ, ಆರ್ಥಿಕವಾಗಿ ಹಿಂದುಳಿದ ಜಮಾಅತಿನ ಕುಟುಂಬಗಳ ಹೆಣ್ಮಕ್ಕಳಿಗೆ ವಿವಾಹಕ್ಕಾಗಿ ಆರ್ಥಿಕ ಸಹಾಯ ನೀಡುವ ವ್ಯವಸ್ಥೆ ಮಾಡಿದರು.

ಸಾಮೂಹಿಕ ಸೇವಾ ಕ್ಷೇತ್ರದಲ್ಲಿ ಅಹ್ಮದಿಯಾ ಜಮಾಅತಿನ ಹೆಚ್ಚು ಕ್ರಿಯಾತ್ಮಕ ಸೇವೆ ಅನಿವಾರ್ಯವೆಂಬ ಅಂತರ್ದೃಷ್ಟಿ "ಹ್ಯೂಮನಿಟಿ ಫಸ್ಟ್" ಎಂಬ ಸೇವಾಸಂಘಟನೆಯನ್ನು ರೂಪಿಸಲು ಹಝ್ರತ್ ಖಲೀಫರಿಗೆ ಪ್ರೇರಣೆ ನೀಡಿತು. ಆಫ್ರಿಕಾದ ದರಿದ್ರ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಲ್ಲಿ, ಪಾಕಿಸ್ತಾನ್, ಇರಾನ್, ಇಂಡೋನೇಷ್ಯಾ ಮುಂತಾದೆಡೆ ಉಂಟಾದ ಪ್ರಕೃತಿ ದುರಂತಗಳಲ್ಲಿ ಅತ್ಯಂತ ಪ್ರಶಂಸನೀಯವಾದ ಸೇವೆಗಳನ್ನು ಹ್ಯೂಮನಿಟಿ ಫಸ್ಟ್‌ನ ಅಧೀನದಲ್ಲಿ ನಡೆಸಲಾಯಿತು.

ಅಹ್ಮದಿಯಾ ಜಮಾಅತಿಗೆ ಹೊಸ ಶತಮಾನದಲ್ಲಿ ಶಕ್ತಿಯುತವಾಗಿ ಮುನ್ನೇರಲು ಪರ್ಯಾಪ್ತವಾದ ನೆಲೆಗಟ್ಟನ್ನು ಸ್ಥಾಪಿಸಿದ ನಂತರ ಹಝ್ರತ್ ಖಲೀಫರು ಇಹಲೋಕ ವಾಸ ತ್ಯಜಿಸಿದರು. 2003 ಎಪ್ರಿಲ್ 18ರಂದು ಖಲೀಫತುಲ್ ಮಸೀಹ್ ರಾಬಿಅ್(ರಹ್) ಲಂಡನಿನ ಫಝ್ಲ್ ಮಸ್ಜಿದ್‌ನಲ್ಲಿ ತನ್ನ ಕೊನೆಯ ಜುಮುಅ ಖುತುಬ ನಿರ್ವಹಿಸಿದರು. 2003 ಎಪ್ರಿಲ್ 19ರಂದು ಮಸೀಹ್ ಮೌಊದರ ನಾಲ್ಕನೆಯ ಖಲೀಫರು ನಿಧನರಾದರು.



**ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ (ಅಯ್ಯದಹುಲ್ಲಾಹ್)**
**ಪಂಚಮ ಖಲೀಫ**

1950 ಸೆಪ್ಟೆಂಬರ್ 15ರಂದು ಖಲೀಫತುಲ್ ಮಸೀಹ್ ಖಾಮಿಸ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ (ಅಯ್ಯದಹುಲ್ಲಾಹ್) ಅವರ ಜನನ. ಅವರ ಪಿತ ಹಝ್ರತ್ ಮಿರ್ಝಾ ಮನ್‌ಸೂರ್ ಅಹ್ಮದ್ ಸಾಹೇಬ್ ಹಝ್ರತ್ ಮಸೀಹ್ ಮೌಊದರ(ಅ) ಮೊಮ್ಮಗ. ಅವರ ಮಾತೆ ಹಝ್ರತ್ ನಾಸಿರ ಬೇಗಮ್ ಸಾಹಿಬ. ರಬ್‌ವದ ತಅ್ ಮುಲ್ ಇಸ್ಲಾಂ ಕಾಲೇಜಿನಿಂದ ಪದವಿ ಪಡೆದ ಅವರು ಅಗ್ರಿಕಲ್ಚರ್ ಯುನಿವರ್ಸಿಟಿಯಿಂದ ಅಗ್ರಿಕಲ್ಚರಲ್ ಇಕಾನಮಿಕ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. 17ನೇ ವಯಸ್ಸಿನಲ್ಲಿ ವಸಿಯ್ಯತ್ ಮಾಡಿ 'ಮೂಸಿ' ಆದ ಅವರು 1977ರಲ್ಲಿ ತನ್ನ ಜೀವಿತವನ್ನು ಜಮಾಅತಿಗೆ ಸಮರ್ಪಿಸಿದರು. ಅವರು ಅನೇಕ ವರ್ಷಗಳ ಕಾಲ ಆಫ್ರಿಕಾದಲ್ಲಿ ಸೇವೆಗೈದರು. ಖಲೀಫತುಲ್ ಮಸೀಹ್ ಸಾಲಿಸ್‌ರವರ ನಿರ್ದೇಶನ ಪ್ರಕಾರ ನುಸ್ರತ್ ಜಹಾನ್ ಯೋಜನೆಯ ಭಾಗವಾಗಿ ಅವರು ಘಾನ ತಲಪಿದರು. ಘಾನದಲ್ಲಿ ಅಹ್ಮದಿಯಾ ಸೆಕಂಡರಿ ಸ್ಕೂಲಿನ ಪ್ರಿನ್ಸಿಪಾಲ್ ಮತ್ತು ಅಹ್ಮದಿಯಾ ಅಗ್ರಿಕಲ್ಚರ್ ಫಾರ್ಮಿನ ಮ್ಯಾನೇಜರ್ ಆಗಿ ಸೇವೆಸಲ್ಲಿಸಿದರು.

ಘಾನವನ್ನು ಸಾಂಪತ್ತಿಕ ಅಭಿವೃದ್ಧಿಯೆಡೆಗೆ ಮತ್ತು ಸ್ವಯಂ ಪೂರ್ಣತೆಯ ಉನ್ನತಿಗೇರಿಸಲು ಘಾನದ ಮಣ್ಣಿನಲ್ಲಿ ಲಾಭದಾಯಕವಾಗಿ ಗೋಧಿ ಬೆಳೆಸುವುದರಲ್ಲಿ ಮುಖ್ಯ ಪಾತ್ರವಹಿಸಿದ್ದು ಖಲೀಫ ಆಗುವುದಕ್ಕೆ ಮುಂಚೆ ಅವರು ಮಾಡಿದ ಗಮನಾರ್ಹ ಸಾಧನೆಯಾಗಿದೆ. ಪಾಕಿಸ್ತಾನದಲ್ಲಿ ನಾಝಿರ್ ಅಅ್‌ಲಾ ಆಗಿ ಸೇವೆಸಲ್ಲಿಸುತ್ತಿರುವಾಗ ಅವರು ಖಲೀಫರಾಗಿ ಚುನಾಯಿತರಾದರು.

1999ರಲ್ಲಿ ರಬ್‌ವದಲ್ಲಿ ಅವರನ್ನು ಅಹ್ಮದಿಯಾ ವಿರುದ್ಧ ನಿಯಮಾನುಸಾರ ಬಂಧಿಸಿ 10 ದಿವಸ ಸೆರೆಮನೆಯಲ್ಲಿಡಲಾಯಿತು. ಖುರ್‌ಆನಿನ ವಚನಗಳನ್ನು ಅಪಮಾನಿಸಿದ್ದಾರೆಂಬ ಸುಳ್ಳಾರೋಪ ಹೊರಿಸಿ ಕೆಲವು ಮುಲ್ಲಾಗಳು ಮತ್ತು ಅನುಯಾಯಿಗಳು ಅವರ ಬಂಧನಕ್ಕೆ ಕಾರಣರಾದರು.

2003ರಲ್ಲಿ ಖಿಲಾಫತ್ ವಹಿಸಿದ ನಂತರ ಖಲೀಫತುಲ್ ಮಸೀಹ್ ಖಾಮಿಸ್ ಪವಿತ್ರ ಖುರ್‌ಆನಿನ ಅಧ್ಯಯನಕ್ಕೆ ಪ್ರತ್ಯೇಕವಾದ ತಅ್‌ಲೀಮುಲ್ ಖುರ್‌ಆನ್ ವಖ್ಫೆ ಆರ್ಝಿ ಎಂಬ ನಝಾರತ್ ಏರ್ಪಡಿಸಿದರು. ಖಲೀಫತುಲ್ ಮಸೀಹ್ ರಾಬಿಅ್ ಅವರ ಲೇಖನ, ಖುತುಬ ಮತ್ತು ಗ್ರಂಥಗಳನ್ನು ಪ್ರಕಟಿಸಲಿಕ್ಕೂ ಸಂರಕ್ಷಿಸಲಿಕ್ಕೂ ತಾಹಿರ್ ಫೌಂಡೇಶನ್ ರೂಪಿಸಿದರು. ಹೃದ್ರೋಗ ಚಿಕಿತ್ಸೆಗೋಸ್ಕರ ಆಧುನಿಕ ಸಲಕರಣೆ ಸವಲತ್ತುಗಳಿಂದ ಕೂಡಿದ ತಾಹಿರ್ ಹಾರ್ಟ್ ಫೌಂಡೇಶನ್ ಪಾಕಿಸ್ತಾನದಲ್ಲಿ ಆರಂಭಿಸಲ್ಪಟ್ಟಿತು.

ಖಲೀಫತುಲ್ ಮಸೀಹ್ ಖಾಮಿಸ್ ತನ್ನ ಖುತುಬಗಳಲ್ಲೆಲ್ಲಾ ನಮಾಝ್ ಮತ್ತು ಇಬಾದತ್‌ಗಳ ಕುರಿತು ಅತೀವ ಶ್ರದ್ಧೆ ಮತ್ತು ಸಮರ್ಪಣೆ ಬೇಕೆಂದು ನಮಗೆ ಪದೇ ಪದೇ ಉಪದೇಶಿಸುತ್ತಿದ್ದಾರೆ.

ಯು.ಕೆ.ಯ ಅತಿ ದೊಡ್ಡ ಮಸೀದಿ "ಬೈತುಲ್ ಫುತೂಹ್"ನ ಉದ್ಘಾಟನೆಯನ್ನು ಅವರು 2004ರಲ್ಲಿ ನಿರ್ವಹಿಸಿದರು. ಬರ್ಲಿನಿನ ಮೊತ್ತಮೊದಲಿನ ಮಸೀದಿಗೆ ಅವರು 2006ರಲ್ಲಿ ಶಿಲಾನ್ಯಾಸ ಮಾಡಿ 2008ರಲ್ಲಿ ಉದ್ಘಾಟನೆ ಮಾಡಿದರು. ಇಸ್ಲಾಂ ಮತ್ತು ಮುಹಮ್ಮದ್ ಪೈಗಂಬರರನ್ನು(ಸ) ಅವಹೇಳಿಸುವ ವ್ಯಂಗ್ಯಚಿತ್ರಗಳು ಪ್ರಕಟಿಸಲ್ಪಟ್ಟಾಗ ಅದಕ್ಕೆ ತಕ್ಕುದಾದ ಉತ್ತರ ಕೊಟ್ಟು ತಪ್ಪು ಭಾವನೆಗಳನ್ನು ನೀಗಿಸಲು ಕ್ರಮಕೈಗೊಂಡರು.

ಈ ಅಲ್ಪಕಾಲದಲ್ಲಿ ಆಫ್ರಿಕಾ, ಕೆನಡಾ, ಯು.ಎಸ್.ಎ., ಪೂರ್ವ ಯುರೋಪ್ಯನ್ ರಾಜ್ಯಗಳು ಸೇರಿ ಜಗತ್ತಿನ ವಿವಿಧ ಕಡೆಗಳಲ್ಲಿ ನೂರಾರು ಜಮಾಅತ್ ಘಟಕಗಳನ್ನು ಅವರು ಸಂದರ್ಶಿಸಿದ್ದಾರೆ.

2005ರಲ್ಲಿ ಖಾದಿಯಾನಿನಲ್ಲಿ ಜರಗಿದ ಜಲ್ಸಾ ಸಾಲಾನದಲ್ಲಿ ಅವರು ಭಾಗವಹಿಸಿದರು. 2008 ಡಿಸೆಂಬರ್‌ನಲ್ಲಿ ಖಿಲಾಫತ್ ಜೂಬಿಲಿ ಜಲ್ಸಾದಲ್ಲಿ ಹಝ್ರತ್ ಖಲೀಫರನ್ನು ಸ್ವಾಗತಿಸಲು ಭಾರತದ ಅಹ್ಮದಿಯರು

# ಮುಸ್ಲಿಂ ಲೋಕ ಮತ್ತು ಖಿಲಾಫತ್

❖ ಮುಹಮ್ಮದ್ ಯೂಸುಫ್

ಅಲ್ಲಾಹನು ಸತ್ಯವಿಶ್ವಾಸಿಗಳಾದ ಮುಸ್ಲಿಮರಿಗೆ ವಾಗ್ದಾನ ಮಾಡಿದ ಒಂದು ದಿವ್ಯಾನುಗ್ರಹವಾಗಿದೆ ಖಿಲಾಫತ್.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ:

**"ನಿಮ್ಮ ಪೈಕಿ ಸತ್ಯವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಪಟ್ಟಿರುವ ಧರ್ಮವನ್ನು ಅವರಿಗೆ ಬಲಪಡಿಸಿಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು". (21 : 56)**

ಪವಿತ್ರ ಖುರ್‌ಆನ್‌ನಲ್ಲಿರುವ ಈ ವಚನದಿಂದ ತಿಳಿದು ಬರುವುದೇನೆಂದರೆ,

1. ಮುಸ್ಲಿಮರು ಸತ್ಯವಿಶ್ವಾಸ ಮತ್ತು ಸತ್ಕರ್ಮಗಳನ್ನು ಕೈಗೊಳ್ಳುವರಾದರೆ, ಅಲ್ಲಾಹನಿಂದ ಅವರಿಗೆ ಪಾರಿತೋಷಕವೆಂಬಂತೆ ಲಭಿಸುವ ಮಹತ್ತಾದ ಅನುಗ್ರಹ ಖಿಲಾಫತ್ ವ್ಯವಸ್ಥೆ ಆಗಿದೆ.

2. ಧರ್ಮಕ್ಕೆ ಸುಸ್ಥಿರತೆ ಮತ್ತು ಪುರೋಗತಿ ಉಂಟಾಗುವುದು ಖಿಲಾಫತ್ ಮೂಲಕವಾಗಿದೆ.

3. ಸಮಸ್ಯೆಗಳು ಉದ್ಭವಿಸುವಾಗ ಖಿಲಾಫತ್ ಮೂಲಕ ಅದರ ನಿವಾರಣೆಯಾಗಿ ಶಾಂತಿ ಮತ್ತು ನೆಮ್ಮದಿ ಉಂಟಾಗುವುದು.

4. ಖಲೀಫ ಮತ್ತು ಅವರ ಅಧೀನದಲ್ಲಿರುವ ಜಮಾಅತ್ ಶಿರ್ಕ್‌ನಲ್ಲಿ ಮುಳುಗದೆ ಅಲ್ಲಾಹನನ್ನು ಮಾತ್ರ ಆರಾಧಿಸುವವರಾಗಿರುತ್ತಾರೆ.

ಅಲ್ಲಾಹನ ವಾಗ್ದಾನ ಪ್ರಕಾರ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಖುಲಫಾ ಉರ್ರಾಶಿದೀನ್ ಎಂದು ಕರೆಯಲ್ಪಡುವ ನಾಲ್ವರು ಖಲೀಫರ ಸುವರ್ಣ ಕಾಲವನ್ನು ಲೋಕವು ಕಂಡಿತು. ಆ ಬಳಿಕ ಹಝ್ರತ್ ರಸೂಲುಲ್ಲಾಹ್(ಸ) ಭವಿಷ್ಯ ನುಡಿದ ಪ್ರಕಾರ ಖಿಲಾಫತ್‌ನಲ್ಲಿ ರೂಪಬೇಧಗಳು ತೋರಿ ಬಂದವು. ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ನುಡಿದಿದ್ದರು :

**"ಅಲ್ಲಾಹನು ಇಚ್ಛಿಸುವ ಕಾಲದವರೆಗೆ ನಿಮ್ಮಲ್ಲಿ ನುಬುವ್ವತ್ (ಪ್ರವಾದಿತ್ವ) ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಮೇಲೆತ್ತುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ನೆಲೆಗೊಳ್ಳುವುದು; ಬಳಿಕ ಅದು ಕೊನೆಗೊಳ್ಳುವುದು. ಅನಂತರ ಅಲ್ಲಾಹನು ಇಚ್ಛಿಸುವ ಕಾಲದವರೆಗೆ ಸ್ವೇಚ್ಛಾಧಿಪತ್ಯ ನೆಲೆಗೊಳ್ಳುವುದು; ಬಳಿಕ ಅದು ಕೊನೆಗೊಳ್ಳುವುದು. ಅನಂತರ ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಬಲಾತ್ಕಾರದಿಂದ ಕೂಡಿದ ಆಡಳಿತೆ ನೆಲೆಗೊಳ್ಳುವುದು; ಬಳಿಕ ಅದು ಸಹ ಕೊನೆಗೊಳ್ಳುವುದು. ಅನಂತರ 'ಖಿಲಾಫತ್ ಅಲಾ ಮಿನ್ ಹಾಜಿನ್ನುಬುವ್ವತ್' (ನುಬುವ್ವತಿನ ಪಥದಲ್ಲಿರುವ ಖಿಲಾಫತ್ ಸ್ಥಾಪಿತವಾಗುವುದು." (ಮಿಶ್ಕಾತ್ – ಕಿತಾಬುರ್ರಿಖಾಖ್)**

ಚರಿತ್ರೆಯನ್ನು ನಾವು ಅಧ್ಯಯನ ಮಾಡುವುದಾದರೆ ಹಝ್ರತ್ ರಸೂಲುಲ್ಲಾಹ್‌ರವರ(ಸ) ಈ ಭವಿಷ್ಯ ನುಡಿಯು ಅಕ್ಷರಶಃ ಸತ್ಯವಾಗಿ ಸಿದ್ಧತೆ ನಡೆಸುತ್ತಿದ್ದಾರೆ.

ಖಿಲಾಫತಿನ ಅನುಗ್ರಹ ಮತ್ತು ಸಂರಕ್ಷಣೆಯಲ್ಲಿ ಜಗತ್ತಿನಾದ್ಯಂತವಿರುವ ಕೋಟಿಗಟ್ಟಲೆ ಅಹ್ಮದಿಯರು ಖಿಲಾಫತಿನ ಶತವಾರ್ಷಿಕ ಆಚರಿಸುತ್ತಾರೆ. ಖುದ್‌ರತೆ ಸಾನಿಯದ (ದ್ವಿತೀಯ ದಿವ್ಯಶಕ್ತಿಯ) ಅನುಗ್ರಹಗಳು ತಮ್ಮಲ್ಲಿ ನೆಲೆನಿಲ್ಲಲಿಕ್ಕೂ ಮುಂದಿನ ಶತಮಾನಗಳಲ್ಲಿ ಹೆಚ್ಚು ಮಹತ್ತರ ವಿಜಯಗಳನ್ನು ಗಳಿಸಲಿಕ್ಕೂ ಕಾಲದ ಖಲೀಫರೊಡನೆ ಪರಿಪೂರ್ಣ ಅನುಸರಣೆ, ಅಲ್ಲಾಹನ ಜಮಾಅತಿಗೋಸ್ಕರ ಆತ್ಮಸಮರ್ಪಣೆ ಮತ್ತು ನಿರಂತರ ಪ್ರಾರ್ಥನೆ ಅತ್ಯಾವಶ್ಯಕ.

ವಾಗ್ದತ್ತ ಮಸೀಹರ ಮಾತುಗಳನ್ನು ನಮ್ಮಲ್ಲಿ ಪ್ರತಿಯೊಬ್ಬರು ಈ ಸಂದರ್ಭದಲ್ಲಿ ನೆನಪಿಡಬೇಕಾಗಿದೆ:

"ಅಲ್ಲಾಹನ ದಿವ್ಯಶಕ್ತಿಯ ಎರಡನೆಯ ಪ್ರಕಟಣೆಯನ್ನು ನೀವು ನೋಡುವುದು ಅವಶ್ಯವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಏಕೆಂದರೆ ಅದು ಶಾಶ್ವತವಾಗಿದೆ. ಅದರ ಪರಂಪರೆ ಖಿಯಾಮತ್ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟುಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ದಿವ್ಯಶಕ್ತಿಯನ್ನು ನಿಮಗಾಗಿ ಕಳುಹಿಸಿಕೊಡುವನು. 'ಬರಾಹೀನೆ ಅಹ್ಮದಿಯಾ' ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದಾನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದಾನ ಪ್ರಕಾರ ದ್ವಿತೀಯ ದಿವ್ಯಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು.

"ನಮ್ಮ ಅಲ್ಲಾಹನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು. ಅವನು ವಾಗ್ದಾನ ಮಾಡಿದುದೆಲ್ಲವನ್ನೂ ನಿಮಗೆ ತೋರಿಸುವನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು.

"ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಸಾಕಾರ ಪಡೆದವನಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯಶಕ್ತಿ ಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. ಪ್ರತಿಯೊಂದು ದೇಶದಲ್ಲಿರುವ ಸಾತ್ವಿಕರಾದ ಜನರ ಪ್ರತಿಯೊಂದು ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಇರಬೇಕು. ಅದರ ಫಲಸ್ವರೂಪವಾಗಿ ದ್ವಿತೀಯ ದಿವ್ಯಶಕ್ತಿ ಆಕಾಶದಿಂದ ಅವತೀರ್ಣವಾಗಿ ನಿಮ್ಮ ಅಲ್ಲಾಹನು ಇಷ್ಟು ಶಕ್ತಿಶಾಲಿಯಾದ ಅಲ್ಲಾಹನೆಂದು ತೋರಿಸಿಕೊಡುವಂತಾಗಲಿ. ನಿಮ್ಮ ಮರಣವು ಸಮೀಪವಾಗಿದೆ ಎಂದು ನೀವು ಗ್ರಹಿಸಿರಿ. ಆ ಘಳಿಗೆ ಯಾವಾಗ ಎಂದು ನಿಮಗೆ ತಿಳಿಯದು." (ಅಲ್‌ವಸಿಯ್ಯತ್)

ಈಡೇರಿದುದಾಗಿ ಕಾಣಬಹುದು. ಖುಲಫಾಉರ್ರಾಶಿದರ ಸುವರ್ಣ ಖಿಲಾಫತ್ ಕಾಲದ ನಂತರ ಸ್ವೇಚ್ಛಾಧಿಪತ್ಯದ ಖಿಲಾಫತ್, ಬಲಾತ್ಕಾರದಿಂದ ಕೂಡಿದ ಖಿಲಾಫತ್, ದಬ್ಬಾಳಿಕೆಯ ಖಿಲಾಫತ್ ನೆಲೆಗೊಂಡು ಅಂತ್ಯವನ್ನು ಕಂಡವು. ಅಮವಿಯ್ಯ ಖಿಲಾಫತ್, ಅಬ್ಬಾಸಿಯಾ ಖಿಲಾಫತ್, ಉಸ್ಮಾನಿಯಾ ಖಿಲಾಫತ್ ಎಂಬ ರಾಜಾಧಿಪತ್ಯ ರೂಪದ ಖಿಲಾಫತ್ ಸುಮಾರು 1300 ವರ್ಷಗಳ ಕಾಲ ನೆಲೆಗೊಂಡಿತ್ತು. 1924ರಲ್ಲಿ ತುರ್ಕಿ ಖಿಲಾಫತಿನ ಪತನದಿಂದ ಇಸ್ಲಾಮಿನ ನಾಮ ಮಾತ್ರ ಖಿಲಾಫತ್ ಕೂಡಾ ಅಂತ್ಯಗೊಂಡಿತು.

ಆ ಬಳಿಕ ಒಬ್ಬ ಖಲೀಫನನ್ನು ನಿಶ್ಚಯಲಿಕ್ಕೋಸ್ಕರ ಕೈರೋದಲ್ಲೂ ಮಕ್ಕಾದಲ್ಲೂ ಅನೇಕ ಇಸ್ಲಾಮಿಕ ಸಮ್ಮೇಳನಗಳು ನಡೆದರೂ ಅವೆಲ್ಲ ನಿಷ್ಫಲವಾದವು. ಗಾಂಧೀಜಿಯವರ ನೆರವಿನೊಂದಿಗೆ ಭಾರತದಲ್ಲಿ ಖಿಲಾಫತ್ ಚಳುವಳಿಯನ್ನು ಆರಂಭಿಸಿದರೂ ಅದು ಸಹ ವ್ಯರ್ಥವಾಯಿತು.

ತುರ್ಕಿ ಖಿಲಾಫತ್ ಅಂತ್ಯಗೊಂಡಾಗ ಅದು ಮುಸ್ಲಿಂ ಲೋಕವನ್ನು ತಲ್ಲಣಗೊಳಿಸಿತ್ತು. ಬ್ರಿಟಿಷರ ವಿರುದ್ಧ ಭಾರತದ ಸ್ವಾತಂತ್ರ್ಯಕ್ಕಾಗಿ ತೀವ್ರವಾಗಿ ಹೋರಾಟ ನಡೆಸಿದ್ದ ಧೀರ ವೀರರಾಗಿದ್ದ ಮೌಲಾನ ಮುಹಮ್ಮದ್ ಆಲಿ ಪ್ರಥಮ ಮಹಾಯುದ್ಧದಲ್ಲಿ ಖಿಲಾಫತಿನ ಆಸ್ಥಾನವಾಗಿದ್ದ ತುರ್ಕಿಸ್ಥಾನವು ಪತನಗೊಳ್ಳಲಿರುವ ವಿಷಯ ತಿಳಿಯುತ್ತಲೇ ದಿಗ್ಭ್ರಮೆಗೊಂಡು ದುಃಖಾತಿರೇಕದಿಂದ ತತ್ತರಿಸಿ ಆತ್ಮಹತ್ಯೆಮಾಡಲು ಉದ್ಯುಕ್ತರಾಗಿದ್ದರು ಎಂಬ ವಿಚಾರ ಖಿಲಾಫತಿನ ಮಹತ್ವವನ್ನು ಸಾರುತ್ತದೆ. ಖಿಲಾಫತ್ ಇಲ್ಲದಿದ್ದರೆ ಶುಕ್ರವಾರದ ಜುಮುಅ ಖುತುಬ ನಡೆಸಬೇಕಾದ ಅಗತ್ಯವಿಲ್ಲವೆಂದು ಸಹ ಕೆಲವು ಮುಸ್ಲಿಂ ಪಂಡಿತರು ಹೇಳಿಕೆ ನೀಡಿದ್ದರು.

ತುರ್ಕಿ ಖಿಲಾಫತಿನ ಅಧಃಪತನವಾದ ಬಳಿಕ ಖಲೀಫತುಲ್ ಮುಸ್ಲಿಮೀನ್ ಆಗಲು ಹಂಬಲಿಸಿದ ಹಲವರು ಪರಾಜಿತರೂ ಅಪಮಾನಿತರೂ ಆದರು. ಅವರಲ್ಲಿ ಕೆಲವರ ಉದಾಹರಣೆಯನ್ನು ಕೊಡಲು ನಾನು ಬಯಸುತ್ತೇನೆ.

### ಶರೀಫ್ ಹುಸೈನ್

ಉಸ್ಮಾನಿಯಾ ಖಿಲಾಫತ್ ಕೊನೆಗೊಂಡಾಗ, ಅರಬರ ನಾಯಕ ನಾಗಿದ್ದ ಶರೀಫ ಹುಸೈನ್ ಖಿಲಾಫತಿನ ಅಧಿಕಾರ ವಹಿಸಲು ಸ್ವಯಂ ಮುಂದೆ ಬಂದರು. ಸ್ವಯಂ ಖಲೀಫ ಆಗಿ ಘೋಷಿಸುವುದು ಅಥವಾ ಖಲೀಫ ಸ್ಥಾನಕ್ಕಾಗಿ ಬಯಸುವುದು ಇಸ್ಲಾಮಿಕ ತತ್ವಾನುಸಾರ ಸಲ್ಲದು. ಅಂತಹ ಒಬ್ಬ ವ್ಯಕ್ತಿಯನ್ನು ಖಲೀಫ ಮಾಡಬಾರದೆಂಬುದು ಪೈಗಂಬರರ(ಸ) ಉಪದೇಶವಾಗಿದೆ. ಆದರೆ ಶರೀಫ್ ಹುಸೈನ್ ತಾನು ಖಲೀಫ ಎಂದು ಘೋಷಿಸಿದಾಗ, ಅರಬಿಯರು ಅವರನ್ನು ಬೆಂಬಲಿಸಿದರು.

ಆದರೆ ತನ್ಮಧ್ಯೆ ಇಬ್ನು ಸಊದ್ ರಂಗಪ್ರವೇಶ ಮಾಡಿದರು. ಅವರು ಶರೀಫ್ ಹುಸೈನರ ನಿಜರೂಪವನ್ನು ಬಯಲುಗೊಳಿಸಿದರು. ಅರಬಿಯರನ್ನೂ ಮುಸ್ಲಿಂ ಲೋಕವನ್ನೂ ಶರೀಫ್ ಹುಸೈನರಿಗೆ ವಿರುದ್ಧವಾಗಿ ಛೂಬಿಟ್ಟರು. ಕೊನೆಗೆ ಶರೀಫ್ ಹುಸೈನ್ ಸೋತು ಅಪಮಾನಿತರಾದರು.

ಶರೀಫ್ ಹುಸೈನ್ ಪರಾಜಿತರಾದ ಸಂದರ್ಭದಲ್ಲಿ ಇಬ್ನು ಸಊದ್‌ರನ್ನು ಖಲೀಫ ಮಾಡಲಿಕ್ಕಾಗಿ ಕೆಲವರು ಪ್ರಯತ್ನಿಸಿ ನೋಡಿದರು. ಮೌಲಾನ ಮುಹಮ್ಮದಲಿ ಕೂಡ ಅದಕ್ಕೆ ಪ್ರೇರೇಪಣೆ ನೀಡಿದರು. ಆದರೆ ಇಬ್ನು ಸುಊದ್ ಖಲೀಫ ಆಗಲು ಸಿದ್ಧರಾಗಲಿಲ್ಲ.

### ಫುಆದ್ ರಾಜ

1930-33 ಕಾಲದಲ್ಲಿ ಈಜಿಪ್ಟಿನ ಫುಆದ್ ರಾಜ ಖಲೀಫ ಆಗಲು ಬಯಸಿದವರಲ್ಲಿ ಒಬ್ಬರಾಗಿದ್ದರು. ಅವರ ಆಡಳಿತಾಕ್ರಮ ಏನೂ ತೃಪ್ತಿಕರವಾಗಿರಲಿಲ್ಲ. ಫುಹಾದ್‌ರನ್ನು ಅವರ ಜನರೇ ದ್ವೇಷಿಸುತ್ತಿದ್ದರು. ಅವರನ್ನು ಬೆಂಬಲಿಸಲು ಯಾರೂ ಇರಲಿಲ್ಲ.

### ಫಾರೂಕ್ ರಾಜ

1936ರಲ್ಲಿ ಫುಆದರ ಪುತ್ರ ಫಾರೂಖ್, ರಾಜನಾದ ನಂತರ ಖಲೀಫ ಆಗಲು ಇಚ್ಛಿಸಿದರು. ಹಾಗೆ ಅವರು ಅದಕ್ಕೋಸ್ಕರ ಗಡ್ಡ ಬೆಳೆಸಲು ತೊಡಗಿ ಭಯಭಕ್ತಿಯ ತೋರ್ಪಡಿಕೆಯಲ್ಲಿ ನಿರತರಾದರು. ಆದರೆ ಅವರ ಅನೈತಿಕ ಜೀವಿತ ಎಲ್ಲೆಡೆ ಪ್ರಚುರಗೊಂಡಿತ್ತು. ತನ್ನ ಜೀವಿತ ಕ್ರಮವನ್ನು ಸರಿಪಡಿಸಲು ಒಮ್ಮೆ ಚೌಧರಿ ಮುಹಮ್ಮದ್ ಝಫರುಲ್ಲಾ ಖಾನರು ಅವರನ್ನು ಉಪದೇಶಿಸಿದ್ದರು. ಆದರೆ ಅವರು ಅದಕ್ಕೆ ಕಿವಿಗೊಡಲಿಲ್ಲ. ಬದಲು ಝಫರುಲ್ಲಾ ಖಾನರಿಗೆ ವಿರುದ್ಧವಾಗಿ ಕುಫ್ರ್ ಫತ್ವಾ ಹೊರಡಿಸಲು ಈಜಿಪ್ಟಿನ ಮುಫ್ತಿ ಆಗಿದ್ದ ಮಖ್‌ಲೂಫ್‌ರಿಗೆ ಪ್ರೇರಣೆ ನೀಡಿದರು. ಪಾಕಿಸ್ತಾನದಲ್ಲಿ ಅಹ್ಮದಿಯಾ ವಿರುದ್ಧ ಗಲಭೆಗೆ ಅವರು ಬೆಂಬಲವನ್ನೂ ನೀಡಿದ್ದರು. ಆದರೆ ಅಬ್ದುನ್ನಾಸಿರರ ನಾಯಕತ್ವದಲ್ಲಿ ನಡೆದ ಕ್ರಾಂತಿಯ ಅಂಶವಾಗಿ ಜನರಲ್ ನಜೀಬ್ ಅಧಿಕಾರ ಕಸಿದುಕೊಂಡು ಫಾರೂಖ್‌ರನ್ನು ತುಳಿದು ಹೊರದೂಡಿದರು. ಫಾರೂಖ್ ರಾಜ ಕೊನೆಗೆ ದೇಶ ಬಿಟ್ಟು ಓಡಿದರು. ಅತ್ಯಂತ ಹೀನ ಸ್ಥಿತಿಯಲ್ಲಿ ದಿನ ಕಳೆದ ಫಾರೂಖ್ ರಾಜ ಕೊನೆಗೆ ರೋಮ್‌ನ ಒಂದು ಆಸ್ಪತ್ರೆಯಲ್ಲಿ ಯಾರೂ ತಿಳಿಯದೆ ಮೃತಪಟ್ಟರು.

### ಫೈಝುಲ್ ರಾಜ

ಆ ಬಳಿಕ ಸೌದಿ ಅರೇಬಿಯಾದ ಫೈಝುಲ್ ರಾಜ ಖಿಲಾಫತಿನ ಹಂಬಲಿಗನಾಗಿ ರಂಗ ಪ್ರವೇಶ ಮಾಡಿದರು. ಯುವಕನಾಗಿರುವಾಗ ಅವರು ಅಹ್ಮದಿಯಾ ಜಮಾಅತಿನೊಂದಿಗೆ ಅನುಭಾವ ಹೊಂದಿದ್ದರು. ಲಂಡನಿನ ಫಝುಲ್ ಮಸೀದಿಯ ಉದ್ಘಾಟನೆಗೆ ಅವರು ಒಪ್ಪಿಕೊಂಡಿದ್ದರು. ಆದರೆ ಜನರ ವಿರೋಧಕ್ಕೆ ಭಯಪಟ್ಟು ಇಬ್ನುಸಊದ್ ರಾಜ ಫೈಝುಲ್ ರಾಜಕುಮಾರನಿಗೆ ಮಸೀದಿ ಉದ್ಘಾಟಿಸಲು ಒಪ್ಪಿಗೆ ನೀಡಲಿಲ್ಲ.

ಸೌದಿ ಅರೇಬಿಯಾ ತೈಲ ಸಂಪತ್ತಿನ ಹೆಚ್ಚಳದಿಂದ ಬೆಳೆದು ಶಕ್ತಿ ಗಳಿಸಿ ಅರಬಿ ಲೋಕದಲ್ಲಿ ಬೃಹತ್ ಶಕ್ತಿಯಾಗಿ ಮಾರ್ಪಟ್ಟಾಗ ಫೈಝುಲ್ ರಾಜನಿಗೆ ಖಲೀಫ ಆಗಲು ಮೋಹವುಂಟಾಯಿತು. ಅದಕ್ಕೆ ಬೇಕಾಗಿರುವ ಕಾರ್ಯ ಚಟುವಟಿಕೆಗಳಿಗೋಸ್ಕರ ಅವರು "ಅರ್‍ರಾಬಿತ್ತುಲ್ ಆಲಮಿಲ್ ಇಸ್ಲಾಮಿಯ' (The World Musilm League) ಎಂಬ ಒಂದು ಸಂಸ್ಥೆಯನ್ನು ರೂಪಿಸಿದರು. ಲೋಕದಲ್ಲೆಡೆ ಇರುವ ಮುಸ್ಲಿಂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವರು ಧಾರಾಳ ಧನ ಸಹಾಯವನ್ನಿತ್ತರು. ಉಸ್ಮಾನಿಯಾ ಖಿಲಾಫತಿನ ಅಧೀನದಲ್ಲಿರುವ ಪೈಗಂಬರರ ಸ್ಮಾರಕ ವಸ್ತುಗಳನ್ನು ಕೈವಶಪಡಿಸಲು ಅವರು ಪ್ರಯತ್ನಿಸಿದರು. ಈ ವಸ್ತುಗಳು ಸಿಕ್ಕಿದರೆ ಖಿಲಾಫತಿನ ಅಧಿಕಾರ ಸಿದ್ಧಿಸುವುದೆಂದು ಅವರು ಭಾವಿಸಿದ್ದರು. ಆ ಸ್ಮಾರಕ ವಸ್ತುಗಳೇನೆಂದರೆ, 1. ಪೈಗಂಬರರ ಯುದ್ಧ ಉಡುಪು. 2. ಪೈಗಂಬರರು ಗಡ್ಡದ ರೋಮಗಳು. 3. ಪೈಗಂಬರರ ದಂತ. 4. ಒಂದು ಪತಾಕೆ. 5. ಪೈಗಂಬರರ ಒಂದು ಪತ್ರ. 6. ಪೈಗಂಬರರ ಖಡ್ಗದ ಹಿಡಿ.

ಈ ಸ್ಮಾರಕ ವಸ್ತುಗಳನ್ನು ಸ್ವಾಧೀನಪಡಿಸುವ ಪ್ರಯತ್ನದ ಜೊತೆಗೆ ಅಹ್ಮದಿಯಾ ಖಿಲಾಫತನ್ನು ದಮನಿಸಲು ಸಹ ಅವರು ಷಡ್ಯಂತ್ರ ಹೂಡಿದರು. ಅದರಲ್ಲಿ ಒಂದು, ಅಹ್ಮದಿಯರನ್ನು ಅಮುಸ್ಲಿಮರೆಂದು ಘೋಷಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವುದಾಗಿತ್ತು. ಅದಕ್ಕೋಸ್ಕರ ಅವರು ಪಾಕಿಸ್ತಾನದ ಪ್ರಧಾನ ಮಂತ್ರಿ ಜುಲ್ಫಿಕರ್ ಅಲಿ ಭುಟ್ಟೋ, ಉಗಾಂಡಾ ಪ್ರೆಸಿಡೆಂಟ್ ಇದಿ ಅಮೀನ್ ಮೊದಲಾದವರ

ಸಹಾಯವನ್ನು ಬಯಸಿದರು. ದೊಡ್ಡ ಧನಸಹಾಯವನ್ನು ಪಡೆದು ಕೊಂಡು ಜುಲ್ಫಿಕರ್ ಅಲಿ ಭುಟ್ಟೋ, ಪಾಕಿಸ್ತಾನದಲ್ಲಿ ಅಹ್ಮದಿಯರ ವಿರುದ್ಧ ಗಲಭೆಗೆ ಸೂತ್ರಧಾರಿಕೆ ವಹಿಸಿದರು.

ಖಲೀಫ ಘೋಷಣೆಯ ಸಿದ್ಧತೆಗಾಗಿ ಪಾಕಿಸ್ತಾನದ ಲಾಹೋರ್ ನಲ್ಲಿ ಒಂದು ಮುಸ್ಲಿಂ ಶೃಂಗ ಸಭೆ ನಡೆಸಲು ಫೈಝುಲ್ ರಾಜ ತೀರ್ಮಾನಿಸಿ ಪಾಕಿಸ್ತಾನ ಪ್ರಧಾನ ಮಂತ್ರಿ ಜುಲ್ಫಿಕರ್ ಅಲಿ ಭುಟ್ಟೋರಿಗೆ ಇದರ ಹೊಣೆಯನ್ನು ವಹಿಸಿಕೊಡಲಾಯಿತು. ಖಲೀಫ ಆಗಲಿರುವ ಫೈಝುಲ್ ರಾಜ 1974 ಫೆಬ್ರವರಿ 22 ಶುಕ್ರವಾರದಂದು ಲಾಹೋರಿನ ರಾಜಪಥದಲ್ಲಿ ನಡೆದು ಹೋಗುತ್ತಿದ್ದಾಗ ಮುಸ್ಲಿಂ ಜನರು ಅವರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಡೆಲ್ಲಿಯಿಂದ ಹೊರಡುವ ಮುಸ್ಲಿಂ ಲೀಗ್ ವಾರಪತ್ರಿಕೆ "ಮುಸ್ತಖೀಂ" ನಲ್ಲಿ ಲಾಹೋರ್ ಸಮ್ಮೇಳನದ ವಾರ್ತೆಗಳು ಪ್ರಕಟಗೊಂಡಿದ್ದವು.. ಫೈಝುಲ್ ರಾಜನ ಸೇವೆಗಳ ಬಗ್ಗೆ ಅದರಲ್ಲಿ ವಿವರಣೆಗಳಿದ್ದವು. 1975 ಎಪ್ರಿಲ್ 13ರ ಸಂಚಿಕೆಯಲ್ಲಿ ಹೀಗೆ ವಾರ್ತೆ ಪ್ರಕಟವಾಗಿತ್ತು: "ಮುಸ್ಲಿಂ ಲೋಕ ಖಲೀಫತುಲ್ ಮುಸ್ಲಿಮೀನ್ ಎಂದು ಕರೆಯುವ ಒಬ್ಬ ಲೋಕ ನಾಯಕನನ್ನು ಚುನಾಯಿಸಬೇಕೆಂಬ ಒಂದು ನಿರ್ದೇಶನ ಲಾಹೋರ್ ಸಮ್ಮೇಳನದ ಒಂದು ಗುಪ್ತ ಸಭೆಯಲ್ಲಿ ಉಗಾಂಡಾ ಪ್ರೆಸಿಡೆಂಟ್ ಜನರಲ್ ಇದಿ ಅಮೀನ್ ಮುಂದಿಟ್ಟಿರುವುದಾಗಿ ಒಂದು ವಾರ್ತೆ ಪ್ರಚಾರಗೊಂಡಿತ್ತು. ಆ ನಿರ್ದೇಶನವನ್ನು ಮುಂದಿಟ್ಟಾಗ ಎಲ್ಲರ ದೃಷ್ಟಿಗಳು ಫೈಝುಲ್ ರಾಜನ ಕಡೆಗೆ ತಿರುಗಿತು. ಫೈಝುಲ್ ರಾಜ ಆ ಸಂದರ್ಭದಲ್ಲಿ ಮೌನವಹಿಸಿದ್ದರು."

ಈ ಲಾಹೋರ್ ಶೃಂಗಸಭೆಗೆ ಫೈಝುಲ್ ರಾಜ 28 ಕೋಟಿ ರೂಪಾಯಿ ಗಳನ್ನು ಪಾಕಿಸ್ತಾನಕ್ಕೆ ನೀಡಿದ್ದರು ಎಂದು ಸಹ "ಮುಸ್ತಖೀಂ" ಬರೆದಿದೆ.

ಲಾಹೋರ್ ಶೃಂಗಸಭೆಯ ಒಂದು ತಿಂಗಳ ನಂತರ ರಾಬಿತ್ತತುಲ್ ಆಲಮಿಲ್ ಇಸ್ಲಾಮಿಯದ ಸಭೆ ಸೇರಿ ಅಹ್ಮದಿಯಾ ಜಮಾಅತಿನ ಚಟುವಟಿಕೆ ಗಳನ್ನು ತಡೆಯುವ ಅನೇಕ ಠರಾವುಗಳನ್ನು ಅಂಗೀಕರಿಸಿತು. ಪಾಕಿಸ್ತಾನ ದಲ್ಲಿ ಭುಟ್ಟೋ ಸರಕಾರದ ಅಧೀನದಲ್ಲಿ ಅಹ್ಮದಿಯಾ ವಿರುದ್ಧ ಗಲಭೆ ಸ್ಫೋಟ ಗೊಂಡಿತು. ಇದಿ ಅಮೀನ್ ಸರಕಾರ ಉಗಾಂಡಾದಲ್ಲಿ ಅಹ್ಮದಿಯಾ ಚಟುವಟಿಕೆ ವಿರುದ್ಧ ನಿಷೇಧ ಹೇರಿತು. ಅದರ ಮರುದಿನವೇ 210 ಮಿಲಿಯನ್ ರಿಯಾಲ್‌ನ ಗ್ರಾಂಟ್ (ಧನಸಹಾಯ) ಸೌದಿ ಅರೇಬಿಯಾ ಉಗಾಂಡಾಕ್ಕೆ ನೀಡಿತು.

ಅನಂತರ ಏನು ಸಂಭವಿಸಿತು? ಒಂದು ವರ್ಷ ಪೂರ್ತಿಗೊಳ್ಳುವಾಗ ಮುಸ್ಲಿಂ ಜಗತ್ತನ್ನು ನಡುಗಿಸುವ ಒಂದು ವಾರ್ತೆ ಪ್ರಕಟವಾಯಿತು: "ಫೈಝುಲ್ ರಾಜ ಗುಂಡಿಗೆ ಬಲಿಯಾದರು" ಎಂದು. ಸಹೋದರ ಪುತ್ರನ ಗುಂಡಿಗೆ ಅವರು ಆಹುತಿಯಾದರು. ಹಾಗೆ ಫೈಝುಲ್ ರಾಜನ ಖಿಲಾಫತ್ ಕನಸು ಮಣ್ಣುಗೂಡಿತು. ಫೈಝುಲ್ ರಾಜನನ್ನು ಖಲೀಫ ಮಾಡಲು ಸಕಲ ನೆರವು ನೀಡಿ ಅಹ್ಮದಿಯಾ ಖಿಲಾಫತನ್ನು ಕೊನೆಗೊಳಿಸಲು ಬಯಸಿದ ಭುಟ್ಟೋ ನೇಣುಗಂಬಕ್ಕೇರಿದರು. ಭುಟ್ಟೋನ ಸಹಾಯಕನಾಗಿ ವರ್ತಿಸಿದ ಇದಿ ಅಮೀನ್‌ಗೆ ತನ್ನ ದೇಶವನ್ನು ಬಿಟ್ಟು ಓಡಿಹೋಗಬೇಕಾದ ಗತಿಗೇಡಾಯಿತು.

ಜುಲ್ಫಿಕರಲಿ ಭುಟ್ಟೋರ ನಂತರ ಅಹ್ಮದಿಯಾ ಖಿಲಾಫತನ್ನು ನಿರ್ಮೂಲ ಮಾಡಲು ಹೊರಟ ಜನರಲ್ ಝಿಯಾಉಲ್ ಹಖ್ ಲೋಕ ಚರಿತ್ರೆಯಲ್ಲಿ ಅತ್ಯಂತ ಅದ್ಭುತಕರವಾದ ಒಂದು ದೃಷ್ಟಾಂತವಾಗಿ, ಆಕಾಶದಲ್ಲಿ ಉಂಟಾದ ವಿಮಾನ ಅಪಘಾತದಲ್ಲಿ ಭಸ್ಮೀಭೂತರಾಗಿ ಭೂಮಿಯಲ್ಲಿ ಚೆಲ್ಲಲ್ಪಟ್ಟರು.

ತುರ್ಕಿ ಖಿಲಾಫತಿನ ಅಧಃಪತನದ ನಂತರ ಮುಸ್ಲಿಮರು ಖಿಲಾಫತಿ ಗೋಸ್ಕರ ಅನೇಕ ಸಲ ಪ್ರಯತ್ನಿಸಿದರೂ ಅದು ವಿಫಲಗೊಳ್ಳಲು ಕಾರಣವೇನು?

ಅಲ್ಲಾಹನ ವಾಗ್ದಾನ ಪ್ರಕಾರ, ಸತ್ಯವಿಶ್ವಾಸಿಗಳೂ ಸತ್ಕರ್ಮಗಳನ್ನು ಮಾಡುವವರೂ ಇದ್ದ ಒಂದು ಜಮಾಅತ್ ಲೋಕದಲ್ಲಿ ಸ್ಥಾಪಿತವಾಗಿ, ಅವರಿಗೆ ಅವನು ಖಿಲಾಫತಿನ ಅನುಗ್ರಹವನ್ನು ಆ ಸಂದರ್ಭದಲ್ಲಿ ದಯಪಾಲಿಸಿದ್ದನು. ಹಾಗಿರುವಾಗ, ತಾನು ನೀಡಿದ ವಾಗ್ದಾನವನ್ನು ಪಾಲಿಸುವ ಅಲ್ಲಾಹನು, ಸತ್ಯವಿಶ್ವಾಸಿಗಳಲ್ಲದವರಿಗೆ ಮತ್ತು ಸತ್ಕರ್ಮಗಳನ್ನು ಮಾಡದವರಿಗೆ ಖಿಲಾಫತ್ ಎಂಬ ಆ ಅನುಗ್ರಹವನ್ನು ನೀಡುವುದಾದರೂ ಹೇಗೆ?

ನಾವಿಂದು ಅತ್ಯಂತ ಭಯಾನಕವಾದ, ಅಶಾಂತಿಯಿಂದ ಕೂಡಿದ ಒಂದು ಕಾಲಘಟ್ಟದಲ್ಲಿ ಜೀವಿಸುತ್ತಿದ್ದೇವೆ. ಪ್ರೀತಿ, ಅನುಕಂಪ, ಸತ್ಯಸಂಧತೆಗೆ ಬದಲಿಗೆ ಶತ್ರುತ್ವ ಭೀಕರತೆ, ಮೋಸ, ವಂಚನೆ, ಹಿಂಸೆ ತಾಂಡವವಾಡುತ್ತಿವೆ.

ಮಾರಕ ರೋಗಗಳು, ಭೂಕಂಪ, ಜಲಪ್ರಳಯ ಎಂಬೀ ಪ್ರಕೃತಿ ವಿಕೋಪಗಳಿಗೂ ಲಕ್ಷಾಂತರ ಮಂದಿ ಬಲಿಯಾಗುತ್ತಿದ್ದಾರೆ.

ಮುಸ್ಲಿಂ ದೇಶಗಳಲ್ಲಿ ಒಗ್ಗಟ್ಟಿಲ್ಲ. ಅವರು ಪರಸ್ಪರ ಹೋರಾಡುತ್ತಿದ್ದಾರೆ. ಮಾತ್ರವಲ್ಲ ಎಲ್ಲೆಲ್ಲೂ ಅಂತರ್ಯುದ್ಧಗಳೂ ನಡೆಯುತ್ತಿವೆ. ಪಾಕಿಸ್ತಾನ, ಅಫ್ಘಾನಿಸ್ತಾನ, ಫೆಲಸ್ತೀನ್, ಇರಾಕ್, ಇರಾನ್, ಬೋಸ್ನಿಯಾ, ಚೆಚೆನ್ಯಾ, ಲೆಬನಾನ್, ಬಾಂಗ್ಲಾದೇಶ ಇತ್ಯಾದಿ ದೇಶಗಳಲ್ಲಿ ಮುಸ್ಲಿಮರೆಡೆಯಲ್ಲಿ ಅಂತಃ ಕಲಹಗಳು ನಡೆಯುತ್ತಿರುವ ವಾರ್ತೆಗಳನ್ನು ನಾವು ದಿನಾಲೂ ಕೇಳುತ್ತೇವೆ. ಮುಸ್ಲಿಮರು ಇಂತಹ ಒಂದು ದುಃಸ್ಥಿತಿಗೆ ಗುರಿಯಾಗಲು ಕಾರಣವೇನು?

ತಾನು ಒಬ್ಬ ಮುನ್ನೆಚ್ಚರಿಕೆಗಾರನನ್ನು ಕಳುಹಿಸದೆ ಶಿಕ್ಷೆಯನ್ನು ಇಳಿಸುವುದಿಲ್ಲ ಎಂದು ಅಲ್ಲಾಹನು ಹೇಳುತ್ತಾನೆ. ಹಾಗೆ ಅಲ್ಲಾಹನ ಕಡೆಯಿಂದ ಬಂದ ಸಂದೇಶವಾಹಕನನ್ನು ನಿರಾಕರಿಸಿದ್ದೇ ಅವರ ಈ ದುರ್ಗತಿಗೆ ಕಾರಣ. ಹಾಗೆ ಅವರು ಅವಿಶ್ವಾಸಿಗಳಾದಾಗ, ಅವರು ಸತ್ಕರ್ಮಿಗಳಾಗುವ ಬದಲು ದುಷ್ಕರ್ಮಿಗಳಾಗಿ ಮಾರ್ಪಟ್ಟರು. ಹಾಗೆ ಅಲ್ಲಾಹನ ನಿಯಮದಂತೆ ಅವರಿಗೆ ಖಿಲಾಫತ್ ವರದಾನ ನಿರಾಕರಿಸಲ್ಪಟ್ಟಿತು. ಇಸ್ಲಾಂ ಧರ್ಮವನ್ನು ಪಾಲಿಸದ ಈ ಜನರಿಗೆ ಎಲ್ಲೆಲ್ಲೂ ಭಯಭೀತಿಯ ವಾತಾವರಣ ಸೃಷ್ಟಿಯಾಯಿತು. ಅವರಿಗೆ ಸುರಕ್ಷತೆ ಮತ್ತು ನೆಮ್ಮದಿ ಇಲ್ಲವಾಯಿತು.

ಖಿಲಾಫತಿನ ಅನುಗ್ರಹಕ್ಕೆ ಪಾತ್ರರಾಗಲು ಅಲ್ಲಾಹನು ಒಂದು ಶರತ್ತು ಇಟ್ಟಿದ್ದಾನೆ. ಅದೇನೆಂದರೆ: "ಅವರು ನನ್ನನ್ನು ಮಾತ್ರ ಆರಾಧಿಸುವರು. ನನಗೆ ಯಾರನ್ನೂ ಸಹಭಾಗಿ ಮಾಡಲಾರರು." ಎಂದು.

ಇಂದು ನಾವು ಮುಸ್ಲಿಂ ಸಮುದಾಯವನ್ನು ನೋಡುವುದಾದರೆ ಯಥಾರ್ಥವಾದ ದೇವ ಭಯ, ದೇವಭಕ್ತಿ ಅವರಲ್ಲಿ ನಾಸ್ತಿಯಾಗುತ್ತಿದೆ. ಮಾತ್ರವಲ್ಲ ಶಿಯಾ-ಸುನ್ನಿ, ದೇವಬಂದಿ-ಅಹ್ಲೆ ಹದೀಸ್, ಬರೇಲ್ವಿ-ಜಮಾಅತೆ ಇಸ್ಲಾಮೀ ಎಂಬ ಎಲ್ಲ ಮುಸ್ಲಿಂ ಪಂಗಡಗಳು ವಿವಿಧ ರೀತಿಯಲ್ಲಿ ಶಿರ್ಕ್ ಮಾಡುತ್ತಿದ್ದಾರೆ. ತಾವು ತೌಹೀದ್‌ನ ಧ್ವಜವಾಹಕರೆಂದು ಹೆಮ್ಮೆಪಡುವ ಅಹ್ಲೆ ಹದೀಸ್ ಪಂಗಡದವರು ಕೂಡ ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಮನುಷ್ಯಾತೀತ ಮಹತ್ವ ಗಳನ್ನು ನೀಡಿ ಒಂದು ತರದ ಶಿರ್ಕ್ ಮಾಡುತ್ತಾರೆ. ಹಾಗೆ ಶಿರ್ಕ್ ಮಾಡುತ್ತಿರುವ ಮುಸ್ಲಿಂ ಉಮ್ಮತಿಗೆ ಖಿಲಾಫತ್ ಅನುಗ್ರಹ ನಿರಾಕರಿಸಲ್ಪಟ್ಟಿತು.

ಇಂದಿನ ಮುಸ್ಲಿಮರ ಹೃದಯವಿದ್ರಾವಕ ದುರವಸ್ಥೆಗೆ ಕಾರಣ ಖಿಲಾಫತ್ ವ್ಯವಸ್ಥೆಯ ಅಭಾವವೆಂದು ಮುಸ್ಲಿಂ ನಾಯಕರು ಹೇಳುತ್ತಾರೆ. ಉದಾಹರಣೆಗೆ, ಡೆಲ್ಲಿಯಿಂದ ಹೊರಡುವ "ಆಲಮೀ ಸಹಾರಾ" ಎಂಬ

ಪತ್ರಿಕೆ 21-07-2007ರ ಸಂಚಿಕೆಯಲ್ಲಿ ಹೀಗೆ ಬರೆದಿದೆ:

"ಮುಸ್ಲಿಮರ ಅಶಕ್ತತೆಗೂ ಅಧಃಪತನಕ್ಕೂ ಹಲವು ಕಾರಣಗಳಿವೆ. ಆದರೆ ಅತ್ಯಂತ ಪ್ರಧಾನವಾದ ಕಾರಣ ಅವರಿಗೆ ಇಂದು ಒಂದು ಜಾಗತಿಕ ನಾಯಕತ್ವವಿಲ್ಲ ಎಂಬುದಾಗಿದೆ. ಮುಸ್ಲಿಮರು ಬಹು ಸಂಖ್ಯಾತರಿರುವ ರಾಷ್ಟ್ರಗಳಲ್ಲಿ ನೈಸರ್ಗಿಕ ಸಂಪತ್ತುಗಳಿಗೆ ಏನೂ ಕೊರತೆ ಇಲ್ಲ. ಆದರೆ ಆ ಪ್ರಕೃತಿದತ್ತವಾದ ಸಂಪನ್ಮೂಲಗಳನ್ನು ರಾಷ್ಟ್ರದ ಮತ್ತು ಸಮುದಾಯದ ಏಳಿಗೆಗೆ ಉಪಯೋಗಿಸಲು ನಾಯಕರ ಕೊರತೆ ಇದೆ. ಕಳೆದ 60 ವರ್ಷಗಳಿಂದ ಪೆಲಸ್ತೀನ್ ಇಸ್ರಾಈಲ್‌ನ ಹಿಡಿತದಲ್ಲಿದೆ. ಪೆಲಸ್ತೀನಿಯರಿಗೆ ತಮ್ಮ ಭೂಮಿಯನ್ನು ಸ್ವಾಧೀನಪಡಿಸಲು ನಿರಂತರವಾಗಿ ಹಲವು ತ್ಯಾಗಗಳನ್ನು ಮಾಡಬೇಕಾಗುತ್ತದೆ. ಅದೇ ಪ್ರಕಾರ ಇರಾಕಿನಲ್ಲಿ ಲಕ್ಷಗಟ್ಟಲೆ ನಿರಪರಾಧಿಗಳು ಹತ್ಯೆಗೀಡಾಗುತ್ತಿದ್ದಾರೆ. ಇನ್ನು ಎಷ್ಟು ಕಾಲ ನಿರಪರಾಧಿಗಳಾದ, ಅಮಾಯಕರಾದ ಜನರು ಮೃತ್ಯುಕುಂಡಕ್ಕೆ ಎಸೆಯಲ್ಪಡುವರೆಂದು ಯಾರಿಗೆ ಗೊತ್ತು?"

ಎಲ್ಲ ಮುಸ್ಲಿಮರು ತಮ್ಮ ದುಸ್ಥಿತಿಯ ಬಗ್ಗೆ ವಿಲಾಪಿಸುತ್ತಾ, ತಮ್ಮನ್ನು ಮುನ್ನಡೆಸುವ ಜಾಗತಿಕ ನಾಯಕನ ಕೊರತೆಯ ಬಗ್ಗೆ ದುಃಖಿಸುತ್ತಾರೆ.

ಇಂದು ಸುಮಾರು 50 ಮುಸ್ಲಿಂ ರಾಷ್ಟ್ರಗಳಿವೆ. ನೂರು ಕೋಟಿಗಿಂತ ಮಿಕ್ಕ ಮುಸ್ಲಿಮರು ಈ ಜಗತ್ತಿನಲ್ಲಿದ್ದಾರೆ. ಲೋಕದಲ್ಲಿ ಐದರಲ್ಲಿ ಒಬ್ಬನು ಮುಸ್ಲಿಂ ಆಗಿದ್ದಾನೆ. ಆದರೆ ಮುಸ್ಲಿಂ ರಾಷ್ಟ್ರಗಳಲ್ಲಿ ಒಗ್ಗಟ್ಟಿಲ್ಲ. ಅವರು ಪರಸ್ಪರ ಕಾದಾಡುತ್ತಾರೆ. ದೊಡ್ಡ ದೊಡ್ಡ ರಾಷ್ಟ್ರಗಳ ಕೈಗೊಂಬೆಗಳಾಗಿ ಅವರು ವರ್ತಿಸುತ್ತಾರೆ.

ಒಂದೇ ನಾಯಕತ್ವ ಇರುವ ಒಂದು ದೈವಿಕ ವ್ಯವಸ್ಥೆ ಇಂದು ಅಹ್ಮದಿಯಾ ಜಮಾಅತಿಗೆ ಮಾತ್ರವಿದೆ. ಅದು ಈಗ ನೂರು ವರ್ಷಗಳನ್ನು ಪೂರ್ಣಗೊಳಿಸಿದೆ. ಈ ಕಾಲದಲ್ಲಿ ಅಲ್ಲಾಹನಿಂದ ನಿಯುಕ್ತರಾದ ಮಹ್‌ದೀ ಇಮಾಮರನ್ನು ಸ್ವೀಕರಿಸಿ ಅವರು ಸತ್ಯ ವಿಶ್ವಾಸಿಗಳಾಗಿದ್ದಾರೆ. ಅವರು ಸತ್ಕರ್ಮಿಗಳೂ ಆಗಿದ್ದಾರೆ. ಆದ್ದರಿಂದಲೇ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಅಹ್ಮದಿಯಾ ಜಮಾಅತಿನಲ್ಲಿ ನುಬುವ್ವತಿನ ಪಥದಲ್ಲಿರುವ ಖಿಲಾಫತ್ (ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್) ಪುನಃ ಸ್ಥಾಪನೆಗೊಳ್ಳುವ ಅನುಗ್ರಹವನ್ನು ದಯಪಾಲಿಸಿದನು. ಮುಸ್ಲಿಂ ಲೋಕದಲ್ಲೆಲ್ಲೂ ಭಯ ಭೀತಿ ಹರಡಿಕೊಂಡಿದ್ದರೂ ಅಹ್ಮದಿಯರು ಅದರಿಂದೆಲ್ಲ ಮುಕ್ತರು. ಅವರಿಗೆ ಅಲ್ಲಾಹನು ಸುರಕ್ಷೆ ಮತ್ತು ನೆಮ್ಮದಿಯನ್ನು ದಯ ಪಾಲಿಸಿದ್ದಾನೆ. ಅಹ್ಮದಿಯರು ಅಲ್ಲಾಹನನ್ನು ಮಾತ್ರ ಆರಾಧಿಸುತ್ತಾರೆ. ಇಂದು ಮುಸ್ಲಿಮರ ಪೈಕಿ ತೀರಾ ಶಿರ್ಕ್ ಮಾಡದವರು ಅಹ್ಮದಿಯರು ಮಾತ್ರ ಆಗಿದ್ದಾರೆ.

ಅಹ್ಮದಿಯಾ ಖಿಲಾಫತನ್ನು ಇತರ ಮುಸ್ಲಿಂ ಪಂಗಡದವರು ನಿರಾಕರಿಸುತ್ತಾರೆ. ಖಿಲಾಫತನ್ನು ನಿರಾಕರಿಸುವವರ ಕುರಿತು "ಅವರೇ ಧಿಕ್ಕಾರಿಗಳು' ಎಂದು ಅಲ್ಲಾಹನು ಹೇಳುತ್ತಾನೆ. ಈ ಬಗ್ಗೆ ದೇವಭಯ ಮತ್ತು ನೀತಿ ಪ್ರಜ್ಞೆ ಇರುವ ಪ್ರತಿಯೊಬ್ಬನು ಚಿಂತನೆ ಮಾಡಬೇಕಾಗಿದೆ. ಖಲೀಫರನ್ನು ಸ್ವೀಕರಿಸಬೇಕಾದುದು ಅತ್ಯಾವಶ್ಯಕವೆಂದೂ ಸ್ವೀಕರಿಸದಿದ್ದರೆ ಮುಸ್ಲಿಮರಿಗೆ ಮೋಕ್ಷ ಮತ್ತು ಕ್ಷೇಮ ಪ್ರಾಪ್ತವಾಗದೆಂದೂ ಖುರ್‌ಆನ್ ಹೇಳುತದೆ. ಖಲೀಫರನ್ನು ಅನುಸರಿಸುವ ಆವಶ್ಯಕತೆಯ ಕುರಿತು ಮೌಲಾನ ಅಬುಲ್ ಕಲಾಂ ಆಝಾದ್ ತನ್ನ "ಮಸ್‌ಅಲಯೆ ಖಿಲಾಫತ್" ಎಂಬ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ:

"ವ್ಯಕ್ತಿಗತವಾಗಿಯೂ ವಿಶ್ವಾಸ ಸಂಬಂಧವಾಗಿಯೂ ಪ್ರವರ್ತನ ಪರವಾಗಿಯೂ ಇರುವ ಜೀವಿತಗಳಿಗೆ ಒಂದೊಂದು ಕೇಂದ್ರವಿರುವುದಾಗಿ ಕಾಣುವ ಪ್ರಕಾರವೇ ಸಾಮುದಾಯಿಕವೂ ಧಾರ್ಮಿಕವೂ ಆದ ಜೀವಿತಕ್ಕೂ ಕೇಂದ್ರವಾಗಿರುವ ಒಂದು ಶಕ್ತಿ ಇರಬೇಕಾದುದು ಅವಶ್ಯವಾಗಿದೆ. ಅಂತೆಯೇ, ಹಾಗೆ ಇರುವ ಒಂದು ಕೇಂದ್ರ ಕೂಡ ನಿಶ್ಚಯಿಸಲ್ಪಟ್ಟಿದೆ. ಸಮುದಾಯವೆಲ್ಲವೂ ಆ ಕೇಂದ್ರಕ್ಕೆ ಸುತ್ತಲೂ ಇರುವ ವೃತ್ತವಾಗಿ ಪರಿಗಣಿಸಲ್ಪಟ್ಟಿದೆ. ಆ ಕೇಂದ್ರ ಶಕ್ತಿಯೊಂದಿಗೆ ಒಂದು ವಿಶಿಷ್ಟ ಸಂಬಂಧ, ಅನುಸರಣೆ ಮತ್ತು ಪರಿಪೂರ್ಣ ರೀತಿ ಯಲ್ಲಿರುವ ವಿಧೇಯತೆಯನ್ನು ತೋರಿಸಿ, ಅದರ ಕರೆಯನ್ನು ಆಲಿಸಿ, ಅದರ ಆಜ್ಞಾನುಸಾರ ಜೀವವನ್ನೂ ಧನವನ್ನೂ ವ್ಯಯಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿ ವಿಧಿಸಲ್ಪಟ್ಟಿದೆ. ಈ ಧರ್ಮವನ್ನು ಅನುಷ್ಠಿಸುವುದರ ಮೂಲಕ ಹೊರತು ಅಜ್ಞಾನಾಂಧಕಾರದಿಂದ ಪ್ರಕಾಶದೆಡೆಗೆ ಬರಲಿಕ್ಕೆ ಸಾಧ್ಯವಿಲ್ಲ. ಇಸ್ಲಾಮಿನ ಈ ಸಾಮುದಾಯಿಕ ಕೇಂದ್ರ ಶಕ್ತಿಗೆ ಖಲೀಫ ಎಂದೂ ಇಮಾಂ ಎಂದೂ ಹೇಳಲಾಗುತ್ತದೆ. ಎಷ್ಟರವರೆಗೆ ಈ ಕೇಂದ್ರ ಶಕ್ತಿ ಅದರ ಸ್ಥಾನದಿಂದ ವ್ಯತಿಕ್ರಮಿಸದಿರುತ್ತದೋ – ಎಷ್ಟರ ವರೆಗೆ ಅದರ ಅನುಶಾಸನಗಳು ಖುರ್‌ಆನ್ ಮತ್ತು ಸುನ್ನತ್‌ಗೆ ಅನುಸಾರವಾಗಿ ಇರುತ್ತವೆಯೋ – ಅಷ್ಟರವರೆಗೆ ಅದನ್ನು ಅನುಸರಿಸುವುದು ಮತ್ತು ಅದಕ್ಕೆ ನೆರವಾಗುವುದು ಪೈಗಂಬರ್‌ರನ್ನೂ(ಸ) ಅಲ್ಲಾಹನನ್ನೂ ಅನುಸರಿಸು ವಂತೆಯೂ ನೆರವಾಗುವಂತೆಯೂ ಆಗಿದೆ."

ಅವರು ಇನ್ನೂ ಹೇಳುತ್ತಾರೆ: "ಹಝ್ರತ್ ಇಬ್ನು ಉಮರ್‌ರವರ ಒಂದು ನಿವೇದನೆಯಲ್ಲಿ ಹೀಗಿದೆ: 'ಯಾರು ಖಲೀಫರ ಅನುಸರಣೆಯನ್ನು ಕೈಬಿಡುವನೋ, ಅವನು ನ್ಯಾಯ ವಿಚಾರಣೆ ದಿನದಂದು ದೇವ ಸನ್ನಿಧಿಯಲ್ಲಿ ಯಾವುದೇ ರಕ್ಷಾ ಮಾರ್ಗವಿಲ್ಲದ ಸ್ಥಿತಿಯಲ್ಲಿ ಹಾಜರಾಗುವನು. ಖಲೀಫರ ಬೈಅತ್ ಮತ್ತು ಅನುಸರಣೆ ಇಲ್ಲದೆ ಯಾವೊಬ್ಬ ಮುಸ್ಲಿಂ ಇಹಲೋಕ ವಾಸವನ್ನು ತ್ಯಜಿಸುವನೋ ಅವನು ಖಂಡಿತವಾಗಿಯೂ ಜಾಹಿಲಿಯ್ಯತಿನ (ಅವಿಶ್ವಾಸದ) ಮರಣವನ್ನು ಹೊಂದುವನು. ಯಾರು ಜಮಾಅತಿನಿಂದ ಬಿಟ್ಟು ನಿಲ್ಲುತ್ತಾನೋ ಅವನು ಇಸ್ಲಾಮಿಕ ವೃತ್ತದಿಂದಲೂ ಹೊರಗಿರುವವನಾಗುವನು. (ತಿರ್ಮಿದಿ)

"ಒಂದು ವರದಿಯಲ್ಲಿ 'ದಖಲುನ್ನಾರ್' ಎಂದು ಇದೆ.ಅಂದರೆ, ಯಾರು ಖಲೀಫರ ಅನುಸರಣೆಯಿಂದ ಬಿಟ್ಟು ನಿಲ್ಲುತ್ತಾನೋ ಆತನ ವಾಸಸ್ಥಳ ನರಕವಾಗುವುದು ಎಂದು." (ಮಸ್‌ಅಲಯೆ ಖಿಲಾಫತ್ ಪುಟ 26, 31-32)

ಖಲೀಫರನ್ನು ಸ್ವೀಕರಿಸಿ ಖಲೀಫರ ಆಜ್ಞೆಗಳಿಗೆ ಪೂರ್ಣವಾಗಿ ವಿಧೇಯರಾಗಬೇಕಾದುದು ಇಸ್ಲಾಮಿಕ ದೃಷ್ಟಿಯಲ್ಲಿ ಎಷ್ಟು ಅಗತ್ಯವೆಂದೂ ಖಲೀಫರನ್ನು ಸ್ವೀಕರಿಸದವರ ಮತ್ತು ಖಲೀಫರ ಆಜ್ಞೆಗಳನ್ನು ಧಿಕ್ಕರಿಸುವವರ ಅಂತ್ಯ ಹೇಗಿರುವುದೆಂದೂ ಮೇಲಿನ ಉದ್ಧರಣೆಯಿಂದ ಚೆನ್ನಾಗಿ ಮನಗಾಣಬಹುದು. ಸಂಕ್ಷಿಪ್ತದಲ್ಲಿ, ಖಿಲಾಫತಿನೊಂದಿಗೆ ಸದಾ ಸಂಬಂಧವನ್ನಿಟ್ಟುಕೊಂಡು ಇರಬೇಕಾದುದು ಯಥಾರ್ಥ ಮುಸ್ಲಿಮನ ಅನಿವಾರ್ಯ ಕರ್ತವ್ಯವಾಗಿದೆ. ಮುಸ್ಲಿಮರೆಲ್ಲರಿಗೂ ಖಿಲಾಫತನ್ನು ಅನುಸರಿಸುವ ಸೌಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ. ಆಮೀನ್.

**(8-6-2008ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಜರಗಿದ ಕರ್ನಾಟಕ ರಾಜ್ಯ ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸಮ್ಮೇಳನದಲ್ಲಿ ಮಾಡಿದ ಭಾಷಣ.)**

# ಇಸ್ಲಾಮ್ ಧರ್ಮದಲ್ಲಿ ಖಿಲಾಫತ್

✡ ಫರೀದ್ ಅಹ್ಮದ್ – U.K.

ಇಂದಿನ ಕಾಲದಲ್ಲಿ ಮುಸ್ಲಿಮರನ್ನು ಎದುರಿಸುತ್ತಾ ಇರುವ ವಿಷಯ ಅರ್ಥವತ್ತಾದ ಮತ್ತು ಅಧಿಕಾರಯುಕ್ತವಾದ ನಾಯಕತ್ವದ ಕೊರತೆಯಾಗಿದೆ. ವಿಶ್ವವು ಇಂದು ಗಲಭೆ, ಗೊಂದಲ, ಅಶಾಂತಿಗಳ ನೆಲೆವೀಡಾಗಿದ್ದು ವಿಶಿಷ್ಟವಾಗಿ ಮುಸ್ಲಿಮರು ಇಂದು ಬೃಹದ್ ಸ್ವರೂಪದ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಇದು ಮುಸ್ಲಿಮರ ವಿರುದ್ಧ ಅನ್ಯರು ಕೈಗೊಂಡ ಕ್ರಮಗಳ ಕಾರಣದಿಂದಲೂ ಮುಸ್ಲಿಮರು ಪವಿತ್ರ ಖುರ್‌ಆನ್ ಮತ್ತು ಪ್ರವಾದಿ ವಚನಗಳಲ್ಲಿರುವ ಸಂಕೇತಗಳನ್ನು ಮತ್ತು ಮಾರ್ಗದರ್ಶನಗಳನ್ನು ಮನವರಿಕೆ ಮಾಡಲು ಸಮರ್ಥರಾಗದ ಕಾರಣದಿಂದಲೂ ಸಂಭವಿಸುತ್ತಿರುವುದಾಗಿದೆ.

ಮುಸ್ಲಿಮರು ಇತರ ಎಲ್ಲಾ ಸಮುದಾಯಗಳಿಗಿಂತಲೂ ಹೆಚ್ಚು ಹೆಚ್ಚಾಗಿ ಶಾಂತಿಗೆ ಮತ್ತು ಸುರಕ್ಷತೆಗೆ ಬದ್ಧರಾಗಬೇಕಾಗಿದ್ದರೂ ಅವರು ಇಂದು ಶಾಂತಿಗಾಗಿ ಪರದಾಡುತ್ತಿರುವುದು ಮೇಲೆ ವಿವರಿಸಿದ ಕಾರಣದಿಂದಾಗಿದೆ. ಅವರು ಆಧ್ಯಾತ್ಮಿಕವಾಗಿ ಮತ್ತು ಲೌಕಿಕವಾಗಿ ಗಳಿಸಿದ ಯಶಸ್ಸಿನ ಬಗ್ಗೆ ಚರಿತ್ರೆಯು ಸಾಕ್ಷ್ಯ ನೀಡುತ್ತಿದ್ದರೂ ಅವರು ಇಂದು ಈ ಕ್ಷೇತ್ರಗಳಲ್ಲಿ ನಷ್ಟವನ್ನು ಅನುಭವಿಸುತ್ತಾ ಇದ್ದಾರೆ.

ಮುಸ್ಲಿಮರಲ್ಲಿರುವ ಬುದ್ಧಿಜೀವಿಗಳು ಜಾಗತಿಕ ನಾಯಕತ್ವ ಮತ್ತು ಐಕ್ಯತೆಯ ಬಗ್ಗೆ ಆಶಿಸುತ್ತಿರುವರಾದರೂ ಅದು ಖಿಲಾಫತ್ ಮೂಲಕ ಮಾತ್ರ ಲಭಿಸಲು ಸಾಧ್ಯವಿದೆಯಾದರೂ ಅವರು ವಿರೋಧಾಭಾಸದ ವಿಚಾರಗಳ ಮೂಲಕ ಖಿಲಾಫತ್ ಜಾರಿಗೊಳ್ಳಬಹುದಾದ ಸಾಧ್ಯತೆಯ ಬಾಗಿಲನ್ನು ಮುಚ್ಚಿರುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್)ರವರ ನಂತರ ಅವರ ಅಧೀನವಾಗಿ ಆಗಮಿಸಬಹುದಾದ ಪ್ರವಾದಿತ್ವದ ಸಾಧ್ಯತೆಯನ್ನು ನಿರಾಕರಿಸುತ್ತಿರುವುದರಿಂದ ಹೀಗೆ ಸಂಭವಿಸಿದೆ. ಆದರೆ ಖಿಲಾಫತ್ ಪ್ರವಾದಿತ್ವದೊಂದಿಗೆ ವಿಶಿಷ್ಟವಾಗಿ ನಿಕಟ ಸಂಬಂಧ ಹೊಂದಿದೆ.

### ಪವಿತ್ರ ಖುರ್‌ಆನ್‌ನಲ್ಲಿ ಖಿಲಾಫತ್

ಖಲೀಫ ಎಂಬ ಅರಬಿ ಪದ ಉತ್ತರಾಧಿಕಾರಿ, ಪ್ರತಿನಿಧಿ ಎಂಬ ಅರ್ಥಗಳನ್ನು ಹೊಂದಿದೆ. ಪವಿತ್ರ ಖುರ್‌ಆನ್‌ನಲ್ಲಿ ಈ ಪದವನ್ನು ಹಲವು ವಚನಗಳಲ್ಲಿ ಬಳಸಲಾಗಿದೆ. ಅದು ಸಂದರ್ಭಕ್ಕೆ ಅನುಸಾರವಾಗಿ ಜನರಿಗೆ ಸಂಬಂಧಿಸಿ ಜನರ ಒಂದು ಗುಂಪಿಗೆ ಸಾಮಾನ್ಯವಾಗಿ ಮತ್ತು ಜನರ ನಾಯಕನ ಬಗ್ಗೆ ವಿಶಿಷ್ಟವಾಗಿ ಪ್ರಯೋಗಿಸಲ್ಪಡುತ್ತದೆ.

ಹಿಂದಿನ ಜನರ ಉತ್ತರಾಧಿಕಾರಿಗಳಾಗಿ ಬಂದವರ ಬಗ್ಗೆ ಖಲೀಫ ಎಂಬ ಪದ ಮೊದಲನೆಯ ಅರ್ಥದಲ್ಲಿ ಬಳಸಲ್ಪಡುತ್ತದೆ. ದೇವನಿಂದ ಜನರ ನಾಯಕನಾಗಿ ನೇಮಿಸಲ್ಪಟ್ಟ ವ್ಯಕ್ತಿಯನ್ನು ಖಲೀಫ ಎಂದು ಕರೆದು ಎರಡನೆಯ ಅರ್ಥದಲ್ಲಿ ಬಳಸಲಾಗುತ್ತದೆ.

### ಅನೇಕ ಮಂದಿ ಸೇರಿದ ಸಂಸ್ಥೆಗೆ ಖಿಲಾಫತನ್ನು ಶಾಶ್ವತೀಕರಿಸಲು ಸಾಧ್ಯವೇ?

ಕೆಲವು ವ್ಯಾಖ್ಯಾನಗಾರರು ಹೀಗೆ ಹೇಳುತ್ತಾರೆ: ಖಿಲಾಫತ್ ಎಂಬ ಅರಬಿ ಪದವು ಬಹುವಚನ ರೂಪದಲ್ಲಿ ಪವಿತ್ರ ಖುರ್‌ಆನಿನಲ್ಲಿ ಪ್ರಯೋಗಿಸಲ್ಪಟ್ಟಿದೆಯಾದುದರಿಂದ ಅದು ಜನರ ಒಂದು ಗುಂಪಿಗೆ ಅನ್ವಯಿಸುತ್ತದೆ. ಅದರ ಅರ್ಥ ವಿಶ್ವಸ್ತತೆ ಎಂದಾಗಿದ್ದು ಕೆಲವು ಜನರು ವೈಯಕ್ತಿಕವಾಗಿ ದೇವನ ಪಾರುಪತ್ಯದಾರರಾಗಿ ಕೆಲಸ ಮಾಡುತ್ತಾರೆ.

ಬೇರೆ ಕೆಲವು ವ್ಯಾಖ್ಯಾನಗಾರರ ಅಭಿಪ್ರಾಯದ ಪ್ರಕಾರ ಜನರ ಒಂದು ಗುಂಪು ಒಗ್ಗೂಡಿ ನಾಯಕತ್ವ ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ. ಅವರು ಇದಕ್ಕೆ ಆಧಾರವಾಗಿ ಪವಿತ್ರ ಖುರ್‌ಆನಿನ ಕೆಲವು ವಚನಗಳಲ್ಲಿ ಖಲೀಫ ಪದದ ಬಹುವಚನ ರೂಪವನ್ನು ಬಳಸಿದುದರ ಬಗ್ಗೆ ಉಲ್ಲೇಖಿಸುತ್ತಾ ಜನರನ್ನು ವೈಯಕ್ತಿಕವಾಗಿ ಉದ್ದೇಶಿಸದೆ ಸಾಮೂಹಿಕವಾಗಿ ಉದ್ದೇಶಿಸಲಾಗಿದೆ ಎಂದು ವಾದಿಸುತ್ತಾರೆ.

ಉದಾಹರಣೆಗೆ ಪವಿತ್ರ ಖುರ್‌ಆನಿನ ಸೂರತುನ್ನೂರ್ (ಅಧ್ಯಾಯ 24) ವಚನ 56 ರಲ್ಲಿ ಹೀಗೆ ಹೇಳಲಾಗಿದೆ:–

"ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ.... ಅಲ್ಲಾಹನು ವಾಗ್ದಾನ ಮಾಡಿದ್ದಾನೆ."

ಮೇಲಿನ ವಚನದಲ್ಲಿ ಜನರನ್ನು ಖಲೀಫರನ್ನಾಗಿ ಮಾಡುವುದಾಗಿ ಹೇಳಲಾಗಿದೆ ಎಂದು ಭಾವಿಸುವುದು ಪವಿತ್ರ ಖುರ್‌ಆನನ್ನು ಸರಿಯಾಗಿ ಅರ್ಥಮಾಡದ ಕಾರಣದಿಂದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಬಹುವಚನ ಪ್ರಯೋಗ ಮಾಡಿದರೆ ಅದು ಎಲ್ಲಾ ಜನರಿಗೆ ಅನ್ವಯಿಸುವುದಿಲ್ಲ.

ಮೌಲಾನ ಶೇಖ್ ಮುಬಾರಕ್ ಅಹ್ಮದ್ ಸಾಹೆಬರು ತನ್ನ ಗ್ರಂಥವಾದ An Exposition of Some Criticisms Against Khilafat-i-Rashida ಎಂಬ ಗ್ರಂಥದಲ್ಲಿ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದ ಕಡೆಗೆ ಗಮನಿಸಲು ಹೇಳಿದ್ದಾರೆ:

"ಪ್ರವಾದಿ ಮೂಸಾ ತನ್ನ ಜನತೆಯೊಡನೆ ಹೇಳಿದ ಸಂದರ್ಭ: 'ಓ ನನ್ನ ಜನರೇ, ನಿಮ್ಮ ಪೈಕಿ (ಅಲ್ಲಾಹನು) ಪ್ರವಾದಿಗಳನ್ನು ನಿಯುಕ್ತಗೊಳಿಸಿ, ನಿಮ್ಮನ್ನು ರಾಜರನ್ನಾಗಿ ಮಾಡಿ, ಲೋಕದ ಯಾವುದೇ ಜನತೆಗೆ ನೀಡದಿದ್ದ ಅನುಗ್ರಹಗಳನ್ನು ನಿಮಗೆ ನೀಡಿರುವಾಗ, ಅಲ್ಲಾಹನು ನಿಮಗೆ ನೀಡಿದ ಅನುಗ್ರಹಗಳನ್ನು ನೀವು ಸ್ಮರಿಸಿರಿ.' " (5 : 21)

ಮೌಲಾನ ಶೇಖ್ ಮುಬಾರಕ್ ಅಹ್ಮದ್ ಸಾಹೆಬರು ಹೀಗೆ ವಿವರಣೆ ನೀಡಿದ್ದಾರೆ:

"ಈ ವಚನದಲ್ಲಿ ಎಲ್ಲಾ ಜನರನ್ನು ಸಂಬೋಧಿಸಿ ಹೇಳಲಾಗಿದೆ. ಅವರನ್ನು ಪ್ರವಾದಿಗಳನ್ನಾಗಿಯೂ ರಾಜರನ್ನಾಗಿಯೂ ಮಾಡಿ. ಅವರಿಗೆ ಅಲ್ಲಾಹನು ಅನುಗ್ರಹ ನೀಡಿದ ಕುರಿತು ಪ್ರಸ್ತಾಪಿಸಲಾಗಿದೆ. ಆದರೆ ಆ ಜನರಲ್ಲಿ ಎಲ್ಲರನ್ನೂ ಪ್ರವಾದಿಗಳನ್ನಾಗಿಯೂ ರಾಜರನ್ನಾಗಿಯೂ ಅಲ್ಲಾಹನು ಮಾಡಿರಲಿಲ್ಲ. ಕೇವಲ ಕೆಲವರನ್ನು ಆ ಪದವಿಗೆ ಏರಿಸಲಾಯಿತು ಮತ್ತು ಜನರ ಬಹಳ ದೊಡ್ಡ ಗುಂಪು ಯಾವಾಗಲೂ ಸಾಮಾನ್ಯರದಾಗಿತ್ತು. ಇದರಿಂದ ತಿಳಿಯುವುದೇನೆಂದರೆ, ವಾಗ್ದಾನವು ಒಂದು ಗುಂಪಿನೊಂದಿಗೆ ಮಾಡಿದರೂ ಅವರಲ್ಲಿ ಕೆಲವು ವ್ಯಕ್ತಿಗಳು ಮಾತ್ರ ಆ ಅನುಗ್ರಹಗಳಿಗೆ ಪಾತ್ರರಾಗುತ್ತಾರೆ.

"ಪವಿತ್ರ ಖುರ್‌ಆನ್ ಸೂರತುನ್ನೂರ್ ವಚನ 56ರಲ್ಲಿ 'ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನು' ಎಂದು ಹೇಳಲಾಗಿದೆ. ಹಿಂದಿನ ಕಾಲದಲ್ಲಿ ಜನರ ಒಂದು ಗುಂಪನ್ನು ಖಲೀಫರನ್ನಾಗಿ ಮಾಡಿದ್ದರೆ ಈಗ ಸಹ ಹಾಗೆಯೇ ದೇವನು ಪುನರಾವರ್ತಿಸುವನು. ಆದರೆ ಹಿಂದಿನ ಕಾಲದಲ್ಲಿ ವ್ಯಕ್ತಿಗಳನ್ನು ಖಲೀಫರನ್ನಾಗಿ ಮಾಡಿದ್ದರೆ ಈಗ ಸಹ ಅದೇ ರೀತಿ ಮುಂದುವರಿಯುವುದು. ಹಿಂದಿನ ಕಾಲದಲ್ಲಿ ವ್ಯಕ್ತಿಗಳು ಖಲೀಫರಾಗಿದ್ದುದರಿಂದ

ಇಂದು ಸಹ ವ್ಯಕ್ತಿಗಳೇ ಖಲೀಫರಾಗುವ ಬಗ್ಗೆ ಯಾವುದೇ ಸಂಶಯವಿಲ್ಲ." (ಮೇಲೆ ಉಲ್ಲೇಖಿಸಿದ ಗ್ರಂಥ ಪುಟ 9-10)

ಮೌಲಾನ ಶೇಖ್ ಮುಬಾರಕ್ ಅಹ್ಮದ್ ಸಾಹೆಬ್ ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಖಿಲಾಫತ್ ಪದದ ನಿಜವಾದ ಅರ್ಥವನ್ನು ಅಲ್ಲಾಹನು ಇನ್ನೊಮ್ಮೆ ಸ್ಪಷ್ಟಗೊಳಿಸಿದನು. ವ್ಯಕ್ತಿಗಳು ಖಲೀಫರಾದರು. ಅಲ್ಲಾಹನ ಇಚ್ಛೆಗೆ ಅನುಸಾರವಾಗಿಯೇ ಹೀಗೆ ಸಂಭವಿಸಿತು.

ಪ್ರವಾದಿ ಆದಮ್(ಅ) ಮತ್ತು ಪ್ರವಾದಿ ದಾವೂದ್(ಅ) ಅವರನ್ನು ಖಲೀಫರೆಂದು ಅಲ್ಲಾಹನು ಹೇಳಿರುವುದರಿಂದ ವ್ಯಕ್ತಿಗಳು ಖಲೀಫರಾಗಿದ್ದರೆಂಬುದಕ್ಕೆ ಬಲಯುತವಾದ ಸಾಕ್ಷ್ಯವಾಗಿದೆ. ಪವಿತ್ರ ಖುರ್‌ಆನ್ ಚೆನ್ನಾಗಿ ಮನವರಿಕೆ ಮಾಡಿದ್ದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಖಲೀಫ ಪದದ ಬಗ್ಗೆ ಹೀಗೆಯೇ ನಿಲುವನ್ನು ಹೊಂದಿದ್ದರು. ತಾನು ಮೃತನಾದ ನಂತರ ಖಲೀಫರೆಂದು ಚುನಾಯಿಸಲ್ಪಡುವವರು ಮುಸ್ಲಿಮರ ಮುಂದಾಳಾಗುವರೆಂದು ಅವರು ನಿರೀಕ್ಷಿಸಿದ್ದರು. ಅವರು ಹೀಗೆ ಹೇಳಿದರು:

"ನೀವು ಅಲ್ಲಾಹನಿಗೆ ಭಯಪಡಿರಿ. ನಿಮ್ಮ ಅಮೀರ್ (ನಾಯಕ) ಅಬಸೀನಿಯಾದ ಒಬ್ಬ (ವಿಮುಕ್ತ) ಗುಲಾಮನಾಗಿದ್ದರೂ ನೀವು ಅವರ ಆಜ್ಞೆಗಳನ್ನು ಆಲಿಸಿದ ಕೂಡಲೇ ಅನುಸರಿಸಬೇಕು. ನನ್ನ ನಿಧನದ ನಂತರ ಬದುಕಿರುವವರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಲಿವೆ. ಆಗ ನೀವು ಅಲ್ಲಾಹನಿಂದ ಮಾರ್ಗದರ್ಶನ ಪಡೆದ ಖಲೀಫರನ್ನು ಮತ್ತು ನನ್ನನ್ನು ಅನುಸರಿಸಬೇಕು. ನೀವು ಖಿಲಾಫತ್‌ಗೆ ಅಂಟಿಕೊಳ್ಳಿರಿ ಮತ್ತು ನಿಮ್ಮನ್ನು ಅದರೊಂದಿಗೆ ಬಿಗಿಯಾಗಿ ಬಂಧಿಸಿರಿ."

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹಝ್ರತ್ ಅಬೂಬಕರ್ ರವರನ್ನು(ರ) ತನ್ನ ಖಲೀಫರನ್ನಾಗಿ ನಿರ್ದೇಶಿಸಲು ಉದ್ದೇಶಿಸಿದ್ದರೆಂದೂ ಅನಂತರ ಅವರು ಅಲ್ಲಾಹನ ತೀರ್ಮಾನಕ್ಕೆ ಬಿಟ್ಟು ತನ್ನ ನಿರ್ಧಾರವನ್ನು ಬದಲಾಯಿಸಿದರೆಂದೂ ಹದೀಸುಗಳಲ್ಲಿ ವರದಿಯಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪವಿತ್ರ ಖುರ್‌ಆನ್ ಬಗ್ಗೆ ಪರಿಪೂರ್ಣ ಜ್ಞಾನಗಳಿಸಿದವರಾದುದರಿಂದ ಪವಿತ್ರ ಖುರ್‌ಆನ್‌ನಲ್ಲಿ ಸೂಚಿಸಲಾದ ಖಲೀಫ ಪದ ವ್ಯಕ್ತಿಗಳನ್ನು ಸೂಚಿಸುತ್ತದೆ ಎಂದು ಮನವರಿಕೆ ಮಾಡಿದ್ದರೆಂದು ಮೇಲಿನ ಹದೀಸಿನಿಂದ ಸ್ಪಷ್ಟವಾಗುತ್ತದೆ.

ಖಿಲಾಫತ್ ಎಂದರೆ ಒಂದು ಆಡಳಿತ ಸಮಿತಿ ಎಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಗ್ರಹಿಸಿದ್ದರೆ ಅವರು ತನ್ನ ಅನಂತರ ಮುಸ್ಲಿಮ್ ಸಮುದಾಯದ ನಾಯಕತ್ವದ ಬಗ್ಗೆ ಚಿಂತಿಸುತ್ತಿರಲಿಲ್ಲ ಮತ್ತು ತನ್ನ ಅನಂತರ ಖಲೀಫ ಎಂದು ಒಬ್ಬರನ್ನು ಹೆಸರಿಸುವ ಯೋಚನೆ ಸಹ ಮಾಡುತ್ತಿರಲಿಲ್ಲ.

ಪವಿತ್ರ ಖುರ್‌ಆನಿನ ಸೂರತುನ್ನೂರ್‌ನಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಾಗ್ದಾನ ಮಾಡಿದ ಖಿಲಾಫತ್, ಇಸ್ಲಾಮಿಗೆ ಮೊದಲು ವ್ಯಕ್ತಿಗಳನ್ನು ವಿಶ್ವಾಸಿಗಳ ನಾಯಕರನ್ನಾಗಿ ಚುನಾಯಿಸಿದ ಮಾದರಿಯದೆಂದು ಸ್ಪಷ್ಟವಾಗುತ್ತದೆ.

### ಖಿಲಾಫತ್ ಮತ್ತು ಪ್ರವಾದಿತ್ವ

ಖಿಲಾಫತ್ ಎಂಬ ಪರಿಕಲ್ಪನೆಯನ್ನು ಪವಿತ್ರ ಖುರ್‌ಆನ್ ಇನ್ನೂ ವಿಶದೀಕರಿಸುತ್ತದೆ. ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್‌ರವರು(ರ) ತನ್ನ ತಫ್ಸೀರ್ ಕಬೀರ್ ಎಂಬ ಬೃಹತ್ ಖುರ್‌ಆನ್ ವ್ಯಾಖ್ಯಾನ ಗ್ರಂಥದಲ್ಲಿ ಮೂರು ವಿಧಗಳ ಖಲೀಫರನ್ನು ವಿವರಿಸಿದ್ದಾರೆ :

**1. ಪ್ರವಾದಿಗಳಾದ ಖಲೀಫರು :**

ಹಝ್ರತ್ ಆದಮ್(ಅ) ಮತ್ತು ಹಝ್ರತ್ ದಾವೂದ್(ಅ) ಈ ವರ್ಗಕ್ಕೆ ಸೇರುತ್ತಾರೆ. ಅಲ್ಲಾಹನು ಹಝ್ರತ್ ಆದಮ್(ಅ) ಬಗ್ಗೆ ಹೀಗೆ ಹೇಳಿದ್ದಾನೆ:

"ನಾನು ಭೂಮಿಯಲ್ಲಿ ಒಬ್ಬ ಖಲೀಫನನ್ನು (ಪ್ರತಿನಿಧಿಯನ್ನು) ನೇಮಿಸಲಿದ್ದೇನೆ." (ಪವಿತ್ರ ಖುರ್‌ಆನ್ 2 : 31)

ಹಝ್ರತ್ ದಾವೂದ್‌ರವರ(ಅ) ಕುರಿತು ಅಲ್ಲಾಹನು ಹೀಗೆ ಹೇಳಿದನು:

"ಓ ದಾವೂದ್, ನಾವು ನಿನ್ನನ್ನು ಭೂಮಿಯಲ್ಲಿ ಖಲೀಫನನ್ನಾಗಿ (ಪ್ರತಿನಿಧಿಯನ್ನಾಗಿ) ಮಾಡಿದ್ದೇವೆ." (ಪವಿತ್ರ ಖುರ್‌ಆನ್ 38 : 27)

**2. ಹಿಂದಿನ ಪ್ರವಾದಿಯ ಖಲೀಫರಾಗಿ ಪ್ರವಾದಿಗಳು:**

ಇಸ್ರಾಯೇಲ್ ಜನಾಂಗದಲ್ಲಿ ಹಝ್ರತ್ ಮೂಸಾರವರ(ಅ) ಖಲೀಫರಾಗಿ ಅನೇಕ ಪ್ರವಾದಿಗಳು ಆಗಮಿಸಿದರು.

ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"ಮಾರ್ಗದರ್ಶನ ಮತ್ತು ಪ್ರಕಾಶದಿಂದ ಕೂಡಿದ್ದ ತೌರಾತನ್ನು ನಾವು ನಿಶ್ಚಯವಾಗಿಯೂ ಅವತೀರ್ಣಗೊಳಿಸಿದ್ದೆವು. ಅದನ್ನು ಅನುಸರಿಸಿ (ಅಲ್ಲಾಹನಿಗೆ) ವಿಧೇಯರಾದ ಪ್ರವಾದಿಗಳು ಯಹೂದಿಯರಿಗೋಸ್ಕರ ತೀರ್ಪು ನೀಡುತ್ತಿದ್ದರು." (ಪವಿತ್ರ ಖುರ್‌ಆನ್ 5 : 45)

**3. ಒಬ್ಬ ಪ್ರವಾದಿಯ ಪ್ರವಾದಿತ್ವ ಗಳಿಸದ ಖಲೀಫರು:**

ರಾಜ್ಯದ ಆಡಳಿತೆ ದೊರಕಿದವರೂ ದೊರಕದವರೂ ಇವರಲ್ಲಿ ಸೇರಿದ್ದರು. ಪವಿತ್ರ ಖುರ್‌ಆನ್ ಇವರ ಬಗ್ಗೆ ರಬ್ಬಾನಿನ್ ಎಂದು ಹೇಳಿದೆ. ಪವಿತ್ರ ಖುರ್‌ಆನಿನ ಅಧ್ಯಾಯ 5 ವಚನ 45ರ ಮುಂದುವರಿದ ಭಾಗ ಹೀಗಿದೆ:

"ಅದೇ ಪ್ರಕಾರ ದಿವ್ಯಜ್ಞಾನಿಗಳೂ (ರಬ್ಬಾನೀನ್) ಧರ್ಮ ಪಂಡಿತರೂ (ತೀರ್ಪು ನೀಡುತ್ತಿದ್ದರು). ಕಾರಣವೇನೆಂದರೆ ಅಲ್ಲಾಹನ ಗ್ರಂಥದ ಸಂರಕ್ಷಣೆಯ ಹೊಣೆ ಅವರಿಗಿತ್ತು. ಅವರು ಅದರ ಮೇಲ್ನೋಟಗಾರರೂ ಆಗಿದ್ದರು."

ಖುಲಫಾಉರ್ರಾಶಿದೀನ್ (ಅಲ್ಲಾಹನಿಂದ ಮಾರ್ಗದರ್ಶನ ಪಡೆದ ಖಲೀಫರು) ಈ ಮೂರನೆಯ ವರ್ಗಕ್ಕೆ ಸೇರುತ್ತಾರೆ. ಅವರು ಹಝ್ರತ್ ಮುಹಮ್ಮದ್ ಪೈಗಂಬರ್‌ರ(ಸ) ನಂತರ ಮುಸ್ಲಿಮರ ಖಲೀಫರಾದರು. ಅವರಿಗೆ ನುಬುವ್ವತ್ ಲಭಿಸಿರಲಿಲ್ಲ. ಅವರ ಅಧಿಕಾರದ ಬಗ್ಗೆ ಯಾರೂ ಪ್ರತಿಭಟಿಸಿರಲಿಲ್ಲ. ಅವರನ್ನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಾರಾಧಿಕಾರಿಗಳನ್ನಾಗಿಯೂ ಅಂಗೀಕರಿಸಲಾಗಿತ್ತು. ಆ ಕಾಲದ ಮುಸ್ಲಿಮರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹಾಗೆಯೇ ಪವಿತ್ರ ಖುರ್‌ಆನ್ ತತ್ವಗಳ ಬಗ್ಗೆ ಜ್ಞಾನಗಳಿಸಿದ್ದುದರಿಂದ ಹೀಗಾದುದರಲ್ಲಿ ಆಶ್ಚರ್ಯವಿಲ್ಲ.

ನುಬುವ್ವತ್ ಮತ್ತು ಖಿಲಾಫತ್‌ನ ಪರಸ್ಪರ ಸಂಬಂಧವು ಮುರಿಯಲಾರದಷ್ಟು ಬಲಿಷ್ಠವಾಗಿದೆ. ಪವಿತ್ರ ಖುರ್‌ಆನ್ ಜನರ ನಾಯಕರಾದ ಖಲೀಫರ ಬಗ್ಗೆ ಪ್ರಸ್ತಾಪಿಸುವಾಗ ಅವರು ಪ್ರವಾದಿಗಳಾಗಿದ್ದರು ಅಥವಾ ಅವರಿಗಿಂತ ಮುಂಚಿತವಾಗಿ ಆಗಮಿಸಿದ

ಪ್ರವಾದಿಗಳ ಪ್ರತಿನಿಧಿಗಳಾಗಿದ್ದರು ಎಂಬುದನ್ನು ಸೂಚಿಸುತ್ತದೆ.

ಪ್ರವಾದಿಗಳಾಗಿದ್ದ ಖಲೀಫರು ತಮ್ಮ ಪ್ರವಾದಿತ್ವದ ಬಗ್ಗೆ ಸ್ವತಃ ಘೋಷಿಸುತ್ತಿದ್ದರು. ಪ್ರವಾದಿಗಳ ಅಧೀನರಾಗಿರುವ ಖಲೀಫರು ತಾವು ಯಾವ ಪ್ರವಾದಿಯ ಖಲೀಫರೆಂದು ಸೂಚಿಸುತ್ತಿದ್ದರು. ಆ ಪ್ರವಾದಿಯ ನಿಯಮ ಸಂಹಿತೆಗಳನ್ನು (ಶರೀಅತನ್ನು) ಅವರು ಜಾರಿಗೊಳಿಸುತ್ತಿದ್ದರು.

ಪ್ರವಾದಿ ಮೂಸಾರವರ(ಅ) ನಂತರ ಜೋಶುವ ಅವರ ಖಲೀಫರಾದರು. ಪ್ರವಾದಿ ಈಸಾರವರ(ಅ) ನಂತರ ಪೀಟರ್ ಅವರ ಖಲೀಫರಾದರು. ಈ ಖಲೀಫರು ಪ್ರವಾದಿತ್ವಗಳಿಸಿರಲಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಹಝ್ರತ್ ಅಬೂಬಕರ್(ರ) ಪ್ರಥಮ ಖಲೀಫರಾಗಿ ಆಯ್ಕೆಗೊಂಡರು. ಈ ಅನುಗ್ರಹೀತ ಖಿಲಾಫತ್ ಹಝ್ರತ್ ಅಲಿಯವರ(ರ) ನಿಧನದ ತನಕ 29 ವರ್ಷಗಳ ಕಾಲ ಮುಸ್ಲಿಮರಲ್ಲಿ ಜಾರಿಯಲ್ಲಿತ್ತು.

ಇಂದಿನ ಕಾಲದಲ್ಲಿ ಖಿಲಾಫತ್ ಆವಶ್ಯಕತೆ ಮತ್ತು ಅದರ ಸಾಧ್ಯತೆಯ ಬಗ್ಗೆ ಪರಿಶೀಲಿಸುವ ಮೊದಲು ಖಿಲಾಫತ್ ರಾಶಿದ (ಮೊದಲನೆಯ ನಾಲ್ಕು ಖಲೀಫರ ಕಾಲ) ಮೊದಲ್ಗೊಂಡು ಇಂದಿನ ತನಕದ ಚರಿತ್ರೆ ಸಂಕ್ಷಿಪ್ತವಾಗಿ ವೀಕ್ಷಿಸುವ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಉಪದೇಶ ಮತ್ತು ಭವಿಷ್ಯವಾಣಿಗಳೊಂದಿಗೆ ಅದು ಸಂಬಂಧಹೊಂದಿದೆಯೋ ಎಂಬುದನ್ನು ನೋಡುವ.

### ಅನುಗ್ರಹೀತ ಖಿಲಾಫತ್ ರಾಶಿದ (ಕ್ರಿ.ಶ. 632-661)

ಕರೆನ್ ಆರ್ಮ್‌ಸ್ಟ್ರಾಂಗ್ ಪ್ರಥಮ ನಾಲ್ಕು ಖಲೀಫರ ಬಗ್ಗೆ ಹೀಗೆ ಹೇಳುತ್ತಾರೆ:

"ಅವರು ಪ್ರವಾದಿಯ ನಿಕಟ ಸಂಬಂಧ ಹೊಂದಿವರಾಗಿದ್ದರು. ಅವರು ಮಕ್ಕ ಮತ್ತು ಮದೀನದಲ್ಲಿ ವಿವಿಧ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರನ್ನು ರಾಶಿದೂನ್ ಎಂದರೆ ಸನ್ಮಾರ್ಗ ಪಡೆದವರಾದ ಖಲೀಫರೆಂದು ಕರೆಯಲಾಗುತ್ತಿತ್ತು. ಅವರ ಆಡಳಿತೆಯ ಕಾಲವು ಪ್ರವಾದಿಯವರ ಕಾಲದಂತೆ ಧರ್ಮವು ರೂಪುಗೊಳ್ಳುವ ಕಾಲವಾಗಿತ್ತು. ಮುಸ್ಲಿಮರು ತಮ್ಮನ್ನು ಮತ್ತು ತಮ್ಮ ಧರ್ಮ ಶಾಸ್ತ್ರವನ್ನು ಈ ಕಾಲಾವಧಿಯಲ್ಲಿ ಎದುರಿಸಬೇಕಾಗಿ ಬಂದ ಗೊಂದಲಮಯ, ವೈಭವಪೂರಿತ ಮತ್ತು ದುರಂತಮಯ ಘಟನೆಗಳಿಗೆ ಅನುಸಾರವಾಗಿ ರೂಪಿಸಿದರು." (Islam : A Short History, p.21)

ಈ ನಾಲ್ಕು ಖಲೀಫರು ತಮ್ಮ ವೈಯಕ್ತಿಕ ಮಾದರಿಗಳನ್ನು ತೋರಿಸಿಕೊಟ್ಟರು. ಅವು ಮುಂದಿನ ಮುಸ್ಲಿಮ್ ಪೀಳಿಗೆಗಳಿಗೆ ಮಾರ್ಗದರ್ಶಕವೂ ಸ್ಫೂರ್ತಿದಾಯಕವೂ ಆದವು.

ಹಝ್ರತ್ ಅಬೂಬಕರ್(ರ) ಪ್ರವಾದಿಯವರ ಪ್ರಥಮ ಸ್ನೇಹಿತರಲ್ಲಿ ಒಬ್ಬರಾಗಿದ್ದರು. ಅವರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಸೂಚ್ಯವಾಗಿ ಹೇಳಲಾಗಿದೆ. ಮಕ್ಕದಿಂದ ಮದೀನಕ್ಕೆ ವಲಸೆ ಹೋಗುವಾಗ ಅವರು ಪ್ರವಾದಿಯವರೊಂದಿಗೆ ಇದ್ದರು ಮತ್ತು ಗುಹೆಯಲ್ಲಿ ಅವರೊಂದಿಗೆ ಆಶ್ರಯ ಪಡೆದಿದ್ದರು.

ಪ್ರಥಮ ಖಲೀಫ **ಹಝ್ರತ್ ಅಬೂಬಕರ್‌ರವರ**(ರ) ಖಿಲಾಫತ್ ಎರಡು ವರ್ಷಗಳ ಕಾಲಾವಧಿಯಾಗಿದ್ದರೂ ಮುಸ್ಲಿಮರನ್ನು ಒಗ್ಗೂಡಿಸಲು ಅವರು ಮಾಡಿದ ಪ್ರಯತ್ನ ಸಫಲವಾಯಿತು. ಅವರು ವಿದ್ರೋಹಿಗಳನ್ನು ಬಗ್ಗು ಬಡಿಯಲು ಯುದ್ಧಮಾಡಿದರು. ಅವರ ಯುದ್ಧಗಳು ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದ ಮಾಡಿದವುಗಳಾಗಿದ್ದುವು. ಕೆಲವು ವಿದ್ರೋಹಿಗಳು ತಮ್ಮ ವಿದ್ರೋಹಕ್ಕೆ ಧಾರ್ಮಿಕ ಕಾರಣ ನೀಡುತ್ತಾ ಇದ್ದರು. ಖಲೀಫರವರ ಮೂಲಕ ಅರಬಿ ಸ್ಥಾನವು ಸುರಕ್ಷಿತವಾಯಿತು. ಅವರು ಪರ್ಶಿಯದವರ ವಿರುದ್ಧ ಹೋರಾಡಿ ಅವರ ಸಾಮ್ರಾಜ್ಯದ ಕೆಲಭಾಗಗಳನ್ನು ಸ್ವಾಧೀನಪಡಿಸಿದರು.

ಅವರು ಔದಾರ್ಯವಂತರಾಗಿದ್ದರು. ಅವರು ತನ್ನ ಶತ್ರುಗಳ ವಿರುದ್ಧ ಕಠೋರವಾಗಿ ವರ್ತಿಸುತ್ತಿರಲಿಲ್ಲ. ಅವರ ಪ್ರಯತ್ನದಿಂದ ಇಸ್ಲಾಮ್‌ನಿಂದ ದೂರ ಸರಿದಿದ್ದ ಅನೇಕ ಅರಬಿ ಗೋತ್ರಗಳು ತಮ್ಮ ಸಂಬಂಧವನ್ನು ಇಸ್ಲಾಮಿನೊಂದಿಗೆ ಪುನಃ ಜೋಡಿಸಿದುವು. ಇಸ್ಲಾಮಿನ ಚರಿತ್ರೆಯ ಅತ್ಯಂತ ವಿಪತ್ತಿನ ಆ ಕಾಲದಲ್ಲಿ ಹೀಗೆ ಮಾಡಲು ಸಾಧ್ಯವಾದುದು ಬಹಳ ದೊಡ್ಡ ಯಶಸ್ಸಾಗಿದೆ.

**ಹಝ್ರತ್ ಉಮರಿಬ್ನುಲ್ ಖತ್ತಾಬ್**(ರ) ಅವರು ದ್ವಿತೀಯ ಖಲೀಫರಾಗಿದ್ದರು. ಅವರು ಕ್ರಿ.ಶ. 634 ರಿಂದ 644ರ ತನಕ ಖಲೀಫರಾಗಿದ್ದರು. ಅವರ ಕಾಲದಲ್ಲಿ ಅರಬಸ್ಥಾನದ ಹೊರಗಡೆ ಪರ್ಶಿಯಾ ಮತ್ತು ಬೈಝಾಂಟಿಯನ್ ಸಾಮ್ರಾಜ್ಯಗಳು ಮುಸ್ಲಿಮರಿಗೆ ಅಧೀನವಾದುವು. ಆ ಮೂಲಕ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿ ಈಡೇರಿತು. ಒಂದು ವಿಷಯವನ್ನು ಸ್ಪಷ್ಟವಾಗಿ ನೀವು ಮನವರಿಕೆ ಮಾಡಬೇಕು. ಇತರ ದೇಶಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡದ್ದು ಇಸ್ಲಾಮ್ ಧರ್ಮವನ್ನು ಬಲಾತ್ಕಾರದಿಂದ ಹಬ್ಬಿಸಲಿಕ್ಕಾಗಿರಲಿಲ್ಲ. ಅರಬಿಗಳು ಇಸ್ಲಾಮಿನ ಅತಿ ಶಕ್ತಿಯಿಂದ ಪ್ರಚೋದಿಸಲ್ಪಟ್ಟಿರಲಿಲ್ಲ. ಖಡ್ಗದ ಮೂಲಕ ಇಸ್ಲಾಮನ್ನು ಅಂಗೀಕರಿಸುವಂತೆ ಮಾಡಿರಲಿಲ್ಲ. ಇಸ್ಲಾಮ್ ವಿಸ್ತಾರವಾಗಿ ಹರಡಿದುದು ಹೆಚ್ಚು ಹೆಚ್ಚು ಭೂಪ್ರದೇಶಗಳು ಮುಸ್ಲಿಮರ ಕೈವಶವಾದ ಕಾರಣದಿಂದಾಗಿದೆ. ಖಲೀಫರವರು ಮುಸ್ಲಿಮರ ಆಧ್ಯಾತ್ಮಿಕ ಮತ್ತು ರಾಜಕೀಯ ನಾಯಕರಾದ ಕಾರಣ ಖಲೀಫರ ಜವಾಬ್ದಾರಿಗಳಲ್ಲಿ ಒಂದು, ಇಸ್ಲಾಮ್ ಧರ್ಮಪ್ರಚಾರವೂ ಆಗಿತ್ತು. ವಿವಿಧ ಗೋತ್ರ ವರ್ಗಗಳೊಂದಿಗೆ ಮಾಡಿದ ಒಪ್ಪಂದಗಳನ್ನು ಈಡೇರಿಸುವ ಜವಾಬ್ದಾರಿ ಅವರಿಗಿತ್ತು. ಮುಸ್ಲಿಮರ ದೇಶದ ಸಂರಕ್ಷಣೆಯೂ ಅವರ ಜವಾಬ್ದಾರಿಯಾಗಿತ್ತು. ಹಲವು ಜನರು ಇಸ್ಲಾಮ್ ಧರ್ಮಕ್ಕೆ ಸೇರಿದರು. ಇಸ್ಲಾಮ್ ವೇಗವಾಗಿ ಹರಡಿತು. ಮುಸ್ಲಿಮರು ಅನ್ಯ ಧರ್ಮೀಯರಿಗೆ ನೀಡಿದ ಸ್ವಾತಂತ್ರ್ಯದ ಕಾರಣದಿಂದ ಅನ್ಯರು ಮುಸ್ಲಿಮರನ್ನು ಗೌರವಿಸಿದರು. ಗ್ರಂಥಾನುಯಾಯಿಗಳಿಗೆ ವಿಶಿಷ್ಟ ಸಂರಕ್ಷಣೆ ದೊರಕಿತು.

ಹಝ್ರತ್ ಉಮರ್(ರ) ಅವರಿಗೆ ದೊರೆತ ಅಮೀರುಲ್ ಮೂಮಿನೀನ್ (ವಿಶ್ವಾಸಿಗಳ ಸರದಾರ) ಎಂಬ ಅಂಕಿತ ನಾಮದಿಂದ ಅವರ ಯಶಸ್ಸು ಪ್ರತಿಬಿಂಬಿಸುತ್ತದೆ. ಅವರ ನ್ಯಾಯ ಬದ್ಧತೆ ಮತ್ತು ಅವರ ಬುದ್ಧಿಶಕ್ತಿ ಪ್ರಶಂಸನೀಯವಾಗಿತ್ತು. 637ರಲ್ಲಿ ವಿಜಯಿಯಾಗಿ ಅವರು ಜೇರುಸಲೇಮ್ ಪ್ರವೇಶಿಸಿದಾಗ ಅವರನ್ನು ಅಲ್ಲಿನ ಚರ್ಚ್‌ನಲ್ಲಿ ಪ್ರಾರ್ಥಿಸಲು ಆಮಂತ್ರಿಸಲಾಯಿತು. ಅದು ಮುಸ್ಲಿಮರ ಜಯ ಮತ್ತು ಕ್ರೈಸ್ತರ ಸೋಲಿನ ಗುರುತು ಆಗಬಹುದಾಗಿತ್ತು. ಆದರೆ ಹಾಗೆ ಮಾಡಲು ಅವರು ನಿರಾಕರಿಸಿದರು. ತನ್ನ ಕೃತ್ಯದ ಮೂಲಕ ಕ್ರೈಸ್ತರ ಮನಸ್ಸನ್ನು ನೋಯಿಸಲು ಅವರು ಇಷ್ಟಪಡಲಿಲ್ಲ. ಅವರು ತನ್ನ ಪ್ರಜೆಗಳ ಹಿತಕಾಂಕ್ಷಿ ಆಗಿದ್ದರು.

ಹಝ್ರತ್ ಉಮರ್(ರ) ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದರು. ಅವುಗಳ ತದ್ರೂಪ ಸಂಸ್ಥೆಗಳು ಮುಸ್ಲಿಮ್ ದೇಶಗಳಲ್ಲಿ ಸ್ಥಾಪಿಸಲ್ಪಟ್ಟವು. ಅವುಗಳಲ್ಲಿ ಕೆಲವು ಈ ಕೆಳಗಿನವು :

* ಮಜ್ಲಿಸ್ ಶೂರಾ ಎಂಬ ಸಲಹೆ ನೀಡುವ ಮಂಡಳಿ.
* ದೇಶವನ್ನು ಪ್ರಾಂತ್ಯಗಳಾಗಿ ವಿಭಜನೆ.

* ಬೈತುಲ್ ಮಾಲ್ ಅಥವಾ ಸರಕಾರಿ ಖಜಾನೆ ಸ್ಥಾಪನೆ – ತೆರಿಗೆಗಳ ವಸೂಲಾತಿ ಮತ್ತು ಹಣದ ಹಂಚುವಿಕೆಗಾಗಿ.
* ಹಿಜರಿ ಕಾಲನಿರ್ಣಯ ಪದ್ಧತಿಯ ಬಳಕೆ.
* ನ್ಯಾಯಾಲಯಗಳ ಸ್ಥಾಪನೆ, ಸರಕಾರದಿಂದ ಬಡವರಿಗೆ ಮತ್ತು ಮಕ್ಕಳಿಗೆ ಸಹಾಯ.
* ಸರಕಾರಿ ಕಟ್ಟಡಗಳ ನಿರ್ಮಾಣ ಮತ್ತು ಸೇತುವೆಗಳ ನಿರ್ಮಾಣ.
* ಕೃಷಿಯ ಅಭಿವೃದ್ಧಿಗಾಗಿ ಸರಕಾರಿ ಸಹಾಯ.

ಹಝ್‌ರತ್ ಉಮರ್(ರ) ತನ್ನ ಅನಂತರ ಖಲೀಫರನ್ನು ಚುನಾಯಿಸಲು ಒಂದು ಸಮಿತಿಯನ್ನು ರಚಿಸಿದುದು ಬಹಳ ಮುಖ್ಯ ನಿರ್ಧಾರವಾಗಿದೆ.

**ಹಝ್‌ರತ್ ಉಸ್ಮಾನ್**(ರ) ಮೂರನೆಯ ಖಲೀಫರಾದರು. 644 ರಿಂದ 656ರ ತನಕ ಅವರು ಖಲೀಫರಾಗಿದ್ದರು. ಹಝ್‌ರತ್ ಅಬೂಬಕರ್(ರ) ಸಂಕಲಿಸಿದ ಪವಿತ್ರ ಖುರ್‌ಆನಿನ ಅಧಿಕೃತ ಪ್ರತಿಯನ್ನು ತಯಾರಿಸಿ ಅವರು ಅದರ ಪ್ರತಿಗಳನ್ನು ಎಲ್ಲಾ ಪ್ರಾಂತ್ಯಗಳಿಗೆ ಕಳುಹಿಸಿದರು. ಅವರು ಬಡವರ ಬಗ್ಗೆ ಕಾಳಜಿ ಹೊಂದಿದ್ದರು. ಇಸ್ಲಾಮಿಕ ಸಾಮ್ರಾಜ್ಯದ ಪ್ರಥಮ ನೌಕಾಪಡೆಯನ್ನು ಸ್ಥಾಪಿಸಿದುದರ ಖ್ಯಾತಿ ಅವರಿಗಿದೆ. ಅವರ ಕಾಲದಲ್ಲಿ ಇಸ್ಲಾಮ್ ಅನೇಕ ದೇಶಗಳಲ್ಲಿ ಹರಡಿತು.

ನಾಲ್ಕನೆಯ ಖಲೀಫ **ಹಝ್‌ರತ್ ಅಲಿ**(ರ) 656 ರಿಂದ 661ರ ತನಕ ಖಲೀಫರಾಗಿದ್ದರು. ಅವರು ಅನೇಕ ಪಂಥಾಹ್ವಾನಗಳನ್ನು ಎದುರಿಸಬೇಕಾಯಿತು. ಅನೇಕ ಗುಂಪುಗಳು ತಮಗೆ ಅಧಿಕಾರ ದೊರೆಯಲು ಹಾತೊರೆಯುತ್ತಿದ್ದುವು. ದೇಶದ ಹೃದಯ ಭಾಗದಲ್ಲಿದ್ದ ಮುಸ್ಲಿಮರು ಹಝ್‌ರತ್ ಅಲಿ(ರ) ಅವರ ಜೊತೆಗೆ ಬಲಿಷ್ಠ ಸಂಬಂಧ ಹೊಂದಿದ್ದರೂ ದೂರ ಪ್ರದೇಶಗಳ ಜನರು ಖಲೀಫರೊಂದಿಗೆ ಸಾಕಷ್ಟು ನಿಷ್ಠೆಯನ್ನು ಹೊಂದಿರಲಿಲ್ಲ. ಈ ಬಗ್ಗೆ ಪವಿತ್ರ ಖುರ್‌ಆನಿನ ಕೊನೆಯದಾಗಿ ಅವತೀರ್ಣಗೊಂಡ ಅನ್ನಸ್ರ್ ಎಂಬ ಅಧ್ಯಾಯದಲ್ಲಿ ಸೂಚನೆಗಳಿವೆ. ಇಸ್ಲಾಮಿನ ಜಯದೊಂದಿಗೆ ಕ್ಷಮೆಯಾಚನೆ ಮಾಡಲು ಸಹ ಅದರಲ್ಲಿ ಹೇಳಲಾಗಿದೆ. ಆ ಅಧ್ಯಾಯದಲ್ಲಿ ಹೀಗಿದೆ:

"ಅಲ್ಲಾಹನ ಸಹಾಯ ಮತ್ತು ವಿಜಯ ಪ್ರಾಪ್ತಿಯಾದಾಗ, ಹಾಗೂ ಅಲ್ಲಾಹನ ಧರ್ಮದಲ್ಲಿ ಜನರು ಗುಂಪು ಗುಂಪಾಗಿ ಬಂದು ಸೇರುವುದನ್ನು ನೀನು ಕಂಡಾಗ, ನೀನು ನಿನ್ನ ಪ್ರಭುವಿನ ಸ್ತುತಿ ಕೀರ್ತನೆ ಮಾಡುವುದರೊಂದಿಗೆ ಅವನ ಪಾವಿತ್ರ್ಯವನ್ನು ಕೊಂಡಾಡು ಮತ್ತು ಅವನೊಡನೆ ಕ್ಷಮೆಯಾಚನೆ ಮಾಡು. ನಿಶ್ಚಯವಾಗಿಯೂ ಅವನು (ತನ್ನ ಭಕ್ತ ದಾಸರ ಕಡೆಗೆ) ಕನಿಕರದಿಂದ ಪದೇ ಪದೇ ತಿರುಗುವವನಾಗಿದ್ದಾನೆ." (ಪವಿತ್ರ ಖುರ್‌ಆನ್ 110 : 1- 4)

ಇಸ್ಲಾಮ್ ಜಯಗಳಿಸುವುದೆಂಬ ಭವಿಷ್ಯವಾಣಿಯೊಂದಿಗೆ ಕ್ಷಮೆಯಾಚನೆಯ ಬಗ್ಗೆ ಪ್ರಸ್ತಾಪಿಸಿದುದು ಏಕೆ? ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಜಯ ಮತ್ತು ವಿರೋಧದ ಕಾಲ ನಿಶ್ಚಯವಾಗಿಯೂ ಆರಂಭವಾಗಿದ್ದಿತು. ಆದರೆ ಹಝ್‌ರತ್ ಅಲಿ(ರ) ಅವರ ಖಿಲಾಫತ್ ಕಾಲದಲ್ಲಿ ಆಂತರಿಕ ವಿರೋಧವು ಕಠೋರವಾಯಿತು. ಬಹುಸಂಖ್ಯೆಯಲ್ಲಿದ್ದ ಮುಸ್ಲಿಮರಿಗೆ ನೈತಿಕ ತರಬೇತಿ ಕೊಡಲು ಸಾಧ್ಯವಾಗದ ಕಾರಣ ಆ ನವ ಮುಸ್ಲಿಮರಿಗೆ ಇಸ್ಲಾಮಿನ ಸೂಕ್ಷ್ಮ ತತ್ವಗಳನ್ನು ಮನವರಿಕೆ ಮಾಡಿಕೊಂಡು ಸಾಮಾಜಿಕ ಶಾಂತಿ ಸ್ಥಾಪಿಸಲು ಸಾಧ್ಯವಾಗಲಿಲ್ಲ. ಜನರು ಗುಂಪು ಗುಂಪಾಗಿ ಇಸ್ಲಾಮಿಗೆ ಪ್ರವೇಶಿಸತೊಡಗಿದುದರಿಂದ ಅವರಿಗೆ ಸಾಕಷ್ಟು ತರಬೇತಿ ನೀಡಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಮುಸ್ಲಿಮ್ ಸಮುದಾಯ ಬಹಳ ಕಷ್ಟ ಅನುಭವಿಸಬೇಕಾಯಿತು. ವಿಸ್ತೃತವಾದ ಪ್ರದೇಶದ ಆಡಳಿತೆ ಒಬ್ಬ ಖಲೀಫರ ಕೈಯಲ್ಲಿದ್ದುದರಿಂದ ಕೆಲವು ಜನರಲ್ಲಿ ನಾಯಕರಾಗಬೇಕೆಂಬ ಆಶೆ ತಲೆದೋರಿತು. ಇದು ಅವರನ್ನು ಖಲೀಫರಿಂದ ದೂರಸರಿದು ಖಿಲಾಫತ್‌ನಿಂದ ದೊರಕುವ ಅನುಗ್ರಹಗಳಿಂದ ವಂಚಿತರನ್ನಾಗಿ ಮಾಡಿತು.

ಇಂತಹ ಜನರಲ್ಲಿ ಮುಆವಿಯ ಸೇರಿದ್ದರು. ಅವರು ಹಝ್‌ರತ್ ಅಲಿ(ರ) ಅವರಿಂದ ಸಂಬಂಧ ವಿಚ್ಛೇದಿಸಿ ಜೆರುಸಲೇಮ್‌ನಲ್ಲಿ ತನ್ನನ್ನು ಖಲೀಫರನ್ನಾಗಿ ಮಾಡಿಕೊಂಡರು. ಇದರೊಂದಿಗೆ ಖಾರಿಜಿಗಳು (ಬಿಟ್ಟು ಹೋದವರು) ಎಂಬ ಒಂದು ಹೊಸ ಗುಂಪು ತಲೆಯೆತ್ತಿತು. ಅವರು ಖಲೀಫರ ಅಧಿಕಾರವನ್ನು ಪ್ರಶ್ನಿಸಿ ತಮಗೆ ತೋಚಿದ ಹಾಗೆ ನಾಯಕತ್ವದ ಪರಿಧಿ ನಿಶ್ಚಯಿಸಿದರು. ಶತ್ರುತ್ವ ಮತ್ತು ದ್ವೇಷವು ತ್ಯಾಗ ಮತ್ತು ಐಕ್ಯತೆಯ ಸ್ಥಾನವನ್ನು ಆಕ್ರಮಿಸಿತು. ಪ್ರತಿಯೊಬ್ಬರು ತಮ್ಮ ನಿಲುವಿಗೆ ಹಠದಿಂದ ಅಂಟಿಕೊಂಡರು ಮತ್ತು ಪ್ರವಾದಿ(ಸ) ಅವರ ಕಾಲದಲ್ಲಿದ್ದ ಭ್ರಾತೃತ್ವದ ಬಾಂಧವ್ಯಕ್ಕೆ ಮರಳಿ ಹೋಗುವುದು ಅಸಾಧ್ಯವಾಯಿತು.

ಖಿಲಫಾಉರ್ರಾಶಿದೀನ್‌ರನ್ನು ಪೋಣಿಸಿದ ಸ್ವರ್ಣದ ದಾರವು ಅವರಿಗೆ ಇಸ್ಲಾಮಿನ ಬಗ್ಗೆ ಇದ್ದ ನಿಷ್ಕಳಂಕ ವಿಧೇಯತೆ, ಅವರ ಶ್ರೇಷ್ಠ ಸ್ವಭಾವ ಗುಣ ಮತ್ತು ಮುಹಮ್ಮದ್ ಪೈಗಂಬರರ(ಸ) ಉಪದೇಶಗಳ ಬಗ್ಗೆ ಅವರಿಗಿದ್ದ ನಿಕಟ ಬಾಂಧವ್ಯವಾಗಿತ್ತು. ಖಲೀಫರ ಸ್ಥಾನಕ್ಕೆ ಕುಂದುಂಟಾಗುವ ಯಾವ ಕೆಲಸವನ್ನೂ ಅವರು ಮಾಡಿರಲಿಲ್ಲ. ಖಿಲಾಫತ್ ಗೌರವ ಕಾಪಾಡಲು ಅವರಲ್ಲಿ ಮೂವರು ರಕ್ತಸಾಕ್ಷಿಗಳೂ ಆದರು. ಅವರ ಕಾಲದಲಿ ಇಸ್ಲಾಂ ಅಭಿವೃದ್ಧಿ ಪಡೆಯಿತು. ಆದರೆ ಅವರು ಬಹಳ ಕಷ್ಟಗಳನ್ನು ಎದುರಿಸಬೇಕಾಯಿತು. ಅವರಿಗೆ ವೈಯಕ್ತಿಕವಾದ ಆಕಾಂಕ್ಷೆಗಳಿರಲಿಲ್ಲ. ಅವರಿಗೆ ಸ್ವತಃ ನಾಯಕರಾಗುವ ಅಭಿಲಾಷೆ ಇರಲಿಲ್ಲ. ಅಲ್ಲಾಹನೇ ಅವರಿಗೆ ಆ ಸ್ಥಾನ ನೀಡಿದನು. ಅಲ್ಲಾಹನಿಗೆ ತಾವು ಲೆಕ್ಕ ಒಪ್ಪಿಸಲಿಕ್ಕಿದೆಯೆಂಬ ಭಾವನೆಯಿಂದ ಅವರು ಬಹಳ ಜಾಗರೂಕತೆಯಿಂದ ಮುಸ್ಲಿಮ್ ಜನತೆಯನ್ನು ಮುನ್ನಡೆಸಿದರು.

ಮುಸ್ಲಿಮರ ಜನಸಂಖ್ಯೆ ಮತ್ತು ಅವರು ವಾಸಿಸುತ್ತಾ ಇದ್ದ ಭೂಪ್ರದೇಶ ವರ್ಧಿಸಿದ ಹಾಗೆ ಲೌಕಿಕ ಲಾಭವನ್ನು ಗಳಿಸಲು ಆಸಕ್ತರಾದ ಕೆಲವರು ನಾಯಕರಾಗುವ ಹಂಬಲ ಹೊಂದಿದರು. ಮುಆವಿಯರವರ ಈ ಕೆಳಗಿನಂತೆ ಮಾತಿನಿಂದ ಅದು ಪ್ರತಿಬಿಂಬಿಸುತ್ತದೆ:

"ಅಬೂಬಕರ್ ಲೌಕಿಕವಾದ ಅಭಿಲಾಷೆಹೊಂದಿರಲಿಲ್ಲ... ಉಮರ್ ಬಗ್ಗೆ ಹೇಳುವುದಾದರೆ ಲೋಕವು ಅವರನ್ನು ಬಯಸಿದರೂ ಅವರು ಅದನ್ನು ಬಯಸಲಿಲ್ಲ. ನಮ್ಮ ಬಗ್ಗೆ ಹೇಳುವುದಾದರೆ ನಾವು ಅದರಲ್ಲಿ (ಪ್ರಾಣಿಗಳ ಹಾಗೆ) ಹೊರಳಾಡುತ್ತಿದ್ದೇವೆ." (ಜಲಾಲುದ್ದೀನ್ ಸುಯೂತಿಯವರ ತಾರೀಖುಲ್ ಖಿಲಫಾಉರ್ರಾಶಿದೀನ್ ನೋಡಿರಿ.)

ಖಿಲಾಫತ್ ಗಳಿಸಲು ಅರ್ಹತೆಯನ್ನು ಹೊಂದಿದ ಆದಿ ಕಾಲೀನ ಮುಸ್ಲಿಮರ ಶ್ರೇಷ್ಠತೆಯನ್ನು ನಾವು ನೆನಪಿಸುವುದು ಉತ್ತಮವಾಗಿದೆ. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಅರಬಿಗಳಲ್ಲಿ ಬಹಳ ದೊಡ್ಡ ಕ್ರಾಂತಿಯನ್ನುಂಟುಮಾಡಿ ವಿಗ್ರಹಾರಾಧಕರೂ ಗೋತ್ರಾಭಿಮಾನಿಗಳೂ ಆಗಿದ್ದವರನ್ನು ದೇವನ ಪ್ರೀತಿ ಮತ್ತು ಜನರ ಸೇವೆಗಾಗಿ ತಮ್ಮ ಜೀವಿತವನ್ನು ಅರ್ಪಿಸುವ ಸಾಹೋದರ್ಯ ಭಾವನೆಯಿಂದ ಕೂಡಿದ ಜನರನ್ನಾಗಿ ಪರಿವರ್ತಿಸಿದರು. ಪ್ರವಾದಿ ಶಿಷ್ಯರ ತ್ಯಾಗಗಳು ಮತ್ತು ನೈತಿಕ ಮಾದರಿ ವರ್ತನೆಗಳು ಅವರ ಆಧ್ಯಾತ್ಮಿಕ ಔನ್ನತ್ಯದ ಆಶ್ಚರ್ಯಕರವಾದ ಮಟ್ಟವನ್ನು ಪ್ರಕಟಿಸಿತು. ಸತ್ಯದ ಶತ್ರುಗಳಾಗಿದ್ದು ಇಸ್ಲಾಮನ್ನು ಅಳಿಸಿ ಬಿಡಲು ಹೊರಟವರು ಅದರ ಅತ್ಯಂತ ನಿಷ್ಠೆಯ ಅನುಯಾಯಿಗಳಾಗಿ ಅದಕ್ಕಾಗಿ ಜೀವಕೊಡಲು ಸಿದ್ಧರಾದರು. ಇಂತಹ ಉನ್ನತಮಟ್ಟದ ಜನರಿಗೆ ಅಲ್ಲಾಹನ ವಾಗ್ದಾನವಾದ ಖಿಲಾಫತ್ ಈಡೇರಿಸಿ ಕೊಡಲಾಯಿತು.

ಜನರು ತಮ್ಮ ಸ್ವಾರ್ಥ ಅಭಿಲಾಷೆಗಳಿಗೆ ದಾಸರಾದಾಗ ಖಿಲಾಫತ್ ಎಂಬ ಅನುಗ್ರಹವನ್ನು ಅವರಿಂದ ಕಿತ್ತುಕೊಳ್ಳಲಾಯಿತು. ಆ ಜನರು

ಖಿಲಾಫತ್ ಎಂಬ ಅನುಗ್ರಹ ಪಡೆಯಲು ಅರ್ಹತೆಯನ್ನು ಕಳೆದುಕೊಂಡರು.

ಹೀಗೆ ಸಂಭವಿಸಿದುದು ಅಲ್ಲಾಹನ ವಾಗ್ದಾನ ಪ್ರಕಾರವೇ ಆಗಿದೆ. ಸತ್ಯವಿಶ್ವಾಸಿಗಳಾಗಿ ಸತ್ಕಾರ್ಯ ಮಾಡುವವರಿಗೆ ಖಿಲಾಫತ್‌ನ ವಾಗ್ದಾನ ನೀಡಲಾಗಿತ್ತು. ಐಕ್ಯದಿಂದ ಸಾತ್ವಿಕರಾಗಿ ಸತ್ಕಾರ್ಯ ಮಾಡುವವರಿಗೆ ಈ ವಾಗ್ದಾನ ನೀಡಲಾಗಿತ್ತು. ಜನರು ಶರತ್ತನ್ನು ಪಾಲಿಸದೆ ಇದ್ದಾಗ ಖಿಲಾಫತ್ ಅವರಿಗೆ ನಷ್ಟವಾಯಿತು.

### ದೇವಾನುಗ್ರಹೀತ ಖಿಲಾಫತ್‌ನಿಂದ ಲೌಕಿಕ ಅಧಿಕಾರಕ್ಕೆ

ಹಝ್ರತ್ ಅಲಿ(ರ) ಅವರು ನಿಧನ ಹೊಂದಿದ ನಂತರ ಮುಸ್ಲಿಮರ ಆಧ್ಯಾತ್ಮಿಕ ಐಕ್ಯ ಕೊನೆಗೊಳ್ಳತೊಡಗಿತು. ವಿವಿಧ ಪಂಗಡಗಳು ವಿಭಿನ್ನ ಮಾರ್ಗಗಳನ್ನು ಆಯ್ದುಕೊಂಡರು. ಇದರ ಫಲಸ್ವರೂಪವಾಗಿ ಮುಸ್ಲಿಮರ ನಾಯಕತ್ವವು ಆಧ್ಯಾತ್ಮಿಕ ಖಿಲಾಫತ್‌ನಿಂದ ಬೇರೆ ರೀತಿಯ ಆಡಳಿತೆಗೆ ಪರಿವರ್ತನೆಗೊಂಡಿತು. ಸಮಯ ಕಳೆದಂತೆ ಜನರಲ್ಲಿ ಸಾತ್ವಿಕತೆಯ ಸಾರವು ಕುಗ್ಗಿತು. ಆ ಕಾಲದ ಖಲೀಫರ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಆಗಿದ್ದರೂ (ಮುಆವಿಯರ ಕಾಲದಲ್ಲಿ ರಾಜಕೀಯ ಸ್ಥಿರತೆ ಉಂಟಾಯಿತೆಂದು ಕೆಲವು ವ್ಯಾಖ್ಯಾನಗಾರರು ಹೇಳಿದ್ದಾರೆ.) ಆ ಕಾಲದ ಜನರು ದೇವನ ಕಡೆಗೆ ಗಮನಿಸದೆ ಸ್ವಾರ್ಥಿಗಳಾಗಿದ್ದರು. ಮುಆವಿಯಾ ತನ್ನ ಮಗ ಯಝೀದನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದುದರಿಂದ ಅವರು ತನ್ನ ಆಂತರಿಕ ಬಲಹೀನತೆಯನ್ನು ಪ್ರಕಟಿಸಿದ್ದಾರೆ. ಅವರು ಧಾರ್ಮಿಕ ಪರಿಶುದ್ಧತೆಗೆ ಗಮನ ಹರಿಸದೆ ತನ್ನ ಕುಟುಂಬದ ಅಧಿಕಾರದ ಭದ್ರತೆಗೆ ಪ್ರಯತ್ನಿಸಿದರು.

ನಾಯಕತ್ವದ ಸೋಲುವಿಕೆಯ ಕಾರಣದಿಂದ ಎಲ್ಲಾ ಮುಸ್ಲಿಮರು ಇಸ್ಲಾಮನ್ನು ತ್ಯಜಿಸಿದರು ಎಂದು ಭಾವಿಸಬಾರದು. ಆದರೆ ಅವರು ಹೃದಯ ಪರಿಶುದ್ಧಿಯನ್ನು ಕಾಪಾಡಲಿಲ್ಲ ಮತ್ತು ಸಹೋದರ ಭಾವನೆಯನ್ನು ಸಂರಕ್ಷಿಸಲಿಲ್ಲ. ವಿವಿಧ ಗುಂಪುಗಳು ತಮ್ಮದೇ ನಾಯಕರನ್ನು ಆರಿಸಿದವು. ಅವರು ಒಂದೇ ಧರ್ಮದ ಅನುಯಾಯಿಗಳಾದರೂ ಪರಸ್ಪರ ದೂರಸರಿಯುತ್ತಾ ಹೋದರು.

ಈ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರು. ಮುಸ್‌ನದ್ ಅಹ್ಮದ್ ಎಂಬ ಹದೀಸ್ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ :

"ಅಲ್ಲಾಹನು ಇಚ್ಛಿಸುವಷ್ಟು ಕಾಲ ನಿಮ್ಮಲ್ಲಿ ನುಬುವ್ವತ್ ಇರುತ್ತದೆ. ಅಲ್ಲಾಹನು ಬಯಸುವಾಗ ಅದನ್ನು ಕೊನೆಗೊಳಿಸುವನು. ಅನಂತರ ನುಬುವ್ವತ್ ಮಾರ್ಗದಲ್ಲಿರುವ ಖಿಲಾಫತ್ ಸ್ಥಾಪಿತವಾಗುವುದು. ಅಲ್ಲಾಹನು ಇಚ್ಛಿಸುವ ಕಾಲದ ತನಕ ಅದು ಜಾರಿಯಲ್ಲಿದ್ದು ಅನಂತರ ಅವನು ಅದನ್ನು ಎತ್ತಿಬಿಡುವನು. ಅನಂತರ ನಿರಂಕುಶಾಧಿಕಾರ ಜಾರಿಗೆ ಬರುವುದು. ಅದು ಅಲ್ಲಾಹನು ಬಯಸುವಷ್ಟು ಕಾಲ ಮುಂದುವರಿಯುವುದು. ಅನಂತರ ಅದನ್ನು ಅಲ್ಲಾಹನು ತೆಗೆದುಬಿಡುವನು. ಅನಂತರ ದೌರ್ಜನ್ಯಪೂರ್ಣ ಸ್ವೇಚ್ಛಾಧಿಪತ್ಯದ ರಾಜಾಧಿಕಾರ ಜಾರಿಗೊಳ್ಳುವುದು. ಅಲ್ಲಾಹನು ಬಯಸುವಷ್ಟು ಕಾಲ ಅದು ಮುಂದುವರಿಯುವುದು. ಅನಂತರ ಅಲ್ಲಾಹನು ಅದನ್ನು ಕೊನೆಗೊಳಿಸುವನು..............."

ಈ ಹದೀಸು ಮುಸ್ಲಿಮ್ ನಾಯಕರ ಆಧ್ಯಾತ್ಮಿಕ ಪರಿವರ್ತನೆಯನ್ನು ಸೂಚಿಸುತ್ತದೆ. ಆದರೆ ಎಲ್ಲರೂ ಆಧ್ಯಾತ್ಮಿಕ ಮೌಲ್ಯಗಳಿಂದ ವಂಚಿತರಾಗಿದ್ದರೆಂದು ಇದರ ಅರ್ಥವಲ್ಲ. ಅವರಲ್ಲಿ ಬಹುತೇಕ ಮಂದಿ ಇಸ್ಲಾಮ್ ಧರ್ಮ ತತ್ವಗಳ ಬಗ್ಗೆ ಮತ್ತು ಪವಿತ್ರ ಖುರ್‌ಆನ್ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ. ಅವರು ರಾಜಕೀಯ ಅಧಿಕಾರ ಮತ್ತು ಗೋತ್ರ ಅಥವಾ ದೇಶದ ಲಾಭಕ್ಕಾಗಿ ಕಾರ್ಯೋನ್ಮುಖರಾದರೇ ಹೊರತು ಇಸ್ಲಾಮಿನ ಅಭಿಮಾನಕ್ಕಾಗಿ ಮತ್ತು ಶಾಂತಿಗಾಗಿ ಪ್ರಯತ್ನಿಸಲಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನುಡಿದಂತೆ ಸಂಭವಿಸಿತು. ಅವರ ಮಾತುಗಳು 661 ರಿಂದ ಇಂದಿನ ಕಾಲದ ತನಕ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ.

ಮುಸ್ಲಿಮೇತರರು ಮತ್ತು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ಖಲೀಫ ಎಂಬ ಪದವನ್ನು ಮೊದಲನೆಯ ನಾಲ್ಕು ಖಲೀಫರ ನಂತರ ಅಧಿಕಾರದಲ್ಲಿದ್ದ ಮತ್ತು ಖಲೀಫರೆಂದು ತಮ್ಮನ್ನು ಕರೆದುಕೊಳ್ಳುತ್ತಿದ್ದ ಮುಸ್ಲಿಮರ ನಾಯಕರ ಬಗ್ಗೆ ಉಪಯೋಗಿಸುತ್ತಾರೆ. ಮೊದಲಿನ ನಾಲ್ಕು ಖಲೀಫರನ್ನು ಮತ್ತು ಅನಂತರ ತಮ್ಮನ್ನು ಖಲೀಫ ಎಂದು ಕರೆದುಕೊಂಡವರನ್ನು ಅವರು ಸಮಾನರಾಗಿ ಕಾಣುತ್ತಾರೆ. ಸರ್ ತೋಮಸ್ ಅರ್‌ನೋಲ್ಡ್ ತನ್ನ ಪುಸ್ತಕ The Caliphateನಲ್ಲಿ ಹೀಗೆ ಬರೆಯುತ್ತಾರೆ :

"ಖಲೀಫರ ಸ್ಥಾನವನ್ನು ಅರ್ಥಮಾಡಿಕೊಳ್ಳಲು ಆ ವ್ಯಕ್ತಿ ಮುಖ್ಯವಾಗಿ ಒಬ್ಬ ರಾಜಕೀಯ ಅಧಿಕಾರಿ ಎಂಬುದನ್ನು ಗಮನಿಸಬೇಕಾದುದು ಆವಶ್ಯಕವಾಗಿದೆ. ಆ ವ್ಯಕ್ತಿಯ ಕೆಲಸಗಳು ಆತನಿಗೆ ಯಾವುದಾದರೂ ಆಧ್ಯಾತ್ಮಿಕ ಶಕ್ತಿ ಇರುವುದಾಗಿಯೂ ಆ ಕಾರಣದಿಂದ ಆತನನ್ನು ಇತರ ವಿಶ್ವಾಸಿಗಳಿಂದ ಬೇರೆಯಾಗಿ ಇರಿಸುತ್ತದೆ ಎಂದೂ ಸೂಚಿಸುವುದಿಲ್ಲ."

ಮೊದಲನೆಯ ನಾಲ್ಕು ಖಲೀಫರ ಉನ್ನತ ಆಧ್ಯಾತ್ಮಿಕ ಸ್ಥಾನಮಾನದೊಂದಿಗೆ ಈ ಉಲ್ಲೇಖವನ್ನು ಹೋಲಿಸಿ ನೋಡಿರಿ. ಖಲೀಫ ಎಂದರೆ ರಾಜಕೀಯ ಅಧಿಕಾರ ಹೊಂದಿರುವವರೆಂಬ ಭಾವನೆಗೆ 1300 ವರ್ಷಗಳ ಚರಿತ್ರೆ ಇದೆ. ಅದನ್ನು ಬದಲಾಯಿಸುವುದು ಕಷ್ಟಕರವಾಗಿದೆ.

ಹಝ್ರತ್ ಅಲಿ(ರ) ಅವರ ನಂತರದ ಉಮವೀ ವಂಶದ ರಾಜಾಧಿಕಾರ (661-750) ಮತ್ತು ಅಬ್ಬಾಸ್ ವಂಶದ ರಾಜಾಧಿಕಾರ (750-1258)ವನ್ನು ಸಹ ಖಿಲಾಫತ್ ಎಂದು ಗಣಿಸಲಾಗಿದೆ. ಅಬ್ಬಾಸ್ ವಂಶದ ಆಡಳಿತೆಯ ಕಾಲದಲ್ಲಿ ಹತ್ತನೆಯ ಶತಮಾನದ ನಂತರ ಮುಸ್ಲಿಮರ ವಿವಿಧ ಖಲೀಫರು ವಿವಿಧ ಸ್ಥಳಗಳಲ್ಲಿದ್ದರು. ಈ ಕಾಲದಲ್ಲಿ ಸಮಾನೀ, ಹಮ್ದಾನೀ, ಫಾತಿಮೀ, ಅಯ್ಯೂಬಿ, ಮಾರ್ಮಲೂಕ್ ಮತ್ತು ಮೊಗಲ್ ವಂಶದ ರಾಜರು ಆಳಿದರು. ಖಿಲಾಫತ್ ವ್ಯವಸ್ಥೆಯ ಕೊನೆಯ ಘಟ್ಟ ಉಸ್ಮಾನಿಯಾ ಖಿಲಾಫತ್ ಎಂದು ಕರೆಯಲ್ಪಡುತ್ತದೆ. ಅವರ ಅಧಿಕಾರ (ನಾಮಮಾತ್ರವಾಗಿ) 1924 ತನಕ ಮುಂದುವರಿಯಿತು. ಆದರೆ ಅದರ ಮೊದಲೇ ಅವರು ಅಧಿಕಾರ ಕಳೆದುಕೊಂಡಿದ್ದರು.

ಖಿಲಾಫತ್ ರಾಶಿದದ ನಂತರ ಸಹ ಎಲ್ಲಾ ಮುಸ್ಲಿಮರು ಇಸ್ಲಾಮ್ ಪಾಠಗಳನ್ನು ಮರೆತಿರಲಿಲ್ಲ ಎಂಬುದನ್ನೂ ಗಮನಿಸಬೇಕಾಗಿದೆ. ಹಲವು ಜನರು ಇಸ್ಲಾಮ್ ಧರ್ಮವನ್ನು ಕಟ್ಟುನಿಟ್ಟಾಗಿ ಅನುಸರಿಸಿ ಲಾಭ ಪಡೆಯುತ್ತಿದ್ದರು. ಹಲವರು ಬಹಳ ಪ್ರಸಿದ್ಧ ಚಿಂತಕರಾಗಿ ಇತರರ ಮೇಲೆ ಪ್ರಭಾವ ಬೀರಲು ಶಕ್ತರಾಗಿದ್ದರು. ಪ್ರತಿಯೊಂದು ಹಿಜರಿ ಶತಮಾನದ ಆರಂಭದಲ್ಲಿ ಮುಜದ್ದಿದರು ಆಗಮಿಸಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡುತ್ತಾ ಇದ್ದರು. ಆದರೆ ಮುಸ್ಲಿಮರು ಹಿಂದೆ ಇದ್ದ ಖಿಲಾಫತೆ ರಾಶಿದದ ಕಾಲದ ಐಕ್ಯತೆಯನ್ನು ಪುನಃ ಗಳಿಸಲಿಲ್ಲ. ಮುಸ್ಲಿಮರು ಖಿಲಾಫತೆ ರಾಶಿದವನ್ನು ಕಳೆದುಕೊಂಡ ಹಾಗೆ ಐಕ್ಯತೆಯನ್ನೂ ಕಳೆದುಕೊಂಡರು.

ಮುಸ್ಲಿಮರು ವಿವಿಧ ಪಂಗಡಗಳಾಗಿ ವಿಭಜಿಸಲ್ಪಟ್ಟಿರುವರು.

ಪ್ರತಿಯೊಂದು ಪಂಗಡ ತನ್ನದೇ ಆದ ಧಾರ್ಮಿಕ ತತ್ವಗಳನ್ನೂ ವ್ಯಾಖ್ಯಾನಗಳನ್ನೂ ಹೊಂದಿದೆ. ಮುಸ್ಲಿಮರು ಏಕ ಸಮುದಾಯವಾಗಿ ಎಂದಾದರೂ ಒಂದಾಗಬಹುದೋ ಎಂದು ನಿರೀಕ್ಷಿಸುವುದಾದರೂ ಹೇಗೆ? ಇದು ಅಸಾಧ್ಯವೆಂದೇ ತೋರುತ್ತದೆ.

ಇಸ್ಲಾಮಿನ ವಿಜಯ ಕೇವಲ ಜನಸಂಖ್ಯೆಯ ವೃದ್ಧಿಯನ್ನು ಹೊಂದಿಕೊಂಡಿದೆ ಎಂದು ಹೇಳುವುದಾದರೆ ಅಂತಹ ವಿಜಯದಿಂದ ಲಾಭವಾದರೂ ಏನು? ಭಿನ್ನಾಭಿಪ್ರಾಯಗಳಿಂದ ಕೂಡಿದ ಜನರನ್ನು ಹೊಂದಿದ ಮುಸ್ಲಿಮ್ ಸಮುದಾಯ ಶಾಂತಿಯನ್ನು ಗಳಿಸಲು ಸಾಧ್ಯವೇ? ಇಂದಿನ ಲೋಕದ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಸುಳಿವುಗಳೇನಾದರೂ ಇವೆಯೇ?

### ಖಿಲಾಫತ್ ಮತ್ತು ಇಂದಿನ ಮುಸ್ಲಿಮರು

ಜಾಗತಿಕ ನಾಯಕತ್ವದ ಕೊರತೆಯ ಕಾರಣದಿಂದ ಮುಸ್ಲಿಮರಲ್ಲಿ ನಿರಾಶೆಯು ಕವಿದಿರುವುದನ್ನು ಮನವರಿಕೆ ಮಾಡಬಹುದು. ಪವಿತ್ರ ಖುರ್ಆನ್‌ನಲ್ಲಿ ಅಡಕವಾಗಿರುವ ತತ್ವಗಳ ಆಂತರಿಕ ಶಕ್ತಿ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಮಾದರಿಯ ಶ್ರೇಷ್ಠತೆ ಮತ್ತು ಇಸ್ಲಾಮ್ ಧರ್ಮವು ಲೋಕದಲ್ಲೆಲ್ಲೂ ಶಾಂತಿ-ಸಮಾಧಾನ ಸ್ಥಾಪಿಸುವುದರಲ್ಲಿ ಜಯಗಳಿಸುವುದೆಂಬ ವಾಗ್ದಾನ ಅನೇಕರಿಗೆ ವೈಯಕ್ತಿಕವಾಗಿ ಮನವರಿಕೆಯಾಗಿದ್ದರೂ ಇದರ ಮತ್ತು ಇಂದಿನ ಮುಸ್ಲಿಮರ ನಾಯಕತ್ವದ ಶೂನ್ಯತೆಯು ಎಷ್ಟು ಅಂತರವಾಗಿದೆ ಎಂದರೆ ಅದನ್ನು ಅಳೆಯಲು ಅಸಾಧ್ಯವೆಂದೇ ತೋರುತ್ತದೆ.

ಇಸ್ಲಾಮ್ ಎಲ್ಲಾ ಕಾಲಗಳಿಗೆ ಅನ್ವಯಿಸುವ ಧರ್ಮವಾದರೆ ಇಂದಿನ ಕಾಲದಲ್ಲಿ ಮುಸ್ಲಿಮರ ಖಿಲಾಫತ್ ಎಲ್ಲಿದೆ ಎಂಬ ಪ್ರಶ್ನೆ ಉದಿಸುತ್ತದೆ. ತನ್ನ ಸರ್ವಶ್ರೇಷ್ಠ ಸಂದೇಶವಾಹಕರನ್ನು ಕಳುಹಿಸಿದ ನಂತರ ಖಿಲಾಫತ್ ರಾಶಿದೂನ್‌ರವರ ಕಾಲದಲ್ಲಿ ಮಾದರಿ ಖಿಲಾಫತ್ ವ್ಯವಸ್ಥೆಯನ್ನು ತೋರಿಸಿದ ನಂತರ ಅಲ್ಲಾಹನು ಮುಸ್ಲಿಮರನ್ನು ಸಂಪೂರ್ಣವಾಗಿ ಕೈಬಿಟ್ಟಿರುವನೋ? ಭಿನ್ನಾಭಿಪ್ರಾಯದಿಂದ ಕೂಡಿದ ಮುಸ್ಲಿಮರು ಒಟ್ಟಿಗೆ ಸೇರಿ ಎಂದಾದರೂ ಖಲೀಫರನ್ನು ಆಯ್ಕೆ ಮಾಡುವುದು ಸಾಧ್ಯವೇ?

ಕಳೆದ ಶತಮಾನದಲ್ಲಿ ಡಾಕ್ಟರ್ ಅಲ್ಲಾಮ ಮುಹಮ್ಮದ್ ಇಕ್ಬಾಲ್‌ರಂತಹ ಕೆಲವರು ಹೀಗೆ ವಾದಿಸಿದರು: ಮುಸ್ಲಿಮರು ಪರಿಪೂರ್ಣ ಗ್ರಂಥವಾದ ಪವಿತ್ರ ಖುರ್ಆನ್ ಹೊಂದಿರುವುದರಿಂದ ಅವರು ಒಂದುಗೂಡಿ ಅಭಿವೃದ್ಧಿಹೊಂದಲು ಸಾಧ್ಯ. ತಾವು ಹಿಂದೆ ಮಾಡಿದ ತಪ್ಪುಗಳ ಮೂಲಕ ಪಾಠ ಕಲಿತು ಪಕ್ವತೆ ಪಡೆದು ಅವರು ಈ ಕಾರ್ಯ ಸಾಧಿಸುವರು.

ಕೆಲವರು ಈ ಬಗ್ಗೆ ಚಳುವಳಿಗಳನ್ನು ಮತ್ತು ಸಿದ್ಧಾಂತಗಳನ್ನು ರೂಪಿಸಿ ಮುಸ್ಲಿಮರನ್ನು ಒಗ್ಗೂಡಿಸಲು ಪ್ರಯತ್ನ ಸಹ ಮಾಡಿದ್ದರು. ಆದರೆ ಆ ಜನರು ಜಯಶಾಲಿಗಳಾಗಲಿಲ್ಲ. ಅವರು ಜಯಗಳಿಸಲು ಸಾಧ್ಯವೂ ಇಲ್ಲವೆಂದು ಪಾರಂಪರಿಕ ಜ್ಞಾನವು ಇಂತಹ ಗುರುತರವಾದ ಪಂಥಾಹ್ವಾನವನ್ನು ಎದುರಿಸುವುದು ಅಸಾಧ್ಯವೆಂದೇ ಸೂಚಿಸುತ್ತದೆ.

ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರಹ್) ಅವರು ಇಂತಹ ಸಿದ್ಧಾಂತವನ್ನು ತನ್ನ ವಿಶಿಷ್ಟವಾದ ಹರಿತ ಮಾತುಗಳಿಂದ ಹೀಗೆ ತಳ್ಳಿಹಾಕುತ್ತಾರೆ:

"ಮನುಷ್ಯನು ಪಕ್ವತೆ ಗಳಿಸಿದುದರ ಅರ್ಥ ಅವನು ಪವಿತ್ರ ಗ್ರಂಥಗಳ ಅಧ್ಯಯನದಿಂದ ಸ್ವತಃ ತೀರ್ಮಾನಗಳನ್ನು ಕೈಗೊಳ್ಳಲು ಸಮರ್ಥನಾಗುತ್ತಾನೆ ಎಂದಾದರೆ ಧರ್ಮದ ಎಲ್ಲಾ ಮೂಲಭೂತ ತತ್ವಗಳ ಬಗ್ಗೆ ಏಕಾಭಿಪ್ರಾಯ ರೂಪಿಸಲ್ಪಡಬೇಕು. ಆದರೆ ಅಯ್ಯೋ, ನಾವು ನಿಜ ಜೀವಿತದಲ್ಲಿ ಇದನ್ನು ಕಾಣುವುದಿಲ್ಲ. ಇತರ ಧರ್ಮಗಳ ಅನುಯಾಯಿಗಳು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಹೊಂದಿರುವ ಹಾಗೆಯೇ ಪರಿಪೂರ್ಣ ಗ್ರಂಥವಾದ ಪವಿತ್ರ ಖುರ್ಆನಿನ ಅನುಯಾಯಿಗಳು ವ್ಯಾಖ್ಯಾನದ ವಿಷಯದಲ್ಲಿ ಸಹ ಭಿನ್ನಾಭಿಪ್ರಾಯ ಗಳನ್ನು ಹೊಂದಿರುತ್ತಾರೆ. ಹೀಗಿರುವಾಗ ಮನುಷ್ಯನ ತಥಾಕಥಿತ ಪಕ್ವತೆಯ ಪ್ರಯೋಜನವಾದರೂ ಏನಾಯಿತು? ಧರ್ಮಗಳ ಚರಿತ್ರೆ ಯಿಂದ ಹೀಗೆ ತಿಳಿದು ಬರುತ್ತದೆ: ಒಂದು ಧರ್ಮದ ಅನುಯಾಯಿಗಳು ವಿಭಿನ್ನ ಗುಂಪುಗಳಾಗಿ ಒಡೆದು ಹೋದ ನಂತರ ಅವರನ್ನು ಮನುಷ್ಯರ ಪ್ರಯತ್ನದ ಮೂಲಕ ಮಾತ್ರ ಒಂದುಗೂಡಿಸಲು ಎಂದೂ ಸಾಧ್ಯವಾಗಲಿಲ್ಲ. ಇದು ಇಂದಿನ ಮುಸ್ಲಿಮರಿಗೂ ಅನ್ವಯಿಸುತ್ತದೆ. ಒಬ್ಬ ದೇವನೇಮಿತ ಉದ್ಧಾರಕನ ಸಹಾಯವಿಲ್ಲದೆ ಮುಸ್ಲಿಮರು ಎಂದೂ ಐಕ್ಯತೆಯ ಪತಾಕೆಯ ಅಡಿಯಲ್ಲಿ ಒಗ್ಗೂಡಲು ಸಾಧ್ಯವಾಗದು....

"ಸುರಕ್ಷಿತವಾದ ಗ್ರಂಥವನ್ನು ಮತ್ತು ಸುರಕ್ಷಿತವಾಗಿ ದಾಖಲಿಸಲ್ಪಟ್ಟ ಪೈಗಂಬರ್ ವಚನಗಳನ್ನು ಹೊಂದಿರುವ ಮುಸ್ಲಿಮರು ಅಂದಾಜು ಎಪ್ಪತ್ತೆರಡು ವಿಭಾಗಗಳಾಗಿ ವಿಭಜಿಸಲ್ಪಟ್ಟಿರುವುದು ಇಕ್ಬಾಲರ 'ಮನುಷ್ಯರ ಪಕ್ವತೆ'ಯ ಸಿದ್ಧಾಂತವನ್ನು ಅಲ್ಲಗಳೆಯುತ್ತದೆ.

"ಮುಸ್ಲಿಮರ ಭಿನ್ನಾಭಿಪ್ರಾಯಗಳು ನಗಣ್ಯವಲ್ಲ. ಅವುಗಳು ಆಳವಾಗಿ ಬೇರೂರಿದ್ದು ಅವುಗಳು ಇನ್ನಷ್ಟು ವರ್ಧಿಸುತ್ತಾ ಹೋಗುತ್ತಾ ಇವೆ. ಇದರೊಂದಿಗೆ ಮುಸ್ಲಿಮರ ನೈತಿಕ ದಿವಾಳಿತನ ಮತ್ತು ಅವರ ಚೇತನರಹಿತ ಜೀವಿತ ಹೆಚ್ಚು ದಾರುಣವಾಗಿದೆ." (Revelation, Rationality, Knowledge & Truth - pp 682 - 683)

ಇಲ್ಲಿ ಉದ್ದೇಶಿಸಿರುವುದೇನೆಂದರೆ ಮುಸ್ಲಿಮರು ಒಗ್ಗೂಡಲು ಸಾಧ್ಯವಿದ್ದರೆ ಅವರು ಬೇರೆ ತುರ್ತು ಸಮಸ್ಯೆ ಪರಿಹಾರಕ್ಕೆ ಸಹ ಒಗ್ಗೂಡಿ ಏಕೆ ಕಾರ್ಯೋನ್ಮುಖರಾಗುವುದಿಲ್ಲ? ಸತ್ಯವೇನೆಂದರೆ ಮುಸ್ಲಿಮರು ಧರ್ಮದ ಪವಿತ್ರ ಮಾರ್ಗದಿಂದ ತಪ್ಪಿ ತುಂಬಾ ದೂರ ಹೋಗಿರುವ ಕಾರಣ ಇದು ಅಸಾಧ್ಯವಾಗಿದೆ. ಹಝ್ರತ್ ಅಲಿ(ರ) ಅವರ ಕಾಲದ ನಂತರ ಮುಸ್ಲಿಮ್ ಸಮುದಾಯಕ್ಕೆ ನೇತೃತ್ವ ವಹಿಸುವ ಏಕ ಖಲೀಫ ಕಳೆದ 1400 ವರ್ಷಗಳಲ್ಲಿ ಇರಲಿಲ್ಲ. ಇದು ಹೊಸದಾಗಿ ಖಲೀಫರನ್ನು ಆಯ್ಕೆಮಾಡುವ ಬಗ್ಗೆ ಇರುವ ಅಸಾಧ್ಯತೆಯನ್ನು ಬಹಿರಂಗಪಡಿಸುತ್ತದೆ.

ಈ ಸಮಸ್ಯೆಗೆ ಪವಿತ್ರ ಖುರ್ಆನ್ ಪರಿಹಾರ ಸೂಚಿಸುತ್ತದೆ. ಖಿಲಾಫತ್ ಪ್ರವಾದಿತ್ವದೊಂದಿಗೆ ನಿಕಟ ಸಂಬಂಧಹೊಂದಿದೆ.

ಚರಿತ್ರೆ ಹೇಳುವುದೇನೆಂದರೆ, ಖಿಲಾಫತ್ ವ್ಯವಸ್ಥೆ ಕೊನೆಗೊಂಡರೆ ಅದನ್ನು ಪುನಃ ಸ್ಥಾಪಿಸುವುದು ಪ್ರವಾದಿಯ ಆಗಮನದ ಮೂಲಕ ಮಾತ್ರ ಸಾಧ್ಯ. ಈ ಬಗ್ಗೆ ಮೂಸಾ ಪ್ರವಾದಿ(ಅ) ಅವರ ಜನಾಂಗದ ಚರಿತ್ರೆ ಬೆಳಕು ಬೀರುತ್ತದೆ. ಪ್ರವಾದಿ ಮೂಸಾ ಅವರ ನಿಯಮ ಸಂಹಿತೆ (ಶರೀಅತ್) ರಕ್ಷಿಸಲು ಅನೇಕ ಪ್ರವಾದಿಗಳು ಆಗಮಿಸಿದರು. ಅವರಲ್ಲಿ ಹೆಚ್ಚಿನವರು ಪ್ರವಾದಿ ಮೂಸಾ(ಅ) ಅವರ ಖಲೀಫರಾಗಿದ್ದರು. ಅವರ ಪರಂಪರೆಯ ಕೊನೆಯ ಪ್ರವಾದಿ, ಪ್ರವಾದಿ ಈಸಾ(ಅ) ಆಗಿದ್ದರು. ಅವರು ಯಹೂದಿಯರಿಗೆ ವಾಗ್ದಾನಮಾಡಲ್ಪಟ್ಟ ಮಸೀಹರಾಗಿದ್ದರು. ಅವರ ಆಗಮನದ ಉದ್ದೇಶ ಪ್ರವಾದಿ ಮೂಸಾ(ಅ) ಅವರ ಶರೀಅತನ್ನು ಪುನಶ್ಚೇತನಗೊಳಿಸುವುದಾಗಿತ್ತು. ಅದಕ್ಕೆ ಏನನ್ನೂ ಸೇರಿಸಲು ಅವರು ಉದ್ದೇಶಿಸಿರಲಿಲ್ಲ. (ಮತ್ತಾಯನ ಸುವಾರ್ತೆ 5 : 17-18 ನೋಡಿರಿ). ಅವರು ಪ್ರವಾದಿ ಮೂಸಾ(ಅ) ಅವರ ಖಲೀಫರಾಗಿದ್ದರು. ಅವರ ನೇಮಕಾತಿ ಯಹೂದಿ ಪುರೋಹಿತರ ಕೈಗಳಿಂದ ನಡೆದುದಲ್ಲ. ಅವರು ಪ್ರವಾದಿ ಈಸಾರನ್ನು(ಅ) ವಿರೋಧಿಸಿದ್ದರು. ಪ್ರವಾದಿ ಮೂಸಾ(ಅ) ಅವರ ಈ ಖಲೀಫರನ್ನು ಅಲ್ಲಾಹನೇ ನೇಮಿಸಿದನು.

ಪ್ರವಾದಿ ನುಡಿಗಳಲ್ಲಿ, ಮುಸ್ಲಿಮ್ ಸಮುದಾಯವನ್ನು ಅವರ

ಹಿಂದಿನ ಯಹೂದಿ ಸಮುದಾಯದೊಂದಿಗೆ ಅನೇಕ ಸಂದರ್ಭಗಳಲ್ಲಿ ಹೋಲಿಸಿ ಹೇಳಲಾಗಿದೆ. ಮುಸ್ಲಿಮರ ಸಂಕಷ್ಟಗಳು ಸಹ ಯಹೂದಿಯರಿಗೆ ಸಂಭವಿಸಿದ ಹಾಗೆ ಇರುವುದೆಂದು ಸೂಚಿಸಲಾಗಿದೆ. ಇದರಿಂದ ಸಮಸ್ಯೆಯ ಪರಿಹಾರಕ್ಕೆ ಒಂದು ಶುಭ ಪ್ರತೀಕ್ಷೆ ಸಹ ಮಾಡಬಹುದಾಗಿದೆ.

ಪ್ರವಾದಿ ಈಸಾ[ಅ] ಅವರ ಕಾಲದಲ್ಲಿ ಯಹೂದಿಯರು ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಒಗ್ಗೂಡುವುದು ಅಸಾಧ್ಯವಾಗಿತ್ತು. ಅವರು ಧರ್ಮ ಪಥದಿಂದ ತಪ್ಪಿ ಬಹಳ ದೂರ ಸಾಗಿ ಹೋಗಿದ್ದರು. ಆದುದರಿಂದ ಒಬ್ಬ ಖಲೀಫರನ್ನು ಚುನಾಯಿಸುವ ಅಧಿಕಾರವನ್ನು ಅವರು ಕಳೆದು ಕೊಂಡಿದ್ದರು. ಪವಿತ್ರ ಖುರ್‌ಆನ್‌ನಲ್ಲಿ, ಸತ್ಯವಿಶ್ವಾಸಿಗಳಾಗಿ ಸತ್ಕಾರ್ಯಗಳನ್ನು ಮಾಡುವ ಜನರಿಗೆ ಖಿಲಾಫತ್ ವಾಗ್ದಾನವನ್ನು ಮಾಡಲಾಗಿದೆ. ಅಲ್ಲಾಹನ ನಿಯಮಗಳನ್ನು ನಿಷ್ಠೆಯಿಂದ ಪಾಲಿಸುವವರಿಗೆ ಈ ವಾಗ್ದಾನವಾಗಿದೆ. ಆ ಕಾಲದಲ್ಲಿ ಯಹೂದಿಯರು ಅನರ್ಹರಾಗಿದ್ದುದರಿಂದ ಅಲ್ಲಾಹನು ತನ್ನ ಕಾರುಣ್ಯದ ಮೂಲಕ ಒಬ್ಬ ಪ್ರವಾದಿಯನ್ನು ಪ್ರವಾದಿ ಮೂಸಾ[ಅ] ಅವರ ಖಲೀಫರನ್ನಾಗಿ ಕಳುಹಿಸಿದನು.

ಇಂದಿನ ಮುಸ್ಲಿಮರಲ್ಲಿ ಅನೈಕ್ಯತೆ ಇದೆ. ಇಂದಿನ ಅವರ ನಾಯಕರು ಸ್ವಾರ್ಥಿಗಳಾಗಿದ್ದಾರೆ. ಇಂತಹ ಜನರಿಗೆ ಅಲ್ಲಾಹನು ತನ್ನ ವಾಗ್ದಾನವನ್ನು ಈಡೇರಿಸಿ ಕೊಡುವುದು ಹೇಗೆ?

ಖಿಲಾಫತ್ ಪ್ರವಾದಿತ್ವದೊಂದಿಗೆ ಸಂಬಂಧಹೊಂದಿದೆ. ಪ್ರವಾದಿ ಮೂಸಾ[ಅ] ಅವರು ಮಹಾನ್ ಪ್ರವಾದಿಯಾಗಿದ್ದರೂ ಯಹೂದಿಯರನ್ನು ನೇರಮಾರ್ಗಕ್ಕೆ ತರಲು ಇನ್ನೊಬ್ಬ ಪ್ರವಾದಿಯನ್ನು ಅಲ್ಲಾಹನು ನೇಮಿಸಿದನು. ಇದು ಯಹೂದಿಯರ ಬಗ್ಗೆ ಅಲ್ಲಾಹನಿಗಿದ್ದ ಕರುಣೆಯನ್ನು ಸೂಚಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸಮುದಾಯಕ್ಕೆ ಅಲ್ಲಾಹನು ಇದೇ ರೀತಿಯ ಕರುಣೆದೋರಲಾರನು ಎಂದು ಚಿಂತಿಸುವುದಾದರೂ ಹೇಗೆ? ಪೈಗಂಬರರ ಸಂದೇಶವಾದರೋ ಇಡೀ ಲೋಕಕ್ಕೆ ಇರುವುದಾಗಿದೆ.

ಮುಸ್ಲಿಮರಿಗೆ ಎರಡು ವಿಶಿಷ್ಟ ಪ್ರಾರ್ಥನೆಗಳನ್ನು ಕಲಿಸಲಾಗಿದೆ. ಅವುಗಳಲ್ಲಿ ಮುಸ್ಲಿಮರಿಗೆ ಎಚ್ಚರಿಕೆ ನೀಡಲಾಗಿದ್ದು ಅದರೊಂದಿಗೆ ಸಮಾಧಾನ ಮತ್ತು ಭರವಸೆಯ ಸಂದೇಶವೂ ಇದೆ.

### ಪ್ರವಾದಿತ್ವ ಮತ್ತು ಖಿಲಾಫತ್‌ಗಾಗಿ ಪ್ರಾರ್ಥನೆಗಳು

ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವಾದ ಸೂರತುಲ್ ಫಾತಿಹದಲ್ಲಿ ಪವಿತ್ರ ಖುರ್‌ಆನಿನ ಉಪದೇಶಗಳ ಸಾರ ಸಂಗ್ರಹ ಅಡಕವಾಗಿದೆ. ದಿನಂಪ್ರತಿ ಮೂವತ್ತಕ್ಕಿಂತ ಹೆಚ್ಚು ಸಲ ಉಚ್ಚರಿಸಲ್ಪಡುವ ಸೂರತುಲ್ ಫಾತಿಹದ ಏಳನೆಯ ವಚನ ಹೀಗಿದೆ:

"ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ."

ಈ ಮಾರ್ಗ ಯಾವುದು ಎಂಬುದರ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 69-70ರಲ್ಲಿ ಹೀಗೆ ಹೇಳಲಾಗಿದೆ:

"ನಾವು ನಿಶ್ಚಯವಾಗಿಯೂ ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸುತಿದ್ದೆವು. ಯಾರಾದರೂ ಅಲ್ಲಾಹನಿಗೆ ವಿಧೇಯರಾಗಿ ಈ ಸಂದೇಶ ವಾಹಕನನ್ನು ಅನುಸರಿಸಿದರೆ, ಅವರು ಅಲ್ಲಾಹನು ಅನುಗ್ರಹಿಸಿದ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರಲ್ಲಿ ಸೇರುವರು. ಅವರು ಅತ್ಯುತ್ತಮ ಸಂಗಾತಿಗಳಾಗಿದ್ದಾರೆ."

ಈ ವಚನದಲ್ಲಿ, ಮುಸ್ಲಿಮರು ಅಲ್ಲಾಹನೊಂದಿಗೆ ತಮ್ಮನ್ನು ಅವನ ಅನುಗ್ರಹಕ್ಕೆ ಪಾತ್ರರಾದ ಪ್ರವಾದಿಗಳ, ಸಿದ್ದೀಖ್‌ಗಳ, ಶಹೀದ್ ಮತ್ತು ಸಾಲಿಹ್‌ಗಳ ಮಾರ್ಗದಲ್ಲಿ ನಡೆಸಲು ಕೋರಬೇಕೆಂದು ಸೂಚಿಸಲಾಗಿದೆ.

ಈ ವಚನದಲ್ಲಿ ಸೂಚಿಸಲಾದುದು ಪ್ರವಾದಿತ್ವ ಗಳಿಸುವರೆ ಸ್ವಾರ್ಥಪರವಾದ ಆಶೆಯನ್ನಲ್ಲ. ಏಕೆಂದರೆ ಪ್ರವಾದಿತ್ವವು ಅಲ್ಲಾಹನ ಕೊಡುಗೆಯಾಗಿದೆ. ನೇರಮಾರ್ಗದಲ್ಲಿ ನಡೆಸಲು ಅಲ್ಲಾಹನನ್ನು ಕೋರಲು ಹೇಳಲಾಗಿದೆ. ಆ ನೇರಮಾರ್ಗ ಗಳಿಸಿದವರಲ್ಲಿ ಪ್ರವಾದಿಗಳು ಸೇರಿದ್ದಾರೆ.

ಹಝ್ರತ್ ಅಲಿ[ರ] ಅವರ ನಂತರ ಸಿದ್ದೀಖ್, ಶಹೀದ್ ಮತ್ತು ಸಾಲಿಹ್ ಸ್ಥಾನ ಗಳಿಸಿದ ಮುಸ್ಲಿಮರು ಅನೇಕರಿದ್ದರು. ಆದರೆ ಪ್ರವಾದಿಯಾಗಿ ಒಬ್ಬರೂ ಇಲ್ಲವೇ? ಹಝ್ರತ್ ಮುಹಮ್ಮದ್ ಪೈಗಂಬರರೊಡನೆ[ಸ] ಅಲ್ಲಾಹನು ಹೀಗೆ ಹೇಳಿರುವನು:

"ನಿಸ್ಸಂಶಯವಾಗಿಯೂ ನಿನ್ನ ಶತ್ರುವೇ ಸಂತಾನರಹಿತನು."

(ಪವಿತ್ರ ಖುರ್‌ಆನ್ 108 : 4)

ಈ ವಚನದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಆಧ್ಯಾತ್ಮಿಕ ಸಂತತಿಗಳನ್ನು ಪಡೆಯುವ ಕುರಿತು ವಾಗ್ದಾನ ನೀಡಲಾಗಿದೆ.

ಇನ್ನೊಂದು ಪ್ರಾರ್ಥನೆ ದುರೂದ್‌ನಲ್ಲಿ ಅಡಕವಾಗಿದೆ. ಅದರಲ್ಲಿ ಹೀಗೆ ಹೇಳಲಾಗಿದೆ:

"ಓ, ಅಲ್ಲಾಹ್, ಪ್ರವಾದಿ ಇಬ್ರಾಹೀಮ್‌ರಿಗೆ ಮತ್ತು ಅವರ ಅನುಯಾಯಿಗಳಿಗೆ ಅನುಗ್ರಹ ನೀಡಿದ ಹಾಗೆ ಮುಹಮ್ಮದರಿಗೂ ಅವರ ಅನುಯಾಯಿಗಳಿಗೂ ಅನುಗ್ರಹ ನೀಡು."

ಈ ಪ್ರಾರ್ಥನೆಯಲ್ಲಿ ಹಝ್ರತ್ ಇಬ್ರಾಹೀಮ್[ಅ] ಅವರನ್ನು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಅವರೊಂದಿಗೆ ಹೋಲಿಸಿ ಹೇಳಲಾಗಿದೆ. ಹಝ್ರತ್ ಇಬ್ರಾಹೀಮ್[ಅ] ಅವರ ಪೀಳಿಗೆಯಲ್ಲಿ ಅನೇಕ ಪ್ರವಾದಿಗಳು ಮತ್ತು ಖಲೀಫರು ಇದ್ದರು.

ಪ್ರವಾದಿ ಮೂಸಾ[ಅ] ಅವರ ಅನುಯಾಯಿಗಳಲ್ಲಿ ಅನೇಕರು ಪ್ರವಾದಿಗಳಾಗಿಯೂ ಖಲೀಫರಾಗಿಯೂ ನೇಮಿಸಲ್ಪಟ್ಟಿರುವಾಗ ಅಂತಹ ಪ್ರವಾದಿಗಳೂ ಖಲೀಫರೂ ಮುಸ್ಲಿಮರ ಸಮುದಾಯಕ್ಕೆ ಆವಶ್ಯವಿಲ್ಲ ಎಂದು ಹೇಳುವುದಾದರೂ ಹೇಗೆ?

ಅಲ್ಲಾಹನು ಸೂರತುನ್ನೂರ್‌ನಲ್ಲಿ ಮುಸ್ಲಿಮ್ ಸಮುದಾಯದಲ್ಲೂ ಖಿಲಾಫತ್ ಜಾರಿಗೊಳ್ಳುವ ಬಗ್ಗೆ ವಾಗ್ದಾನ ಮಾಡಿರುವನು. ಹಝ್ರತ್ ಮುಹ್ಯುದ್ದೀನ್ ಇಬ್ನು ಅರಬಿ ಹೀಗೆ ಹೇಳಿರುವರು:

"ದುರೂದ್ ಬಗ್ಗೆ ಅಧ್ಯಯನ ಮತ್ತು ಸೂಕ್ಷ್ಮಾವಲೋಕನದಿಂದ ನಮಗೆ ಮನಗಾಣಲು ಸಾಧ್ಯವಾಗಿರುವುದೇನೆಂದರೆ, ಅಲ್ಲಾಹನು ಇಚ್ಛಿಸುವುದಾದರೆ ಮುಸ್ಲಿಮ್ ಸಮುದಾಯದಲ್ಲಿ ಪ್ರವಾದಿಗಳ ಸ್ಥಾನ ಪಡೆದವರು ಜನಿಸುವರು. ಆದರೆ ಅವರು ಶರೀಅತನ್ನು ತರುವವರಾಗಲಾರರು." (ಫುತೂಹಾತೆ ಮಕ್ಕಿಯ್ಯ)

ಪ್ರವಾದಿ ಮೂಸಾ[ಅ] ಅವರ ಸಮುದಾಯದಲ್ಲಿ ಪ್ರವಾದಿಗಳು ಜನಿಸಿದ ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸಮುದಾಯದಲ್ಲಿ ಪ್ರವಾದಿಗಳು ಜನಿಸುವರೆಂದು ಇದು ಸಾಬೀತುಪಡಿಸುತ್ತದೆ.

ಮುಸ್ಲಿಮರಿಗೆ ಮೇಲಿನ ಎರಡು ಪ್ರಾರ್ಥನೆಗಳನ್ನು ಕಲಿಸಿ ಅಲ್ಲಾಹನು, ಮುಂದೆ ಸಂಭವಿಸಲಿರುವ ಸಂಗತಿಗಳ ಬಗ್ಗೆ ದೃಢನಂಬಿಕೆ ಹೊಂದಬೇಕೆಂದು ಉಪದೇಶಿಸುತ್ತಾನೆ. (ಪವಿತ್ರ ಖುರ್‌ಆನ್ 2 : 5)

ಅಲ್ಲಾಹನು ಮುಸ್ಲಿಮರನ್ನೂ ಅವರ ಧರ್ಮವನ್ನೂ ಕೈಬಿಡಲಾರನೆಂದೂ ಅವನು ಧರ್ಮವನ್ನು ಪುನಶ್ಚೇತನಗೊಳಿಸುವನೆಂದೂ ಈ ವಚನದಲ್ಲಿ ಸೂಚಿಸಲಾಗಿದೆ.

ಮುಸ್ಲಿಮ್ ಸಮುದಾಯ ಸಾತ್ವಿಕರಾದರೆ ಅವರಲ್ಲಿ ನುಬುವ್ವತ್

ಆರಂಭವಾಗಿ ಖಿಲಾಫತ್ ಸ್ಥಾಪನೆಯಾಗುವುದು ಎಂದು ಅಲ್ಲಾಹನ ವಚನದಿಂದ ಸ್ಪಷ್ಟವಾಗುತ್ತದೆ.

ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಮತ್ತು ಅಗಣಿತ ಮುಸ್ಲಿಮರ ಬೇಡಿಕೆಗಳು ಅಲ್ಲಾಹನಿಂದ ಅಂಗೀಕರಿಸಲ್ಪಡದೆ ಹೋಗುವುದೆ?

ಇದಕ್ಕೆ ಉತ್ತರ, ಇಲ್ಲ ಎಂದೇ ಆಗಿದೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಪವಿತ್ರ ಖುರ್‌ಆನ್ ಅಲ್ಲಾಹನ ವಾಗ್ದಾನದ ಬಗ್ಗೆ ಹೇಳುತ್ತದೆ. ಅಲ್ಲಾಹನು ಎಂದೂ ತನ್ನ ವಾಗ್ದಾನವನ್ನು ಉಲ್ಲಂಘಿಸಲಾರನು. ಇನ್ನೊಂದು ಕಾರಣ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಹದೀಸಾಗಿದೆ. ಇದರ ಮೊದಲು ಉಲ್ಲೇಖಿಸಲಾದ ಆ ಹದೀಸಿನ ಕೊನೆಯ ಭಾಗ ಹೀಗಿದೆ:

"ಅಲ್ಲಾಹನು ಅನಂತರ ಖಿಲಾಫತ್ ಅಲಾ ಮಿನ್‌ಹಾಜಿ ನುಬುವ್ವತ್ (ಪ್ರವಾದಿತ್ವ ಮಾರ್ಗದಲ್ಲಿ ಇರುವ ಖಿಲಾಫತ್) ಸ್ಥಾಪಿಸುವನು."

ಅಲ್ಲಾಹನು ಕೊನೆಯ ಘಟ್ಟದಲ್ಲಿ ಖಿಲಾಫತನ್ನು ನುಬುವ್ವತ್ ಮೂಲಕ ಸ್ಥಾಪಿಸುವನೆಂದು ಈ ಹದೀಸಿನಿಂದ ತಿಳಿದು ಬರುತ್ತದೆ.

ಮುಸ್ಲಿಮ್ ಸಮುದಾಯದಲ್ಲಿ ಹಝ್‌ರತ್ ಅಲಿ(ರ) ಅವರ ನಿಧನದ ನಂತರ ಇಂದಿನ ತನಕದ ಚರಿತ್ರೆಯಲ್ಲಿ ಕೇವಲ ಒಬ್ಬನೇ ಒಬ್ಬ ವ್ಯಕ್ತಿ ನುಬುವ್ವತ್ ವಾದ ಮಾಡಿದರು. ಅವರು ಮತ್ತು ಅವರ ಅನಂತರ ಖಲೀಫರು ವಿಶ್ವಾಸಿಗಳ ನೇತೃತ್ವ ವಹಿಸಿ ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾಗುತ್ತಾ ಇದ್ದಾರೆ. ಅವರ ವಾದಗಳ ಬಗ್ಗೆ ಗಮನಿಸುವುದು ಅತ್ಯಾವಶ್ಯಕವಾಗಿದೆ.

## ನಿರೀಕ್ಷಿಸಲ್ಪಟ್ಟ ಪ್ರವಾದಿ

ನುಬುವ್ವತ್ ಅಲ್ಲಾಹನ ಅನುಗ್ರಹವಾಗಿದ್ದು ಅಲ್ಲಾಹನು ಅದನ್ನು ತಾನು ಆಯ್ಕೆ ಮಾಡಿದವರಿಗೆ ನೀಡುತ್ತಾನೆ. ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಇಸ್ಲಾಮಿನ ಅಂತಿಮ ಸಂದೇಶವನ್ನು ತಂದ ಕಾರಣ ಹೊಸ ಪ್ರವಾದಿ ಅವರ ಸಮುದಾಯದಲ್ಲಿ ಮಾತ್ರ ಜನಿಸಲು ಸಾಧ್ಯ. ಪ್ರವಾದಿ ಈಸಾ(ಅ) ಅವರು ಪ್ರವಾದಿ ಮೂಸಾ(ಅ) ಅವರ ಶರೀಅತಿಗೆ ಸೇವೆ ಮಾಡಿದ ಹಾಗೆ, ಆಗಮಿಸಿದ ಹೊಸ ಪ್ರವಾದಿ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ದಾಸರಾಗಿ ಇಸ್ಲಾಮಿನ ಸೇವೆ ಮಾಡಿದರು.

ಮಸೀಹ್ ಎಂದೂ ಮಹ್‌ದೀ ಎಂದು ವಾದಿಸಿದ ಏಕ ಮಾತ್ರ ನುಬುವ್ವತ್ ವಾದಿ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಆಗಿದ್ದರು. ಅವರು ಜನರಿಂದ ಗೌರವಿಸಲ್ಪಟ್ಟ ನಿಷ್ಠಾವಂತ ಮುಸ್ಲಿಮರಾಗಿದ್ದರು. ಬರಾಹೀನೆ ಅಹ್ಮದಿಯಾ ಮೊದಲಾದ ಅವರು ಬರೆದ ಗ್ರಂಥಗಳು ಮುಸ್ಲಿಮರಿಗೆ ನವಚೇತನ ನೀಡಿತು. ಮುಸ್ಲಿಮರು ಇಸ್ಲಾಮಿನ ನೈಜ ತತ್ವಗಳನ್ನು ಅವರ ಮೂಲಕ ಮನವರಿಕೆ ಮಾಡಿದರು. ಅವರು ಇಸ್ಲಾಮ್ ಧರ್ಮದ ಸೇವೆಗಾಗಿ 80 ಗ್ರಂಥಗಳನ್ನು ಬರೆದರು. ಇಸ್ಲಾಮಿನ ನಿಜವಾದ ತತ್ವಗಳನ್ನು ಅನುಸರಿಸದೆ ಜೀವಿಸುವ ಮುಸ್ಲಿಮರನ್ನು ಅವರು ವಿಮರ್ಶಿಸಿದರು. ಅನಾಚಾರಗಳನ್ನು ತೊಡೆದು ಇಸ್ಲಾಮ್ ಧರ್ಮವನ್ನು ಪುನರುದ್ಧಾರಣೆ ಮಾಡುವುದು ಅವರ ಗುರಿಯಾಗಿತ್ತು.

ಅವರಿಗಿಂತ ಮೊದಲು ಆಗಮಿಸಿದ ಪ್ರವಾದಿಗಳ ಹಾಗೆ ಅವರಿಗೆ ದೇವನಿಂದ ಸಂದೇಶ ಲಭಿಸುವ ತನಕ ಯಾವುದೇ ವಾದವನ್ನು ಅವರು ಹೊರಡಿಸಲಿಲ್ಲ. ತನಗೆ ಅಂತಹ ಪದವಿ ಲಭಿಸುವ ಅರ್ಹತೆಯನ್ನೂ ಅವರು ಅಲ್ಲಗಳೆಯುತ್ತಾ ಇದ್ದರು. ಅವರು ತನ್ನನ್ನು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ನಿಷ್ಠಾವಂತ ದಾಸರೆಂದು ಪ್ರಕಟಿಸಿದರು. ಅವರನ್ನು ಮಹ್‌ದೀ ಮತ್ತು ಮಸೀಹ್ ಎಂದು ಅಲ್ಲಾಹನು ಅನುಗ್ರಹಿಸಿದ ನಂತರ ಅವರು ತನ್ನ ನುಬುವ್ವತ್ ವಾದವನ್ನು ಜನರ ಮುಂದೆ ಪ್ರಕಟಿಸಿದರು ಮತ್ತು ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ತನಗೆ ಎದುರಾದ ಕಷ್ಟಗಳನ್ನು ಅವರು ಕಡೆಗಣಿಸಿದರು. ಅವರು ಅಲ್ಲಾಹನಲ್ಲಿ ಪೂರ್ಣ ಭರವಸೆಹೊಂದಿ ಮುಂದುವರಿದರು.

ಅವರು ತನ್ನ ನುಬುವ್ವತ್ ವಾದವನ್ನು ಹೀಗೆ ಪ್ರಕಟಿಸಿದರು:

ಅಂದಾಜು ಒಂದು ನೂರ ಐವತ್ತರಷ್ಟು ಭವಿಷ್ಯವಾಣಿಗಳು ಈಡೇರಿರುವಾಗ ನಾನು ನಬಿ ಮತ್ತು ರಸೂಲ್ ಎಂಬುದನ್ನು ಹೇಗೆ ತಾನೆ ನಿರಾಕರಿಸಬಲ್ಲೆನು? ಅಲ್ಲಾಹನೇ ನನಗೆ ಈ ಬಿರುದುಗಳನ್ನು ನೀಡಿರುವಾಗ ಅವನ ಹೊರತು ಅನ್ಯರಿಗೆ ಹೆದರಿ ನಾನೇಕೆ ನಿರಾಕರಿಸಬೇಕು? ನನ್ನನ್ನು ಕಳುಹಿಸಿದ ಅಲ್ಲಾಹನ ಹೆಸರಿನಲ್ಲಿ ನಾನು ಪ್ರಕಟಿಸುತ್ತೇನೆ. ಅವನ ಬಗ್ಗೆ ಸುಳ್ಳು ಸೃಜಿಸಿ ಹೇಳುವವರು ಶಾಪಗ್ರಸ್ತರು. ಅವನು ನನ್ನನ್ನು ವಾಗ್ದತ್ತ ಮಸೀಹ್ ಆಗಿ ಮಾಡಿ ಕಳುಹಿಸಿರುವನು." (ಏಕ್ ಗಲತೀ ಕಾ ಇಝಾಲ –ರೂಹಾನಿ ಖಝಾಯಿನ್ ಭಾಗ 18, ಪುಟ 2-10)

"ನನ್ನ ಜೀವವು ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಹೆಸರಿನಲ್ಲಿ ನಾನು ಪ್ರಕಟಿಸುತ್ತೇನೆ. ಅವನು ನನ್ನನ್ನು ಕಳುಹಿಸಿರುವನು. ಅವನು ನನಗೆ ನಬಿ ಎಂಬ ಬಿರುದನ್ನು ನೀಡಿರುವನು. ಅವನು ನನ್ನನ್ನು ವಾಗ್ದತ್ತ ಮಸೀಹ್ ಎಂದು ಕರೆದಿರುವನು. ಅವನು ನನ್ನನ್ನು ಸತ್ಯವಂತನೆಂದು ಸಾಬೀತುಗೊಳಿಸುವ ಅಂದಾಜು ಮೂರು ಲಕ್ಷ ದೃಷ್ಟಾಂತಗಳನ್ನು ತೋರಿಸಿರುವನು." (ತತಿಮ್ಮ ಹಖೀಖತುಲ್ ವಹೀ – ರೂಹಾನಿ ಖಝಾಯಿನ್ ಸಂಪುಟ 22, ಪುಟ 503)

ಬೇರೆ ಅನೇಕ ಹೇಳಿಕೆಗಳು ಅವರು ನುಬುವ್ವತ್ ವಾದ ಮಾಡಿದರೆಂಬುದನ್ನು ಸ್ಪಷ್ಟಪಡಿಸುತ್ತದೆ. ದೈವಿಕ ಅನುಮತಿ ಪ್ರಕಾರ ಅವರು ವಾದಿಸಿದಾಗ ತಾನು ಸ್ವತಂತ್ರ ಪ್ರವಾದಿ ಅಲ್ಲವೆಂದೂ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ದಾಸನೆಂದೂ ಅವರು ಸ್ಪಷ್ಟವಾಗಿ ಹೇಳಿದರು. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಖಾತಮುನ್ನಬಿಯ್ಯೀನ್ ಎಂದು ಅವರು ದೃಢವಾಗಿ ನಂಬಿದ್ದರು. ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಗೌರವ ಮತ್ತು ಘನತೆಯನ್ನು ಸಂರಕ್ಷಿಸಲು ಅವರು ಯಾವಾಗಲೂ ಸಿದ್ಧರಾಗಿರುತ್ತಿದ್ದರು. ತನಗೆ ದೊರೆತ ಅನುಗ್ರಹವು ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸುವ ಮೂಲಕ ದೊರೆತುದೆಂದು ಅವರು ಸ್ಪಷ್ಟಪಡಿಸಿದರು. ಇಸ್ಲಾಮ್ ಧರ್ಮವನ್ನು ಮತ್ತು ಹಝ್‌ರತ್ ಪೈಗಂಬರರನ್ನು(ಸ) ಅನುಸರಿಸುವ ಮೂಲಕ ಮಾತ್ರ ಲೋಕವು ನಿಜವದ ಶಾಂತಿಗಳಿಸಲು ಸಾಧ್ಯ ಎಂದು ಅವರು ವಾದಿಸಿದರು.

ಅವರು ಹೇಳಿದರು: "ಪ್ರವಾದಿಗಳಿಗೆ ಮತ್ತು ಅಲ್ಲಾಹನಿಂದ ಅನುಗ್ರಹ ನೀಡಲ್ಪಟ್ಟವರಿಗೆ ನನಗಿಂತ ಮುಂಚಿತವಾಗಿ ಲಭಿಸಿದ ಅನುಗ್ರಹಗಳ ಹಾಗೆ ಪೂರ್ಣವಾಗಿ ನನಗೆ ಅನುಗ್ರಹಗಳು ಲಭಿಸಿದುದು ಅಲ್ಲಾಹನ ಕರುಣೆಯಿಂದ ಹೊರತು ನನ್ನ ಅರ್ಹತೆಯ ಕಾರಣದಿಂದಲ್ಲ. ನನ್ನ ಯಜಮಾನರೂ ಪ್ರವಾದಿಗಳಲ್ಲಿ ಶ್ರೇಷ್ಠರೂ ಆಗಿರುವ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸದೆ ಇರುತ್ತಿದ್ದರೆ ನನಗೆ ಈ ಅನುಗ್ರಹ ದೊರಕುತ್ತಿರಲಿಲ್ಲ. ನನಗೆ ದೊರೆತುದೆಲ್ಲವೂ ಈ ಮಾರ್ಗವನ್ನು ಅನುಸರಿಸಿದ ಕಾರಣ ದಿಂದಾಗಿದೆ. ನನಗೆ ದೊರೆತ ಸತ್ಯವಾದ ಜ್ಞಾನದ ಬೆಳಕಿನಲ್ಲಿ ನಾನು ಹೇಳುತ್ತೇನೆ: ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸದೆ ಯಾರೂ ಅಲ್ಲಾಹನನ್ನು

ತಲಪಲಾರರು ಮತ್ತು ಅವರಿಗೆ ಪರಿಪೂರ್ಣ ಜ್ಞಾನದ ಒಂದು ಅಂಶವೂ ದೊರಕಲಾರದು." (ಹಖೀಖತುಲ್ ವಹೀ–ರೂಹಾನಿ ಖಝಾಯಿನ್ ಭಾಗ 22, ಪುಟ 64-65)

"ನಾನು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸಿದ ಕಾರಣ ನನಗೆ ಈ ಅನುಗ್ರಹ ದೊರಕಿದೆ. ನಾನು ಅವರ ಅನುಯಾಯಿ ಆಗದೆ ಇರುತ್ತಿದ್ದರೆ, ನಾನು ಅವರ ಉಪದೇಶಗಳನ್ನು ನಿಷ್ಠೆಯಿಂದ ಅನುಸರಿಸದೆ ಇರುತ್ತಿದ್ದರೆ, ನನ್ನ ಸತ್ಕಾರ್ಯಗಳು ಪರ್ವತ ಶಿಖರದಷ್ಟು ಎತ್ತರಕ್ಕೆ ಪೇರಿಸಬಹುದಾಗಿದ್ದರೂ ನಾನೆಂದೂ ಈ ಉನ್ನತ ಪದವಿಯನ್ನು ಪಡೆಯುತ್ತಿರಲಿಲ್ಲ. ಶರೀಅತ್ ತರುವ ಪ್ರವಾದಿ ಎಂದೂ ಬರಲಾರರು. ಆದರೆ ಶರೀಅತ್ ಇಲ್ಲದ ಪ್ರವಾದಿ ಬರಬಹುದಾಗಿದೆ. ಆದರೆ ಶರ್ತವೇನೆಂದರೆ ಆಗಮಿಸಲಿರುವ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಯಾಗಿರಬೇಕು. ನಾನು ಉಮ್ಮತಿಯೂ (ಅನುಯಾಯಿಯೂ) ನಬಿಯೂ (ಪ್ರವಾದಿಯೂ) ಆಗಿದ್ದೇನೆ." (ತಜಲ್ಲಿಯಾತೆ ಇಲಾಹಿಯ್ಯ – ಪುಟ 24)

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಅವರ ದೃಢ ವಿಶ್ವಾಸ ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ. ಅವರ ಖಿಲಾಫತ್ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಖಿಲಾಫತ್ ರೂಪದಲ್ಲಿತ್ತು. ಈ ಬಗ್ಗೆ ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ:

"ನನ್ನ ಅನಂತರ ವಾಗ್ದತ್ತ ಮಸೀಹ್ ನನ್ನ ಅನುಯಾಯಿಗಳ ಪೈಕಿ ನನ್ನ ಖಲೀಫರಾಗುವರು. ಯಾರು ಅವರನ್ನು ಭೇಟಿಯಾಗುವ ಸೌಭಾಗ್ಯ ಪಡೆಯುತ್ತಾರೋ ಅವರು ಅವರಿಗೆ ನನ್ನ ಸಲಾಮ್ ಹೇಳಬೇಕು." (ಅಲ್‌ಮುಅಜಮುಲ್ ಅವ್‌ಸತ್ ಲಿತ್ತಬ್ರಾನಿ, ಅಲ್‌ಮುಅಜಮುಲ್‌ಸ್ಸಗೀರ್ ಲಿತ್ತಬ್ರಾನಿ)

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರರು(ಸ) ಹೇಳಿದರು:

"ನೀವು ಮಹ್‌ದಿಯನ್ನು ಕಂಡಾಗ ಅವರ ಕೈಯಲ್ಲಿ ಬೈಅತ್ ಮಾಡಿರಿ. ನೀವು ಹಿಮಾವೃತ ಪರ್ವತಗಳನ್ನು ಮೊಣಕಾಲು ಊರುತ್ತಾ ದಾಟಬೇಕಾಗಿ ಬಂದರೂ ನೀವು ಅವರ ಬಳಿಗೆ ಹೋಗಿರಿ. ಅವರು ಮಹ್‌ದಿ ಮತ್ತು ಅಲ್ಲಾಹನ ಖಲೀಫರಾಗಿದ್ದಾರೆ." (ಸುನನ್ ಇಬ್ನು ಮಾಜ – ಕಿತಾಬುಲ್ ಫಿತನ್, ಸಂಪುಟ 2, ಪುಟ 1367)

ವಾಗ್ದತ್ತ ಮಸೀಹರು ಅನೇಕ ಸಂದರ್ಭಗಳಲ್ಲಿ ಹೀಗೆ ಹೇಳಿದರು: ನಾನು ಈಸಾ ಮಸೀಹ್(ಅ) ಅವರ ಎರಡನೆಯ ಆಧ್ಯಾತ್ಮಿಕ ಆಗಮನವಾಗಿದ್ದೇನೆ. ಪ್ರವಾದಿ ಮೂಸಾ(ಅ) ಅವರ ಅನುಯಾಯಿಯಾಗಿ ಬಂದ ಮಸೀಹರಿಗೂ ನನಗೂ ಹೋಲಿಕೆ ಇದೆ. ಪ್ರವಾದಿ ಈಸಾ(ಅ) ಪ್ರವಾದಿ ಮೂಸಾ(ಅ) ಅವರ ಉಪದೇಶಗಳನ್ನು ಪುನಶ್ಚೇತನಗೊಳಿಸಲು ಆಗಮಿಸಿದ ಹಾಗೆ ನಾನು ಇಸ್ಲಾಮನ್ನು ಪುನಶ್ಚೇತನಗೊಳಿಸಲು ಆಗಮಿಸಿರುವೆನು.

ತಬ್ಲೀಗ್ ರಿಸಾಲಾತ್‌ನಲ್ಲಿ ಅವರು ಹೀಗೆ ಹೇಳಿದರು :

"ಈ ವಿನೀತನನ್ನು ಸರ್ವಶಕ್ತನಾದ ದೇವನು ನಜರೆತ್‌ನ ಯೇಸು ಮಸೀಹರ ಹಾಗೆ ಅತ್ಯಂತ ಪ್ರೀತಿ ಮತ್ತು ಜನರ ಹಿತಕಾಂಕ್ಷಿಯಾಗಿ ಕಳುಹಿಸಿರುವನು. ನೇರಮಾರ್ಗ ಯಾವುದೆಂದು ತಿಳಿಯದವರಿಗೆ ನಾನು ನೇರಮಾರ್ಗ ತೋರಿಸಿಕೊಟ್ಟು ಅವರು ಮೋಕ್ಷಗಳಿಸುವಂತೆ ಮಾಡುವೆನು. ಅವರು ಇಹಲೋಕದಲ್ಲಿಯೇ ಪರಲೋಕ ಜೀವಿತದ ದೃಷ್ಟಾಂತವನ್ನು ಕಾಣುವರು. ಅಲ್ಲಾಹನಿಂದ ಅಂಗೀಕಾರ ಪಡೆದ ಮತ್ತು ಅವನಿಂದ ಪ್ರೀತಿಸಲ್ಪಡುವ ಪ್ರಕಾಶವನ್ನು ಅವರು ಕಾಣುವರು." (ಸಂಪುಟ 1, ಪುಟ 11)

ವಾಗ್ದತ್ತ ಮಸೀಹರ ಮೂಲಕ ಇಸ್ಲಾಮೀ ಖಿಲಾಫತ್ ಪುನಶ್ಚೇತನ ಪಡೆಯಿತು. ಅವರ ಉದಾಹರಣೆ ಮತ್ತು ಅವರು ಸ್ಥಾಪಿಸಿದ ಜಮಾಅತಿನ ಉದಾಹರಣೆ ಇಸ್ಲಾಮಿನ ಆರಂಭ ಕಾಲದ ಮುಸ್ಲಿಮರ ನಡೆವಳಿಕೆಗೆ ಸಮವಾಗಿದೆ. ಅವರು ತನ್ನ ಅನುಯಾಯಿಗಳನ್ನು ಯಾವ ದೆಸೆಗೆ ಕೊಂಡೊಯ್ದರೋ ಅದು ಇಸ್ಲಾಮಿನ ಆರಂಭ ಕಾಲದೊಂದಿಗೆ ಆಶ್ಚರ್ಯಕರವಾದ ಹೋಲಿಕೆಯನ್ನು ಹೊಂದಿದೆ. ಅವರು ಹೀಗೆ ಹೇಳಿದರು:

"ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ನಿಷ್ಠೆಯಿಂದ ಅನುಸರಿಸುವವರ ಹೃದಯವು ಪರಿಶುದ್ಧವಾಗುತ್ತದೆ. ಲೌಕಿಕ ಆಶೆಗಳು ಹೃದಯದಿಂದ ದೂರ ಸರಿದು ಹೋಗುತ್ತವೆ. ಹೃದಯವು ಶಾಶ್ವತವಾದ ಸಂತೋಷ ಆಶಿಸುತ್ತದೆ. ಇದರ ಫಲಸ್ವರೂಪವಾಗಿ ಪರಿಪೂರ್ಣ ದೈವಿಕ ಪ್ರೀತಿ ಲಭಿಸುತ್ತದೆ. ಇವುಗಳೆಲ್ಲಾ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅನುಸರಿಸುವುದರಿಂದ ಲಭಿಸುತ್ತವೆ." (ಹಖೀಖತುಲ್ ವಹೀ – ರೂಹಾನಿ ಖಝಾಯಿನ್ ಸಂಪುಟ 22, ಪುಟ 64-65)

ಕುತೂಹಲಕರವಾದ ಸಂಗತಿ ಏನೆಂದರೆ ಇಹಲೋಕವನ್ನು ತಿರಸ್ಕರಿಸುವ ಮೂಲಕ ಸಾತ್ವಿಕತೆ ಗಳಿಸಬಹುದೆಂದು ಅವರು ಹೇಳಿದುದಾಗಿದೆ. ಅಲ್ಲಾಹನ ಭಕ್ತಿ ಮತ್ತು ಅವನ ಬಗ್ಗೆ ಪ್ರೀತಿ ಇಸ್ಲಾಮಿನ ಆದ್ಯ ಕಾಲದ ಖಿಲಾಫತ್‌ಗೆ ದೊರಕಿದ ಅನುಗ್ರಹಗಳಿಗೆ ಕಾರಣಗಳಾಗಿದ್ದುವು. ಲೋಕದ ಕೊನೆಯ ಘಟ್ಟದಲ್ಲಿ ಇವುಗಳ ಮೂಲಕವೇ ಅಲ್ಲಾಹನ ಅನುಗ್ರಹ ಗಳಿಸಲಿಕ್ಕಿದ್ದಿತು. ಖಿಲಾಫತ್ ರಾಶಿದೂನಿನ ವಿರುದ್ಧ ವರ್ತಿಸಿದವರು ಸಹ ಆದಿಕಾಲೀನ ಖಲೀಫರ ತ್ಯಾಗ ಮನೋಭಾವವನ್ನು ಗುರುತಿಸಿದ್ದರು. ಈ ವಿಷಯದಲ್ಲಿ ಮುಆವಿಯ ಹೇಳಿದ ಮಾತುಗಳನ್ನು ಇದರ ಮೊದಲು ಉಲ್ಲೇಖಿಸಲಾಗಿದೆ. ವಾಗ್ದತ್ತ ಮಸೀಹರು ಸಹ ಈ ಬಗ್ಗೆ ತನ್ನ ಅನುಯಾಯಿಗಳಿಗೆ ಒತ್ತಿ ಹೇಳಿದ್ದರು.

**ಖಿಲಾಫತ್ ಪುನಶ್ಚೇತನ**

ವಾಗ್ದತ್ತ ಮಸೀಹರ ಮೂಲಕ ಖಿಲಾಫತ್ ಪುನಶ್ಚೇತನಗೊಳಿಸಲ್ಪಟ್ಟಿತು. ತನ್ನ ನಿಧನದ ಬಳಿಕ ತನ್ನ ಜಮಾಅತ್‌ನಲ್ಲಿ ಖಿಲಾಫತ್ ಸ್ಥಾಪನೆ ಬಗ್ಗೆ ಅವರು ಭವಿಷ್ಯ ನುಡಿದರು. ಅವರು "ಅಲ್ ವಸಿಯ್ಯತ್" ಗ್ರಂಥದಲ್ಲಿ ಹೀಗೆ ಹೇಳಿದರು:

"ಅಲ್ಲಾಹನ ದ್ವಿತೀಯ ಶಕ್ತಿ ಪ್ರದರ್ಶನವನ್ನು ನೀವು ಕಾಣುವುದು ಆವಶ್ಯಕವಾಗಿದೆ. ಅದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿರುವುದು. ಪುನರುತ್ಥಾನ ದಿನದ ತನಕ ಅದು ಮುಂದುವರಿಯುವುದು. ನಾನು ನಿಮ್ಮಿಂದ ಅಗಲಿ ಹೋಗುವ ತನಕ ನೀವು ಅಲ್ಲಾಹನ ದ್ವಿತೀಯ ಶಕ್ತಿಪ್ರದರ್ಶನವನ್ನು ಕಾಣಲಾರಿರಿ. ನಾನು ನಿಮ್ಮಿಂದ ಅಗಲಿಹೋದ ನಂತರ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗೆ ಕಳುಹಿಸಿಕೊಡುವನು. ಬರಾಹೀನೆ ಅಹ್ಮದಿಯಾದಲ್ಲಿ ಅಲ್ಲಾಹನು ವಾಗ್ದಾನ ಮಾಡಿದ ಹಾಗೆ ಅದು ನಿಮ್ಮ ಜೊತೆ ಯಾವಾಗಲೂ ಇರುವುದು.

"ಯುರೋಪು, ಏಶಿಯಾ ಮತ್ತು ವಿವಿಧ ಪ್ರದೇಶಗಳಲ್ಲಿರುವ ಸಾತ್ವಿಕರಾದ ಜನರನ್ನು ತೌಹೀದ್‌ಗೆ (ಅಲ್ಲಾಹನ ಏಕತ್ವಕ್ಕೆ) ತರಲು ಮತ್ತು ಅವನ ದಾಸರನ್ನು ಒಂದು ಧರ್ಮದಲ್ಲಿ ಒಗ್ಗೂಡಿಸಲು ಅಲ್ಲಾಹನ ಇಚ್ಛೆಸುತ್ತಾನೆ. ಈ ಕೆಲಸ ಈಡೇರಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ಕಳುಹಿಸಿರುವನು."

ಖಿಲಾಫತ್ ಅನುಗ್ರಹ ಪಡೆಯಲು ತನ್ನ ಅನುಯಾಯಿಗಳು ತಮ್ಮ ದೈನಂದಿನ ನಡೆವಳಿಕೆಯನ್ನು ಪರಿಷ್ಕರಿಸಿ ಅರ್ಹತೆ ಗಳಿಸಬೇಕೆಂದು ಅವರು ಹೇಳಿದರು. ಅವರು ಹೀಗೆಂದರು:

"ಅಲ್ಲಾಹನ ಪ್ರೀತಿಯನ್ನು ಗಳಿಸಲು ನೀವು ನಿಮ್ಮ ಹೀನ ಆಶಾಭಿಲಾಷೆಗಳನ್ನು ತ್ಯಜಿಸಿರಿ. ನೀವು ಲೋಕದ ಸುಖವನ್ನು ಪ್ರೀತಿಸಬೇಡಿರಿ. ಅವುಗಳು ನಿಮ್ಮನ್ನು ಅಲ್ಲಾಹನಿಂದ ದೂರ ಸರಿಯುತ್ತವೆ." (ಅಲ್ ವಸಿಯ್ಯತ್)

ತನ್ನ ಅನುಯಾಯಿಗಳು ಧರ್ಮದ ಸೇವೆಗಾಗಿ ಸಂಪತ್ತು ಮತ್ತು ಸಮಯದ ತ್ಯಾಗಮಾಡಲು ಅವರು ಒತ್ತಿಹೇಳಿದರು. ಇದು ಪವಿತ್ರ ಖುರ್‌ಆನಿನ ಉಪದೇಶದ ಪ್ರಕಾರವೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ಖರ್ಚು ಮಾಡುವವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ." (ಪವಿತ್ರ ಖುರ್‌ಆನ್ 3 : 93)

ಜನರ ಸಾತ್ವಿಕತೆಯು ಖಿಲಾಫತನ್ನು ಕಾಪಾಡುವುದು. ಅದು ಹಾಗೆಯೇ ಸಂಭವಿಸಿತು.

1908ರಲ್ಲಿ ವಾಗ್ದತ್ತ ಮಸೀಹರು ನಿಧನಹೊಂದಿದ ನಂತರ, ಅವರು ಪ್ರಾರಂಭಿಸಿದ ಇಸ್ಲಾಮಿನ ಪುನರುದ್ಧಾರಣೆ ದೌತ್ಯವನ್ನು ಮುಂದುವರಿಸಿಕೊಂಡು ಹೋಗಲು, ಅವರ ಅನುಯಾಯಿಗಳು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಗಳು ಮಾಡಿದಂತೆ, ಒಟ್ಟಿಗೆ ಸೇರಿ ದೈವಿಕ ಸಂರಕ್ಷಣೆ ಮತ್ತು ಅನುಗ್ರಹಗಳನ್ನು ಬೇಡಿಕೊಂಡು ಒಬ್ಬ ಖಲೀಫರನ್ನು ಆಯ್ಕೆಮಾಡಿದರು. ಹಝ್ರತ್ ಹಕೀಂ ಮೌಲವಿ ನೂರುದ್ದೀನ್ ಸಾಹೇಬ್(ರ) ಪ್ರಥಮ ಖಲೀಫರಾಗಿ ಚುನಾಯಿಸಲ್ಪಟ್ಟರು. (ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು(ಅ) ಕೊನೆ ಕಾಲದ ಪ್ರವಾದಿ ಮತ್ತು ಮಸೀಹರೆಂದು ಅಂಗೀಕರಿಸಿದ ಪ್ರಥಮ ವ್ಯಕ್ತಿ ಸಹ ಅವರೇ ಆಗಿದ್ದರು.) ಮುಸ್ಲಿಮರಿಗೆ ಅಲ್ಲಾಹನು ವಾಗ್ದಾನ ಮಾಡಿದ ಪ್ರವಾದಿತ್ವ ಮತ್ತು ಖಿಲಾಫತ್ ಮಧ್ಯೆ ಇರುವ ಸಂಬಂಧ ಪುನಃ ಸ್ಥಾಪಿಸಲ್ಪಟ್ಟಿತು. ಅಹ್ಮದಿಯಾ ಜಮಾಅತ್ ಸಾತ್ವಿಕತೆ ಮತ್ತು ದೇವನಿಷ್ಠೆಯನ್ನು ಕಾಪಾಡಿಕೊಂಡು ಬರುವ ತನಕ ಈ ಖಿಲಾಫತ್ ಮುಂದುವರಿಯುತ್ತಾ ಅಭಿವೃದ್ಧಿಗಳಿಸುವುದು.

## ಖಿಲಾಫತ್ ಅಹ್ಮದಿಯಾ – ಖಿಲಾಫತ್ ರಾಶಿದದ ಇನ್ನೊಂದು ಕಾಲಘಟ್ಟ

ಖಿಲಾಫತೆ ರಾಶಿದದ ಅನುಭವ ಮತ್ತು ವಿಜಯವನ್ನು ಬಹಳವಾಗಿ ಪ್ರತಿಬಿಂಬಿಸುವ ರೀತಿಯಲ್ಲಿ ಅಹ್ಮದಿಯಾ ಖಿಲಾಫತ್ ಸಹ ದೈವಿಕ ಸಹಾಯ ಮತ್ತು ಸಂರಕ್ಷಣೆಯ ಮೂಲಕ ಅನುಗ್ರಹಿಸಲ್ಪಟ್ಟಿದೆ. ಅದು ಇಡೀ ಸಮುದಾಯವನ್ನು ಸತ್ಪಥದೆಡೆಗೆ ಮುನ್ನಡೆಸುವ ಆಶಾಕಿರಣವಾಗಿತ್ತು. ಎಲ್ಲ ವಿಷಮ ಪರಿಸ್ಥಿತಿಗಳನ್ನು ಎದುರಿಸಿಕೊಂಡು ಅದಕ್ಕೆ ಸಿದ್ಧಿಸಿದ ವಿಜಯ ಮತ್ತು ಅಭಿವೃದ್ಧಿ ದೈವಿಕ ಸಹಾಯದ ಪ್ರತಿಫಲನವಾಗಿದೆ.

ನಾವು ಅಹ್ಮದಿಯಾ ಜಮಾಅತಿನ ಚರಿತ್ರೆಗೆ ದೃಷ್ಟಿ ಹಾಯಿಸಿದರೆ ಖಲೀಫರಿಗೆ ಅಲ್ಲಾಹನು ಜಯವನ್ನು ತನ್ನ ವಾಗ್ದಾನದ ಪ್ರಕಾರ ದಯಪಾಲಿಸಿದನೆಂದು ಕಾಣುತ್ತದೆ. ಅಹ್ಮದಿಯಾ ಜಮಾಅತ್ ಅಸಾಧಾರಣವಾದ ವೇಗದಿಂದ ಅಭಿವೃದ್ಧಿಹೊಂದುತ್ತಾ ಇದೆ. ಈ ಜಮಾಅತ್ ಜಗತ್ತಿನ ಮೂಲೆ ಮೂಲೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿದೆ. ಖಲೀಫರಿಗೆ ಜಯದ ಮೇಲೆ ಜಯವನ್ನು ಅಲ್ಲಾಹನು ದಯಪಾಲಿಸಿದನು. ಮಾನವರ ಐಕ್ಯತೆಯು ಖಿಲಾಫತ್ ಅಹ್ಮದಿಯಾದ ಮೂಲಕ ಸಾಧಿಸಲ್ಪಡುತ್ತಾ ಇದೆ.

ಅಹ್ಮದಿಯಾ ಜಮಾಅತಿನ ಖಲೀಫರು ಅಲ್ಲಾಹನ ಏಕತೆಯ ಪತಾಕೆಯನ್ನು ಹಾರಿಸಲು ಮತ್ತು ಲೋಕದಾದ್ಯಂತ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಾ ಇರುವರು. ಪ್ರಥಮ ಖಲೀಫ ಹಝ್ರತ್ ಮೌಲವಿ ನೂರುದ್ದೀನ್(ರ) ಅವರ ಕಾಲದಲ್ಲಿ ಐಕ್ಯತೆಯನ್ನು ಕಾಪಾಡಲಾಯಿತು. ಜಮಾಅತನ್ನು ವಿಸ್ತರಿಸುವ ಅಸ್ತಿಭಾರ ದ್ವಿತೀಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಅವರ ಕಾಲದಲ್ಲಿ ಹಾಕಲಾಯಿತು. ತೃತೀಯ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ (ರಹಿಮಹುಲ್ಲಾಹು) ಅವರ ಕಾಲದಲ್ಲಿ ಮಾನವರ ಸೇವೆಗಾಗಿ ಕಾರ್ಯಕ್ರಮಗಳು ರೂಪಿತವಾದುವು. ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ (ರಹಿಮಹುಲ್ಲಾಹು) ಅವರ ಕಾಲದಲ್ಲಿ ಅಭೂತಪೂರ್ವ ಜಯವು ಲಭಿಸಿತು. ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ (ಅಯ್ಯದಹುಲ್ಲಾಹು ತಆಲಾ) ಅವರ ಇಂದಿನ ಕಾಲದಲ್ಲಿ ಜಮಾಅತ್ ಜಯಗಳಿಸುತ್ತಾ ಸಾಗುತ್ತಿದೆ.

ಇವೆಲ್ಲಾ ಖಿಲಾಫತೆ ಅಹ್ಮದಿಯಾ ದೇವಾನುಗ್ರಹ ಗಳಿಸಿದ ಸತ್ಯ ಇಸ್ಲಾಮೀ ಖಿಲಾಫತ್ ಎಂಬುದನ್ನು ಸಾಕ್ಷೀಕರಿಸುತ್ತವೆ.

ಕಳೆದ ಒಂದು ನೂರು ವರ್ಷಗಳ ಕಾಲದಲ್ಲಿ ಅಹ್ಮದಿಯೇತರ ಮುಸ್ಲಿಮರು ಖಿಲಾಫತನ್ನು ನಿರಾಕರಿಸಿ ಛಿನ್ನಭಿನ್ನರಾಗಿಯೂ ನಿರಾಶೆಹೊಂದಿದವರೂ ಆಗಿರುವಾಗ ಅಹ್ಮದಿಯರು ಖಿಲಾಫತ್ ಮೂಲಕ ಅನುಗ್ರಹ ಗಳಿಸಿದರು.

ಖಿಲಾಫತನ್ನು ಎಲ್ಲರೂ ಅಂಗೀಕರಿಸಲಾರರು ಎಂಬ ಸಂಗತಿಯನ್ನು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಸೂಚಿಸುತ್ತದೆ. ಅಂತಹ ಜನರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ.

"ಅನಂತರ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು."
(ಪವಿತ್ರ ಖುರ್‌ಆನ್ 24 : 56)

ಅಹ್ಮದಿಯಾ ಖಿಲಾಫತ್ ಗಳಿಸುವ ಜಯವನ್ನು ತಡೆಯಲು ಯಾರಿಗೂ ಸಾಧ್ಯವಾಗಲಾರದೆಂದು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಸೂಚಿಸುತ್ತದೆ:

"ಅವಿಶ್ವಾಸಿಗಳು ಭೂಮಿಯಲ್ಲಿ (ನಮ್ಮ ಯೋಜನೆಗಳನ್ನು) ನಿಷ್ಫಲಗೊಳಿಸುವವರೆಂದು ನೀನು ಭಾವಿಸಬೇಡ."

(ಪವಿತ್ರ ಖುರ್‌ಆನ್ 24:58)

ಇಂದು ಅಹ್ಮದಿಯಾ ಖಿಲಾಫತ್ ಏಕಮಾತ್ರ ಖಿಲಾಫತ್ ಆಗಿದ್ದು ಈ ಕಾಲದ ಪ್ರವಾದಿಯನ್ನು ಅಂಗೀಕರಿಸಿದವರಿಗೆ ಅಲ್ಲಾಹನಿಂದ ದೊರೆತ ಅನುಗ್ರಹವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನೀಡಿದ ವಾಗ್ದಾನ ಪ್ರಕಾರ ಈ ಖಿಲಾಫತ್ ಸ್ಥಾಪಿಸಲ್ಪಟ್ಟಿದೆ.

## ಖಿಲಾಫತನ್ನು ಅಂಗೀಕರಿಸಬೇಕಾದ ಹೊಣೆಗಾರಿಕೆ

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ, ಈ ಕಾಲದ ಖಲೀಫರ ಕರೆಗೆ ಓಗೊಡುವ ಜವಾಬ್ದಾರಿ ಮುಸ್ಲಿಮರಿಗಿದೆ. ಮೊತ್ತ ಮೊದಲು ಖಲೀಫರ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಬೇಕು. ಅನಂತರ ಅವರು ಖಲೀಫರು ಹೇಳಿದುದನ್ನು ಆಲಿಸಿ ಆ ರೀತಿ ವರ್ತಿಸಬೇಕು. ಅದಕ್ಕೆ ವಿರುದ್ಧವಾಗಿ ವರ್ತಿಸಿದರೆ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ತಿರಸ್ಕರಿಸಿದಂತೆ ಆಗುವುದು. ಅವರು ಹೀಗೆ ಹೇಳಿದರು:

"ನಾನು ನೇಮಿಸಿದ ಅಮೀರರನ್ನು ಅನುಸರಿಸುವವರು ನನ್ನನ್ನು ಅನುಸರಿಸಿದಂತೆ; ನನ್ನ ಅಮೀರರನ್ನು ತಿರಸ್ಕರಿಸಿದವರು ನನ್ನನ್ನು ತಿರಸ್ಕರಿಸಿದಂತೆ ಆಗುವುದು." ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ತಿರಸ್ಕರಿಸಲು ಯಾವ ಮುಸ್ಲಿಮನೂ ಸಿದ್ಧನಾಗಲಾರನು.

ಆದುದರಿಂದ ಖಲೀಫರನ್ನು ಅನುಸರಿಸುವುದು ವಿಶ್ವಾಸದ ಒಂದು ಹೆಗ್ಗುರುತಾಗಿದೆ. ಅದು ಖುರ್‌ಆನಿನ ಈ ಕೆಳಗಿನ ವಚನಕ್ಕೆ ಅನುಸಾರವಾಗಿದೆ. ಅಲ್ಲಾಹನು ಹೇಳುತ್ತಾನೆ:

"ಓ ವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. ಅವನ ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ." (4 : 60)

ಪವಿತ್ರ ಖುರ್‌ಆನಿನ ಸೂರತುನ್ನೂರ್‌ನಲ್ಲಿ ಅನುಸರಣೆಯ ಬಗ್ಗೆ ವಚನ 52ರಿಂದ 57ರ ತನಕ ಏಳು ಸಾರಿ ಹೇಳಲಾಗಿದೆ. ಯಾರು ಆಲಿಸುತ್ತಾರೋ ಮತ್ತು ಅನುಸರಿಸುತ್ತಾರೋ ಅವರು ಜಯಶಾಲಿಗಳಾಗುವರೆಂದು ಪವಿತ್ರ ಖುರ್‌ಆನಿನ 24 : 52 ವಚನ ಸ್ಪಷ್ಟಪಡಿಸುತ್ತದೆ.

ಅಹ್ಮದಿಯಾ ಜಮಾಅತಿನ ಪ್ರಥಮ ಖಲೀಫ ಹಝ್ರತ್ ಹಕೀಮ್ ಮೌಲವಿ ನೂರುದ್ದೀನ್(ರ) ಹೀಗೆ ಹೇಳಿದರು: ಖಿಲಾಫತ್ ಪೀಠದ ಮುಂದೆ ನಿಮ್ಮ ಅಹಂಭಾವ ಬಲಿಯರ್ಪಿಸಬೇಕು. ಅಹಂಭಾವವು ಒಬ್ಬನನ್ನು ಅಧಃಪತನಕ್ಕೆ ತಳ್ಳಿ ಅಲ್ಲಾಹನ ಅನುಗ್ರಹದಿಂದ ದೂರಗೊಳಿಸುತ್ತದೆ. ಬೈಅತ್ ಮಾಡುವವರು ತಮ್ಮ ಎಲ್ಲಾ ಸ್ವತಂತ್ರ ಅಭಿಪ್ರಾಯಗಳನ್ನು ಬಿಡಬೇಕು. ಖಲೀಫರ ಸೇವೆಗಾಗಿ ನಿಮ್ಮನ್ನು ಅರ್ಪಿಸುವ ನೀವು ಅಲ್ಲಾಹನ ಸೇವೆಗಾಗಿ ನಿಮ್ಮನ್ನು ಅರ್ಪಿಸುತ್ತಿರುವಿರಿ.

ಖಲೀಫರನ್ನು ಅನುಸರಿಸುವ ಮೂಲಕ ಮುಸ್ಲಿಮರು ಇಸ್ಲಾಮ್‌ಗಾಗಿ ಸೇವೆ ಸಲ್ಲಿಸುವರು. ಇಸ್ಲಾಮ್ ಧರ್ಮವು ಖಲೀಫರ ನೇತೃತ್ವದಲ್ಲಿ ಜಯಗಳಿಸುವುದು ಎಂದು ವಾಗ್ದಾನ ಮಾಡಲಾಗಿದೆ.

## ಖಿಲಾಫತ್ ಮತ್ತು ಅಹ್ಮದಿಯಾ ಮುಸ್ಲಿಂ ಜಮಾಅತಿನ ಬೆಳವಣಿಗೆ

ಅಹ್ಮದಿಯರು ಖಿಲಾಫತ್ ಪುನಶ್ಚೇತನಗೊಂಡುದಕ್ಕೆ ಸಾಕ್ಷಿಗಳಾಗುವ ಭಾಗ್ಯ ಪಡೆದವರಾಗಿದ್ದಾರೆ. ಉಮ್ಮತೀ ಪ್ರವಾದಿಯ ಆಗಮನದ ನಂತರ ಸ್ಥಾಪಿತವಾದ ಖಿಲಾಫತ್ ವ್ಯವಸ್ಥೆಗೆ ಪೂರ್ಣವಾಗಿ ಸಹಕರಿಸಿ ಖಲೀಫರು ಸ್ಥಾಪಿಸಿದ ತಹ್‌ರೀಕ್ ಜದೀದ್, ವಖ್ಫೆ ಜದೀದ್, ನುಸ್ರತ್ ಜಹಾನ್ ಅಭಿಯಾನ, ವಖ್ಫೆ ನೌ ಅಭಿಯಾನಗಳ ಮೂಲಕ ಇಸ್ಲಾಮಿನ ಸೇವೆಗೈಯುತ್ತಾ ಇದ್ದಾರೆ.

ಇತ್ತೀಚೆಗೆ ಪಂಚಮ ಖಲೀಫರವರು ವಸಿಯ್ಯತ್ ಪದ್ಧತಿಯ ಪ್ರಾಮುಖ್ಯತೆಯ ಬಗ್ಗೆ ಒತ್ತಿಹೇಳಿದರು. ಭೌತಿಕ ಭೋಗ ಲಾಲಸೆ ಆದ್ಯತೆ ಗಳಿಸಿರುವ ಈ ಕಾಲದಲ್ಲಿ ಅಹ್ಮದಿಯರು ಲೋಕದಾದ್ಯಂತ ಖಲೀಫರ ಕರೆಗಳಿಗೆ ಓಗೊಟ್ಟು ತ್ಯಾಗಗಳನ್ನು ಮಾಡುತ್ತಿದ್ದಾರೆ.

ಆರ್ಥಿಕ ತ್ಯಾಗದ ಬಗ್ಗೆ ಮುಸ್ಲಿಮರು ಹಝ್ರತ್ ಉಮರ್(ರ) ಅವರ ಈ ಕೆಳಗಿನ ಮಾತಿನಂತೆ ನಡೆಯಬೇಕಾಗಿದೆ. ಅವರು ಹೀಗೆಂದರು:

"ಭೂಮಿಯಷ್ಟು ಗಾತ್ರದ ಬಂಗಾರ ಮತ್ತು ಬೆಳ್ಳಿಯನ್ನು ನಾನು ಹೊಂದಿದ್ದರೂ ನಾನು ಅದನ್ನು ಅಲ್ಲಾಹನ ತೃಪ್ತಿಯನ್ನು ಗಳಿಸಲು ಖರ್ಚುಮಾಡುತ್ತಿದ್ದೆನು." (ಹಝ್ರತ್ ಉಮರ್ ಫಾರೂಖ್ ಜೀವಿತ ಚರಿತ್ರೆ – ಲೇಖಕ R.A. ಚೌಧುರಿ – ಪುಟ 100)

ಹಝ್ರತ್ ಮೌಲವಿ ನೂರುದ್ದೀನ್(ರ) ಅವರು ಎಂತಹ ಆರ್ಥಿಕ ತ್ಯಾಗ ಮತ್ತು ಸೇವೆಯ ಉನ್ನತ ಮಾದರಿಯನ್ನು ಪ್ರಕಟಿಸಿದರೆಂದರೆ ಅವರ ಬಗ್ಗೆ ವಾಗ್ದತ್ತ ಮಸೀಹರು ಒಂದು ಪ್ರಸಿದ್ಧ ಪದ್ಯದಲ್ಲಿ ಹೀಗೆ ಹೇಳಿದರು:

"ಪ್ರತಿಯೊಬ್ಬ ಅಹ್ಮದಿ ನೂರುದ್ದೀನರ ಹಾಗೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು. ಪ್ರತಿಯೊಬ್ಬರು ವಿಶ್ವಾಸದ ಪ್ರಕಾಶಗಳಿಸಿದವರಾಗುತ್ತಿದ್ದರು."

ನಾವು ಖಲೀಫರ ಜೀವಿತವನ್ನು, ಅವರು ಖಲೀಫರಾಗುವ ಮೊದಲಿನ ಕಾಲದ, ಅಧ್ಯಯನ ಮಾಡುವುದಾದರೆ ಅವರು ನಡೆಸಿದ ಆದರ್ಶ ಜೀವಿತವನ್ನು ಕಾಣಬಲ್ಲೆವು. ಅಹ್ಮದಿಯಾ ಖಿಲಾಫತಿನ ಸೇವೆಗೆ ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ನಮ್ಮ ಕರ್ತವ್ಯಗಳನ್ನು ನಾವು ಹೇಗೆ ನಿಭಾಯಿಸಬಹುದೆಂದು ಮನಗಾಣಬಹುದು.

ಖಿಲಾಫತ್ ವ್ಯವಸ್ಥೆಯಲ್ಲಿ ಖಲೀಫರನ್ನು ಪೂರ್ಣವಾಗಿ ಅನುಸರಿಸುವುದು ಅತ್ಯಾವಶ್ಯಕವಾಗಿದೆ. ಖಲೀಫ ಮತ್ತು ಜಮಾಅತಿನ ಮಧ್ಯೆ ಇರುವ ಸಂಬಂಧವನ್ನು ಅದು ಬೆಸೆಯುತ್ತದೆ. ಖಲೀಫರನ್ನು ಅಲ್ಲಾಹನೇ ಜನರ ಮೂಲಕ ಆಯ್ಕೆ ಮಾಡುವುದರಿಂದ ಅವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಕೊರತೆಯನ್ನು ಹೊಂದಲಾರರು. ಆದುದರಿಂದ ಖಲೀಫರನ್ನು ನಿಷ್ಠಾವಂತರಾಗಿ ಅನುಸರಿಸಬೇಕು. ಸತ್ಯವಿಶ್ವಾಸವನ್ನು ಹೊಂದಿ ಸತ್ಕಾರ್ಯಗಳನ್ನು ಮಾಡುವವರಿಗೆ ಮಾತ್ರ ಖಿಲಾಫತ್ ಅನುಗ್ರಹ ಲಭಿಸುವುದು. ಸಾತ್ವಿಕತೆ ನಷ್ಟವಾದಾಗ ಅನುಸರಣೆಯೂ ನಷ್ಟಗೊಂಡು ಖಿಲಾಫತ್ ಸಹ ನಷ್ಟವಾಗುವುದು. ಆದುದರಿಂದ ಅಹ್ಮದಿಯಾ ಜಮಾಅತಿನ ಎಲ್ಲರೂ ತಮ್ಮ ವಿಶ್ವಾಸ ಮತ್ತು ಆಚರಣೆಯಲ್ಲಿ ಸ್ಥಿರತೆಯನ್ನು ಹೊಂದಬೇಕು.

ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್(ರ) ಅವರು ವಾಗ್ದತ್ತ ಮಸೀಹರ ಮೃತ ಶರೀರದ ಮುಂದೆ ಹೀಗೆ ಪ್ರತಿಜ್ಞೆ ಮಾಡಿದ್ದರು:

"ಎಲ್ಲರೂ ನಿಮ್ಮನ್ನು ಬಿಟ್ಟು ನಾನೊಬ್ಬನೇ ನಿಮ್ಮ ಸೇವಕನಾಗಿ ಉಳಿದರೂ ನಾನು ಎಲ್ಲಾ ವಿರೋಧಗಳನ್ನು ಧೈರ್ಯದಿಂದ ಎದುರಿಸುವೆನು."

ಖಿಲಾಫತ್‌ಗಾಗಿ ಸೇವೆ ಮಾಡುವವರು ಈ ರೀತಿಯ ಮನೋಭಾವ ಹೊಂದಬೇಕು.

## ಖಿಲಾಫತ್ ಮತ್ತು ವಸಿಯ್ಯತ್

ಖಲೀಫರು ಜನರನ್ನು ಸಾತ್ವಿಕತೆ ಮತ್ತು ತ್ಯಾಗದ ಕಡೆಗೆ ಕರೆಯುತ್ತಾರೆ. ಖಿಲಾಫತಿನ ಅನುಗ್ರಹಗಳ ಮಹತ್ವವನ್ನು ಮನವರಿಕೆ ಮಾಡಿದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು (ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ), ಮಸೀಹ್ ಮತ್ತು ಖಲೀಫರನ್ನು ಕೇವಲ ಸ್ವೀಕರಿಸುವುದು ದೇವ ಸನ್ನಿಧಿಯಲ್ಲಿ ಸಾಲದು ಎಂದು ಉಪದೇಶಿಸುತ್ತಾರೆ. ಹೊಣೆಗಾರಿಕೆಯಿಲ್ಲದ ನಂಬಿಕೆ ಸಾಲದು. ನಂಬಿಕೆಯೊಂದಿಗೆ ಹೊಣೆಗಾರಿಕೆ ವರ್ಧಿಸುತ್ತದೆ. ಇದು ಸಂಪೂರ್ಣವಾಗಿ ಖುರ್‌ಆನಿನ ನಿರ್ದೇಶನಗಳಿಗೆ ಸರಿಹೊಂದುತ್ತದೆ. ಮುಸ್ಲಿಮರು 'ವಿಶ್ವಾಸ ಹೊಂದಿದವರೂ ಸತ್ಕಾರ್ಯ ಮಾಡುವವರೂ' ಆಗಬೇಕು. ಆದುದರಿಂದ ವಿಶ್ವಾಸವನ್ನು ಸತ್ಕರ್ಮಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಇವರೆಡು ಒಟ್ಟು ಸೇರಿದರೆ ಮುಸ್ಲಿಮರು ಖಿಲಾಫತ್ ಎಂಬ ಅನುಗ್ರಹಕ್ಕೆ ಅರ್ಹರಾಗುತ್ತಾರೆ.

ಈ ಉದ್ದೇಶದಿಂದ ಅವರು ಅನುಗ್ರಹೀತ ವಸಿಯ್ಯತ್ ವ್ಯವಸ್ಥೆಯ ಬಗ್ಗೆ ನೆನಪು ಹುಟ್ಟಿಸಿದರು. ಅಂದರೆ, ಸಾತ್ವಿಕ ಜೀವನ ಮತ್ತು ಆದರ್ಶಮಯ ತ್ಯಾಗ ಮಾಡಿದರೆ ಮಾತ್ರ ದೈವಿಕ ಅನುಗ್ರಹಗಳಿಗೆ ಅರ್ಹರಾಗುವ ವಿಧ ಸಾತ್ವಿಕತೆಯನ್ನು ಸಂರಕ್ಷಿಸಲು ಸಾಧ್ಯ. ಈ ಬಗ್ಗೆ ವಾಗ್ದತ್ತ ಮಸೀಹ್ ಸಹ ಒತ್ತಿ ಹೇಳಿದ್ದಾರೆ. ಯಾವುದೇ ಕಾರ್ಯಸಾಧನೆಗೆ ಪ್ರಯತ್ನದ ಜೊತೆಗೆ ದೇವಾನುಗ್ರಹವನ್ನು ಯಾಚಿಸಬೇಕೆಂದು ಅವರು ಉಪದೇಶಿಸಿದರು. ತನ್ನ ಕೃಷಿಸ್ಥಳದಲ್ಲಿ ದುಡಿಯದೆ ಉತ್ತಮ ಬೆಳೆ ಬರಬೇಕೆಂದು ಪ್ರಾರ್ಥಿಸುವ ಕೃಷಿಕನು ಮೂರ್ಖನಾಗಿದ್ದಾನೆ. ದುಡಿದ ನಂತರ ಸಹ ಅವನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ದೇವರೊಡನೆ

ಪ್ರಾರ್ಥಿಸುತ್ತಾ ಅವನು ತನ್ನ ಪರಿಶ್ರಮ ವ್ಯರ್ಥವಾಗದಂತೆ ಸದಾ ಜಾಗ್ರತೆ ವಹಿಸುತ್ತಾನೆ. ಈ ಮನೋಭಾವ ಮತ್ತು ಹೊಣೆಗಾರಿಕೆ ಖಿಲಾಫತಿನ ಭವಿಷ್ಯವನ್ನು ಸಂರಕ್ಷಿಸುತ್ತದೆ ಮತ್ತು ಇಸ್ಲಾಮಿನ ಅಂತಿಮ ವಿಜಯಕ್ಕೆ ಹೇತುವಾಗುತ್ತದೆ.

**ಉಪಸಂಹಾರ**

ನಾವು ಖಿಲಾಫತ್ ಹೊಂದಿದ ಭಾಗ್ಯವಂತರಾಗಿದ್ದೇವೆ. ಅಲ್ಲಾಹನಿಗೆ ಭಯಪಟ್ಟು ಸತ್ಕಾರ್ಯಗಳನ್ನು ಮಾಡುವವರಿಗೆ ಖಿಲಾಫತ್ ಲಭಿಸುವ ವಾಗ್ದಾನ ಮಾಡಲಾಗಿದೆ. ಖಿಲಾಫತ್ ವ್ಯವಸ್ಥೆ ವಾಗ್ದತ್ತ ಮಸೀಹರ[ಅ] ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸತ್ಯವನ್ನು ಸಾಬೀತುಗೊಳಿಸುತ್ತದೆ. ಇಂದಿನ ಲೋಕವು ರಕ್ಷಿಸಲ್ಪಡಲು ಇರುವ ಏಕ ಮಾತ್ರ ಮಾರ್ಗ ಖಿಲಾಫತ್ ಆಗಿದೆ. ಮುಸ್ಲಿಮರು ಖಿಲಾಫತ್ ವ್ಯವಸ್ಥೆಯನ್ನು ನಿಷ್ಠೆಯಿಂದ ಅನುಸರಿಸಬೇಕು. ಅಲ್ಲಾಹನ ವಾಗ್ದಾನ ನೆರವೇರಿ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವಂತೆ ಆಗಬೇಕು.

ಕೊನೆಯದಾಗಿ ನಾವು ಅಲ್ಲಾಹನ ವಾಗ್ದಾನವನ್ನು ಪುನಃ ನೆನಪಿಸೋಣ:

"ನಿಮ್ಮ ಪೈಕಿ ವಿಶ್ವಾಸಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿಯಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು.

"ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕೋಸ್ಕರ ನೀವು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ, ಝಕಾತ್ ಕೊಡಿರಿ ಮತ್ತು ಪ್ರವಾದಿಗೆ ವಿಧೇಯರಾಗಿದ್ದುಕೊಳ್ಳಿರಿ." (ಪವಿತ್ರ ಖುರ್‌ಆನ್ ವಚನ 24 : 56, 57)

(The Review of Religions, October 2007,
ಭಾಷಾಂತರ: A. ಅಬ್ದುಸ್ಸಲಾಮ್)

## ಖಿಲಾಫತ್ ಬಗ್ಗೆ ಹೇಳಿಕೆಗಳು

▶ "ಪ್ರವಾದಿತ್ವ (ನುಬುವ್ವತ್) ನಿಮ್ಮ ಮಧ್ಯೆ ಅಲ್ಲಾಹನು ಇಚ್ಛಿಸುವ ತನಕ ಉಳಿಯುವುದು. ಅನಂತರ ಅದನ್ನು ಅಲ್ಲಾಹನು ಎತ್ತಿಬಿಡುವನು ಮತ್ತು ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತ್) ಸ್ಥಾಪಿಸಲ್ಪಡುವುದು. ಅಲ್ಲಾಹನು ಇಚ್ಛಿಸುವ ತನಕ ಅದು ಜಾರಿಯಲ್ಲಿರುವುದು......."

**– ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್**

▶ "ನಿಮ್ಮ ಮಧ್ಯೆ ಸಹೋದರ ಸಂಬಂಧದ ಐಕ್ಯತೆ ಸ್ಥಾಪನೆಗೊಳ್ಳಲು ಮತ್ತು ಧರ್ಮ ಸುಸ್ಥಾಪಿತವಾಗಲು ಅಲ್ಲಾಹನು ನನ್ನನ್ನು ಖಲೀಫ ಆಗಿ ನೇಮಿಸಿರುವನು."

**– ಹಝ್ರತ್ ಅಬೂಬಕರ್[ರ]**

▶ "ಯಾರಿಗಾದರೂ ಹಣಕಾಸಿನ ಸಹಾಯ ಅಗತ್ಯವಾಗಿದ್ದರೆ ನನ್ನ ಸಮೀಪ ಬರಬೇಕು. ಅಲ್ಲಾಹನು ನನ್ನನ್ನು ಖಜಾನೆಯ ಅಧಿಕಾರಿಯನ್ನಾಗಿಯೂ ಖರ್ಚು ಮಾಡುವವನನ್ನಾಗಿಯೂ ನೇಮಿಸಿರುವನು."

**– ಹಝ್ರತ್ ಉಮರ್[ರ]**

▶ "ಖಿಲಾಫತ್ ಎಂಬ ಈ ನಿಲುವಂಗಿಯನ್ನು ನಾನು ಬಿಟ್ಟುಬಿಡಲಾರೆನು. ಅದನ್ನು ಸರ್ವಶಕ್ತನಾದ ಅಲ್ಲಾಹನು ನನಗೆ ದಯಪಾಲಿಸಿರುವನು."

**– ಹಝ್ರತ್ ಉಸ್ಮಾನ್[ರ]**

▶ "ನನ್ನ ಕೈಯಲ್ಲಿ ಬೈಅತ್ ಮಾಡಿದವರು ಅಬೂಬಕರ್‌ರವರಿಗೆ[ರ] ಬೈಅತ್ ಮಾಡಿದವರಂತೆಯೇ ಆಗಿದ್ದಾರೆ. ಅವರು ಒಂದೇ ರೀತಿಯ ನಿಷ್ಠೆಯ ಪ್ರತಿಜ್ಞೆ ಮಾಡಿರುವರು...... ಖಲೀಫರನ್ನು ನೇಮಿಸುವ ಸಮಾಲೋಚನೆಗಳಲ್ಲಿ ಮುಹಾಜಿರೀನ್ (ಮಕ್ಕದಿಂದ ವಲಸೆ ಹೋದವರು) ಮತ್ತು ಅನ್‌ಸಾರ್ (ಮದೀನ ನಿವಾಸಿಗಳು) ಸೇರಿ ಒಬ್ಬ ಖಲೀಫರನ್ನು ಆಯ್ಕೆಮಾಡುವ ಕುರಿತು ಒಮ್ಮತ ಹೊಂದಿದಾಗ ಅಲ್ಲಾಹನ ಸಂತೃಪ್ತಿ ಮತ್ತು ಅಂಗೀಕಾರದ ಮುದ್ರೆ ಅದಕ್ಕೆ ಲಭಿಸಿತು."

**– ಹಝ್ರತ್ ಅಲಿ[ರ]**

(ಮೌಲಾನ ಶೇಖ್ ಮುಬಾರಕ್ ಅಹ್ಮದರ An Exposition of Some Criticisms Against Khilafat - i -Rashida ಎಂಬ ಗ್ರಂಥದಿಂದ ಆಯ್ಕೆಮಾಡಲಾಗಿದೆ.)

# ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ ಪ್ರವಾದಿತ್ವದ ಮಾರ್ಗದಲ್ಲಿ ಸ್ಥಾಪಿತ ಖಿಲಾಫತ್



ಮೌಲಾನ ಝೈನುದ್ದೀನ್ ಹಾಮಿದ್
ನಾಝಿಮ್, ದಾರುಲ್ ಖಝಾ
ಖಾದಿಯಾನ್.

**ಪವಿತ್ರ ಖುರ್‌ಆನ್, ಹಝ್ರತ್ ಮುಹಮ್ಮದ್ ಪೈಗಂಬರ್(ಸ), ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅಹ್ಮದಿಯಾ ಜಮಾಅತಿನ ವಿವಿಧ ಖಲೀಫರ ಅಮೂಲ್ಯ ಉಪದೇಶಗಳು.**

ಅರಬಿ ನಿಘಂಟುಗಳಲ್ಲಿ "ಖಲೀಫ" ಪದದ ಅರ್ಥವನ್ನು ಹೀಗೆ ಹೇಳಲಾಗಿದೆ:

"ಅಲ್ ಇಮಾಮುಲ್ಲಧೀ ಲೈಸ ಫೌಖಹೂ ಇಮಾಮ್."

ಖಲೀಫ ಎಂದರೆ ಸರ್ವೋನ್ನತ ನಾಯಕ. ಅವರ ಮೇಲೆ ಇನ್ನೊಬ್ಬ ನಾಯಕನಿಲ್ಲ.

ಖಿಲಾಫತ್ ಎನ್ನುವುದು ವೈಭವಪೂರ್ಣವಾದ ಆಧ್ಯಾತ್ಮಿಕ ಪದವಿಯಾಗಿದೆ. ಅದಕ್ಕೆ ಸಮವಾಗಿರುವುದನ್ನು ಲೋಕದ ಯಾವುದೇ ವ್ಯವಸ್ಥೆಯಲ್ಲಿ ಕಾಣಲಾರೆವು. ಬಾಹ್ಯವಾಗಿ ನೋಡಿದರೆ ಖಲೀಫರನ್ನು ಸತ್ಯವಿಶ್ವಾಸಿಗಳು ಆಯ್ಕೆಮಾಡುತ್ತಾರೆ. ಆದರೆ ಅದರ ಹಿನ್ನೆಲೆಯಲ್ಲಿ ಅಲ್ಲಾಹನ ಕೈ ಕೆಲಸ ಮಾಡುತ್ತಾ ಇರುತ್ತದೆ. ಅನಾನುಕೂಲ ಪರಿಸ್ಥಿತಿಗಳಲ್ಲೂ ಸಂಘರ್ಷಭರಿತ ವಾತಾವರಣದಲ್ಲಿಯೂ ಅಲ್ಲಾಹನ ಅಸಾಧಾರಣ ಸಹಾಯ ಖಿಲಾಫತ್‌ಗೆ ಬೆಂಬಲವಾಗಿ ಕಾರ್ಯ ಪ್ರವೃತ್ತವಾಗುತ್ತಾ ಇರುತ್ತದೆ. ಪ್ರವಾದಿಯ ಮೂಲಕ ಯಾವ ಮಹತ್ತಾದ ಅಭಿಯಾನದ ಬೀಜಹಾಕಲಾಗುತ್ತಿದೆಯೋ ಅದರ ಪರಿಪೂರ್ಣ ಬೆಳವಣಿಗೆಗೆ ಸಹಾಯಕವಾದ ನೀರಾವರಿ ಖಿಲಾಫತ್ ಮೂಲಕ ನಡೆಯುತ್ತದೆ. ಆದುದರಿಂದ ಖಿಲಾಫತನ್ನು ನುಬುವ್ವತಿನ ಪೂರಕವೆಂದು ಹೇಳಲಾಗುತ್ತದೆ. ಪ್ರವಾದಿಯ ಕೈಗಳ ಮೂಲಕ ಬಿತ್ತಲಾದ ಬೀಜವು ಖಿಲಾಫತ್ ಮೂಲಕ ವಿರೋಧಿಗಳ ತೀವ್ರ ಚಂಡಮಾರುತಗಳನ್ನೂ ಸುಂಟರಗಾಳಿಗಳನ್ನೂ ಎದುರಿಸಿ ಒಂದು ಬೃಹತ್ತಾದ ವೃಕ್ಷದ ರೂಪವನ್ನು ಪಡೆಯುತ್ತದೆ ಮತ್ತು ಕೋಟಿಗಟ್ಟಲೆ ಸಾತ್ವಿಕ ಹೃದಯಗಳು ಈ ವೃಕ್ಷದ ಸಂತೋಷದಾಯಕ ನೆರಳಿನಲ್ಲಿ ಆಧ್ಯಾತ್ಮಿಕ ನೆಮ್ಮದಿಯನ್ನು ಪಡೆಯುತ್ತವೆ. ಅದರ ಫಲಸ್ವರೂಪವಾಗಿ ಶಾಂತಮಯ ಇಸ್ಲಾಮೀ ಸಮಾಜ ವ್ಯವಸ್ಥೆ ಸ್ಥಾಪಿತವಾಗುತ್ತದೆ. ಶತ್ರುಗಳು ತಮ್ಮ ಎಲ್ಲಾ ವಿಧ ಶಕ್ತಿಗಳೊಂದಿಗೆ ಎದುರಿಸಲು ಘೋರ ಪ್ರಯತ್ನ ನಡೆಸಿದರೂ ಪರಾಜಿತರಾಗುತ್ತಾರೆ.

ಸತ್ಯವಾದ ಖಿಲಾಫತ್ ಎಂಬ ಅನುಗ್ರಹೀತ ಆಧ್ಯಾತ್ಮಿಕ ವ್ಯವಸ್ಥೆಯ ಆವಶ್ಯಕತೆ, ಅದರ ಮಹತ್ವ ಅದರ ವೈಭವಪೂರ್ಣ ಉದ್ದೇಶ ಲಕ್ಷ್ಯಗಳು ಮೊದಲಾದವುಗಳ ಕುರಿತು ಪವಿತ್ರ ಖುರ್‌ಆನ್, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹದೀಸುಗಳು, ಹಝ್ರತ್ ಮಸೀಹ್ ಮೌಊದ್(ಸ) ಅವರ ಉಪದೇಶಗಳು ಮತ್ತು ಅಹ್ಮದಿಯಾ ಜಮಾಅತಿನ ವಿವಿಧ ಖಲೀಫರ ಜ್ಞಾನವರ್ಧಕ ಹೇಳಿಕೆಗಳನ್ನು ಈ ಕೆಳಗೆ ಕೊಡಲಾಗಿದೆ.

### ಖಿಲಾಫತ್ ವಾಗ್ದಾನ ಶರತ್ತಿಗೆ ಒಳಪಟ್ಟಿದೆ

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: "ನಿಮ್ಮ ಪೈಕಿ ವಿಶ್ವಾಸಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತ ವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವೆನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿಕೊಡುವನೆಂದೂ ಅವರ ಭಯ ಭೀತಿಯ ಬಳಿ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು." (24 : 56)

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಸತ್ಯ ವಿಶ್ವಾಸಿಗಳೂ ಸತ್ಕಾರ್ಯ ಮಾಡುವವರೂ ಆಗಿರುವವರಿಗೆ ಖಿಲಾಫತ್ ವಾಗ್ದಾನ ಮಾಡಿದ್ದಾನೆ. ಖಿಲಾಫತಿನ ಉದ್ದೇಶ ಲಕ್ಷ್ಯಗಳ ಬಗ್ಗೆ ಸಹ ವಿವರಿಸಲಾಗಿದೆ. ಖಿಲಾಫತ್ ವ್ಯವಸ್ಥೆಯ ದೀರ್ಘಕಾಲೀನ ಚರಿತ್ರೆಯನ್ನು ಅಧ್ಯಯನ ಮಾಡುವುದಾದರೆ ಮತ್ತು ಘಟನೆಗಳನ್ನು ಗಮನಿಸಿ ಪರಿಶೀಲಿಸುವುದಾದರೆ ಈ ವಚನದಲ್ಲಿ ವಿವರಿಸಲಾದ ಪ್ರತಿಯೊಂದು ಮಾತು ಬಹಳ ವೈಭವಪೂರ್ಣವಾಗಿ ಈಡೇರುತ್ತಾ ಇದೆ ಎಂದು ತಿಳಿಯುತ್ತದೆ. ಇದು ಪವಿತ್ರ ಖುರ್‌ಆನಿನ ಸತ್ಯತೆಗೆ ಸ್ಪಷ್ಟವಾದ ಸಾಕ್ಷ್ಯಾಧಾರವಾಗಿದೆ.

### ಖಿಲಾಫತ್ ಸ್ಥಾಪನೆಯ ಉದ್ದೇಶ ಸಮತೆ ಮತ್ತು ನ್ಯಾಯದ ಸ್ಥಾಪನೆ

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: (ನಾವು ಹೇಳಿದೆವು) ಓ ದಾವೂದ್, ನಾವು ನಿನ್ನನ್ನು ಭೂಮಿಯಲ್ಲಿ ಪ್ರತಿನಿಧಿಯನ್ನಾಗಿ (ಖಲೀಫನನ್ನಾಗಿ) ಮಾಡಿದ್ದೇವೆ. ಆದುದರಿಂದ ನೀನು ಜನರೆಡೆಯಲ್ಲಿ ನ್ಯಾಯಯುತವಾಗಿ ತೀರ್ಮಾನ ಮಾಡು. ನೀನು ಸ್ವೇಚ್ಛೆಯಿಂದ ವರ್ತಿಸಬಾರದು. (ಪವಿತ್ರ ಖುರ್‌ಆನ್ 38 : 27)

### ಹಝ್ರತ್ ಪೈಗಂಬರರ(ಸ) ಹೇಳಿಕೆ

"ಮಾ ಮಿನ್ ನುಬುವ್ವತಿನ್ ಖತ್ತು ಇಲ್ಲಾ ತಬಿಅತ್‌ಹಾ ಖಿಲಾಫತುನ್."
(ಕನ್‌ಝುಲ್ ಉಮ್ಮಾಲ್ ಪುಟ 109)

"ನುಬುವ್ವತ್ ನಂತರ ಖಿಲಾಫತ್ ಸ್ಥಾಪನೆಯಾಗದೆ ಇರುವುದಿಲ್ಲ."

ಪ್ರತಿಯೊಂದು ನುಬುವ್ವತಿನ ನಂತರ ಖಿಲಾಫತ್ ಸ್ಥಾಪಿತವಾಗುತ್ತದೆ ಎಂಬುದು ಒಂದು ಪ್ರಮಾಣಬದ್ಧ ನಿಯಮವಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಪ್ರವಾದಿಯ ಆಗಮನವಾಗದೆ ಖಿಲಾಫತ್ ಸ್ಥಾಪಿಸಲು ಸಾಧ್ಯವಾಗಲಾರದು. ಖಿಲಾಫತ್ ಎಂಬುದು ನುಬುವ್ವತಿಗೆ ಪೂರಕವಾಗಿದೆ. ಪ್ರವಾದಿಯ ಮೂಲಕ ಜನರ ಸುಧಾರಣೆಯ ಮಹತ್ವಪೂರ್ಣ ಕೆಲಸ ಪ್ರಾರಂಭಿಸಲ್ಪಡುತ್ತದೆ. ಅವರು ನಿಧನಹೊಂದಿದ ನಂತರ ಆ ಕೆಲಸವನ್ನು ಖಲೀಫರು ಮುಂದುವರಿಸುತ್ತಾರೆ.

### ಆಯಾ ಕಾಲದ ಇಮಾಮರಿಗೆ ಬೈಅತ್ ಆವಶ್ಯಕವಾಗಿದೆ

ಮುಹಮ್ಮದ್ ಪೈಗಂಬರ್(ಸ) ಹೇಳಿದರು:

"ಆಯಾ ಕಾಲದ ಇಮಾಮರಿಗೆ ಬೈಅತ್ ಮಾಡದೆ ಮೃತನಾಗುವವನು ಅಜ್ಞಾನದಲ್ಲಿ ಮೃತನಾದವನಂತೆ ಆಗುವನು." (ಮುಸ್ಲಿಮ್ – ಕಿತಾಬುಲ್ ಇಮಾರತ್)

## ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮಹತ್ವಪೂರ್ಣ ಭವಿಷ್ಯವಾಣಿ

"ಓ ಮುಸ್ಲಿಮರೇ, ನಿಮ್ಮಲ್ಲಿ ನುಬುವ್ವತ್ ಅಲ್ಲಾಹನು ಇಚ್ಛಿಸುವ ವರೆಗೆ ಇರುವುದು. ಅನಂತರ ಖಿಲಾಫತ್ ನುಬುವ್ವತ್ ಮಾರ್ಗದಲ್ಲಿ ಸ್ಥಾಪಿಸಲ್ಪಡುವುದು. ಸ್ವಲ್ಪ ಸಮಯದ ನಂತರ ಅದು ಕೊನೆಗೊಳ್ಳುವುದು. ಅನಂತರ ನಿರಂಕುಶಾಧಿಕಾರಿಗಳಾದ ದೊರೆಗಳ ಆಡಳಿತೆ ಜಾರಿಗೊಂಡು ಅಲ್ಲಾಹನು ಇಚ್ಛಿಸುವಾಗ ಅದನ್ನು ಎತ್ತಿ ಬಿಡುವನು. ಆಮೇಲೆ ದೌರ್ಜನ್ಯಗಾರರಾದ ದೊರೆಗಳು ಆಡಳಿತೆ ನಡೆಸುವರು. ಅಲ್ಲಾಹನು ಅದನ್ನೂ ಎತ್ತಿಬಿಡುವನು. ಕೊನೆಗೆ ಪುನಃ ನುಬುವ್ವತ್ ಮಾರ್ಗದಲ್ಲಿ ಖಿಲಾಫತನ್ನು ಅಲ್ಲಾಹನು ಸ್ಥಾಪಿಸುವನು."

ವರದಿಗಾರ ಹೀಗೆ ಹೇಳಿದ್ದಾರೆ:

ಅನಂತರ ಮುಹಮ್ಮದ್ ಪೈಗಂಬರ್[ಸ] ಮೌನವನ್ನು ಅವಲಂಬಿಸಿದರು.

## ಖಲೀಫ ಪದದ ಕುರಿತು ಪ್ರಶ್ನೆ

ಹಝ್ರತ್ ಮಸೀಹ್ ಮೌಊದ್[ಅ] ಓರ್ವ ಅರಬ್ ಸಹೋದರರ ಪ್ರಶ್ನೆಗೆ ಉತ್ತರವಾಗಿ ಹೀಗೆ ಹೇಳಿದರು:

"ಖಲೀಫ ಎಂದರೆ ಪ್ರವಾದಿಯ ನಂತರ ಧಾರ್ಮಿಕ ಪುನಶ್ಚೇತನ ಮಾಡುವ ಅವರ ಪ್ರತಿನಿಧಿ. ಪ್ರವಾದಿಗಳು ನಿಧನಹೊಂದಿದ ನಂತರ ವ್ಯಾಪಿಸುವ ಅಂಧಕಾರವನ್ನು ದೂರ ಸರಿಸಲು ಆಗಮಿಸುವ ಅವರನ್ನು ಖಲೀಫ ಎಂದು ಕರೆಯುತ್ತಾರೆ." (ಮಲ್‌ಫೂಝಾತ್ ಸಂಪುಟ 4 ಪುಟ 383)

ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು :

"ಸೂಫೀ ಪಂಡಿತರು ಹೀಗೆ ಹೇಳಿದ್ದಾರೆ: ಪ್ರವಾದಿಯ ನಂತರ ಖಲೀಫರಾಗುವವರ ಹೃದಯಕ್ಕೆ ಅಲ್ಲಾಹನು ಸತ್ಯವನ್ನು ಹಾಕುತ್ತಾನೆ. ಪ್ರವಾದಿ ಮೃತರಾಗುವಾಗ ಲೋಕದಲ್ಲಿ ಅಲ್ಲೋಲ ಕಲ್ಲೋಲದ ಪರಿಸ್ಥಿತಿ ಉಂಟಾಗುತ್ತದೆ. ಅದು ಅಪಾಯಕರ ಸಮಯವಾಗಿರುತ್ತದೆ. ಆದರೆ ಅಲ್ಲಾಹನು ಖಲೀಫರ ಮೂಲಕ ಆ ಸ್ಥಿತಿಯನ್ನು ಅಳಿಸಿಬಿಡುತ್ತಾನೆ. ಅನಂತರ ಖಲೀಫರ ಮೂಲಕ ಸುಧಾರಣೆ ಮತ್ತು ಸ್ಥಿರತೆ ಉಂಟಾಗುತ್ತದೆ." (ಮಲ್‌ಫೂಝಾತ್ ಸಂಪುಟ 4 ಪುಟ 384)

## ಅಲ್ಲಾಹನ ಅನುಗ್ರಹದ ಅವತರಣ

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು:

"ಅಲ್ಲಾಹನು ಸಂದೇಶವಾಹಕರ, ಪ್ರವಾದಿಗಳ, ಇಮಾಮರ, ವಲಿಗಳ ಮತ್ತು ಖಲೀಫರ ಮೂಲಕ ಅನುಗ್ರಹ ಸುರಿಸುತ್ತಾನೆ. ಅವರನ್ನು ಅನುಸರಿಸುವ ಮೂಲಕ ಜನರು ನೇರಮಾರ್ಗ ಪಡೆಯುತ್ತಾರೆ. ಅವರ ಮಾದರಿಯನ್ನು ಅನುಸರಿಸಿ ಜನರು ಮೋಕ್ಷ ಗಳಿಸುತ್ತಾರೆ. ನನ್ನ ಸಂತಾನ ಮೂಲಕ ಹೀಗೆ ಸಂಭವಿಸುವುದೆಂದು ಅಲ್ಲಾಹನು ಇಚ್ಛಿಸಿರುವನು." (ಸಬ್‌ಝ್ ಇಶ್ತಿಹಾರ್ ಪುಟ 16)

## ಧೈರ್ಯಶಾಲಿತ್ವ ಮತ್ತು ಬುದ್ಧಿಮತ್ತೆ

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು:

"ನಮ್ಮ ಪ್ರವಾದಿ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ನಿಧನ ಹೊಂದಿದ ನಂತರ ಬಹಳ ಅಪಾಯಕರ ಸ್ಥಿತಿ ಉಂಟಾಗಿತ್ತು. ಅರಬ್ ದೇಶದ ಅನೇಕ ಗೋತ್ರಗಳು ಧರ್ಮತ್ಯಾಗ ಮಾಡಿದುವು. ಕೆಲವು ಗೋತ್ರಗಳು ಝಕಾತ್ ಕೊಡುವುದನ್ನು ನಿರಾಕರಿಸಿದುವು. ಕೆಲವು ಸುಳ್ಳು ಪ್ರವಾದಿಗಳು ಎದ್ದು ನಿಂತರು. ಅಂತಹ ಕಾಲದಲ್ಲಿ ಬಲಿಷ್ಠ ಹೃದಯದ, ಸ್ಥಿರಚಿತ್ತತೆಯ, ದೃಢನಂಬಿಕೆಯ ಶೂರನಾದ ಒಬ್ಬ ಖಲೀಫರ ಆವಶ್ಯಕತೆ ಇತ್ತು. ಹಝ್ರತ್ ಅಬೂಬಕರ್[ರ] ಖಲೀಫರಾಗಿ ನೇಮಕ ಹೊಂದಿದರು. ಅವರು ಖಲೀಫರಾದಾಗ ಅನೇಕ ದುಃಖಗಳನ್ನು ಅನುಭವಿಸಬೇಕಾಯಿತು. ಆ ಬಗ್ಗೆ ಅವರ ಪುತ್ರಿ ಹಝ್ರತ್ ಆಯಿಶಾ[ರ] ಹೀಗೆ ಹೇಳುತ್ತಾರೆ: 'ನನ್ನ ಪಿತರನ್ನು ಖಲೀಫರನ್ನಾಗಿ ಮಾಡಿದಾಗ ಅರಬ್ ದೇಶದ ಗೋತ್ರಗಳ ವಿದ್ರೋಹ, ಸುಳ್ಳು ಪ್ರವಾದಿಗಳ ಬಂಡಾಯ ಮೊದಲಾದವುಗಳ ಮೂಲಕ ಎಂತಹ ಸಂಕಷ್ಟಗಳು ಬಂದೆರಗಿದುವು ಎಂದರೆ ಅಂತಹ ಸಂಕಷ್ಟಗಳು ಒಂದು ಪರ್ವತದ ಮೇಲೆ ಬಂದೆರಗುತ್ತಿದ್ದರೆ ಅದು ಪುಡಿ ಪುಡಿಯಾಗುತ್ತಿತ್ತು ಮತ್ತು ನೆಲಕ್ಕೆ ಸಮವಾಗುತ್ತಿತ್ತು.'

"ಅಲ್ಲಾಹನು ಪ್ರವಾದಿಯ ನಿಧನದ ನಂತರ ಒಬ್ಬರನ್ನು ಖಲೀಫ ಆಗಿ ನೇಮಿಸಿದರೆ ಶೂರತನ, ಧೈರ್ಯ, ಸ್ಥಿರತೆ, ಬುದ್ಧಿಶಾಲಿತ್ವ ಮತ್ತು ಹೃದಯದಾರ್ಢ್ಯದ ಆತ್ಮವನ್ನು ಅವರೊಳಗೆ ಊದುತ್ತಾನೆ." (ತುಹ್‌ಫಯೇ ಗೋಲ್ಡವಿಯಾ ಪುಟ 185)

## ಶಾಶ್ವತ ಅಹ್ಮದಿಯಾ ಖಿಲಾಫತ್ ಬಗ್ಗೆ ವಾಗ್ದಾನ

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು:

"ಅಲ್ಲಾಹನು ಹೀಗೆ ಹೇಳಿದ್ದಾನೆ: 'ನಿನ್ನ ಅನುಯಾಯಿಗಳ ಜಮಾಅತನ್ನು ಪುನರುತ್ಥಾನದ ದಿನದ ತನಕ ಅನ್ಯರ ಮೇಲೆ ಜಯಗಳಿಸುವಂತೆ ಮಾಡುವೆನು.' ನಾನು ನಿಮ್ಮಿಂದ ಅಗಲಿ ಹೋಗುವ ದಿನ ಬರುವುದು ಆವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ಕಾಲ ಬರುವುದು. ನಮ್ಮ ದೇವನು ಸತ್ಯ ವಾಗ್ದಾನ ಮಾಡುವವನೂ ಸತ್ಯವಂತನೂ ಆಗಿದ್ದಾನೆ. ಅವನು ವಾಗ್ದಾನ ಮಾಡಿದುದನ್ನು ನಿಮಗೆ ತೋರಿಸುವನು. ಈ ಕಾಲ ಲೋಕದ ಕೊನೆಯ ಕಾಲ ಘಟ್ಟವಾಗಿದೆ. ಅನೇಕ ವಿಪತ್ತುಗಳು ಬಂದೆರಗಲಿವೆ. ಆದರೆ ಅಲ್ಲಾಹನು ಮಾಡಿದ ವಾಗ್ದಾನಗಳು ಈಡೇರುವ ತನಕ ಈ ಲೋಕ ಬಾಕಿಯಾಗಿ ಉಳಿಯುವುದು." (ಅಲ್‌ವಸಿಯ್ಯತ್ ಪುಟ 9-10)

## ಪರಿಶುದ್ಧ ಸಂತಾನದ ಬಗ್ಗೆ ಶುಭವಾರ್ತೆ

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು:

"ಅಲ್ಲಾಹನು ನನಗೆ ತಿಳಿಸಿರುವನು: ನಾನು ನಿನ್ನ ಜಮಾಅತ್‌ಗಾಗಿ ನಿನ್ನ ಸಂತಾನದಿಂದ ಒಬ್ಬನನ್ನು ನಿಲ್ಲಿಸುವೆನು. ಆತನಿಗೆ ನನ್ನ ಸಾಮೀಪ್ಯ ಮತ್ತು ಸಂದೇಶ ನೀಡುವೆನು. ಆತನ ಮೂಲಕ ಸತ್ಯವು ಅಭಿವೃದ್ಧಿಗಳಿಸುವುದು. ಬಹಳ ಜನರು ಸತ್ಯವನ್ನು ಅಂಗೀಕರಿಸುವರು. ಆದುದರಿಂದ ಆ ದಿನಗಳನ್ನು ನಿರೀಕ್ಷಿಸುತ್ತಾ ಇರಬೇಕು. ನಿಮಗೆ ನೆನಪಿರಲಿ, ಪ್ರತಿಯೊಬ್ಬನು ಆತನಿಗೆ ನಿಗದಿತ ಕಾಲದಲ್ಲಿ ಗುರುತಿಸಲ್ಪಡುತ್ತಾನೆ. ಅದಕ್ಕೆ ಮೊದಲು ಆತನು ಸಾಮಾನ್ಯವಾಗಿ ಕಾಣಿಸಿಕೊಳ್ಳಬಹುದು ಅಥವಾ ಮೋಸಗೊಳಿಸುವ ಕೆಲವು ಯೋಚನೆಗಳ ಕಾರಣದಿಂದ ಆಕ್ಷೇಪಾರ್ಹನೂ ಆಗಬಹುದು." (ಅಲ್‌ವಸಿಯ್ಯತ್ ಪುಟ 8)

## ಖಿಲಾಫತ್‌ಗಿರುವ ಇನ್ನೊಂದು ಹೆಸರು ದ್ವಿತೀಯ ದಿವ್ಯಶಕ್ತಿ

"ಅಲ್ಲಾಹನು ಎರಡು ವಿಧ ದಿವ್ಯಶಕ್ತಿಗಳನ್ನು ಪ್ರಕಟಿಸುತ್ತಾನೆ. ಮೊದಲನೆಯದಾಗಿ, ಪ್ರವಾದಿಗಳ ಮೂಲಕ ತನ್ನ ದಿವ್ಯಶಕ್ತಿಯನ್ನು ತೋರಿಸುತ್ತಾನೆ. ಎರಡನೆಯದಾಗಿ, ಪ್ರವಾದಿಯ ಮರಣದ ನಂತರ ಅನೇಕ ಕಷ್ಟಗಳನ್ನು ಎದುರಿಸಬೇಕಾಗಿ ಬಂದಾಗ ಶತ್ರುಗಳು ತೀವ್ರ ಆಕ್ರಮಣ ಮಾಡುತ್ತಾರೆ. ಅವರು ಯೋಚಿಸುತ್ತಾರೆ: ಈಗ ಜಮಾಅತ್ ಬಿಗಡಾಯಿಸುವುದು. ಈ ಜಮಾಅತ್ ನಾಶವಾಗುವುದೆಂದು ದೃಢ ನಂಬಿಕೆ ಹೊಂದುತ್ತಾರೆ. ಜಮಾಅತ್‌ನ ಜನರು ಸಹ ಸಂಶಯಪೀಡಿತ

ರಾಗುತ್ತಾರೆ. ಅವರು ಧೈರ್ಯ ಕಳೆದುಕೊಳ್ಳುತ್ತಾರೆ. ಅನೇಕ ದುರದೃಷ್ಟಶಾಲಿಗಳು ಧರ್ಮತ್ಯಾಗ ಮಾಡುತ್ತಾರೆ. ಆಗ ಅಲ್ಲಾಹನು ತನ್ನ ಎರಡನೆಯ ಬಲಿಷ್ಠ ದಿವ್ಯಶಕ್ತಿಯನ್ನು ಪ್ರಕಟಿಸುತ್ತಾನೆ ಮತ್ತು ಕುಸಿದು ಬೀಳುತ್ತಿರುವ ಜಮಾಅತನ್ನು ಎತ್ತಿಹಿಡಿಯುತ್ತಾನೆ. ಯಾರು ಕೊನೆಯ ತನಕ ಸಹನೆದೋರುತ್ತಾನೋ ಅವನು ಆ ಪವಾಡವನ್ನು ನೋಡುತ್ತಾನೆ. ಹಝ್ರತ್ ಅಬೂಬಕರ್[ರ] ಅವರ ಕಾಲದಲ್ಲಿ ಹೀಗೆಯೇ ಸಂಭವಿಸಿತು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಅಕಾಲಿಕವಾಗಿ ನಿಧನಹೊಂದಿದರೆಂದು ಭಾವಿಸಲಾಯಿತು. ಅನೇಕ ಗ್ರಾಮೀಣ ಅರಬಿಗಳು ಧರ್ಮತ್ಯಾಗ ಮಾಡಿದರು. ಪೈಗಂಬರ್ ಶಿಷ್ಯರು ದುಃಖದಿಂದ ಹುಚ್ಚರಂತೆ ಆದರು. ಆಗ ಅಲ್ಲಾಹನು ಹಝ್ರತ್ ಅಬೂಬಕರ್[ರ] ಅವರನ್ನು ನಿಲ್ಲಿಸಿ ಪುನಃ ತನ್ನ ದಿವ್ಯ ಶಕ್ತಿಯನ್ನು ಪ್ರಕಟಿಸಿದನು. ಇಸ್ಲಾಮನ್ನು ನಾಶದಿಂದ ರಕ್ಷಿಸಿದನು. 'ಭಯದ ನಂತರ ನಾವು ಅವರ ಹೆಜ್ಜೆಗಳನ್ನು ಪುನಃ ಸ್ಥಿರ ಪಡಿಸುವೆವು.' ಎಂದು ಅಲ್ಲಾಹನು ತಾನು ಮಾಡಿದ ವಾಗ್ದಾನವನ್ನು ಈಡೇರಿಸಿದನು. ಪ್ರಿಯರೇ, ಅಲ್ಲಾಹನು ಪುರಾತನ ಕಾಲದಿಂದ ಎರಡು ದಿವ್ಯಶಕ್ತಿಗಳನ್ನು ಪ್ರಕಟಿಸಿ ಶತ್ರುಗಳ ಮಿಥ್ಯ ಸಂತೋಷವನ್ನು ನಿರರ್ಥಕಗೊಳಿಸುತ್ತಾನೆ. ಈಗ ಅಲ್ಲಾಹನು ತನ್ನ ಪುರಾತನ ನಡೆವಳಿಕೆಯನ್ನು ತ್ಯಜಿಸುವುದು ಅಸಂಭಾವ್ಯವಾಗಿದೆ. ಆದುದರಿಂದ ನಾನು ಹೇಳಿದ ಮಾತುಗಳ ಕಾರಣದಿಂದ ನೀವು ಶೋಕತಪ್ತರಾಗ ಬೇಡಿರಿ. ನೀವು ಗಾಬರಿಗೊಳ್ಳಬೇಡಿರಿ. ನೀವು ಎರಡನೆಯ ದಿವ್ಯಶಕ್ತಿ ಯನ್ನು ನೋಡುವುದು ಅತ್ಯಾವಶ್ಯಕವಾಗಿದೆ. ಅದು ಬರುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿರುವುದು. ಅದರ ಸರಪಳಿ ಪುನರುತ್ಥಾನದ ದಿನದ ತನಕ ಮುರಿದು ಹೋಗಲಾರದು. ನಾನು ನಿಮ್ಮಿಂದ ಅಗಲಿ ಹೋಗುವ ತನಕ ಆ ಎರಡನೆಯ ದಿವ್ಯಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮಿಂದ ಅಗಲಿ ಹೋದಾಗ ಅಲ್ಲಾಹನು ತನ್ನ ಎರಡನೆಯ ದಿವ್ಯಶಕ್ತಿಯನ್ನು ನಿಮಗೆ ಕಳುಹಿಸಿ ಕೊಡುವನು. ಅದು ನಿಮ್ಮೊಂದಿಗೆ ಯಾವಾಗಲೂ ಇರುವುದು. ಬರಾಹೀನೆ ಅಹ್ಮದಿಯ್ಯದಲ್ಲಿ ಇದರ ಬಗ್ಗೆ ವಾಗ್ದಾನವಿದೆ." (ಅಲ್‌ವಸಿಯ್ಯತ್ ಪುಟ 5-7)

### ಮೂಸವೀ ಸಮುದಾಯ ಮತ್ತು ಮುಹಮ್ಮದೀ ಸಮುದಾಯದ ಮಧ್ಯೆ ಹೋಲಿಕೆ

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ:

"ಸತ್ಕಾರ್ಯಗಳನ್ನು ಮಾಡುವ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ವಾಗ್ದಾನ ಮಾಡಿದ್ದಾನೆ – ಹಿಂದಿನ ಸಮುದಾಯದಲ್ಲಿ ಖಲೀಫರನ್ನು ಮಾಡಿದ ಹಾಗೆ ಅವರನ್ನೂ ಖಲೀಫರನ್ನಾಗಿ ಮಾಡುವನೆಂದು. ಹಝ್ರತ್ ಮೂಸಾ[ಅ] ಅವರ ನಂತರ ಖಿಲಾಫತ್ ಸ್ಥಾಪಿತವಾದ ಹಾಗೆ ಈ ಸಮುದಾಯದಲ್ಲಿಯೂ ಖಿಲಾಫತ್ ಸ್ಥಾಪಿತವಾಗುವು ದೆಂದು. ಅಲ್ಲಾಹನು ಇಷ್ಟಪಟ್ಟ ಇಸ್ಲಾಮ್ ಧರ್ಮವನ್ನು ಭೂಮಿಯಲ್ಲಿ ಸ್ಥಿರವಾಗಿ ಸ್ಥಾಪಿಸುವನು. ಭಯದ ಸ್ಥಿತಿಯನ್ನು ಶಾಂತಿಯ ಸ್ಥಿತಿಗೆ ಬದಲಾಯಿಸುವನು. ಅವರು ಅಲ್ಲಾಹನನ್ನೇ ಆರಾಧಿಸಬೇಕು. ಬೇರೆ ಯಾರನ್ನೂ ಕರೆದು ಪ್ರಾರ್ಥಿಸಬಾರದು. ಪವಿತ್ರ ಖುರ್‌ಆನಿನ ಈ ವಚನದಲ್ಲಿ ಭಯದ ಕಾಲ ಬರುವ ಬಗ್ಗೆ ಹೇಳಿದೆ. ಆದರೆ ಅಲ್ಲಾಹನು ಭಯದ ಕಾಲವನ್ನು ಬದಲಾಯಿಸಿ ಶಾಂತಿಯನ್ನು ಸ್ಥಾಪಿಸುವನು." (ತುಹ್‌ಫಯೆ ಗೋಲ್ಡವಿಯಾ – ಪುಟ 103)

### ಅಹ್ಮದಿಯಾ ಖಲೀಫರ ಉಪದೇಶಗಳು

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ:

"ಅಲ್ಲಾಹನು ಯಾವ ಕೆಲಸಕ್ಕಾಗಿ ನನ್ನನ್ನು ನೇಮಿಸಿರುವನೋ ಅದರ ಬಗ್ಗೆ ನಾನು ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ: ನಾನು ಈಗ ಈ ಅಂಗಿಯನ್ನು ಖಂಡಿತವಾಗಿಯೂ ಕಳಚಿ ಹಾಕಲಾರೆನು. ಲೋಕದ ಎಲ್ಲರೂ ಮತ್ತು ನೀವು ಸಹ ನನ್ನನ್ನು ವಿರೋಧಿಸಿದರೂ ನಾನು ನಿಮ್ಮನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತೇನೆ ಮತ್ತು ಮುಂದೆ ಸಹ ನಿರ್ಲಕ್ಷಿಸುವೆನು. ಅಲ್ಲಾಹನು ನೇಮಿಸಿದ ಅವನ ದೂತನಿಗೆ ವಾಗ್ದಾನ ಮಾಡಲಾಗಿದೆ. ಅವನು ಎಂದೂ ಈ ಜಮಾಅತನ್ನು ನಾಶಮಾಡಲಾರನು. ಅಲ್ಲಾಹನ ದಿವ್ಯಶಕ್ತಿಗಳು ಬಹಳ ವಿಚಿತ್ರವಾಗಿವೆ. ಅವನ ದೃಷ್ಟಿ ಬಹಳ ವಿಶಾಲ ವಾಗಿದೆ. ನೀವು ಮಾಡಿದ ಪ್ರತಿಜ್ಞೆಯನ್ನು ಈಡೇರಿಸಿರಿ. ಆಗ ನೀವು ನೋಡುವಿರಿ, ನೀವು ಎಷ್ಟು ಅಭಿವೃದ್ಧಿಗಳಿಸುತ್ತೀರಿ ಮತ್ತು ಹೇಗೆ ಜಯಶಾಲಿಗಳಾಗುತ್ತೀರಿ ಎಂದು." (ಖುತ್‌ಬಾತೆ ನೂರ್ ಪುಟ 419)

"ಇದೊಂದು ಬಹಳ ದೊಡ್ಡ ಭಾರವಾಗಿದೆ. ಇದು ಅಪಾಯಕರ ವಾದ ಭಾರವಾಗಿದೆ. ಇದನ್ನು ಹೊರುವುದು ದೇವನಿಂದ ನೇಮಿಸಲ್ಪಟ್ಟವನ ಕೆಲಸವಾಗಿದೆ. ಅಂತಹ ವ್ಯಕ್ತಿಗೆ ಅಲ್ಲಾಹನು ಅನೇಕ ಆಶ್ಚರ್ಯಕರ ವಾಗ್ದಾನಗಳನ್ನು ಮಾಡುತ್ತಾನೆ. ಬೆನ್ನನ್ನು ಮುರಿದುಹಾಕಬಲ್ಲ ದುಃಖ ಗಳನ್ನು ಸಹಿಸಲು ಅದೊಂದು ಆಸರೆಯ ಬೆತ್ತವಾಗುತ್ತದೆ." (ಅಲ್‌ಹಕಮ್ 06-06-1908)

"ನಿಮ್ಮ ಒಲವು ಯಾವ ಕಡೆಗೆ ಇದ್ದರೂ ನೀವು ನನ್ನ ಆಜ್ಞೆಗಳನ್ನು ಪಾಲಿಸಬೇಕು. ಇದನ್ನು ನೀವು ಸಮ್ಮತಿಸುವುದಾದರೆ ನಾನು ಮನಸ್ಸಿಲ್ಲದ ಮನಸ್ಸಿನಿಂದ ಈ ಭಾರ ಹೊರುತ್ತೇನೆ. ಬೈಅತಿನ ಹತ್ತು ಶರತ್ತುಗಳು ಮೊದಲಿದ್ದ ಹಾಗೆಯೇ ಇವೆ. ಅದರೊಂದಿಗೆ ಪವಿತ್ರ ಖುರ್‌ಆನನ್ನು ಕಲಿಯುವುದು, ಝಕಾತ್ ವ್ಯವಸ್ಥೆ ರೂಪಿಸುವುದು, ಪ್ರಚಾರಕರನ್ನು ನೇಮಿಸುವುದು ಮತ್ತು ನನ್ನ ಮನಸ್ಸಿನಲ್ಲಿ ಆಗಾಗ ಉಂಟಾಗುವ ಯೋಚನೆಗಳ ಪ್ರಕಾರ ಕಾರ್ಯಕ್ರಮ ರೂಪಿಸುವುದನ್ನು ಅವುಗಳೊಂದಿಗೆ ಸೇರಿಸುತ್ತೇನೆ. ಧಾರ್ಮಿಕ ಶಿಕ್ಷಣ ವ್ಯವಸ್ಥೆ, ಮದ್ರಸದ ವಿದ್ಯಾಭ್ಯಾಸ ವ್ಯವಸ್ಥೆ ನನ್ನ ಅಭಿಪ್ರಾಯ ಪ್ರಕಾರ ರೂಪಿಸಲಾಗುವುದು. ನಾನು ಈ ಭಾರವನ್ನು ಅಲ್ಲಾಹನಿಗಾಗಿ ಹೊರುತ್ತೇನೆ. ಅವನು ಹೇಳಿರುವನು: ನಿಮ್ಮ ಪೈಕಿ ಕೆಲವರು ಒಳಿತಿನ ಕಡೆಗೆ ಕರೆ ನೀಡುವವರಾಗಬೇಕು. ನೀವು ನೆನಪಿಡಿರಿ ಎಲ್ಲಾ ಒಳಿತುಗಳು ಐಕ್ಯತೆಯಲ್ಲಿದೆ. ಯಾವ ಸಮುದಾಯಕ್ಕೆ ನಾಯಕನಿಲ್ಲವೋ ಅದು ಮೃತಸಮಾನವಾಗಿದೆ." (ಅಲ್ ಹಕಮ್ 06-06-1908)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ [ಅಲ್ ಮುಸ್ಲಿಹ್ ಮೌಊದ್[ರ]] ಹೇಳುತ್ತಾರೆ:

"ಅಲ್ಲಾಹನು ತನ್ನ ಅನುಗ್ರಹದಿಂದ ಮುಸ್ಲಿಮರನ್ನು ಪುನರುಜ್ಜೀವಿಸುವಂತೆ ಮಾಡಲು ಹಝ್ರತ್ ಮಸೀಹ್ ಮೌಊದ್[ಅ] ಮೂಲಕ ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತನ್ನು ಸ್ಥಾಪಿಸಿರುವನು. ಆದುದರಿಂದ ನಾನು ನನ್ನ ಜಮಾಅತಿನೊಂದಿಗೆ ಹೀಗೆ ಹೇಳಲು ಇಚ್ಛಿಸುತ್ತೇನೆ: ನೀವು ಯಾವಾಗಲೂ ಖಿಲಾಫತ್‌ನೊಂದಿಗೆ ನಿಮ್ಮ ಸಂಬಂಧವನ್ನು ಜೋಡಿಸಿಡಿರಿ. ಖಿಲಾಫತ್‌ಗಾಗಿ ತ್ಯಾಗಗಳನ್ನು ಮಾಡುತ್ತಾ ಇರಬೇಕು. ನೀವು ಹೀಗೆ ಮಾಡುವಿರಾದರೆ ಖಿಲಾಫತ್ ನಿಮ್ಮಲ್ಲಿ ಯಾವಾಗಲೂ ಇರುವುದು. ಅಲ್ಲಾಹನು ನಿಮಗೆ ಖಿಲಾಫತ್ ನೀಡಿದುದು ಹೀಗೆ ಹೇಳಲಿಕ್ಕಾಗಿದೆ: ನಾನು ಖಿಲಾಫತನ್ನು ನಿಮಗೆ ನೀಡಿದೆನು. ನೀವು ಇಚ್ಛಿಸುವುದಾದರೆ ಇದು ನಿಮ್ಮ ಬಳಿ ಸ್ಥಿರವಾಗಿ ಇರುವುದು. ಅಲ್ಲಾಹನು ಇಚ್ಛಿಸುತ್ತಿದ್ದರೆ ಅವನು ಖಿಲಾಫತನ್ನು ತನ್ನ ಇಲ್‌ಹಾಮ್ (ಸಂದೇಶ ವಾಣಿ) ಮೂಲಕ ಸ್ಥಾಪಿಸಬಹುದಾಗಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ. ಅವನು ಹೇಳಿದನು: ನೀವು ಖಿಲಾಫತನ್ನು ಸ್ಥಾಪಿಸಲು

ಬಯಸುವುದಾದರೆ ನಾನು ಅದನ್ನು ಸಂರಕ್ಷಿಸುವೆನು. ಅಲ್ಲಾಹನು ನಿಮ್ಮ ಬಾಯಿಗಳಿಂದ ಹೇಳಿಕೆ ಆವಶ್ಯಪಡುತ್ತಾನೆ – ನೀವು ಖಿಲಾಫತ್ ಬಯಸುತ್ತೀರೋ ಇಲ್ಲವೋ ಎಂದು. ನೀವು ನಿಮ್ಮ ಬಾಯಿಯನ್ನು ಮುಚ್ಚಿದರೆ ಅಥವಾ ಖಿಲಾಫತ್ ಚುನಾವಣೆ ಸಂದರ್ಭದಲ್ಲಿ ಯೋಗ್ಯತೆಯನ್ನು ಪರಿಗಣಿಸದಿದ್ದರೆ ನೀವು ಈ ಅನುಗ್ರಹವನ್ನು ಕಳೆದುಕೊಳ್ಳುವಿರಿ. ನೀವು ಮುಸ್ಲಿಮರ ನಾಶದ ಕಾರಣಗಳ ಬಗ್ಗೆ ಚಿಂತಿಸಿರಿ. ನೀವು ನಿಮ್ಮನ್ನು ಮೃತ್ಯುವಿಗೆ ಗುರಿಪಡಿಸುವುದರಿಂದ ರಕ್ಷಿಸಿಕೊಳ್ಳಿರಿ. ನಿಮ್ಮ ವಿವೇಕ ಹರಿತಗೊಳ್ಳ ಬೇಕು. ನದಿಯ ದಿಕ್ಕನ್ನು ಬದಲಾಯಿಸುವಂತಹ ಹೆಬ್ಬಂಡೆ ನೀವಾಗಬೇಡಿರಿ. ನೀರು ಸುಲಭವಾಗಿ ಹರಿದು ಹೋಗುವಂತಹ ಕಾಲುವೆ ನೀವು ಆಗಿರಿ. ನೀವು ಒಂದು ಸುರಂಗವಾಗಿದ್ದೀರಿ. ಅದರ ಕೆಲಸ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮುಖಾಂತರ ಗಳಿಸಿದ ಅನುಗ್ರಹವನ್ನು ಮುಂದೆ ಸಾಗಿಸುತ್ತಾ ಇರುವುದಾಗಿದೆ. ನೀವು ಹೀಗೆ ಮಾಡುವುದರಲ್ಲಿ ಜಯಶೀಲರಾದರೆ ನೀವು ಎಂತಹ ಸಮುದಾಯವಾಗಬಲ್ಲಿರಿ ಎಂದರೆ ಅದು ಎಂದೂ ಮೃತವಾಗಲಾರದು. ನೀವು ಅಲ್ಲಾಹನ ಅನುಗ್ರಹದ ಮಾರ್ಗದಲ್ಲಿ ತಡೆಯೊಡ್ಡುವವರಾದರೆ, ಅದರ ಮಾರ್ಗದಲ್ಲಿ ಬಂಡೆಗಲ್ಲಾಗಿ ನಿಲ್ಲುವವರಾದರೆ ನಿಮ್ಮ ಸಮುದಾಯದ ನಾಶದ ಸಮಯ ಅದಾಗುವುದು. ಅನಂತರ ನಿಮ್ಮ ಆಯಸ್ಸು ಎಂದೂ ದೀರ್ಘವಾಗಲಾರದು. ಹಿಂದಿನ ಸಮುದಾಯಗಳು ಸತ್ತುಹೋದ ಹಾಗೆ ನೀವು ಸಹ ಸಾಯುವಿರಿ."

(ತಫ್‌ಸೀರ್ ಸೂರತುನ್ನಮ್ಲ್ – ತಫ್‌ಸೀರ್ ಕಬೀರ್ ಸಂಪುಟ 7 ಪುಟ 429-430)

"ನೀವು ನೆನಪಿಡಿರಿ : ನಿಮ್ಮ ಅಭಿವೃದ್ಧಿ ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿದೆ. ನೀವು ಅದನ್ನು ಮನವರಿಕೆ ಮಾಡದೆ ಅದನ್ನು ಸ್ಥಿರವಾಗಿ ಸ್ಥಾಪಿಸದೆ ನಿರ್ಲಕ್ಷಿಸಿದರೆ ಅದು ನಿಮ್ಮ ನಾಶಕ್ಕೆ ಕಾರಣ ವಾಗುವುದು. ನೀವು ಅದರ ಆವಶ್ಯಕತೆಯನ್ನು ಮನವರಿಕೆ ಮಾಡಿ ಅದನ್ನು ಸ್ಥಿರವಾಗಿ ಕಾಪಾಡಿದರೆ ಲೋಕದ ಎಲ್ಲಾ ಜನರು ನಿಮ್ಮನ್ನು ನಾಶಮಾಡಲು ಪ್ರಯತ್ನಿಸಿದರೂ ಅವರಿಗೆ ಅದು ಸಾಧ್ಯವಾಗಲಾರದು. ಅವರು ನಿಮ್ಮನ್ನು ವಿರೋಧಿಸಿ ಪರಾಜಿತರಾಗುವರು." (ಹಖಾಯಿಖುಲ್ ಖುರ್‌ಆನ್ 1921 – ಪುಟ 73)

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ (ರಹಿಮಹುಲ್ಲಾಹು) ಹೀಗೆ ಹೇಳುತ್ತಾರೆ:

"ಆಯಾ ಕಾಲದ ಖಲೀಫ ಲೋಕದ ಅಧ್ಯಾಪಕರು ಆಗಿರುವರೋ? ಇದು ನಿಶ್ಚಯವಾಗಿಯೂ ಸತ್ಯವಾಗಿದೆ. ಲೋಕದ ವಿದ್ವಾಂಸರು, ಲೋಕದ ದಾರ್ಶನಿಕರು ಅವರ ಮುಂದೆ ವಿದ್ಯಾರ್ಥಿಯ ಹಾಗೆಯೇ ಬರಬೇಕಾಗಿದೆ. ಆ ಜನರು ಖಲೀಫರ ಅಧ್ಯಾಪಕರಾಗಿ ಬರಲಾರರು... ನಾನು ನಿಮಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಯಾರನ್ನು ಅಲ್ಲಾಹನು ನಿಮ್ಮ ಖಲೀಫರನ್ನಾಗಿ ಮಾಡುವನೋ ಅವರ ಹೃದಯದಲ್ಲಿ ನಿಮಗಾಗಿ ಅಪರಿಮಿತವಾದ ಪ್ರೀತಿಯನ್ನು ಉಂಟುಮಾಡುವನು. ಅವರು ನಿಮಗಾಗಿ ಪ್ರಾರ್ಥಿಸುವ ಹಾಗೆ ಅಲ್ಲಾಹನು ಮಾಡುವನು. ಖಲೀಫ ನಿಮಗಾಗಿ ಎಷ್ಟು ಹೆಚ್ಚು ಹೆಚ್ಚಾಗಿ ಪ್ರಾರ್ಥಿಸುವರೆಂದರೆ ಪ್ರಾರ್ಥಿಸುವ ತಂದೆ ತಾಯಂದಿರು ನಿಮಗಾಗಿ ಅಷ್ಟು ಪ್ರಾರ್ಥಿಸಿರಲಾರರು. ನಿಮ್ಮ ಕಷ್ಟಗಳನ್ನು ಹೋಗಲಾಡಿಸಲು ಖಲೀಫ ಸ್ವತಃ ಕಷ್ಟವನ್ನು ಅನುಭವಿಸುವಂತೆ ಮತ್ತು ಸಹಿಸುವಂತೆ ಅಲ್ಲಾಹನು ಮಾಡುವನು. ಸಂತೋಷದಿಂದ, ಯಾವುದೇ ಸಹಾಯ ಮಾಡಿದ ಪ್ರಸ್ತಾಪಮಾಡದೆ ಅವರು ಕಷ್ಟ ವನ್ನು ನಿಮಗಾಗಿ ಸಹಿಸುವರು. ಖಲೀಫ ದೇವರ ನೌಕರ ಆಗಿರುತ್ತಾರೆ. ಅವರು ನಿಮ್ಮ ನೌಕರ ಅಲ್ಲ. ಅಲ್ಲಾಹನ ಕೆಲಸಗಾರ ಅಲ್ಲಾಹನ ತೃಪ್ತಿಗಳಿಸ ಲಿಕ್ಕಾಗಿಯೇ ಕೆಲಸ ಮಾಡುತ್ತಾನೆ. ಅವನು ಯಾರಿಗಾದರೂ ಉಪಕಾರ ಸ್ಮರಣೆಗಾಗಿ ಕೆಲಸಮಾಡುವುದಿಲ್ಲ." (ಅಲ್‌ಫಝ್ಲ್ 21-2-1966)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು)ಹೇಳುತ್ತಾರೆ:

"ಈ ಜವಾಬ್ದಾರಿ ಎಷ್ಟು ಕಠಿಣವಾಗಿದೆ, ಎಷ್ಟು ವಿಶಾಲವಾಗಿದೆ, ಹೃದಯವನ್ನು ಎಷ್ಟು ಅಲುಗಾಡಿಸುವಂತಹದ್ದು ಎಂದರೆ ಹಝ್ರತ್ ಉಮರ್(ರ) ಅವರು ಮರಣಾ ಸನ್ನದ್ಧರಾದಾಗ ತನ್ನ ಕೊನೆಯ ಶ್ವಾಸದ ಮೊದಲು ಹೇಳಿದ ಮಾತು ನೆನಪಿಗೆ ಬರುತ್ತದೆ. ಅಲ್ಲಾಹುಮ್ಮ ಲಾ ಲೀ ವಲಾ ಅಲೈಯ್ಯ ಎಂದು ಅವರು ಹೇಳಿದರು.

"ಅಲ್ಲಾಹನೇ ಖಲೀಫರನ್ನು ಮಾಡುತ್ತಾನೆ ಎನ್ನುವುದು ಸತ್ಯವೇ ಆಗಿದೆ. ನನ್ನ ವಿಶ್ವಾಸ ಇದೇ ಆಗಿದೆ. ನಾನು ಮೃತನಾಗುವ ತನಕ ಅಲ್ಲಾಹನು ಅನುಗ್ರಹಿಸಿದರೆ ಇದೇ ವಿಶ್ವಾಸವನ್ನು ಹೊಂದುವೆನು. ಖಲೀಫರ ನೇಮಕದಲ್ಲಿ ಮನುಷ್ಯ ಶಕ್ತಿಯ ಹಸ್ತಕ್ಷೇಪವಿಲ್ಲ. ಆದುದರಿಂದ ಖಲೀಫ ಎಂಬ ಪದವಿ ಪಡೆದ ನಾನು ನಿಮ್ಮ ಮುಂದೆ ಅಥವಾ ಬೇರೆ ಯಾರ ಮುಂದೆಯಾದರೂ ಪ್ರಶ್ನಿಸಲ್ಪಡಲಾರೆನು. ಆದರೆ ನಾನು ಸ್ವತಂತ್ರನಲ್ಲ. ನನ್ನ ಪ್ರಭುವಾದ ಅಲ್ಲಾಹನ ಮುಂದೆ ಪ್ರಶ್ನಿಸಲ್ಪಡುವೆನು. ನೀವು ನನ್ನ ತಪ್ಪುಗಳನ್ನು ತಿಳಿಯದವರಾಗಿರಬಹುದು. ನಿಮ್ಮ ದೃಷ್ಟಿ ನನ್ನ ಹೃದಯದ ಮೇಲೆ ಇಲ್ಲ. ಸಾಕ್ಷಿಯೂ ಅದೃಶ್ಯನೂ ಆಗಿರುವ ಅಲ್ಲಾಹನ ಬಗ್ಗೆ ಹೆಚ್ಚು ನೀವು ಜ್ಞಾನವನ್ನು ಹೊಂದಿರಬಹುದು. ಆದರೆ ನನ್ನ ಪ್ರಭು ನನ್ನ ಹೃದಯದ ಪಾತಾಳದ ತನಕ ನೋಡುತ್ತಾನೆ. ಸುಳ್ಳು ನೆವನಗಳನ್ನು ಅವನು ಅಂಗೀಕರಿಸಲಾರನು. ನಾನು ಪ್ರಾಮಾಣಿಕತೆಯಿಂದ, ಭಯಭಕ್ತಿಹೊಂದಿ ಯಾವುದಾದರೂ ತೀರ್ಪು ನೀಡಿದರೆ ಅಲ್ಲಾಹನ ಸನ್ನಿಧಿಗೆ ಅದು ತಲಪುವುದು. ನನ್ನ ಕೊರಳು ನಿಮ್ಮಿಂದ ಸ್ವತಂತ್ರವಾಗಿದೆ. ಆದರೆ ವಿಶ್ವದ ಸರ್ವಶಕ್ತನ ಮುಂದೆ ಅದು ಬಾಗಿದೆ ಮತ್ತು ಅವನ ಕೈವಶ ಇದೆ. ಖಿಲಾಫತ್ ಸಾಮಾನ್ಯ ಹೊರೆಯೇನೂ ಅಲ್ಲ." (ಅಲ್‌ಫಝ್ಲ್ ರಬ್ವ 28-6-1991)

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದ ಹುಲ್ಲಾಹು) ಹೀಗೆ ಹೇಳುತ್ತಾರೆ:

"ಅಲ್ಲಾಹನ ದ್ವಿತೀಯ ದಿವ್ಯಶಕ್ತಿ ಬಹಳ ದೊಡ್ಡ ಪಾರಿತೋಷಕ ವಾಗಿದೆ. ಅದರ ಉದ್ದೇಶ ಸಮುದಾಯವನ್ನು ಐಕ್ಯತೆಯಿಂದ ಇರಿಸುವುದು ಮತ್ತು ಒಡಕಿನಿಂದ ರಕ್ಷಿಸುವುದಾಗಿದೆ. ಜಮಾಅತ್ ಸದಸ್ಯರನ್ನು ಮುತ್ತುಗಳ ಹಾಗೆ ಪೋಣಿಸಲ್ಪಟ್ಟ ದಾರ ಇದಾಗಿದೆ. ಮುತ್ತುಗಳನ್ನು ಪೋಣಿಸಿ ಇರಿಸದಿದ್ದರೆ ಅವು ಸುರಕ್ಷಿತವಾಗಿ ಇರಲಾರವು ಮತ್ತು ಅವುಗಳು ಸುಂದರವಾಗಿ ಕಾಣಿಸಲಾರವು. ಒಂದು ದಾರದಲ್ಲಿ ಪೋಣಿಸಲ್ಪಟ್ಟ ಮುತ್ತುಗಳೇ ಸುಂದರವಾಗಿ ಕಾಣಿಸುತ್ತವೆ ಮತ್ತು ಸುರಕ್ಷಿತವಾಗಿರುತ್ತವೆ. ದ್ವಿತೀಯ ದಿವ್ಯಶಕ್ತಿ ಇಲ್ಲದಿದ್ದರೆ ಇಸ್ಲಾಮ್ ಅಭಿವೃದ್ಧಿ ಗಳಿಸದು. ನೀವು ಈ ದಿವ್ಯಶಕ್ತಿಯೊಂದಿಗೆ ಪರಿಪೂರ್ಣ ನಿಷ್ಠೆ, ಸ್ನೇಹ ಮತ್ತು ಆದರ ಭಾವವನ್ನು ಇರಿಸಿಕೊಳ್ಳಿರಿ. ಖಿಲಾಫತ್‌ನ ಅನುಸರಣೆಯ ಭಾವನೆಯನ್ನು ಸ್ಥಿರವಾಗಿ ಕಾಪಾಡಿರಿ. ಖಿಲಾಫತ್ ಅನುಸರಣೆಯ ಭಾವನೆ ಎಷ್ಟು ತೀವ್ರವಾಗಿರಬೇಕೆಂದರೆ ಇತರ ಸಂಬಂಧಗಳು ಅದರೆದುರು ಕಡಿಮೆ ಮಹತ್ವ ಹೊಂದಿರಬೇಕು. ಇಮಾಮರೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಎಲ್ಲಾ ಅನುಗ್ರಹಗಳು ಇವೆ. ಎಲ್ಲಾ ವಿಧಗಳ ಪಿತೂರಿ, ಪರೀಕ್ಷೆಗಳನ್ನು ಎದುರಿಸಲು ನಿಮಗೆ ಅದೊಂದು ಗುರಾಣಿ ಆಗಿದೆ....

"ನೀವು ಅಭಿವೃದ್ಧಿ ಹೊಂದಬೇಕಾದರೆ ಮತ್ತು ಲೋಕದಲ್ಲಿ ಜಯಗಳಿಸಬೇಕಾದರೆ ನಿಮಗೆ ನನ್ನ ಉಪದೇಶ ಇದಾಗಿದೆ: ನೀವು

# ಖಿಲಾಫತ್ ಅನುಗ್ರಹಗಳು



✡ ಸಿದ್ದೀಖ್ ಅಶ್ರಫ್ ಅಲಿ

"ಖಲೀಫ" ಎಂದರೆ ಅರಬಿ ಭಾಷೆಯಲ್ಲಿ ಉತ್ತರಾಧಿಕಾರಿ, ಪ್ರತಿನಿಧಿ ಎಂದು ಅರ್ಥ. ಇಸ್ಲಾಮ್ ಧರ್ಮದಲ್ಲಿ ಸಾಂಕೇತಿಕ ಪದವಾಗಿ ಈ ಪದವನ್ನು ಬಳಸಿದರೆ ಅದರ ಅರ್ಥ ಪ್ರವಾದಿಗಳು ನಿಧನ ಹೊಂದಿದ ನಂತರ ಅವರ ಕೆಲಸಗಳನ್ನು ಮುಂದುವರಿಸುವ ಮತ್ತು ಅವುಗಳನ್ನು ಪರಿಪೂರ್ಣತೆಗೆ ತಲಪಿಸುವ ಅನುಗ್ರಹೀತ ಮಹಾನುಭಾವರು ಎಂದಾಗಿದೆ.

ಪವಿತ್ರ ಖುರ್‌ಆನ್ ಖಲೀಫ ಎಂಬ ಪದವನ್ನು ಪ್ರತಿನಿಧಿ ಎಂಬ ಅರ್ಥದಲ್ಲಿಯೂ ಪ್ರವಾದಿಗಳ ಕೆಲಸಗಳನ್ನು ಮುನ್ನಡೆಸಿಕೊಂಡು ಹೋಗುವ ಮಹಾನುಭಾವ ಎಂಬ ಅರ್ಥದಲ್ಲಿಯೂ ಬಳಸಿದೆ. ಆದಮ್ ಸಂತತಿಗಳಲ್ಲಿ ತನ್ನ ಪ್ರತಿನಿಧಿಯನ್ನು ನೇಮಿಸುವ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

"ನಾನು ಭೂಮಿಯಲ್ಲಿ ಒಬ್ಬ ಪ್ರತಿನಿಧಿಯನ್ನು (ಖಲೀಫ) ನೇಮಿಸಲಿದ್ದೇನೆ." (2 : 31)

ಪ್ರವಾದಿಗಳು ನಿಧನಹೊಂದಿದ ನಂತರ ಖಲೀಫರನ್ನು ನೇಮಿಸುವ ಕುರಿತು ಪವಿತ್ರ ಖುರ್‌ಆನ್ ಸೂರತುನ್ನೂರ್ ವಚನ 56ರಲ್ಲಿ ಅಲ್ಲಾಹನು ಹೇಳಿದ್ದಾನೆ.

ಈ ವಚನದಲ್ಲಿ ಸತ್ಕಾರ್ಯಗಳನ್ನು ಮಾಡುವ ಮುಸ್ಲಿಮರಿಗೆ ಖಲೀಫರನ್ನು ನೇಮಿಸುವ ಎಂದರೆ ಅವರಲ್ಲಿ ಖಿಲಾಫತ್ ಜಾರಿಗೊಳ್ಳುವ ಕುರಿತು ಅಲ್ಲಾಹನು ವಾಗ್ದಾನಮಾಡಿದ್ದಾನೆ.

ಈ ಲೇಖನದಲ್ಲಿ ಪ್ರವಾದಿಯವರು ನಿಧನಹೊಂದಿದ ನಂತರ ಸ್ಥಾಪಿತವಾಗುವ ಖಿಲಾಫತ್ ಮತ್ತು ಅದರ ಮೂಲಕ ಲೋಕಕ್ಕೆ ಲಭಿಸುವ ಅನುಗ್ರಹಗಳ ಕುರಿತು ಮುಖ್ಯವಾಗಿ ವಿವರಿಸಲಾಗುವುದು. ಪ್ರವಾದಿಯವರಿಂದ ಲಭಿಸಿದ ಅನುಗ್ರಹಗಳು ಅವರು ನಿಧನಹೊಂದಿದ ನಂತರ ಜಾರಿಯಲ್ಲಿ ಇರುವಂತೆ ಮಾಡಲು ಮತ್ತು ಅವರು ಪ್ರಾರಂಭಿಸಿದ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಲು ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ಪ್ರವಾದಿತ್ವದ ಮಾರ್ಗದಲ್ಲಿ ಸ್ಥಾಪಿತವಾದ ಖಿಲಾಫತ್) ಪ್ರಮುಖ ಪಾತ್ರವಹಿಸುತ್ತದೆ. ಇದರ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹೀಗೆ ಹೇಳುತ್ತಾರೆ:

"ಖಲೀಫ ಎಂದರೆ ಉತ್ತರಾಧಿಕಾರಿ. ಪ್ರವಾದಿಯ ಉತ್ತರಾಧಿಕಾರಿ ಆಗುವ ವ್ಯಕ್ತಿ ತನ್ನೊಳಗೆ ಆ ಪ್ರವಾದಿಯ ವೈಶಿಷ್ಟ್ಯಗಳನ್ನು ನೆರಳಿನ ರೂಪದಲ್ಲಿ ಹೊಂದಿದವನಾಗಿರಬೇಕು..... ಖಲೀಫ ಯಥಾರ್ಥದಲ್ಲಿ ಪ್ರವಾದಿಯ ನೆರಳಾಗಿರುತ್ತಾರೆ. ಮನುಷ್ಯನು ಶಾಶ್ವತವಾಗಿ ಜೀವಿಸಿರಲು ಸಾಧ್ಯವಿಲ್ಲದ ಕಾರಣ, ಪ್ರವಾದಿ ಲೋಕದಲ್ಲಿರುವ ಎಲ್ಲಾ ಮನುಷ್ಯರಿಗಿಂತ ಶ್ರೇಷ್ಠರೂ ಉನ್ನತ ಸ್ಥಾನಪಡೆದವರೂ ಆಗಿರುವುದರಿಂದ ಅವರ ಅಸ್ತಿತ್ವವನ್ನು ನೆರಳಿನ ರೂಪದಲ್ಲಿ ಖಿಯಾಮತ್ ದಿನದತನಕ ಬಾಕಿಯಾಗಿ ಉಳಿಸಲು ಮತ್ತು ಪ್ರವಾದಿತ್ವದ ಅನುಗ್ರಹದಿಂದ ಯಾವುದೇ ಕಾಲಘಟ್ಟವು ವಂಚಿತವಾಗದಿರಲು ಅಲ್ಲಾಹನು ಖಿಲಾಫತ್ ವ್ಯವಸ್ಥೆ ಯನ್ನು ಸ್ಥಾಪಿಸಲು ಬಯಸಿದನು." (ಶಹಾದತುಲ್ ಖುರ್‌ಆನ್ ಪುಟ 57 – ರೂಹಾನಿ ಖಝಾಯಿನ್ ಸಂಪುಟ 6 ಪುಟ 353)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು:

"ಪ್ರವಾದಿ ನಿಧನಹೊಂದಿದ ನಂತರ ಅಂಧಕಾರವು ಕವಿಯುವಾಗ ಅದನ್ನು ದೂರಸರಿಸಲು ಅವರ ಸ್ಥಾನಕ್ಕೆ ಆಗಮಿಸಿ ಧರ್ಮಕ್ಕೆ ಪುನಶ್ಚೇತನ ನೀಡುವವರೇ ಖಲೀಫ ರಾಗಿದ್ದಾರೆ."

(ಮಲ್ ಫೂಝಾತ್ – ಸಂಪುಟ 4 ಪುಟ 383)

### ಅಲ್ಲಾಹನೇ ಖಲೀಫರನ್ನು ನೇಮಿಸುತ್ತಾನೆ

ಅಲ್ಲಾಹನೇ ಖಲೀಫರನ್ನು ನೇಮಿಸುತ್ತಾನೆ ಎಂಬುದು ಖಿಲಾಫತಿನ ಅತ್ಯಂತ ಮಹತ್ವಪೂರ್ಣ ಅನುಗ್ರಹವಾಗಿದೆ. ಎಲ್ಲಾ ಒಳಿತು, ಕೆಡುಕುಗಳು ಅಲ್ಲಾಹನಿಂದಲೇ ಜಾರಿಗೊಳಿಸಲ್ಪಡುತ್ತವೆಯಾದರೂ ಅವನು ಒಂದು ಒಳಿತಿನ ಕುರಿತು "ಇದನ್ನು ನಾನು ಮಾಡುತ್ತೇನೆ" ಎಂದು ಹೇಳುವಾಗ ಅದರ ವೈಭವ ಮತ್ತು ಮಹತ್ವ ಸ್ಪಷ್ಟವಾಗುತ್ತದೆ. ಪವಿತ್ರ ಖುರ್‌ಆನ್ ಅಧ್ಯಾಯ 24 ವಚನ 56ನ್ನು ಆಯತೆ ಇಸ್ತಿಖ್‌ಲಾಫ್ (ಖಿಲಾಫತ್ ವಾಗ್ದಾನದ ವಚನ) ಎನ್ನುತ್ತಾರೆ. ಆ ವಚನದಲ್ಲಿ ಸತ್ಕಾರ್ಯಗಳನ್ನು ಮಾಡುವ ಸತ್ಯವಿಶ್ವಾಸಿಗಳಿಗೆ ಖಿಲಾಫತ್ ನೀಡುವ ಬಗ್ಗೆ ಅಲ್ಲಾಹನು ವಾಗ್ದಾನ ಮಾಡಿರುತ್ತಾನೆ. ಆ ವಾಗ್ದಾನವನ್ನು ತಾನೇ ಈಡೇರಿಸುವುದಾಗಿ ಅಲ್ಲಾಹನು ಹೇಳಿರುವುದರಿಂದ ಸತ್ಯ ಖಿಲಾಫತ್‌ಗೆ ಅವನ ಸಹಾಯವು ಖಂಡಿತವಾಗಿಯೂ ಆವಶ್ಯಕವಾಗಿಯೂ ದೊರಕುವುದು. "ಲಯಸ್ತಖ್ಲಿಫನ್ನಹುಮ್" ಎಂಬ ಅರಬಿ ಪದದ ಆರಂಭದಲ್ಲಿರುವ ಲಾಮೆ ತಾಕೀದ್ ಮತ್ತು ತಶದ್ದುದ್ ಹೊಂದಿದ ನೂನ್ ಬಳಸಲಾಗಿದೆ. ಈ ವಿಷಯವನ್ನು ಒತ್ತಿಹೇಳಲು ಹೀಗೆ ಮಾಡಲಾಗಿದೆ. ಲೋಕದ ಜನರು ಎಷ್ಟು ವಿರೋಧಿಸಿದರೂ ಖಿಲಾಫತ್ ನಿಶ್ಚಯವಾಗಿಯೂ ಸ್ಥಾಪಿಸಲ್ಪಡುವುದೆಂದೂ ಖಿಲಾಫತ್‌ಗೆ ಅಲ್ಲಾಹನ ಸಹಾಯ ಸದಾಕಾಲ ಲಭಿಸುವುದೆಂದೂ ಸೂಚಿಸಲಾಗಿದೆ.

ಇಲ್ಲಿ ಒಂದು ಸಂಶಯವನ್ನು ಹೋಗಲಾಡಿಸುವುದು ಆವಶ್ಯಕವೆಂದು ತೋರುತ್ತದೆ. ಪ್ರವಾದಿಗಳನ್ನು ಯಾವಾಗಲೂ ಅಲ್ಲಾಹನು ನೇರವಾಗಿ ನೇಮಿಸುತ್ತಾನೆ. ಆದರೆ ಖಲೀಫರನ್ನು ಆಯ್ಕೆಮಾಡುವುದು ಸತ್ಯವಿಶ್ವಾಸಿಗಳ ಜಮಾಅತ್ ಆಗಿದೆ. ಹೀಗಿರುವಾಗ ಅಲ್ಲಾಹನೇ ಖಿಲಾಫತ್ ನೊಂದಿಗೆ ಸಂಬಂಧ ಜೋಡಿಸಿರಿ. ನೀವು ಈ ಹಬ್‌ಲುಲ್ಲಾಹ್ (ಅಲ್ಲಾಹನ ಪಾಶವನ್ನು) ಬಲವಾಗಿ ಹಿಡಿದುಕೊಳ್ಳಿರಿ. ನಮ್ಮ ಎಲ್ಲಾ ಅಭಿವೃದ್ಧಿಯು ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪಿಸುವು ದರಲ್ಲಿ ಅಡಕವಾಗಿದೆ." (ಮಶ್‌ಅಲೆ ರಾಹ್ – ಸಂಪುಟ 5 ಪುಟ 5)

ಮೇಲಿನ ಎಲ್ಲಾ ಉಲ್ಲೇಖಗಳಿಂದ ತಿಳಿದುಬರುವುದೇನೆಂದರೆ ಖಿಲಾಫತ್ ಮಹತ್ವಪೂರ್ಣವಾದ ಆಧ್ಯಾತ್ಮಿಕ ವ್ಯವಸ್ಥೆಯಾಗಿದೆ. ಸತ್ಯವಿಶ್ವಾಸಿಗಳೂ ಸತ್ಕಾರ್ಯ ಮಾಡುವವರೂ ಆಗಿರುವವರಿಗೆ ಅದು ದೊರಕುವುದು. ಅದು ಸತ್ಯವಿಶ್ವಾಸಿಗಳ ಐಕ್ಯತೆಗೆ ಖಾತರಿಯಾಗಿದೆ. ಲೋಕದ ಶಾಂತಿ ಮತ್ತು ಸುವ್ಯವಸ್ಥೆ ಖಿಲಾಫತ್‌ನೊಂದಿಗೆ ಸಂಬಂಧಿಸಿದೆ.

ನಮ್ಮನ್ನು ಮತ್ತು ನಮ್ಮ ಸಂತಾನವನ್ನು ಯಾವಾಗಲೂ ಈ ಅನುಗ್ರಹೀತ ಆಧ್ಯಾತ್ಮಿಕ ವ್ಯವಸ್ಥೆಯೊಂದಿಗೆ ಸಂಬಂಧ ಸ್ಥಾಪಿಸಲು ಅಲ್ಲಾಹನು ಅನುಗ್ರಹಿಸಲಿ. ಆಮೀನ್. ■

ಖಲೀಫರನ್ನು ನೇಮಿಸುತ್ತಾನೆ ಎನ್ನುವುದರ ಅರ್ಥವಾದರೂ ಏನು? ಇದರ ಸಂಕ್ಷಿಪ್ತ ಉತ್ತರ ಹೀಗಿದೆ: ಲೋಕದಲ್ಲಿ ಎಲ್ಲಾ ಕಡೆ ಅಂಧಕಾರ ಕವಿದಿರುವಾಗ ಅಲ್ಲಾಹನು ಪ್ರವಾದಿಯನ್ನು ಆಯ್ಕೆಮಾಡುತ್ತಾನೆ. ಆದರೆ ಪ್ರವಾದಿ ಆಗಮಿಸಿದ ನಂತರ ಸತ್ಯವಿಶ್ವಾಸಿಗಳಾಗಿ ಸಾತ್ವಿಕರಾದವರ ಒಂದು ಜಮಾಅತ್ ಸ್ಥಾಪಿತವಾಗುತ್ತದೆ. ಈ ಸಾತ್ವಿಕರಾದ ಜನರಿಗೆ ಅಲ್ಲಾಹನು ಮಾರ್ಗದರ್ಶನ ನೀಡಿ ತಾನು ಉದ್ದೇಶಿಸುವವರನ್ನು ಅವರು ಖಲೀಫರನ್ನಾಗಿ ಆಯ್ಕೆ ಮಾಡುವಂತೆ ಮಾಡುತ್ತಾನೆ. ಸತ್ಯ ವಿಶ್ವಾಸಿಗಳು ಖಲೀಫರನ್ನು ಆಯ್ಕೆ ಮಾಡುವ ಸಂದರ್ಭವನ್ನೊದಗಿಸಿ ಅಲ್ಲಾಹನು ಲೋಕಕ್ಕೆ ಹೀಗೆ ಬಹಿರಂಗಪಡಿಸಲು ಇಚ್ಛಿಸುತ್ತಾನೆ: ಈಗ ಲೋಕದಲ್ಲಿ ಸಾತ್ವಿಕರಾದ ಜನರ ಒಂದು ಜಮಾಅತ್ ಸ್ಥಾಪಿತವಾಗಿದೆ. ಅವರ ಇಚ್ಛೆಯು ನನ್ನ ಇಚ್ಛೆಯೇ ಆಗಿದೆ. ಅವರು ಮಾಡಿದ ಆಯ್ಕೆಯೂ ನಾನು ಮಾಡಿದ ಆಯ್ಕೆಯೇ ಆಗಿದೆ.

ಪವಿತ್ರ ಖುರ್‌ಆನಿನಲ್ಲಿ ಇದಕ್ಕೆ ಸಮವಾದ ಉದಾಹರಣೆಗಳು ಕಾಣಲು ಸಿಗುತ್ತವೆ. ಅಲ್ಲಾಹನು ಹೀಗೆ ಹೇಳುತ್ತಾನೆ: "ಮಾ ರಮೈತ ಇಧ್ ರಮೈತ ವಲಾ ಕಿನ್ನಲ್ಲಾಹ ರಮಾ."

ಅಲ್ಲಾಹನು ಹೇಳುತ್ತಾನೆ : ಓ ಮುಹಮ್ಮದ್ ಬದ್ರ್ ಯುದ್ಧದಲ್ಲಿ ನೀನು ಶತ್ರುಗಳ ಕಡೆಗೆ ಕಲ್ಲುತುಂಡುಗಳನ್ನು ಎಸೆದಾಗ ಎಸೆದುದು ನೀನಲ್ಲ, ನಾನೇ ಎಸೆದೆನು.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಕಲ್ಲುತುಂಡುಗಳನ್ನು ಎಸೆದಾಗ ಅದರೊಂದಿಗೆ ಅಲ್ಲಾಹನ ನಿರ್ಧಾರವು ಜೊತೆಗೂಡಿತ್ತು.

ಇದೇ ರೀತಿ ಬೈಅತೆ ರಿಝ್ವಾನ್ ಸಂದರ್ಭದ ಕುರಿತು ಅಲ್ಲಾಹನು ಹೀಗೆ ಹೇಳುತ್ತಾನೆ:

"ಯದುಲ್ಲಾಹಿ ಫೌಖ ಅಯ್‌ದೀಹಿಮ್." ಅಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಶಿಷ್ಯರ ಕೈಗಳ ಮೇಲೆ ಇದ್ದುದು ಪೈಗಂಬರ್‌ರವರ(ಸ) ಕೈಯಲ್ಲ, ಅಲ್ಲಾಹನ ಕೈ ಎಂದು ಇಲ್ಲಿ ಹೇಳಲಾಗಿದೆ.

ಅಲ್ಲಾಹನೇ ಖಲೀಫರನ್ನು ಆಯ್ಕೆಮಾಡುತ್ತಾನೆ ಎನ್ನುವುದು ಸತ್ಯಸಂಗತಿಯೇ ಆಗಿದೆ. ಇದು ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ನೀಡುವ ಒಂದು ಗೌರವವಾಗಿದೆ. ಅಲ್ಲಾಹನೇ ಖಲೀಫರನ್ನು ಆಯ್ಕೆ ಮಾಡುತ್ತಾನೆ ಎಂಬ ನಂಬಿಕೆಯನ್ನು ಸತ್ಯವಿಶ್ವಾಸಿಗಳು ಸಹ ಯಾವಾಗಲೂ ಹೊಂದಿರಬೇಕು. ಖಲೀಫರನ್ನು ಅಲ್ಲಾಹನೇ ಆಯ್ಕೆ ಮಾಡುವುದರಿಂದ ಖಿಲಾಫತ್‌ನಲ್ಲಿ ಗಣಿಸಲಾಗದಷ್ಟು ಅನುಗ್ರಹಗಳಿವೆ. ಅಲ್ಲಾಹನು ಖಿಲಾಫತ್‌ಗೆ ಯಾವಾಗಲೂ ಅನುಗ್ರಹ ದಯಪಾಲಿಸುತ್ತಾ ಇರುತ್ತಾನೆ.

### ಇಸ್ಲಾಮ್ ಮತ್ತು ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಖಿಲಾಫತ್‌ನೊಂದಿಗೆ ಸಂಬಂಧಿಸಿದೆ

ಹಝ್ರತ್ ಖಲೀಫತುಲ್ ಮಸೀಹ್ ಸಾನೀ (ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ) ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: "ಖಿಲಾಫತ್ ಇಸ್ಲಾಮಿನ ಮುಖ್ಯ ವಿಷಯಗಳಲ್ಲಿ ಒಂದಾಗಿದೆ. ಖಿಲಾಫತ್ ಇಲ್ಲದೆ ಇಸ್ಲಾಮ್ ಎಂದೂ ಅಭಿವೃದ್ಧಿಗಳಿಸಲಾರದು. ಖಲೀಫರ ಮೂಲಕವೇ ಇಸ್ಲಾಮ್ ಅಭಿವೃದ್ಧಿಗಳಿಸಿತು. ಇನ್ನು ಮುಂದೆ ಸಹ ಖಿಲಾಫತ್ ಮೂಲಕವೇ ಇಸ್ಲಾಮ್ ಅಭಿವೃದ್ಧಿ ಹೊಂದುವುದು. ಅಲ್ಲಾಹನೇ ಯಾವಾಗಲೂ ಖಲೀಫರನ್ನು ನೇಮಿಸುತ್ತಾ ಇದ್ದನು. ಇನ್ನು ಮುಂದೆ ಸಹ ಅವನೇ ಖಲೀಫರನ್ನು ನೇಮಿಸುವನು." (ದರ್ಸುಲ್ ಖುರ್‌ಆನ್ - 1921)

ಇನ್ನೊಂದು ಸಂದರ್ಭದಲ್ಲಿ ಅವರು ಹೀಗೆ ಹೇಳಿದರು:

"ಬಾಹ್ಯವಾಗಿ ನೋಡಿದರೆ ಖಲೀಫರ ಚುನಾವಣೆ ನಿಸ್ಸಂಶಯವಾಗಿ ನಿಮ್ಮ ಕೈಗಳಲ್ಲಿದೆ. ನೀವು ಅವರನ್ನು ನೋಡುತ್ತೀರಿ ಮತ್ತು ಅವರ ಬಗ್ಗೆ ಯೋಚಿಸುತ್ತೀರಿ. ಆದರೆ ಆಂತರಿಕವಾಗಿ ಖಲೀಫರ ಆಯ್ಕೆ ಅಲ್ಲಾಹನ ಅಧೀನದಲ್ಲಿದೆ. ಅಲ್ಲಾಹನು ಹೀಗೆ ಹೇಳುತ್ತಾನೆ: 'ನಾವೇ ಖಲೀಫರನ್ನು ನೇಮಿಸುತ್ತೇವೆ.......' ಅಲ್ಲಾಹನು ನಿಮಗೆ ಖಲೀಫರನ್ನು ನೇಮಿಸುತ್ತಾ ಹೋಗುವನು. ಖಲೀಫರಾಗಿ ಕಾರ್ಯ ನಿರ್ವಹಿಸಲು ಯಾವ ಘನತೆ ಆವಶ್ಯಕವಾಗಿದೆಯೋ ಅದು ಅವರಿಗೆ ಲಭಿಸುವುದು." (ರಿಪೋರ್ಟ್ ಮಜ್ಲಿಸ್ ಮುಶಾವರತ್ 7-4-1925)

ಖಿಲಾಫತ್ ಕುರಿತು ಹಝ್ರತ್ ಹುಝೈಫ್(ರ) ವರದಿ ಮಾಡಿದ ಒಂದು ಹದೀಸ್ ಮಿಶ್ಕಾತ್‌ನಲ್ಲಿ ದಾಖಲಾಗಿದೆ. ಆ ಹದೀಸಿನಲ್ಲಿರುವ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿ ಅಕ್ಷರಶಃ ಈಡೇರಿತು. ಅವರು ನಿಧನಹೊಂದಿದ ನಂತರ ಖಿಲಾಫತೆ ರಾಶಿದ ಕಾಲಘಟ್ಟವು ದಾಟಿಹೋಯಿತು. ಅನಂತರ ನಿರಂಕುಶಾಧಿಕಾರ ಹೊಂದಿದ ರಾಜರು ಆಡಳಿತೆ ನಡೆಸಿದರು. ದೌರ್ಜನ್ಯಗಾರರಾದ ಸುಲ್ತಾನರು ಸಹ ಆಡಳಿತೆ ನಡೆಸಿದರು. ಅವರಲ್ಲಿ ಕೆಲವರಿಗೆ ಖಲೀಫರೆಂಬ ಬಿರುದನ್ನು ನೀಡಲಾಯಿತು. ಈ ಲೌಕಿಕ ಖಿಲಾಫತ್ ಮೂಲಕ ಮುಸ್ಲಿಮರಿಗೆ ಸ್ವಲ್ಪಮಟ್ಟಿಗೆ ಐಕ್ಯತೆಯ ಲಾಭವು ದೊರಕಿತ್ತು. ಆದರೆ ರಾಜಕೀಯ ಉದ್ದೇಶಕ್ಕಾಗಿ ಸ್ಥಾಪಿತವಾದ ಈ ಖಿಲಾಫತ್ ಕೊನೆಗೆ ರಾಜಕೀಯ ಸಾವಿಗೂ ಗುರಿಯಾಯಿತು. ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ ತುರ್ಕಿಯ ಖಿಲಾಫತ್ ಬ್ರಿಟಿಷರಿಂದ ಅಂತ್ಯಗೊಳಿಸಲ್ಪಟ್ಟಿತು.

ತುರ್ಕಿ ಖಿಲಾಫತನ್ನು ರಕ್ಷಿಸಲು ಮುಸ್ಲಿಮರು ಬಹಳ ಪ್ರಯತ್ನ ಮಾಡಿದರೂ ಅವರು ಜಯಗಳಿಸಲಿಲ್ಲ. ಆ ಕಾಲದಲ್ಲಿ ಅಲ್ಲಾಹನು ಅಹ್ಮದಿಯ್ಯತ್ ಮೂಲಕ ಖಿಲಾಫತನ್ನು ಲೋಕದಲ್ಲಿ ಸ್ಥಾಪಿಸಲು ಇಚ್ಛಿಸುತ್ತಿದ್ದನು. ಖಿಲಾಫತ್ ಚಳುವಳಿ ಮೂಲಕ ಒಂದು ಸಂಗತಿ ಸ್ಪಷ್ಟವಾಯಿತು. ಮುಸ್ಲಿಮರಿಗೆ ಖಿಲಾಫತ್ ಬಗ್ಗೆ ಭಾವನಾತ್ಮಕ ಒಲವು ಇದೆ. ಖಿಲಾಫತ್ ಮೂಲಕವೇ ಮುಸ್ಲಿಮರಲ್ಲಿ ಐಕ್ಯತೆ ಉಂಟಾಗುವುದೆಂದೂ ಇಸ್ಲಾಮಿಗೆ ಗೌರವ ಲಭಿಸುವುದೆಂದೂ ಧರ್ಮಕ್ಕೆ ಚೇತನ ಸಿಗುವುದೆಂದೂ ಅವರು ಭಾವಿಸುತ್ತಿದ್ದಾರೆಂದು ವ್ಯಕ್ತವಾಯಿತು.

### ಇಸ್ಲಾಮಿನ ಐಕ್ಯತೆ ಮತ್ತು ಸತ್ಯವಿಶ್ವಾಸಿಗಳ ಭಯಭಕ್ತಿಯ ಖಾತರಿಗೆ ಖಿಲಾಫತ್ ಆವಶ್ಯಕವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಾತಿನ ಪ್ರಕಾರ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ ಖಿಲಾಫತ್) ಸ್ಥಾಪಿಸಿದನು ಮತ್ತು ಅಹ್ಮದಿಯಾ ಜಮಾಅತಿನ ಹೊರಗೆ ಖಿಲಾಫತ್ ಸ್ಥಾಪಿಸುವ ಪ್ರಯತ್ನ ಜಯಗಳಿಸದಂತೆ ಮಾಡಿದನು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹ್) – ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹೀಗೆ ಹೇಳಿದರು:

"ವಿಶ್ವದಲ್ಲಿರುವ ಎಲ್ಲಾ ಮುಸ್ಲಿಮರು ಪ್ರಯತ್ನಿಸಿದರೂ ಖಲೀಫರನ್ನು ಆಯ್ಕೆಮಾಡಲು ಸಾಧ್ಯವಾಗಲಾರದು. ಖಿಲಾಫತ್ ಸ್ಥಾಪನೆಯಾಗುವುದು ಅಲ್ಲಾಹನ ಇಚ್ಛೆಗೆ ಅನುಸಾರವಾಗಿದೆ. ಅಲ್ಲಾಹನು ಯಾರನ್ನು ತಖ್ವಾ (ಭಯಭಕ್ತಿ) ಹೊಂದಿದವನೆಂದು ಗುರುತ್ತಿಸುತ್ತಾನೋ ಆತನ ಮೇಲೆ ಅಲ್ಲಾಹನು ತನ್ನ ಅಂಗೀಕಾರದ ಬೆರಳನ್ನು ಇಡುತ್ತಾನೆ. ಹಾಗೆ ಆಯ್ಕೆಗೊಂಡ ವ್ಯಕ್ತಿ ತನ್ನ ಸುತ್ತಮುತ್ತ ಮುತ್ತಖಿಗಳ (ಭಯಭಕ್ತಿಹೊಂದಿದ ಜನರ) ಒಂದು ಗುಂಪನ್ನು ಸೃಷ್ಟಿಸುತ್ತಾನೆ.... ಅವರು

ಪ್ರವಾದಿಯ ತಖ್ವಾ (ಭಯಭಕ್ತಿ) ದಿಂದ ತಖ್ವಾ ಪಡೆದು ಮುತ್ತಖಿಗಳಾಗುತ್ತಾರೆ. ಇಂತಹ ಮುತ್ತಖಿಗಳು ಮಾಡುವ ಆಯ್ಕೆಯನ್ನು ಅಲ್ಲಾಹನು ಮಾಡಿದ ಆಯ್ಕೆ ಎನ್ನಲಾಗುತ್ತದೆ. ಜಮಾಅತ್ ಅಹ್ಮದಿಯಾ, 'ಅಲ್ಲಾಹನೇ ಖಲೀಫರನ್ನು ಮಾಡುತ್ತಾನೆ' ಎಂದು ಇದೇ ಅರ್ಥದಲ್ಲಿ ಹೇಳುತ್ತದೆ. ಖಿಲಾಫತ್‌ನೊಂದಿಗೆ ಜಮಾಅತಿನ ತಖ್ವಾ ಬಹಳ ಗಾಢವಾದ ಸಂಬಂಧಹೊಂದಿದೆ. ಜಮಾಅತ್ ಮುತ್ತಖಿ ಆಗಿದ್ದರೆ ಅದು ಮಾಡುವ ಆಯ್ಕೆ ಅಲ್ಲಾಹನ ಆಯ್ಕೆ ಆಗುತ್ತದೆ. ಅದರ ದೃಷ್ಟಿ ಯಾವಾಗಲೂ ತಖ್ವಾದ ಮೇಲೆ ಇರುವುದು. ಅದರ ಗೌರವದ ಮಾನದಂಡ ತಖ್ವಾ ಆಗಿರುವುದು." (ಖುತುಬ ಜಮುಅ 20- 4-1993)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹ್) ಪುನಃ ಹೇಳುತ್ತಾರೆ:

"ನೀವು ನೆನಪಿಡಿರಿ: ನಿಮ್ಮ ಏಕತೆಯು ಖಿಲಾಫತ್‌ನೊಂದಿಗೆ ಸಂಬಂಧಿಸಿದೆ. ಏಕ ಸಮುದಾಯವನ್ನಾಗಿ ಮಾಡುವ ಕೆಲಸ ಅಹ್ಮದಿಯಾ ಖಿಲಾಫತ್‌ಗೆ ವಹಿಸಲಾಗಿದೆ. ಇದು ಬೇರೆ ಯಾರಿಗೂ ಸಾಧ್ಯ ವಾಗಲಾರದು. ನಾನು ಅಲ್ಲಾಹನ ಆಣೆ ಹಾಕಿ ಈ ಮಸ್‌ಜಿದ್‌ನಲ್ಲಿ ಘೋಷಿಸುತ್ತೇನೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ದಾಸರನ್ನು ಈ ಕಾಲದಲ್ಲಿ ಏಕಸಮುದಾಯವನ್ನಾಗಿ ಮಾಡುವ ಕೆಲಸವನ್ನು ಅಲ್ಲಾಹನು ಅಹ್ಮದಿಯಾ ಖಿಲಾಫತ್‌ಗೆ ವಹಿಸಿಕೊಟ್ಟಿರುವನು. ಯಾರು ಈ ಖಿಲಾಫತ್‌ನೊಂದಿಗೆ ತನ್ನ ಸಂಬಂಧವನ್ನು ಕಡಿದು ಹಾಕುವನೋ ಅವನು ಒಳಿತಿನ ಹೆಸರಿನಲ್ಲಿ ಕೆಲಸಮಾಡುವುದಾದರೂ ಸಹ ಎಂದೂ ಜಯಗಳಿಸಲಾರನು." (ಖುತುಬ ಜುಮಅ 16 - 7 - 1993)

ಹಝ್ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ:

"ನನ್ನನ್ನು ಅಲ್ಲಾಹನೇ ಖಲೀಫನನ್ನಾಗಿ ಮಾಡಿದನು. ನನ್ನನ್ನು ಎದುರಿಸಲು ಶಕ್ತಿಹೊಂದಿರುವವನು ಯಾರೂ ಇಲ್ಲ. ನಿಮ್ಮವರಲ್ಲಿ ಯಾರಾದರೂ ನನ್ನನ್ನು ಎದುರಿಸುವ ಆಶೆಯನ್ನು ತನ್ನ ಹೃದಯದಲ್ಲಿ ಹೊಂದಿದ್ದರೆ ನನ್ನ ಎದುರಿಗೆ ಬಂದು ನಿಂತು ನೋಡಲಿ. ಅಲ್ಲಾಹನು ಅವನನ್ನು ಅಪಮಾನಿತನನ್ನಾಗಿ ಮಾಡುವನು. ಅವನನ್ನು ಮಾತ್ರವಲ್ಲ, ಲೋಕದ ಎಲ್ಲಾ ಶಕ್ತಿಗಳು ಒಟ್ಟಿಗೆ ಸೇರಿ ನನ್ನ ಖಿಲಾಫತನ್ನು ನಾಶಗೊಳಿಸಲು ಇಚ್ಛಿಸುವುದಾದರೆ ಅಲ್ಲಾಹನು ಅವರನ್ನೆಲ್ಲಾ ಸೊಳ್ಳೆಗಳನ್ನು ಜಜ್ಜುವ ಹಾಗೆ ಜಜ್ಜಿಬಿಡುವನು. ನನ್ನನ್ನು ಎದುರಿಸಲು ಎದ್ದು ನಿಂತ ಪ್ರತಿಯೊಬ್ಬನು ಕೆಳಗೆ ಹಾಕಲ್ಪಡುವನು. ನನ್ನ ವಿರುದ್ಧ ಹೇಳುವವನ ಬಾಯಿ ಮುಚ್ಚಿಸಲಾಗುವುದು. ನನ್ನನ್ನು ಹೀನೈಸಲು ಬಯಸುವವನು ಸ್ವತಃ ಹೀನೈಸಲ್ಪಡುವನು.

"ಓ ಸತ್ಯವಿಶ್ವಾಸಿಗಳ ಜಮಾಅತ್, ಸತ್ಕಾರ್ಯ ಮಾಡುವವರೇ, ನಾನು ನಿಮ್ಮೊಂದಿಗೆ ಹೇಳಬಯಸುತ್ತೇನೆ: ಖಿಲಾಫತ್ ಅಲ್ಲಾಹನ ಬಹಳ ದೊಡ್ಡ ಅನುಗ್ರಹವಾಗಿದೆ. ಅದಕ್ಕೆ ಮಹತ್ವ ನೀಡಿರಿ.

ಯಾವಾಗಲೂ ಅಲ್ಲಾಹನ ಮುಂದೆ ಪ್ರಾರ್ಥಿಸುತ್ತಾ ಇರಿ. ನೀವು ಒಂದು ಸಂಗತಿಯನ್ನು ಚೆನ್ನಾಗಿ ನೆನಪಿಡಿರಿ: ನಿಮ್ಮಲ್ಲಿ ಖಿಲಾಫತ್ ಇರುವ ತನಕ ಲೋಕದ ಯಾವುದೇ ಜನಾಂಗ ನಿಮ್ಮ ಮೇಲೆ ಜಯಗಳಿಸಲಾರದು. ನೀವು ಪ್ರತಿಯೊಂದು ಕ್ಷೇತ್ರದಲ್ಲಿ ಜಯಗಳಿಸುವವರೂ ಅಲ್ಲಾಹನ ನೆರವು ಪಡೆಯುವವರೂ ಆಗುವಿರಿ." (ತಾರೀಖೆ ಅಹ್ಮದಿಯ್ಯತ್ ಸಂಪುಟ 7 ಪುಟ 608-609 : ಬದ್ರ್ 7/14 ಫೆಬ್ರವರಿ 2008 – ಪುಟ 2)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] (ಅಹ್ಮದಿಯಾ ಜಮಾಅತಿನ ಪ್ರಥಮ ಖಲೀಫ) ಹೀಗೆ ಹೇಳಿದರು:

"ನಾನು ಅಲ್ಲಾಹನ ಪ್ರಮಾಣ ಮಾಡಿ ಹೇಳುತ್ತೇನೆ: ಹಝ್ರತ್ ಆದಮ್[ಅ], ಅಬೂಬಕರ್[ರ], ಉಮರ್[ರ] ಮೊದಲಾದವರನ್ನು ಅಲ್ಲಾಹನು ಖಲೀಫರನ್ನಾಗಿ ಮಾಡಿದ ಹಾಗೆಯೇ ನನ್ನನ್ನೂ ಅವನು ಖಲೀಫನನ್ನಾಗಿ ಮಾಡಿರುವನು."

ಅವರು ಪುನಃ ಹೇಳಿದರು:

"ಅಂಜುಮನ್ ನನ್ನನ್ನು ಖಲೀಫನನ್ನಾಗಿ ಮಾಡಿತು ಎಂದು ಯಾರಾದರೂ ಹೇಳುವುದಾದರೆ ಅವನು ಸುಳ್ಳು ಹೇಳುತ್ತಿದ್ದಾನೆ. ಇಂತಹ ಯೋಚನೆ ನಾಶಕ್ಕೆ ತಲಪಿಸುವುದು. ನೀವು ಅಂತಹ ವಿಷಯಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ನೀವು ತಿಳಿದುಕೊಳ್ಳಿರಿ: ನನ್ನನ್ನು ಯಾವುದೇ ಮನುಷ್ಯನಾಗಲಿ ಅಂಜುಮನ್ ಆಗಲಿ ಖಲೀಫನನ್ನಾಗಿ ಮಾಡಿಲ್ಲ. ಯಾವುದೇ ಅಂಜುಮನ್ ಇಂತಹ ಸಾಮರ್ಥ್ಯ ಹೊಂದಿದೆ ಎಂದು ನಾನು ಗ್ರಹಿಸುವುದಿಲ್ಲ. ಅದು ನನ್ನನ್ನು ಬಿಟ್ಟುಬಿಡುವುದಾದರೆ ನಾನು ಆ ಬಗ್ಗೆ ಯಾವುದೇ ಗಮನ ಹರಿಸಲಾರೆ. ಖಿಲಾಫತ್ ಪದವಿಯನ್ನು ನನ್ನಿಂದ ಕಿತ್ತುಕೊಳ್ಳಲು ಯಾರಿಗೂ ಶಕ್ತಿ ಇಲ್ಲ."

ಅವರು ಪುನಃ ಹೇಳಿದರು:

"ನಾನು ಮೃತಪಟ್ಟರೆ ಅಲ್ಲಾಹನು ಇಚ್ಛಿಸುವ ವ್ಯಕ್ತಿ ಖಲೀಫರಾಗಿ ಎದ್ದು ನಿಲ್ಲುವರು."

ಪುನಃ ಹೀಗೆ ಹೇಳಿದರು:

"ನನ್ನನ್ನು ಅಲ್ಲಾಹನೇ ಖಲೀಫನನ್ನಾಗಿ ಮಾಡಿರುವನು. ನೀವು ಹೇಳುವುದರಿಂದ ನಾನು ಪದವಿಯನ್ನು ಕಳೆದುಕೊಳ್ಳಲಾರೆ. ನನ್ನನ್ನು ಪದಚ್ಯುತನನ್ನಾಗಿ ಮಾಡುವ ಶಕ್ತಿ ಸಹ ಯಾರಿಗೂ ಇಲ್ಲ."

(ಬದ್ರ್ 4 - 7 - 1912)

ಖಿಲಾಫತ್‌ಗಿರುವ ಅನುಗ್ರಹ ನೋಡಿರಿ. ಆಯಾ ಕಾಲದ ಖಲೀಫರು ಅಲ್ಲಾಹನ ಹೊರತು ಲೋಕದ ಬೇರೆ ಯಾರಿಗೂ ಭಯಪಡುವುದಿಲ್ಲ.

### ಖಿಲಾಫತ್ ಮೂಲಕ ಅಲ್ಲಾಹನು ತನ್ನ ದಿವ್ಯಶಕ್ತಿಯನ್ನು ಮತ್ತು ತನ್ನ ಸಾಮೀಪ್ಯವನ್ನು ಪ್ರಕಟಿಸುತ್ತಾನೆ

ಖಲೀಫ ಪ್ರವಾದಿಯ ಪ್ರತಿನಿಧಿಯಾಗಿರುತ್ತಾರೆ ಮತ್ತು ಅವರಿಗೆ ಪ್ರವಾದಿತ್ವದ ಪ್ರಾತಿನಿಧ್ಯವು ದೊರಕಿರುತ್ತದೆ. ಆದುದರಿಂದ ಅಲ್ಲಾಹನು ಖಿಲಾಫತ್‌ಗಾಗಿ ಸಹ ತನ್ನ ದಿವ್ಯಶಕ್ತಿ ಮತ್ತು ಸಹಾಯವನ್ನು ಪ್ರಕಟಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಈ ಬಗ್ಗೆ ಹೀಗೆ ಹೇಳುತ್ತಾರೆ:

ಅಲ್ಲಾಹನು ಎರಡು ವಿಧಗಳ ದಿವ್ಯಶಕ್ತಿಗಳನ್ನು ಪ್ರಕಟಿಸುತ್ತಾನೆ. ಮೊದಲನೆಯದಾಗಿ ಪ್ರವಾದಿಗಳ ಮೂಲಕ ತನ್ನ ದಿವ್ಯಶಕ್ತಿಯನ್ನು ತೋರಿಸುತ್ತಾನೆ. ಎರಡನೆಯದಾಗಿ ಪ್ರವಾದಿ ಮೃತರಾದನಂತರ ಅನೇಕ ಕಷ್ಟಗಳನ್ನು ಎದುರಿಸಬೇಕಾಗಿ ಬಂದಾಗ.... ಆಗ ಅಲ್ಲಾಹನು ತನ್ನ ಬಲಿಷ್ಠವಾದ ದಿವ್ಯಶಕ್ತಿಯನ್ನು ಎರಡನೆಯ ಸಲ ಪ್ರಕಟಿಸುತ್ತಾನೆ." (ಅಲ್‌ವಸಿಯ್ಯತ್ ಪುಟ 6)

ಪುನಃ ಹೀಗೆ ಹೇಳುತ್ತಾರೆ:

"ಪ್ರಿಯರೇ, ಅಲ್ಲಾಹನು ಪುರಾತನ ಕಾಲದಿಂದ ಎರಡು ದಿವ್ಯಶಕ್ತಿಗಳನ್ನು ಪ್ರಕಟಿಸಿ, ಶತ್ರುಗಳ ಸುಳ್ಳು ಸಂತೋಷವನ್ನು ನಿರರ್ಥಕಗೊಳಿಸಿ ತೋರಿಸುತ್ತಾನೆ. ಈಗ ಅಲ್ಲಾಹನು ತನ್ನ ಪುರಾತನ ನಡೆವಳಿಕೆಯನ್ನು ತ್ಯಜಿಸುವುದು ಅಸಂಭಾವ್ಯವಾಗಿದೆ. ನೀವು ಎರಡನೆಯ

ದಿವ್ಯಶಕ್ತಿಯನ್ನು ನೋಡುವುದು ಅತ್ಯಾವಶ್ಯಕವಾಗಿದೆ.... ನಾನು ನಿಮ್ಮಿಂದ ಅಗಲಿಹೋಗುವ ತನಕ ಆ ಎರಡನೆಯ ದಿವ್ಯಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮಿಂದ ಅಗಲಿ ಹೋದಾಗ ಅಲ್ಲಾಹನು ತನ್ನ ಎರಡನೆಯ ದಿವ್ಯಶಕ್ತಿಯನ್ನು ನಿಮಗೆ ಕಳುಹಿಸಿ ಕೊಡುವನು. ಅದು ನಿಮ್ಮೊಂದಿಗೆ ಯಾವಾಗಲೂ ಇರುವುದು. 'ನಿನ್ನನ್ನು ಅನುಸರಿಸುವವರ ಈ ಜಮಾಅತ್‌ಗೆ ಲೋಕಾಂತ್ಯ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು' ಎಂದು ಅಲ್ಲಾಹನು ಹೇಳಿರುವನು. ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನ ಆಗಮಿಸಬೇಕಾದುದು ಆವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆರಂಭ ವಾಗುವುದು.... ನಾನು ಅಲ್ಲಾಹನ ದಿವ್ಯಶಕ್ತಿಯ ಸಾಕಾರ ರೂಪವಾಗಿದ್ದೇನೆ. ನನ್ನ ಅನಂತರ ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾದ ಬೇರೆ ಕೆಲವರು ಬರುವರು." (ಅಲ್‌ವಸಿಯ್ಯತ್ ಪುಟ 7,8)

ಅವರು ಪುನಃ ಹೇಳುತ್ತಾರೆ:

"ಪ್ರತಿಯೊಂದು ದೇಶದ ಸಾತ್ವಿಕರ ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥಿಸುತ್ತಾ ಇರಬೇಕು. ದ್ವಿತೀಯ ದಿವ್ಯಶಕ್ತಿ ಆಕಾಶದಿಂದ ಇಳಿದು ಬಂದು ನಿಮ್ಮ ದೇವನು ಅಂತಹ ಶಕ್ತಿಶಾಲಿ ದೇವನೆಂದು ನಿಮಗೆ ತೋರಿಸಿಕೊಡುವಂತಾಗಲಿ." (ಅಲ್ ವಸಿಯ್ಯತ್ ಪುಟ 8)

ಸಂಕ್ಷಿಪ್ತವಾಗಿ ಹೇಳುವುದಾದರೆ, ಖಿಲಾಫತ್ ಸಹ ನುಬುವ್ವತ್ ಹಾಗೆ ಅಲ್ಲಾಹನ ಒಂದು ದಿವ್ಯಶಕ್ತಿ ಆಗಿದೆ. ಅಲ್ಲಾಹನು ಖಿಲಾಫತ್ ಮೂಲಕ ತನ್ನ ದಿವ್ಯಶಕ್ತಿಯನ್ನು ಪ್ರಕಟಿಸುತ್ತಾನೆ. ಅವನು ತನ್ನ ಸಹಾಯ ಮತ್ತು ಸಾಮೀಪ್ಯದ ದೃಶ್ಯಗಳನ್ನು ತೋರಿಸಿಕೊಡುತ್ತಾನೆ. ಹಝ್‌ರತ್ ಮಸೀಹ್ ಮೌಊದ್‌ರವರ(ಅ) ನಂತರ ಆಗಮಿಸಿದ ಖಲೀಫರ ಜೀವಿತ ಕಡೆಗೆ ದೃಷ್ಟಿಹಾಯಿಸಿದರೆ, ಒಂದು ಖಿಲಾಫತ್ ಕಾಲದ ನಂತರ ಮುಂದಿನ ಖಿಲಾಫತ್ ಸ್ಥಾಪಿತವಾಗುವ ಸಂದರ್ಭದಲ್ಲಿ ಅಲ್ಲಾಹನು ತನ್ನ ದಿವ್ಯಶಕ್ತಿಯ ಮತ್ತು ಸಹಾಯದ ವಾಗ್ದಾನವನ್ನು ಹೇಗೆ ಈಡೇರಿಸುತ್ತಾ ಇದ್ದನೆಂಬುದು ಸ್ಪಷ್ಟವಾಗುತ್ತದೆ. ಪ್ರತಿಯೊಬ್ಬ ಖಲೀಫರ ನಿಧನದ ಸಂದರ್ಭದಲ್ಲಿ ಶತ್ರುಗಳು ಹೀಗೆ ಯೋಚಿಸಿದರು: "ಈಗ ಈ ಜಮಾಅತ್ ಒಡಕಿಗೆ ತುತ್ತಾಗುವುದು. ಈಗ ಯಾವುದೇ ನಾಯಕತ್ವ ಅವರನ್ನು ಒಗ್ಗೂಡಿಸಲಾರದು."

ಹಝ್‌ರತ್ ಮಸೀಹ್ ಮೌಊದ್(ಅ) ಈ ಬಗ್ಗೆ ಹೀಗೆ ಹೇಳುತ್ತಾರೆ:

"ಶತ್ರುಗಳು ಉತ್ಸಾಹಭರಿತರಾಗುತ್ತಾರೆ. ಈಗ ಕೆಲಸ ಕೆಟ್ಟು ಹೋಯಿತೆಂದು ಅವರು ಯೋಚಿಸುತ್ತಾರೆ. ಈ ಜಮಾಅತ್ ಈಗ ನಾಶವಾಗುವುದೆಂಥು ದೃಢನಂಬಿಕೆ ಹೊಂದುತ್ತಾರೆ. ಜಮಾಅತಿನ ಸದಸ್ಯರು ಸಹ ಸಂಶಯಿಸಲು ತೊಡಗುತ್ತಾರೆ.... ಆಗ ಅಲ್ಲಾಹನು ಎರಡನೆಯ ಸಲ ತನ್ನ ಬಲಿಷ್ಠ ದಿವ್ಯಶಕ್ತಿಯನ್ನು ಪ್ರಕಟಿಸುತ್ತಾನೆ. ಕುಸಿದು ಬೀಳುತ್ತಿರುವ ಜಮಾಅತನ್ನು ಹಿಡಿದು ನಿಲ್ಲಿಸುತ್ತಾನೆ." (ಅಲ್ ವಸಿಯ್ಯತ್ ಪುಟ 8)

### ಖಿಲಾಫತ್ ಮೂಲಕ ಧರ್ಮದ ಬಲಪಡಿಸುವಿಕೆ

ಖಿಲಾಫತ್‌ನ ಅನುಗ್ರಹಗಳಲ್ಲಿ ಒಂದು ಧರ್ಮದ ಬಲಪಡಿಸುವಿಕೆಯಾಗಿದೆ. ಅಲ್ಲಾಹನು ಆಯತೆ ಇಸ್ತಿಖ್‌ಲಾಫ್‌ನಲ್ಲಿ, ಖಿಲಾಫತ್ ಮೂಲಕ ಧರ್ಮವನ್ನು ಬಲಪಡಿಸುವನು ಎಂದು ಹೇಳಿದ್ದಾನೆ. ಇದು ಖಿಲಾಫತ್ ಮೂಲಕ ಹೊರತು ಬೇರೆ ಯಾವುದೇ ಲೌಕಿಕ ಸಂಸ್ಥೆಯಿಂದ ಮಾಡಲು ಸಾಧ್ಯವಿಲ್ಲ.

ಧರ್ಮದ ಬಲಪಡಿಸುವಿಕೆಗಾಗಿ ಇಸ್ಲಾಮಿನ ಮೊದಲನೆಯ ಕಾಲಘಟ್ಟದಲ್ಲಿ ಮತ್ತು ಎರಡನೆಯ ಕಾಲಘಟ್ಟದಲ್ಲಿ ಅಲ್ಲಾಹನು ಹಂತ ಹಂತವಾಗಿ ಎಷ್ಟು ಚೆನ್ನಾಗಿ ಕೆಲಸಗಳನ್ನು ಈಡೇರಿಸಿದನೆಂದರೆ ಅದರ ಸವಿಸ್ತಾರವಾದ ನಿರೂಪಣೆ ಅಸಾಧ್ಯವೆಂದೇ ತೋರುತ್ತದೆ.

ಹಝ್‌ರತ್ ಅಬೂಬಕರ್(ರ) ಅವರ ನಾಯಕತ್ವ, ಹಝ್‌ರತ್ ಉಮರ್(ರ) ಅವರ ಬುದ್ಧಿಶಾಲಿತ್ವ ಸ್ವತಃ ಒಂದು ಚರಿತ್ರೆ ಆಗಿದೆ. ಹಝ್‌ರತ್ ಉಸ್ಮಾನ್ ಅವರು ಪವಿತ್ರ ಖುರ್‌ಆನನ್ನು ಕ್ರೋಢೀಕರಿಸಿ ಅಧಿಕೃತವಾಗಿ ಪ್ರಕಟಿಸುವ ಬೃಹತ್ತಾದ ಕಾರ್ಯವನ್ನು ಈಡೇರಿಸಿದುದು ಅಲ್ಲಾಹನ ಖಲೀಫರ ಹೊರತು ಬೇರೆ ಯಾರಿಗೆ ತಾನೆ ಮಾಡಲು ಸಾಧ್ಯ? ಹಝ್‌ರತ್ ಅಲಿ(ರ) ಅವರ ಕಾಲದಲ್ಲಿ ನಡೆಸಲಾದ ಶೈಕ್ಷಣಿಕ ಕೆಲಸಗಳು ಸ್ವತಃ ಸಾಕ್ಷ್ಯಾಧಾರಗಳಾಗಿವೆ.

ಇಸ್ಲಾಮಿನ ಎರಡನೆಯ ಕಾಲಘಟ್ಟದಲ್ಲಿ ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರ ಧಾರ್ಮಿಕ ಮತ್ತು ಜ್ಞಾನ ಸಂಬಂಧವಾದ ಅರ್ಹತೆ, ಪವಿತ್ರ ಖುರ್‌ಆನಿನ ದರ್ಸ್, ಅವರ ಭಯ ಭಕ್ತಿಯ ನಾಯಕತ್ವ ಮೊದಲಾದುವು ಸ್ವಕೀಯರನ್ನೂ ಪರಕೀಯರನ್ನೂ ಆಕರ್ಷಿಸುತ್ತಾ ಇತ್ತು. ಅವರನ್ನು ಎಲ್ಲರೂ ಗೌರವದಿಂದ ಕಂಡು ಆದರ ಸೂಚಿಸುತ್ತಿದ್ದರು.

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಕಾಲಘಟ್ಟ ಅಹ್ಮದಿಯತ್ ಮತ್ತು ಇಸ್ಲಾಮಿನ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟ ಕಾಲಘಟ್ಟವಾಗಿದೆ. ಈ ಕಾಲಘಟ್ಟವು ಒಂದು ಮೈಲುಗಲ್ಲಿನ ರೂಪದಲ್ಲಿದೆ. ಅದನ್ನು ದಾಟಿಹೋಗದೆ ಅಹ್ಮದಿಯತಿನ ಅಭಿವೃದ್ಧಿಯ ರಾಜಮಾರ್ಗದಲ್ಲಿ ಹೆಜ್ಜೆಹಾಕಲು ಸಾಧ್ಯವಾಗಲಾರದು. ತಹ್‌ರೀಕ್ ಜದೀದ್, ವಖ್ಫ್ ಜದೀದ್‌ಗಳ ಸ್ಥಾಪನೆ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಮಜ್ಲಿಸ್ ಅನ್‌ಸಾರುಲ್ಲಾ, ಲಜ್ನ ಇಮಾಇಲ್ಲಾಹ್ ಮೊದಲಾದ ಅಧೀನ ಸಂಸ್ಥೆಗಳು ಅವರ ಖಿಲಾಫತ್ ಕಾಲಘಟ್ಟದಲ್ಲಿ ಸ್ಥಾಪಿಸಲ್ಪಟ್ಟವು. ತಫ್‌ಸೀರ್ ಕಬೀರ, ತಫ್‌ಸೀರ್ ಸಗೀರ್ ಮೊದಲಾದುವು ಅವರ ನೆನಪನ್ನು ತಾಜಾ ಇರಿಸಲು ಸಹಾಯಕವಾಗಿವೆ. ಐವತ್ತ ಎರಡು ವರ್ಷಗಳ ಅವರ ಖಿಲಾಫತ್ ಕಾಲಾವಧಿಯಲ್ಲಿ ಅಹ್ಮದಿಯತ್‌ಗೆ ಲಭಿಸಿದ ಶಕ್ತಿ ಮತ್ತು ಜಯಗಳ ಬಗ್ಗೆ ಸವಿಸ್ತಾರವಾಗಿ ಬರೆಯುವುದು ಅಸಾಧ್ಯವೇ ಆಗಿದೆ. ಲೋಕದಾದ್ಯಂತ ಅಹ್ಮದಿಯತನ್ನು ಪ್ರಚಾರಗೊಳಿಸಿದುದು ಮತ್ತು ಯುರೋಪಿನ ಮುಖ್ಯ ನಗರಗಳಲ್ಲಿ ಅಹ್ಮದಿಯಾ ಕೇಂದ್ರಗಳ ಮತ್ತು ಮಸ್‌ಜಿದ್‌ಗಳ ಸ್ಥಾಪನೆ ಅವರ ಕಾಲದಲ್ಲಿಯೇ ನಡೆಯಿತು. ಯಾವುದನ್ನು ವಿವರಿಸಲಿ ಯಾವುದನ್ನು ಬಿಟ್ಟು ಬಿಡಲಿ ಎಂದು ನಿರ್ಧರಿಸಲಾಗದ ಸ್ಥಿತಿ.

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ – ಮುಸ್ಲಿಹ್ ಮೌಊದ್(ರ) – ಅವರು ಒಂದು ಭಾಷಣದಲ್ಲಿ ಹೀಗೆ ಹೇಳಿದರು:

"ಮುಂದಿನ ಕಾಲದಲ್ಲಿ ಇಸ್ಲಾಮಿನ ಚರಿತ್ರೆ ಬರೆಯುವ ಚರಿತ್ರೆಗಾರ ನನ್ನ ಬಗ್ಗೆ ಪ್ರಸ್ತಾಪಿಸಲು ನಿರ್ಬಂಧಿತನಾಗುವನು. ಹೀಗೆ ಮಾಡದಿದ್ದರೆ ಅವನು ಚರಿತ್ರೆಯಲ್ಲಿ ಎಂತಹ ಖಾಲಿಸ್ಥಳವನ್ನು ಬಿಟ್ಟು ಹೋಗುವನೆಂದರೆ ಅದನ್ನು ಭರ್ತಿಮಾಡಬಲ್ಲವರು ಬೇರೆ ಯಾರೂ ಅವನಿಗೆ ದೊರಕಲಾರರು."

ಏಕ್ ವಖ್ತ್ ಆಯೇಗಾ ಕೆ ಕಹೇಂಗೆ ತಮಾಮ್ ಲೋಗ್
ಮಿಲ್ಲತ್ ಕೆ ಇಸ್ ಫಿದಾಯೀಕೆ ಪೆ ರಹ್ಮತ್ ಖುದಾ ಕರೇ.
ಕಾಲ ಬರಲಿದೆ. ಎಲ್ಲರೂ ಹೇಳುವರು ಸಮುದಾಯದ
ಈ ಪ್ರೇಮಿಗೆ ಅಲ್ಲಾಹನು ಅನುಗ್ರಹ ಸುರಿಸಲಿ.

ಧರ್ಮವನ್ನು ಬಲಪಡಿಸುವ ಈ ಕೆಲಸ ತೃತೀಯ ಖಿಲಾಫತ್ ಕಾಲದಲ್ಲಿಯೂ ಜಾರಿಯಲ್ಲಿತ್ತು. ಅಹ್ಮದಿಯಾ ಜಮಾಅತ್ ಬಲಿಷ್ಠ ವಾಗುತ್ತಾ ಹೋಯಿತು.

ಚತುರ್ಥ ಖಿಲಾಫತ್ ಕಾಲಘಟ್ಟದಲ್ಲಿ ಅಹ್ಮದಿಯಾ ಜಮಾಅತಿಗೆ

ಲಭಿಸಿದ ಜಯಗಳ ಬಗ್ಗೆ ಬರೆಯುವುದು ಅಸಾಧ್ಯವೇ ಆಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು) ಒಮ್ಮೆ ಹೀಗೆಂದರು:

"ಸಮಯ ಬಹಳ ಕಡಿಮೆ ಇದೆ; ಕೆಲಸ ಬಹಳ ಹೆಚ್ಚು ಇದೆ."

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರ) ಅವರು ಬಹಳ ಕಡಿಮೆ ಸಮಯದ ಕಾಲಾವಧಿಯಲ್ಲಿ ಜಮಾಅತ್ ಬಲಿಷ್ಠ ಗೊಳ್ಳುವಂತೆ ಮಾಡಿದ ಕೆಲಸ ಆಶ್ಚರ್ಯಕರವಾಗಿದೆ.

ಚತುರ್ಥ ಖಿಲಾಫತ್ ಕಾಲದಲ್ಲಿ ಜಮಾಅತಿಗೆ ಲಭಿಸಿದ ಕೆಲವು ಅನುಗ್ರಹಗಳ ಬಗ್ಗೆ ಸಂಕ್ಷಿಪ್ತವಾಗಿ ಕೆಳಗೆ ಪ್ರಸ್ತಾಪಿಸಲಾಗುತ್ತದೆ:

**ಎಂ.ಟಿ.ಎ. (M.T.A.):** ಚತುರ್ಥ ಖಿಲಾಫತ್ ಕಾಲದ ಎಲ್ಲದಕ್ಕಿಂತಲೂ ದೊಡ್ಡದಾದ ಮತ್ತು ಅತ್ಯಂತ ಸಿಹಿಯಾದ ಫಲವು ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ (M.T.A.) ಆಗಿದೆ. ಅದರ ಮೂಲಕ ನಮ್ಮ ಮನೆಗಳ ಚಿತ್ರವು ಬದಲಾವಣೆಗೊಂಡಿತು. ನಾವು ಹಝ್ರತ್ ಖಲೀಫತುಲ್ ಮಸೀಹ್‌ರವರನ್ನು ನೇರವಾಗಿ ಕಾಣಬಲ್ಲೆವು ಮತ್ತು ಮಾತುಗಳನ್ನು ಕೇಳಬಲ್ಲೆವು.

M.T.A. ಮೂಲಕ ನಾವು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ(ರ) ಜನಾಝ ಕಾರ್ಯಕ್ರಮಗಳನ್ನು ನೋಡಿದೆವು. ಹೊಸ ಖಲೀಫರನ್ನು ಸ್ವಾಗತಿಸಲು ಜಮಾಅತ್‌ಗೆ ಉತ್ತಮ ಸಂದರ್ಭ ಲಭಿಸಿತು.

**ಖಾದಿಯಾನಿಗೆ ಭೇಟಿ:** 1991ರಲ್ಲಿ ಖಾದಿಯಾನಿನ ಜಲ್ಸಾ ಸಾಲಾನದ ಶತವಾರ್ಷಿಕ ದಿನಾಚರಣೆಗಾಗಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರು(ರಹ್) ವೈಭವಪೂರ್ವಕವಾಗಿ ಆಗಮಿಸಿದರು. ಹಿಂದೂಸ್ಥಾನದ ಚರಿತ್ರೆಯಲ್ಲಿ ಈ ಸಮಾರಂಭಕ್ಕೆ ವಿಶಿಷ್ಟ ಸ್ಥಾನವಿದೆ.

**ದಅವತೆ ಇಲಲ್ಲಾಹ್ ಅಭಿಯಾನ:** ಈ ಅಭಿಯಾನದ ಫಲವಾಗಿ ಹೊಸ ಹೊಸ ಜನಾಂಗಗಳು ಅಹ್ಮದಿಯತಿನ ಪತಾಕೆಯ ಕೆಳಗೆ ಜಮಾಯಿಸಿದುವು.

**ತಹ್‌ರೀಕೆ ವಕ್‌ಫೇ ನೌ:** ಅಹ್ಮದಿಯತಿನ ಅಭಿವೃದ್ಧಿ ಮತ್ತು ಹೊಸದಾಗಿ ಜಮಾಅತ್‌ಗೆ ಸೇರುವವರಿಗೆ ತರಬೇತಿ ನೀಡಲು ಮುಬಲ್ಲಿಗರನ್ನು ಮತ್ತು ಮುಅಲ್ಲಿಮ್‌ಗಳನ್ನು ತಯಾರುಮಾಡಲು ಈ ವ್ಯವಸ್ಥೆ ಅನುಕೂಲಕರವಾಗಿದೆ. ಇದರ ಉತ್ತಮ ಪ್ರಭಾವವು ಮುಂದಿನ ಅನೇಕ ಶತಮಾನಗಳ ಕಾಲ ಮುಂದುವರಿಯಲಿದೆ.

**ಸದ್‌ಸಾಲ ಜಶನೆ ತಶಕ್ಕುರ್:** ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡು ನೂರು ವರ್ಷ ಪೂರೈಸಿದ ಸಮಾರಂಭವು 1989ರಲ್ಲಿ ಜರಗಿತು. ಆಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಅವರು ಹೇಳಿದರು:

"ನಮಗೆ ಎಂತಹ ಸಂತೋಷಗಳು ಬರಲಿವೆ ಎಂದರೆ ನಮ್ಮ ರಾತ್ರಿಗಳು ಸಹ ಹಗಲುಗಳಾಗುವುವು.... ಹೊಸ ಶತಮಾನ ಅಹ್ಮದಿಯತ್‌ಗಾಗಿ ಹೊಸ ಸಂತೋಷಗಳನ್ನು ತೆಗೆದುಕೊಂಡು ಬರಲಿದೆ. ಆದುದರಿಂದ ಸಂತೋಷದಿಂದ ನೆಗೆಯಿರಿ, ಹಾರಿರಿ ಮತ್ತು ಅಲ್ಲಾಹನ ಅನುಗ್ರಹಗಳಿಗಾಗಿ ಕೃತಜ್ಞತೆ ಅರ್ಪಿಸಲು ಸಿದ್ಧತೆ ನಡೆಸಿರಿ." (ಬದ್ರ್, 20/27 ಎಪ್ರಿಲ್ 1989)

**ಲಂಡನ್‌ಗೆ ವಲಸೆ:** ಜನರಲ್ ಝಿಯಾ ಉಲ್ ಹಕ್ ಅಹ್ಮದಿಯತ್ ವಿರುದ್ಧ ಆರ್ಡಿನೆನ್ಸ್ ಜಾರಿಗೊಳಿಸಿದಾಗ ಹುಝೂರ್‌ರವರು ಲಂಡನಿಗೆ ಕುಟುಂಬ ಸಮೇತ ವಲಸೆಹೋದರು. ಅದರ ಫಲವಾಗಿ ಅಲ್ಲಾಹನು ಜಮಾಅತಿಗಾಗಿ ಅಗಣಿತ ಅನುಗ್ರಹಗಳ ಬಾಗಿಲುಗಳನ್ನು ತೆರೆದನು.

**ವಿವಿಧ ದೇಶಗಳಿಗೆ ಪ್ರಯಾಣ:** ಜಮಾಅತಿನ ಅಭಿವೃದ್ಧಿ ಮತ್ತು ಪ್ರಚಾರಕ್ಕಾಗಿ ಅನೇಕ ದೇಶಗಳಿಗೆ ಅವರು ಸಂದರ್ಶನ ನೀಡಿದರು.

**ಹೋಮಿಯೋಪೆಥಿ ಚಿಕಿತ್ಸೆ :** ಅವರು ಪ್ರಾರಂಭಿಸಿದ ಈ ಯೋಜನೆ ಲೋಕದಾದ್ಯಂತ ಮತ್ತು ವಿಶಿಷ್ಟವಾಗಿ ಬಡದೇಶಗಳಲ್ಲಿ ಫಲಪ್ರದವಾಯಿತು.

**ಪವಿತ್ರ ಖುರ್‌ಆನಿನ ಭಾಷಾಂತರ:** ಚತುರ್ಥ ಖಿಲಾಫತ್ ಕಾಲದಲ್ಲಿ 2004ರ ತನಕ 58 ಭಾಷೆಗಳಲ್ಲಿ ಪವಿತ್ರ ಖುರ್‌ಆನ್ ಭಾಷಾಂತರ ಪೂರ್ಣಗೊಂಡು ಪ್ರಕಟಿಸಲ್ಪಟ್ಟಿತು.

**ಆರ್ಥಿಕ ತ್ಯಾಗದ ಹೊಸ ಪದ್ಧತಿಗಳು:** ಅವರ ಖಿಲಾಫತ್ ಕಾಲದಲ್ಲಿ ಸದ್‌ಸಾಲ ಜುಬಿಲಿ ಫಂಡ್, ತೌಸೀಯೆ ಮಕಾನೆ ಭಾರತ್, ಬಿಲಾಲ್ ಫಂಡ್, ಇಶಾಅತೆ ಖುರ್‌ಆನ್ ಫಂಡ್, ಮಸ್‌ಜಿದ್ ಬೈತುಲ್ ಫುತೂಹ್ ಫಂಡ್, ಬೋಸ್ನಿಯಾ ಫಂಡ್, ಮರ್‌ಯಮ್ ಶಾದೀ ಫಂಡ್ – ಇತ್ಯಾದಿ ನಿಧಿಗಳನ್ನು ಜಾರಿ ಗೊಳಿಸಲಾಯಿತು.

**ಸ್ಪೈನಿನಲ್ಲಿ ಮಸ್‌ಜಿದ್ ಬಶಾರತ್ ಉದ್ಘಾಟನೆ:** 700 ವರ್ಷಗಳ ನಂತರ ಸ್ಪೈನ್‌ನಲ್ಲಿ ನಿರ್ಮಿಸಲಾದ ಪ್ರಥಮ ಮಸ್‌ಜಿದನ್ನು ಅವರು 1982ರಲ್ಲಿ ಉದ್ಘಾಟಿಸಿದರು.

**ವಿವಿಧ ದೇಶಗಳಲ್ಲಿ ವಾರ್ಷಿಕ ಸಮ್ಮೇಳನಗಳು:** ರಬ್‌ವದಲ್ಲಿ ವಾರ್ಷಿಕ ಜಲ್ಸಾವನ್ನು ಪಾಕಿಸ್ತಾನ ಸರಕಾರ ನಿಷೇಧಿಸಿದಾಗ ಲೋಕದಾದ್ಯಂತ ಎಲ್ಲಾ ದೇಶಗಳಲ್ಲಿ ವಾರ್ಷಿಕ ಸಮ್ಮೇಳನಗಳನ್ನು ನಡೆಸಲು ಹುಝೂರ್‌ರವರು ನಿರ್ದೇಶಿಸಿದರು. ಹಾಗೆ ಬ್ರಿಟನ್, ಜರ್ಮನಿ, ಅಮೇರಿಕ, ಕೆನಡಾ, ಪಶ್ಚಿಮ ಆಫ್ರಿಕಾದ ದೇಶಗಳಲ್ಲಿ ವಾರ್ಷಿಕ ಸಮ್ಮೇಳನಗಳನ್ನು ನಡೆಸಲಾಗುತ್ತದೆ. ಕೆಲವು ದೇಶಗಳ ಜಲ್ಸಾಗಳಲ್ಲಿ ಖಲೀಫರು ಸ್ವತಃ ಭಾಗವಹಿಸುತ್ತಾರೆ.

**100 ಮಸ್‌ಜಿದ್‌ಗಳ ನಿರ್ಮಾಣದ ಅಭಿಯಾನ:** ಪಾಕಿಸ್ತಾನದಲ್ಲಿ ಅಹ್ಮದಿಯರ ಕೆಲವು ಮಸ್‌ಜಿದ್‌ಗಳನ್ನು ಕೆಡವಿ ಹಾಕಿದಾಗ ಲೋಕದಾದ್ಯಂತ ಹೊಸ ಮಸ್‌ಜಿದ್‌ಗಳನ್ನು ನಿರ್ಮಿಸುವ ಅಭಿಯಾನವನ್ನು ಅವರು ಪ್ರಾರಂಭಿಸಿದರು. ಜರ್ಮನ್ ಜಮಾಅತ್ 100 ಹೊಸ ಮಸ್‌ಜಿದ್‌ಗಳನ್ನು ನಿರ್ಮಿಸಲು ಅವರು ಆದೇಶಿಸಿದರು.

**ಧರ್ಮ ಪ್ರಚಾರ ವಿಶಾಲಗೊಳಿಸಲು ವಿವಿಧ ಭಾಷಾ ವಿಭಾಗಗಳು:** ಹಝ್ರತ್ ಖಲೀಫರು ಲಂಡನಿಗೆ ಬಂದ ಬಳಿಕ ಕೂಡಲೇ ಧರ್ಮಪ್ರಚಾರವನ್ನು ವಿಶಾಲಗೊಳಿಸಲು ಅರಬಿ, ಜರ್ಮನ್, ಫ್ರೆಂಚ್, ಬಂಗಾಳಿ ಭಾಷಾ ವಿಭಾಗಗಳನ್ನು ಪ್ರಾರಂಭಿಸಿದರು.

**ಮರ್‌ಯಮ್ ಶಾದೀ ಫಂಡ್:** ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರ) ಅವರು ಮೃತರಾಗುವುದಕ್ಕೆ ಕೆಲವು ವಾರಗಳ ಮೊದಲು ಈ ಫಂಡ್ ಸ್ಥಾಪಿಸಲಾಯಿತು. ಬಡ ಹೆಣ್ಣುಮಕ್ಕಳ ಮದುವೆಗೆ ಸಹಾಯ ಮಾಡಲು ಈ ಫಂಡನ್ನು ಬಳಸಲಾಗುತ್ತದೆ.

## ಪಂಚಮ ಖಿಲಾಫತ್ : ಅನುಗ್ರಹೀತ ಕಾಲಘಟ್ಟದ ಆರಂಭ

2003ರಲ್ಲಿ ಅಹ್ಮದಿಯಾ ಜಮಾಅತಿನ ಪಂಚಮ ಖಿಲಾಫತ್ ಆರಂಭಗೊಂಡ ನಂತರ ಜಮಾಅತ್ ಅನೇಕ ತರ ಅಭಿವೃದ್ಧಿಗಳಿಸಿದೆ.

### ಮಸ್‌ಜಿದ್ ಬೈತುಲ್ ಫುತೂಹ್ ಉದ್ಘಾಟನೆ

ಯುರೋಪಿನ ಅತ್ಯಂತ ದೊಡ್ಡ ಮಸ್‌ಜಿದ್ ಆಗಿರುವ ಬೈತುಲ್ ಫುತೂಹ್‌ನ್ನು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಉದ್ಘಾಟಿಸಿದರು.

**ವಸಿಯ್ಯತ್ ಪದ್ಧತಿ ಬಗ್ಗೆ ಗಮನಿಸಲು ನಿರ್ದೇಶ**

ಆಗಸ್ಟ್ 2005ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಹೀಗೆ ಹೇಳಿದರು:

"ಒಂದು ವರ್ಷದಲ್ಲಿ ಕನಿಷ್ಠ ಹದಿನೈದು ಸಾವಿರ ಮಂದಿ ವಸಿಯ್ಯತ್ ವ್ಯವಸ್ಥೆಗೆ ಸೇರಬೇಕೆಂದು ನನ್ನ ಅಪೇಕ್ಷೆ ಆಗಿದೆ."

ಅಲ್ಲಾಹನು ಈ ಅಪೇಕ್ಷೆಯನ್ನು ಈಡೇರಿಸಿದನು. 99 ವರ್ಷಗಳಲ್ಲಿ ಎಷ್ಟು ಜನರು ವಸಿಯ್ಯತ್ ಮಾಡಿದರೋ ಅದರ ಅರ್ಧಾಂಶದಷ್ಟು ಜನರು ಒಂದೇ ವರ್ಷದಲ್ಲಿ ವಸಿಯ್ಯತ್‌ಗೆ ಸೇರಿದರು. 2008ರ ಖಿಲಾಫತ್ ಜೂಬಿಲಿ ತನಕ ಚಂದಾದಾರರಲ್ಲಿ ಅರ್ಧಾಂಶದಷ್ಟು ಜನರಾದರೂ ವಸಿಯ್ಯತ್ ಮಾಡಬೇಕೆಂದು ಹುಝೂರ್‌ರವರು ಹೇಳಿರುವರು.

**ಖಾದಿಯಾನಿಗೆ ಭೇಟಿ**

2005ರಲ್ಲಿ ಹುಝೂರ್‌ರವರು ಖಾದಿಯಾನಿಗೆ ಭೇಟಿ ನೀಡಿದಾಗ ಪ್ರಥಮ ಬಾರಿಗೆ 70 ಸಾವಿರ ಜನರು ಖಾದಿಯಾನ ಜಲ್ಸಾದಲ್ಲಿ ಭಾಗವಹಿಸಿದರು.

**M.T.A. ಮೂಲಕ ನೇರಪ್ರಸಾರ**

ಜಲ್ಸಾದ ಕಾರ್ಯಕ್ರಮಗಳು, ಶುಕ್ರವಾರದ ಖುತುಬ, ಈದ್ ಖುತುಬ M.T.A. ಮೂಲಕ ನೇರಪ್ರಸಾರ ಮಾಡಲಾಯಿತು.

**ಖಿಲಾಫತ್ ಜೂಬಿಲಿಗೆ ಸಿದ್ಧತೆ**

2008ರ ಖಿಲಾಫತ್ ಜೂಬಿಲಿಗೆ ಸಿದ್ಧತೆ ನಡೆಸಲು ಹುಝೂರ್‌ರವರು ನಫ್ಲೀ ಉಪವಾಸ, ನಫ್ಲೀ ನಮಾಝ್ ಮತ್ತು ದುಆಗಳ ಕಾರ್ಯಕ್ರಮ ರೂಪಿಸಿದರು.

**ಭಯಭೀತಿ ಮತ್ತು ನಿರ್ಭೀತಿಯ ಸ್ಥಿತಿ**

1934ರಲ್ಲಿ ಅಹ್ರಾರಿಗಳಿಂದ, 1953ರಲ್ಲಿ ಮೌಲಾನ ಅಬುಲ್ ಆಲಾ ಮೌದೂದಿ ನಾಯಕತ್ವದಲ್ಲಿ, 1973ರಲ್ಲಿ ಜುಲ್ಫಿಕರಲಿ ಭುಟ್ಟೋ ಸರಕಾರದಿಂದ ಮತ್ತು 1984ರಲ್ಲಿ ಜನರಲ್ ಝಿಯಾಉಲ್ ಹಕ್ ಸರಕಾರದಿಂದ ಭಯ ಮತ್ತು ದೌರ್ಜನ್ಯದ ಅನೇಕ ಕಾಲಘಟ್ಟಗಳನ್ನು ಅಹ್ಮದಿಯಾ ಜಮಾಅತ್ ಎದುರಿಸಬೇಕಾಯಿತು. ಆಧುನಿಕ ಫಿರ್‌ಔನ್ ಜನರಲ್ ಝಿಯಾಉಲ್ ಹಕ್ ಹೀಗೆ ಘೋಷಿಸಿದನು: "ಅಹ್ಮದಿಯತಿನ ನಾಶ ನನ್ನ ಕೈಗಳ ಮೂಲಕ ನಡೆಯುವುದು ಎಂಬುದು ವಿಧಿಸಲ್ಪಟ್ಟಿದೆ. ಆದುದರಿಂದ ನಾನೇ ಅದನ್ನು ನಾಶಮಾಡುವೆನು." ಅದಕ್ಕಾಗಿ ಆತನು ಅನೇಕ ವಿಫಲ ಯತ್ನಗಳನ್ನು ಮಾಡಿದನು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಹೀಗೆ ಹೇಳಿದರು:

"ಅಲ್ಲಾಹನಾಣೆ, ನಾನು ಅಹ್ಮದಿಯತ್‌ಗಾಗಿ ಜೀವವನ್ನು ಅರ್ಪಿಸುವೆನು ಎಂದು ಹಿಂದಿನ ರಾತ್ರಿ ನಾನು ಪ್ರತಿಜ್ಞೆ ಮಾಡಿದ್ದೆನು. ಲೋಕದ ಯಾವ ಶಕ್ತಿಗೂ ನನ್ನನ್ನು ಅದರಿಂದ ತಡೆಯಲು ಸಾಧ್ಯವಾಗಲಾರದು. ಅದೇ ರಾತ್ರಿ ಅಲ್ಲಾಹನು ನನಗೆ ಎಂತಹ ಸಮಾಚಾರ ನೀಡಿದನೆಂದರೆ ಅದರ ಫಲವಾಗಿ ನನ್ನ ಮನೋಭಾವ ಬದಲಾವಣೆ ಹೊಂದಿತು. ಜಮಾಅತ್ ವಿರುದ್ಧ ಎಂತಹ ಗೂಢ ತಂತ್ರಗಳನ್ನು ಹೂಡಲಾಗಿದೆ ಎಂದು ನನಗೆ ಮನವರಿಕೆ ಆಯಿತು. ಅವರ ಗೂಢ ತಂತ್ರಗಳನ್ನು ಪರಾಜಯಗೊಳಿಸುವುದು ನನ್ನ ಕರ್ತವ್ಯವೆಂದು ನಾನು ನಿರ್ಧರಿಸಿದೆನು. ಅವರ ಗೂಢತಂತ್ರವೇನೆಂದರೆ ಖಲೀಫರನ್ನು ಹತ್ಯೆ ಮಾಡಬೇಕು. ಆಗ ಜಮಾಅತ್ ರೊಚ್ಚಿಗೆದ್ದರೆ ಖಿಲಾಫತ್ ವ್ಯವಸ್ಥೆ ಮೇಲೆ ಆಕ್ರಮಣ ಮಾಡಬೇಕು. ರಬ್ವವನ್ನು ಸೈನ್ಯದ ಮೂಲಕ ಧ್ವಂಸಗೊಳಿಸಬೇಕು. ಅಲ್ಲಿ ಖಿಲಾಫತಿನ ಹೊಸ ಚುನಾವಣೆ ನಡೆಯದ ಹಾಗೆ ಮಾಡಬೇಕು. ಖಿಲಾಫತ್ ವ್ಯವಸ್ಥೆಯನ್ನೇ ಕೊನೆಗೊಳಿಸಬೇಕು."

ಆದರೆ ಶತ್ರುಗಳ ಗೂಢತಂತ್ರಗಳ ಅಂತಿಮ ಪರಿಣಾಮ ಏನಾಯಿತು? ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರನ್ನು(ರಹ್) ಅಲ್ಲಾಹನು ಸುರಕ್ಷಿತವಾಗಿ ಲಂಡನಿಗೆ ತಲಪಿಸಿದನು. ಝಿಯಾ ತನ್ನ ಅನೇಕ ಸೈನ್ಯಾಧಿಕಾರಿಗಳ ಜೊತೆಗೆ ವಿಮಾನಾಪಘಾತದಲ್ಲಿ ಮರಣಗೊಂಡನು. ಆತನ ಗೂಢತಂತ್ರಗಳು ನಿಷ್ಫಲವಾದುವು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಹೀಗೆ ಹಾಡಿದ್ದರು :

ಕಲ್ ಚಲೀ ಥೀ ಜೋ ಲೇಖೂ ಪೆ ತೇಗೆ ದುಆ

ಆಜ್ ಭೀ ಇಝುನ್ ಹೋಗಾ ತೋ ಚಲ್ ಜಾಯೇಗಾ

(ನಿನ್ನೆ ಲೇಖ್‌ರಾಮನ ಮೇಲೆ ಪ್ರಾರ್ಥನೆಯ ಖಡ್ಗ ಚಲಿಸಿದ್ದರೆ, ಇಂದು ಸಹ ಅಲ್ಲಾಹನು ಅನುಮತಿಸುವುದಾದರೆ ಅದು ಚಲಿಸುವುದು.)

**ಮುಂದಿನ ಖಲೀಫರಿಗೆ ಶುಭವಾರ್ತೆ**

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಮುಂದೆ ಸಂಭವಿಸಲಿರುವ ಭಯದ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ ಅಲ್ಲಾಹನ ಸಹಾಯದ ಭರವಸೆ ನೀಡುತ್ತಾರೆ. ಅವರು ಹೀಗೆಂದರು:

"ಈ ವಿರೋಧದ ನಂತರ ಮುಂದೆ ಸಂಭವಿಸಲಿರುವ ವಿರೋಧವು ವಿಶಾಲವಾದ ತಳಹದಿ ಹೊಂದಿರುವುದು. ಒಂದೆರಡು ಸರಕಾರಗಳಲ್ಲ, ದೊಡ್ಡ ದೊಡ್ಡ ಸರಕಾರಗಳು ಒಟ್ಟಿಗೆ ಸೇರಿ ಜಮಾಅತನ್ನು ನಾಶಗೊಳಿಸುವ ಗೂಢತಂತ್ರ ರೂಪಿಸುವುವು. ಅವರ ಗೂಢತಂತ್ರಗಳು ಎಷ್ಟು ಹಿರಿದಾಗಿರುತ್ತವೆಯೋ ಅಷ್ಟೇ ಪ್ರಮಾಣದ ಸೋಲು ಅವರಿಗೆ ವಿಧಿಸಲ್ಪಡುವುದು.... ಚಿಕ್ಕಪುಟ್ಟ ವಿರೋಧಗಳನ್ನು ಸಹ ಅಳಿಸಿಬಿಡುವವನಾದ ಅಲ್ಲಾಹನು ಮುಂದೆ ಸಂಭವಿಸಲಿರುವ ದೊಡ್ಡ ಶಕ್ತಿಶಾಲಿ ವಿರೋಧಗಳನ್ನೂ ನಾಶಮಾಡುವನು. ಮುಂದೆ ಬರಲಿರುವ ಬಲಿಷ್ಠ ವಿರೋಧಗಳನ್ನು ಅವನು ನುಚ್ಚುನೂರು ಮಾಡುವನು. ಅವರ ಗುರುತುಗಳನ್ನು ಲೋಕದಿಂದ ಅಳಿಸಿಬಿಡುವನು. ಜಮಾಅತ್ ಅಹ್ಮದಿಯಾ ಜಯದ ನಂತರ ಇನ್ನೊಂದು ಜಯದ ಹಂತವನ್ನು ಪಡೆಯುವುದು. ಲೋಕದ ಯಾವುದೇ ಶಕ್ತಿ ಅಲ್ಲಾಹನ ಈ ವಿಧಿನಿರ್ಣಯವನ್ನು ಬದಲಾಯಿಸಲು ಶಕ್ತವಾಗಲಾರದು." (ಬದ್ರ್ 23-8-1984)

ಜಮಾಅತಿನ ಮುಂದಿನ ಖಲೀಫರನ್ನು ಸಂಬೋಧಿಸಿ ಅವರು ಹೇಳುತ್ತಾರೆ:

"ನನಗಿಂತ ಮೊದಲಿನ ಖಲೀಫರು ತಮ್ಮ ನಂತರ ಬರಲಿರುವ ಖಲೀಫರಿಗೆ ಧೈರ್ಯಕೊಟ್ಟಿದ್ದರು. ನೀವು ದೇವನ ಬಗ್ಗೆ ಶುಭಪ್ರತೀಕ್ಷೆ ಹೊಂದಿರಿ; ಯಾವುದೇ ಶತ್ರುವಿಗೆ ಭಯಪಡಬಾರದು ಎಂದು ಅವರು ಹೇಳಿದ್ದರು. ನಾನು ಅಲ್ಲಾಹನ ಆಣೆಹಾಕಿ ಮುಂದಿನ ಖಲೀಫರೊಂದಿಗೆ ಹೇಳಬಯಸುತ್ತೇನೆ: ನೀವು ಧೈರ್ಯ ಹೊಂದಬೇಕು. ನನ್ನ ಹಾಗೆ ಧೈರ್ಯ ಮತ್ತು ಸಹನೆ ತೋರಿಸಬೇಕು. ಲೋಕದ ಯಾವುದೇ ಶಕ್ತಿಗೆ ಭಯಪಡಬಾರದು." (ಪ್ರಥಮ ಯುರೋಪಿಯನ್ ಇಜ್ತಿಮಾ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ 29-7-1984)

**ಪ್ರಾರ್ಥನೆಗಳ ಅಂಗೀಕಾರ –**
**ಖಿಲಾಫತ್‌ನ ಅನುಗ್ರಹಗಳಲ್ಲಿ ಒಂದು ಮುಖ್ಯಭಾಗವಾಗಿದೆ**

ಖಲೀಫರೊಂದಿಗೆ ಅಲ್ಲಾಹನು ನೇರ ಸಂಬಂಧ ಹೊಂದಿರುತ್ತಾನೆ. ಅವರು ಹಬ್‌ಲುಲ್ಲಾಹ್ (ಅಲ್ಲಾಹನ ಪಾಶದ) ಸ್ಥಾನಹೊಂದಿರುತ್ತಾರೆ. ಅಲ್ಲಾಹನು ಖಲೀಫರ ಪ್ರಾರ್ಥನೆಗಳನ್ನು ಹೆಚ್ಚು ಹೆಚ್ಚಾಗಿ ಅಂಗೀಕರಿಸುತ್ತಾನೆ. ಜಮಾಅತ್‌ಗಾಗಿ ಅವರು ಮಾಡುವ ಪ್ರಾರ್ಥನೆಗಳು ಮತ್ತು ವ್ಯಕ್ತಿಗಳಿಗಾಗಿ ಅವರು ಮಾಡುವ ಪ್ರಾರ್ಥನೆಗಳು ಸಹ ಅಲ್ಲಾಹನಿಂದ ಅಂಗೀಕಾರ ಪಡೆಯುತ್ತವೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೀಗೆ ಹೇಳಿದರು:

"ಅಲ್ಲಾಹನು ಯಾರನ್ನಾದರೂ ಖಲೀಫರನ್ನಾಗಿ ಮಾಡಿದರೆ ಅವರ ಪ್ರಾರ್ಥನೆಗಳ ಅಂಗೀಕಾರವು ಹೆಚ್ಚಾಗುತ್ತದೆ. ಖಲೀಫರ ಪ್ರಾರ್ಥನೆ ಅಂಗೀಕರಿಸಲ್ಪಡದಿದ್ದರೆ ಅಲ್ಲಾಹನು ಸ್ವತಃ ಮಾಡಿದ ಆಯ್ಕೆಯನ್ನು ತಾನೇ ಅಪಮಾನಿಸಿದ ಹಾಗಾಗುತ್ತದೆ."

(ಮನ್‌ಸಬೆ ಖಿಲಾಫತ್ – ಪುಟ 65)

ಅವರು ಪುನಃ ಹೇಳಿದರು:

"ನಿಮಗಾಗಿ ಹೆಚ್ಚು ಪ್ರಾರ್ಥನೆ ಮಾಡಲು ಅಲ್ಲಾಹನು ನನಗೆ ಅನುಗ್ರಹಿಸಲಿ ಎಂದು ನೀವು ನನಗಾಗಿ ಪ್ರಾರ್ಥಿಸಿರಿ. ಎಲ್ಲಾ ವಿಧಗಳ ಆಲಸ್ಯಗಳನ್ನು ದೂರಸರಿಸಿ ಚುರುಕುತನವನ್ನು ಅಲ್ಲಾಹನು ಉಂಟುಮಾಡಲಿ. ನೀವು ಒಬ್ಬೊಬ್ಬರಾಗಿ ಮಾಡುವ ಪ್ರಾರ್ಥನೆಗಳಿಗಿಂತ ನಾನು ಮಾಡುವ ಪ್ರಾರ್ಥನೆ ದೇವರಿಚ್ಛಿಸಿದರೆ ಹೆಚ್ಚು ಶಕ್ತಿಶಾಲಿ ಆಗುವುದು." (ಮನ್‌ಸಬೆ ಖಿಲಾಫತ್ – ಪುಟ 65)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಹೀಗೆ ಹೇಳಿದರು:

"ಒಬ್ಬ ಅಹ್ಮದಿಗೆ ಖಿಲಾಫತ್ ಪದವಿ ಬಗ್ಗೆ ಗೌರವವಿಲ್ಲದಿದ್ದರೆ, ಅದರೊಂದಿಗೆ ಸತ್ಯವಾದ ಪ್ರೀತಿ ಇಲ್ಲದಿದ್ದರೆ, ಅದರೊಂದಿಗೆ ನಿಕಟ ಸಂಬಂಧ ಸ್ಥಾಪಿಸುವುದಿಲ್ಲವಾದರೆ, ಆತನ ಬಗ್ಗೆ ಖಲೀಫರು ಮಾಡುವ ಪ್ರಾರ್ಥನೆ ಅಂಗೀಕರಿಸಲ್ಪಡಲಾರದು. ಯಾರು ಪ್ರಾಮಾಣಿಕ ನಿಷ್ಠೆಯಿಂದ ಪ್ರಾರ್ಥನೆಗಾಗಿ ಬರೆಯುತ್ತಾರೋ ಅವರ ಬಗ್ಗೆ ಮಾಡುವ ಪ್ರಾರ್ಥನೆ ಅಲ್ಲಾಹನಿಂದ ಅಂಗೀಕರಿಸಲ್ಪಡುವುದು." (ಅಲ್‌ಫಝ್ಲ್ 27-7-1982)

**ಖಿಲಾಫತ್ ಅನುಗ್ರಹಗಳ ಲಾಭಪಡೆಯಿರಿ**

ಆಧ್ಯಾತ್ಮಿಕ ಪ್ರಪಂಚದ ಕೇಂದ್ರಬಿಂದು ಪ್ರವಾದಿ ಆಗಿದ್ದಾರೆ. ಪ್ರವಾದಿಗಳು ಅಲ್ಲಾಹನಿಂದ ಅನುಗ್ರಹಗಳನ್ನು ನೇರವಾಗಿ ಪಡೆದು ಜನರ ಮೇಲೆ ಸುರಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು:

"ಸಂದೇಶವಾಹಕರ ಮತ್ತು ಪ್ರವಾದಿಗಳ ಆಗಮನದ ಉದ್ದೇಶ ಅಲ್ಲಾಹನ ಅಸ್ತಿತ್ವವನ್ನು ಭೂಮಿಯಲ್ಲಿ ಸಾಬೀತುಗೊಳಿಸುವುದಾಗಿದೆ. ಅವರು ನೀಡುವ ಸಾಕ್ಷ್ಯಾಧಾರಗಳನ್ನು ವಿರೋಧಿಸಲು ಯಾರಿಗೂ ಸಾಧ್ಯವಾಗಲಾರದು. ಅಲ್ಲಾಹನು ಬಲಯುತವಾದ ದೃಷ್ಟಾಂತಗಳ ಮೂಲಕ ಪ್ರವಾದಿಗಳ ಸತ್ಯತೆಯನ್ನು ಪ್ರಕಟಿಸುತ್ತಾನೆ. ಆದರೆ ಅವರ ಕೈಗಳಿಂದಲೇ ಅವುಗಳನ್ನು ಪರಿಪೂರ್ಣಗೊಳಿಸುವುದಿಲ್ಲ." (ಅಲ್ ವಸಿಯ್ಯತ್ – ಪುಟ 6)

ಪ್ರವಾದಿಗಳ ಜೀವಿತಕಾಲ ಸಂಕ್ಷಿಪ್ತವಾಗಿರುವುದರಿಂದ ಅವರ ಮೂಲಕ ಸ್ಥಾಪಿಸಲಾದ ಅನುಗ್ರಹಗಳ ಸರಪಳಿ ಶಾಶ್ವತವಾಗಿ ಮುಂದುವರಿಸಲು ಅಲ್ಲಾಹನು ಖಿಲಾಫತ್ ವ್ಯವಸ್ಥೆಯನ್ನು ಜಾರಿಗೊಳಿಸಿದನು. ಅಹ್ಮದಿಯಾ ಜಮಾಅತ್ ಬಗ್ಗೆ ಹೇಳುವುದಾದರೆ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿ ಪ್ರಕಾರ ದೈವಿಕ ವಾಗ್ದಾನವಿದೆ. ಅಹ್ಮದಿಯಾ ಖಿಲಾಫತ್ ಖಿಯಾಮತ್ ದಿನದ ತನಕ ಜಾರಿಯಲ್ಲಿರುವುದು. ಆದುದರಿಂದ ಖಿಲಾಫತ್ ಅನುಗ್ರಹಗಳು ಜೊತೆಗೆ ಜಾರಿಯಲ್ಲಿರುವುವು. ಇದಕ್ಕೆ ಇರುವ ಶರತ್ತೇನೆಂದರೆ ಸತ್ಯವಿಶ್ವಾಸಿಗಳು ಈ ಮಹತ್ವಪೂರ್ಣ ಅನುಗ್ರಹವನ್ನು ಗೌರವಿಸುವವರಾಗಬೇಕು, ಅದರ ನೆಲೆನಿಲ್ಲುವಿಕೆಗೋಸ್ಕರ ಎಲ್ಲಾ ವಿಧ ತ್ಯಾಗಗಳಿಗೆ ಸನ್ನದ್ಧರಾಗಬೇಕು ಮತ್ತು ಪ್ರಾರ್ಥನಾ ನಿರತರಾಗಬೇಕು.

ಹಝ್ರತ್ ಖಲೀಫತುಲ್ ಮಸೀಹ್‌ಸಾನಿ(ರ) ಹೀಗೆ ಹೇಳಿದರು:

"ಸ್ನೇಹಿತರೇ, ನನ್ನ ಕೊನೆಯ ಉಪದೇಶ ಇದಾಗಿದೆ: ಎಲ್ಲಾ ಅನುಗ್ರಹಗಳು ಖಿಲಾಫತ್‌ನಲ್ಲಿ ಇವೆ. ಪ್ರವಾದಿತ್ವ ಒಂದು ಬೀಜವಾಗಿರುತ್ತದೆ. ಅನಂತರ ಖಿಲಾಫತ್ ಅದರ ಪ್ರಭಾವವನ್ನು ಲೋಕದಲ್ಲಿ ಹರಡುತ್ತದೆ. ನೀವು ಸತ್ಯವಾದ ಖಿಲಾಫತನ್ನು ಬಲವಾಗಿ ಹಿಡಿದುಕೊಳ್ಳಿರಿ. ಅದರ ಅನುಗ್ರಹದ ಲಾಭಗಳನ್ನು ಲೋಕಕ್ಕೆ ನೀಡಿರಿ. ಅದರ ಫಲಸ್ವರೂಪವಾಗಿ ಅಲ್ಲಾಹನು ನಮ್ಮ ಮೇಲೆ ದಯೆದೋರಲಿ ಮತ್ತು ನಿಮ್ಮನ್ನು ಈ ಲೋಕದಲ್ಲಿ ಇನ್ನಷ್ಟು ಉನ್ನತಿಗೆ ಏರಿಸುವಂತಾಗಲಿ." (ಅಲ್‌ಫಝ್ಲ್ 20-5-1959)

ನಮ್ಮ ಈಗಿನ ಪ್ರಿಯ ಇಮಾಮ್ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲ್ಲಾಹು – ಅಲ್ಲಾಹನು ಅವರಿಗೆ ಸಹಾಯ ದಯಪಾಲಿಸಲಿ) ಒಂದು ಸಂದೇಶದಲ್ಲಿ ಹೀಗೆಂದರು:

"ಅಲ್ಲಾಹನ ದ್ವಿತೀಯ ದಿವ್ಯಶಕ್ತಿ ಬಹಳ ದೊಡ್ಡ ಒಂದು ಪಾರಿತೋಷಕವಾಗಿದೆ. ಅದರ ಉದ್ದೇಶ ಸಮುದಾಯವನ್ನು ಐಕ್ಯದಿಂದ ಇರಿಸುವುದು ಮತ್ತು ಒಡಕಿನಿಂದ ರಕ್ಷಿಸುವುದಾಗಿದೆ. ಜಮಾಅತ್ ಸದಸ್ಯರನ್ನು ಮುತ್ತುಗಳ ಹಾಗೆ ಪೋಣಿಸಲ್ಪಟ್ಟ ದಾರ ಇದಾಗಿದೆ. ಮುತ್ತುಗಳನ್ನು ಪೋಣಿಸಿ ಇರಿಸದಿದ್ದರೆ ಅವು ಸುರಕ್ಷಿತವಾಗಿ ಇರಲಾರವು ಮತ್ತು ಅವು ಸುಂದರವಾಗಿ ಕಾಣಿಸಲಾರವು. ಒಂದು ದಾರದಲ್ಲಿ ಪೋಣಿಸಲ್ಪಟ್ಟ ಮುತ್ತುಗಳೇ ಸುಂದರವಾಗಿ ಕಾಣಿಸುತ್ತವೆ ಮತ್ತು ಸುರಕ್ಷಿತವಾಗಿರುತ್ತವೆ. ದ್ವಿತೀಯ ದಿವ್ಯಶಕ್ತಿ ಇಲ್ಲದಿದ್ದರೆ ಇಸ್ಲಾಮ್ ಅಭಿವೃದ್ಧಿ ಗಳಿಸದು. ನೀವು ಈ ದಿವ್ಯಶಕ್ತಿಯೊಂದಿಗೆ ಪರಿಪೂರ್ಣ ನಿಷ್ಠೆ, ಪ್ರೀತಿ ಮತ್ತು ಆದರ ಭಾವವನ್ನು ಇರಿಸಿಕೊಳ್ಳಿರಿ. ಖಿಲಾಫತ್ ಅನುಸರಣೆಯ ಭಾವನೆ ಎಷ್ಟು ತೀವ್ರವಾಗಿರಬೇಕೆಂದರೆ, ಅದರ ಮೇಲಿರುವ ಪ್ರೀತಿಯ ಎದುರಿಗೆ ಇತರ ಸಂಬಂಧಗಳು ಕಡಿಮೆ ಮಹತ್ವಹೊಂದಿರಬೇಕು. ಇಮಾಮ್‌ರೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಎಲ್ಲಾ ಅನುಗ್ರಹಗಳು ಇವೆ. ಎಲ್ಲಾ ವಿಧಗಳ ಪಿತೂರಿ, ಪರೀಕ್ಷೆಗಳನ್ನು ಎದುರಿಸಲು ನಿಮಗೆ ಅದೊಂದು ಗುರಾಣಿಯಾಗಿರುವುದು.

"ನೀವು ಅಭಿವೃದ್ಧಿಹೊಂದಬೇಕಾದರೆ ಮತ್ತು ಲೋಕದಲ್ಲಿ ಜಯ ಗಳಿಸಬೇಕಾದರೆ ನಿಮಗೆ ನನ್ನ ಉಪದೇಶವೇನೆಂದರೆ: ನೀವು ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿರಿ. ನೀವು ಈ ಹಬ್‌ಲುಲ್ಲಾಹ್ (ಅಲ್ಲಾಹನ ಪಾಶ)ವನ್ನು ಬಲವಾಗಿ ಹಿಡಿದುಕೊಳ್ಳಿರಿ. ನಮ್ಮ ಎಲ್ಲಾ ಅಭಿವೃದ್ಧಿಯು ಖಿಲಾಫತ್‌ನೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಅಡಕವಾಗಿದೆ." (ಅಲ್‌ಫಝ್ಲ್ ರಬ್‌ವ 30-5-2003)

ಹುಝೂರ್ ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು:

"ಖಿಲಾಫತ್ ಎಂಬ ಅನುಗ್ರಹ ಜಮಾಅತಿನ ಜೀವವಾಗಿದೆ. ಆದುದರಿಂದ ನೀವು ಜೀವಿಸಲು ಬಯಸುವುದಾದರೆ ಅಹ್ಮದಿಯಾ ಖಿಲಾಫತ್‌ನೊಂದಿಗೆ ನಿಷ್ಠೆಯಿಂದ ಅಂಟಿಕೊಳ್ಳಿರಿ. ನೀವು ಪೂರ್ಣವಾಗಿ ಅದರೊಂದಿಗೆ ಸಂಬಂಧ ಸ್ಥಾಪಿಸಿರಿ. ನಿಮ್ಮ ಅಭಿವೃದ್ಧಿಯ ರಹಸ್ಯವು ಖಿಲಾಫತ್‌ನೊಂದಿಗೆ ನಿಮಗಿರುವ ಸಂಬಂಧವಾಗಿದೆ. ನೀವು ಹೇಗೆ ಆಗಬೇಕೆಂದರೆ ಖಲೀಫರ ಇಚ್ಛೆ ನಿಮ್ಮ ಇಚ್ಛೆ ಆಗಬೇಕು. ಖಲೀಫರ ಹೆಜ್ಜೆಗೆ ಹೆಜ್ಜೆಹಾಕಿ ನಡೆಯಿರಿ. ಖಲೀಫರ ಪ್ರೀತಿಗಳಿಸುವುದು ನಿಮ್ಮ ಲಕ್ಷ್ಯವಾಗಿರಲಿ."(ಖಾಲಿದ್ ಮಾಸಿಕ – ಮಾರ್ಚ್/ಎಪ್ರಿಲ್ 2004)

ನಾವೆಲ್ಲರೂ ಖಿಲಾಫತ್‌ನ ಅನುಗ್ರಹಗಳಿಂದ ಲಾಭ ಪಡೆಯುವವರಾಗೋಣ. ಪ್ರತಿಯೊಂದು ಅಹ್ಮದೀ ಮನೆ ಖಿಲಾಫತ್ ಅನುಗ್ರಹ ಪಡೆಯುವಂತಾಗಲಿ. ಅಹ್ಮದಿಯತಿನ ಮುಂದಿನ ಪೀಳಿಗೆಗಳು ಸಹ ಖಿಲಾಫತ್‌ನ ಅನುಗ್ರಹದ ಪಾಲು ಪಡೆಯುವವರಾಗಲಿ – ಆಮೀನ್.

ಮಕ್ಕಳ ಪಂಕ್ತಿ

# ಇಸ್ಲಾಮಿನ ಪ್ರಾಥಮಿಕ ಪಾಠಗಳು



## ಪವಿತ್ರ ಖುರ್‌ಆನ್

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮೂಲಕ ಅಲ್ಲಾಹನಿಂದ ಅವತೀರ್ಣವಾದ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಅದು ಅಲ್ಲಾಹನ ವಚನವಾಗಿದೆ. 23 ವರ್ಷಗಳಲ್ಲಿ ಹಲವು ಸಾರಿ ಸಂದರ್ಭೋಚಿತವಾಗಿ ಅವತೀರ್ಣಗೊಂಡ ಅಲ್ಲಾಹನ ಸಂದೇಶಗಳ ಸಂಗ್ರಹ ಅದಾಗಿದೆ. ಪವಿತ್ರ ಖುರ್‌ಆನ್ ಪರಿಪೂರ್ಣ ಶರೀಅತ್ (ಧಾರ್ಮಿಕ ನಿಯಮಗಳನ್ನೊಳಗೊಂಡ ಸಂಹಿತೆ) ಆಗಿದೆ. ಪೂರ್ವಿಕ ದಿವ್ಯಗ್ರಂಥಗಳಲ್ಲಿರುವ ಎಲಾ ಸತ್ಯಗಳೂ ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿದೆ. ಅದು ಖಂಡಿಸಲ್ಪಡಲಾಗದ ಸಾಕ್ಷ್ಯಾಧಾರಗಳನ್ನು ಒಳಗೊಂಡ ಗ್ರಂಥವಾಗಿದೆ. ಅದಕ್ಕೆ ವಿರುದ್ಧವಾಗಿ ಯಾವ ಸಾಕ್ಷ್ಯಾಧಾರಗಳಿಗೂ ಬೆಲೆ ಕಲ್ಪಿಸಲಾಗದು. ಪವಿತ್ರ ಖುರ್‌ಆನ್ ಮನುಷ್ಯನನ್ನು ನೇರವಾದ ಮಾರ್ಗಕ್ಕೆ ಕೊಂಡೊಯ್ಯುತ್ತದೆ. ಚಿಂತಿಸುವ ಪರಿಶುದ್ಧ ಜನರಿಗೆ ಅದರಲ್ಲಿ ಹೆಚ್ಚು ಹೆಚ್ಚಿನ ದೈವಿಕ ಜ್ಞಾನಗಳು ಲಭಿಸುತ್ತಾ ಇರುವುವು. ಪವಿತ್ರ ಖುರ್‌ಆನ್ ಗ್ರಂಥಕ್ಕೆ ಸಮವಾದ ಯಾವ ಗ್ರಂಥವೂ ಇಲ್ಲ. ಅದರ ಅತ್ಯಂತ ಚಿಕ್ಕ ಅಧ್ಯಾಯಕ್ಕೆ ಸಮವಾಗಿ ಬೇರೆ ಒಂದನ್ನು ರಚಿಸಲು ಯಾರಿಗೂ ಸಾಧ್ಯವಿಲ್ಲ. ಅದು ಸುರಕ್ಷಿತವಾದ ಗ್ರಂಥವಾಗಿದೆ. ಅದರಲ್ಲಿ ಯಾವುದೇ ಮಾರ್ಪಾಟು ಎಂದಿಗೂ ಸಂಭವಿಸಲಾರದು. ಪೂರ್ವಿಕ ದೈವಿಕ ಗ್ರಂಥಗಳೆಲ್ಲ ರದ್ದುಗೊಳಿಸಲ್ಪಟ್ಟಿರುತ್ತದೆ. ಅವುಗಳು ಮನುಷ್ಯರ ಹಸ್ತಕ್ಷೇಪಗಳಿಗೊಳಗಾಗಿ ಕೆಟ್ಟುಹೋಗಿರುತ್ತವೆ. ಆದರೆ ಪವಿತ್ರ ಖುರ್‌ಆನ್ ಸಂರಕ್ಷಿಸಲ್ಪಟ್ಟಿದೆ. ಅದು ಎಂದೂ ಮಾನವರ ಹಸ್ತಕ್ಷೇಪಗಳಿಗೆ ಒಳಗಾಗಲಾರದು. ಅದು ರದ್ದುಗೊಳಿಸಲ್ಪಡಲಾರದು. ಅದರ ಸಂರಕ್ಷಣೆಯ ಜವಾಬ್ದಾರಿ ಅಲ್ಲಾಹನೇ ಸ್ವತಃ ತೆಗೆದುಕೊಂಡಿರುವನು. ಅದು ಲೋಕದ ಅಂತ್ಯದ ತನಕ ನೆಲೆ ನಿಲ್ಲುವುದು. ನಾವೆಲ್ಲರೂ ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಅನುಸರಿಸಬೇಕಾಗಿದೆ.

## ಸುನ್ನತ್ ಮತ್ತು ಹದೀಸ್

ಹಝ್ರತ್ ಪೈಗಂಬರರ(ಸ) ನಡೆವಳಿಕೆಯ ರೀತಿಗೆ "ಸುನ್ನತ್" ಎರಡು ಹೆಸರು. ಹಝ್ರತ್ ಪೈಗಂಬರರ(ಸ) ಶಿಷ್ಯರು ಹಝ್ರತ್‌ರವರ ನಡೆವಳಿಕೆಗಳನ್ನು ತಮ್ಮ ಜೀವಿತದಲ್ಲಿ ಅನುಕರಣೆ ಮಾಡಿದರು. ಶಿಷ್ಯರ ಅನುಯಾಯಿಗಳು ಅವುಗಳನ್ನು ಮುಂದುವರಿಸಿದರು. ಹಾಗೆ ಪಾರಂಪರ್ಯವಾಗಿ ನಮಗೆ ಅದು ಲಬಿಸಿತು. ಅದೇ "ಸುನ್ನತ್".

ಹಝ್ರತ್ ಪೈಗಂಬರರ(ಸ) ವಚನಗಳಿಗೆ ಹದೀಸ್ ಎಂದು ಹೆಸರು. ಇಸ್ಲಾಮಿನ ಪ್ರಥಮ ಸಾಕ್ಷ್ಯಾಧಾರ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಎರಡನೆಯ ಸ್ಥಾನ ಸುನ್ನತ್‌ಗೆ ಮತ್ತು ಮೂರನೆಯ ಸ್ಥಾನ ಹದೀಸ್‌ಗೆ ಇದೆ.

## ಖಲೀಫ

ಪ್ರವಾದಿಗಳ ನಿಧನದ ನಂತರ ಅವರ ಆಧ್ಯಾತ್ಮಿಕವಾದ ಪ್ರತಿನಿಧಿಗಳಾಗಿ ಸತ್ಯ ವಿಶ್ವಾಸಿಗಳ ನೇತಾರರಾಗಿ ಚುನಾಯಿಸಲ್ಪಡುವ ಮಹಾತ್ಮರಿಗೆ ಖಲೀಫ ಎಂದು ಹೆಸರು. ಅವರಿಗೆ ಅಲ್ಲಾಹನ ವಿಶಿಷ್ಟ ಅನುಗ್ರಹ ಲಭಿಸುವುದು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಿಧನದ ನಂತರ ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು ಖಲೀಫರಾಗಿ ಚುನಾಯಿಸಲ್ಪಟ್ಟರು. ಅವರ ನಿಧನದ ನಂತರ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಖಲೀಫರಾದರು. ಅವರ ನಂತರ ಹಝ್ರತ್ ಉಸ್ಮಾನ್ ಇಬ್ನು ಅಫ್ಫಾನ್ ರಝಿಯಲ್ಲಾಹು ಅನ್‌ಹು ಖಲೀಫರಾದರು. ಅವರ ನಂತರ ಹಝ್ರತ್ ಅಲೀ ರಝಿಯಲ್ಲಾಹು ಅನ್‌ಹು ಖಲೀಫರಾದರು. ಹೀಗೆ ಒಬ್ಬರ ಅನಂತರ ಇನ್ನೊಬ್ಬರು ಖಲೀಫರಾಗುವ ವ್ಯವಸ್ಥೆ ಕೆಲವು ಕಾಲದವರೆಗೆ ನೆಲೆ ನಿಂತಿತು. ಅನಂತರ ಮುಸ್ಲಿಮರಲ್ಲಿ ನಿಜವಾದ ಖಲೀಫರಿಲ್ಲದ ಕಾಲ ಉಂಟಾಯಿತು. ಅದರ ಫಲವಾಗಿ ಭಿನ್ನಾಭಿಪ್ರಾಯಗಳೂ ವಿವಿಧ ಪಕ್ಷಗಳೂ ತಲೆದೋರಿದವು. ಹಾಗೆ ಮುಸ್ಲಿಮರು ಅಧಃಪತನಕ್ಕೀಡಾಗುತ್ತಾ ಹೋದರು. ಕ್ರಮೇಣ ಅವರು ಹೆಸರಿಗೆ ಮಾತ್ರ ಮುಸ್ಲಿಮರಾಗಿ ಪರಿಣಮಿಸಿದರು.

## ಹಝ್ರತ್ ಮಸೀಹ್ ಮೌಊದ್(ಅ)

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಇಸ್ಲಾಮಿನ ಪುನರುಜ್ಜೀವನಕ್ಕಾಗಿ ಅಲ್ಲಾಹನಿಂದ ನೇಮಿಸಲ್ಪಟ್ಟವರಾಗಿರುವರು. ಅವರು ಪಂಜಾಬು ರಾಜ್ಯದ ಖಾದಿಯಾನ್‌ನಲ್ಲಿ 1835 ನೇ ಇಸವಿ ಫೆಬ್ರವರಿ 13ನೇ ದಿನಾಂಕ ಜನ್ಮತಾಳಿದರು. ಹಿಜರಿ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಅಲ್ಲಾಹನು ಅವರನ್ನು 14ನೇ ಹಿಜರಿ ಶತಮಾನದ ಮುಜದ್ದಿದ್ ಆಗಿ ನೇಮಿಸಿದನು. ಪವಿತ್ರ ಖುರ್‌ಆನಿನ ಶರೀಅತನ್ನು ಪುನಃ ಸ್ಥಾಪಿಸಲಿಕ್ಕಾಗಿ ಅವರನ್ನು ಅಲ್ಲಾಹನು ಉಮ್ಮತೀ ನಬಿಯಾಗಿ ನಿಶ್ಚಯಿಸಿದನು. ಅವರು ಬಾಲ್ಯದಿಂದಲೇ ಶುದ್ಧ ನಡೆವಳಿಕೆಯವರಾಗಿದ್ದರು. ಎಲ್ಲರೂ ಅವರ ಸದ್ಗುಣಗಳನ್ನು ಮೆಚ್ಚುತ್ತಿದ್ದರು. ಅವರು ಅಲ್ಲಾಹನ ಸ್ಮರಣೆ ಮತ್ತು ಹಝ್ರತ್ ಪೈಗಂಬರರ(ಸ) ಬಗ್ಗೆ ದುರೂದ್ ಪ್ರಾರ್ಥನೆ ಅರ್ಪಿಸುವುದರಲ್ಲಿ ಮಗ್ನರಾಗಿರುತ್ತಿದ್ದರು. ಅವರ ಪ್ರಾಯ ನಲ್ವತ್ತು ವರ್ಷಕ್ಕೆ ಸಮೀಪವಾದಾಗ ಅಲ್ಲಾಹನು ಅವರನ್ನು ಮುಜದ್ದಿದ್ ಆಗಿ ಆಯ್ಕೆ ಮಾಡಿದನು.

ಜನರು ಅವರನ್ನು ವಿರೋಧಿಸಿದರು. ಅವರಿಗೆ ಕಷ್ಟ ನೀಡಿದರು. ಅವರನ್ನು ಬೈದರು. ಅವರು ತಮ್ಮನ್ನು ಬೈದವರ ಪರವಾಗಿ ಶುಭ ಪ್ರಾರ್ಥನೆ ಮಾಡುತ್ತಿದ್ದರು. ಅವರು ಎಂಭತ್ತು ಗ್ರಂಥಗಳನ್ನು ರಚಿಸಿದರು. ಅವು ಅರಬೀ, ಫಾರಸೀ ಮತ್ತು ಉರ್ದು ಭಾಷೆಗಳಲ್ಲಿವೆ. ಅವರಿಗೆ

ಅಲ್ಲಾಹನ ಸಂದೇಶವಾಣಿ ಅವತೀರ್ಣವಾಗುತ್ತಿತ್ತು. ಭೂಮಿಯಲ್ಲಿಯೂ ಆಕಾಶದಲ್ಲಿಯೂ ಅವರ ಸತ್ಯದ ಸಾಕ್ಷ್ಯಗಳಾಗಿ ದೃಷ್ಟಾಂತಗಳು ಗೋಚರಗೊಂಡವು. ಪವಿತ್ರ ಖುರ್‌ಆನ್‌ನಲ್ಲಿ ಮತ್ತು ಹದೀಸುಗಳಲ್ಲಿ ಅವರ ಬಗ್ಗೆ ಭವಿಷ್ಯವಾಣಿಗಳಿವೆ. ಅವರ ಶರೀಅತ್ ಪವಿತ್ರ ಖುರ್‌ಆನ್ ಆಗಿದೆ. ಅವರನ್ನು ನಂಬುವುದು ಕಡ್ಡಾಯವಾಗಿದೆ. ಅವರ ಜೀವಿತದ ಕಾಲದಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ಜನರು ಅವರನ್ನು ನಂಬಿ ಅವರ ಜಮಾಅತಿನಲ್ಲಿ ಸೇರಿದರು.

ಅವರು ತಮ್ಮ ಜಮಾಅತಿನ ಹೆಸರನ್ನು ಅಲ್ಲಾಹನ ಆಜ್ಞೆಯ ಪ್ರಕಾರ "ಅಹ್ಮದಿಯಾ ಜಮಾಅತ್" ಎಂದು ಇರಿಸಿದರು. ಈ ಜಮಾಅತ್ ಲೋಕದ 193 ರಾಷ್ಟ್ರಗಳಲ್ಲಿ ಇಂದು ನೆಲೆವೂರಿದೆ. ಖಾದಿಯಾನ್ ಅಹ್ಮದಿಯಾ ಜಮಾಅತಿನ ಶಾಶ್ವತ ಕೇಂದ್ರವಾಗಿದೆ. 1908ನೇ ಇಸವಿ ಮೇ ದಿನಾಂಕ 26ರಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದರು. ಅವರ ಮೇಲೆ ಅಲ್ಲಾಹನ ಅಸಂಖ್ಯಾತ ಅನುಗ್ರಹಗಳು ಸುರಿಸಲ್ಪಡಲಿ – ಆಮೀನ್

ಹಝ್ರತ್ ಮೌಲಾನ ಹಾಫಿಝ್ ಅಲ್ ಹಾಜ್ ಹಕೀಮ್ ನೂರುದ್ದೀನ್ ಸಾಹೇಬ್ ರಝಿಯಲ್ಲಾಹು ಅನ್‌ಹು ಅವರ ಪ್ರಥಮ ಖಲೀಫ (ಖಲೀಫತುಲ್ ಮಸೀಹ್ ಅವ್ವಲ್) ಆಗಿದ್ದರು. 1914ನೇ ಇಸವಿ ಮಾರ್ಚ್ 13ರಂದು ಅವರು ನಿಧನ ಹೊಂದಿದಾಗ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬ್ ರಝಿಯಲ್ಲಾಹು ಅನ್‌ಹು ದ್ವಿತೀಯ ಖಲೀಫರಾದರು. (ಖಲೀಫತುಲ್ ಮಸೀಹ್ ಸಾನಿ). ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರರಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರು 1965ನೇ ಇಸವಿ ನವೆಂಬರ್ 8ರಂದು ನಿಧನ ಹೊಂದಿದಾಗ ಅವರ ಪುತ್ರರಾದ ಹಝ್ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ (ರಹಿಮಹುಲ್ಲಾಹ್) ತೃತೀಯ ಖಲೀಫ (ಖಲೀಫತುಲ್ ಮಸೀಹ್ ಸಾಲಿಸ್) ಆದರು. ತೃತೀಯ ಖಲೀಫರು 1982ನೇ ಇಸವಿ ಜೂನ್ 9ರಂದು ನಿಧನರಾದಾಗ ಅವ ಸಹೋದರರ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ (ರಹಿಮಹುಲ್ಲಾಹ್) ಚತುರ್ಥ ಖಲೀಫ (ಖಲೀಫತುಲ್ ಮಸೀಹ್ ರಾಬಿಅ್) ಆದರು. ಅವರು 2003ನೇ ಇಸವಿ ಎಪ್ರಿಲ್ 18ರಂದು ನಿಧನರಾದಾಗ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಪಂಚಮ ಖಲೀಫ (ಖಲೀಫತುಲ್ ಮಸೀಹ್ ಖಾಮಿಸ್) ಆದರು. – ಅಯ್ಯದಹುಲ್ಲಾಹು ತಆಲಾ – ಅಲ್ಲಾಹನು ಅವರಿಗೆ ಸರ್ವ ಸಹಾಯಗಳನ್ನು ದಯಪಾಲಿಸಲಿ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಿರಿಯ ಪುತ್ರ ಹಝ್ರತ್ ಶರೀಫ್ ಅಹ್ಮದ್ ಸಾಹೇಬರ ಮೊಮ್ಮಗ ಆಗಿದ್ದಾರೆ. ಅಲ್ಲಾಹನು ಅವರಿಗೆ ದೀರ್ಘಾಯುಸ್ಸನ್ನೂ ಯಶಸ್ಸನ್ನೂ ಅನುಗ್ರಹಿಸಲಿ ಎಂದು ಪ್ರಾರ್ಥಿಸುವ.

ಖಲೀಫರನ್ನು ಅನುಸರಿಸುವುದು ಅತ್ಯಾವಶ್ಯಕವಾಗಿದೆ. ಯಾರು ಖಲೀಫರನ್ನು ತಿರಸ್ಕರಿಸುತ್ತಾನೋ ಅವನ ಬಗ್ಗೆ ಪವಿತ್ರ ಖುರ್‌ಆನ್ ಫಾಸಿಖ್ (ಆಜ್ಞೆಯನ್ನು ಉಲ್ಲಂಘಿಸುವವ) ಎಂದು ಹೇಳಿದೆ. ಅಲ್ಲಾಹನು ಖಲೀಫರಿಗೆ ವಿಶಿಷ್ಟ ಸಹಾಯ ನೀಡುತ್ತಾನೆ. ಅವರ ಮೂಲಕ ಧರ್ಮಕ್ಕೆ ಶಕ್ತಿ ನೀಡುತ್ತಾನೆ. ಅಲ್ಲಾಹನೇ ಖಲೀಫರನ್ನು ನೇಮಿಸುತ್ತಾನೆ ಮತ್ತು ಅವನೇ ಅವರಿಗೆ ಸಹಾಯಕನಾಗಿರುತ್ತಾನೆ. ◆

## ಇಸ್ಲಾಮಿನ ಮುಜದ್ದಿದರು

| ಶತಮಾನ | ಹೆಸರು | ಹಿಜರಿ | ಕ್ರಿಸ್ತಶಕ |
|---|---|---|---|
| 1. | ಉಮರ್ ಬಿನ್ ಅಬ್ದುಲ್ ಅಝೀಝ್ | 60 - 101 | 717 - 720 |
| 2. | ಅಹ್ಮದ್ ಬಿನ್ ಹನ್‌ಬಲ್ | 164 - 241 | 780 - 855 |
| 3. | ಅಬುಲ್ ಹಸನ್ ಅಸ್‌ಹರಿ | 260 - 324 | 873 - 935 |
| 4. | ಅಬೂಬಕರ್ ಬಖ್‌ಲಾನಿ | ? - 403 | ? - 1013 |
| 5. | ಅಲ್ ಗಝ್ಝಾಲಿ | 450 - 505 | 1058 - 1111 |
| 6. | ಅಬ್ದುಲ್ ಖಾದರ್ ಜೀಲಾನಿ | 470 - 561 | 1077 - 1166 |
| 7. | ಇಬ್ನು ತೈಮಿಯಾ | 661 - 728 | 1263 - 1328 |
| 8. | ಇಬ್ನು ಹಜರ್ ಅಸ್‌ಖಲಾನಿ | 773 - 852 | 1372 - 1449 |
| 9. | ಜಲಾಲುದ್ದೀನ್ ಸುಯೂತಿ | 849 - 911 | 1445 - 1505 |
| 10. | ಮುಹಮ್ಮದ್ ತಾಹಿರ್ ಗುಜರಾತಿ | 963 - 1014 | 1556 - 1605 |
| 11. | ಅಹ್ಮದ್ ಸರ್‌ಹಿಂದಿ | 971 - 1034 | 1564 - 1624 |
| 12. | ಶಾಹ್ ವಲಿಯುಲ್ಲಾಹ್ | 1113 - 1175 | 1702 - 1762 |
| 13. | ಅಹ್ಮದ್ ಬರೇಲವಿ | 1201 - 1246 | 1786 - 1831 |
| 14. | ಮಿರ್ಝಾ ಗುಲಾಮ್ ಅಹ್ಮದ್ | 1251 - 1326 | 1835 - 1908 |

# ಇಸ್ಲಾಂ ಕುರಿತು ಅಜ್ಞತೆ

ವಿಜಯ ಕರ್ನಾಟಕ ಅಕ್ಟೋಬರ್ 16 ರಂದು ಎಸ್.ಎಲ್. ಭೈರಪ್ಪ ಮತಾಂತರ ಕುರಿತು ಬರೆದ ಲೇಖನದಲ್ಲಿ ಇಸ್ಲಾಂ, ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ(ಸ) ಬಗ್ಗೆ ತನ್ನ ಅಜ್ಞಾನವನ್ನು ಅನಾವರಣಗೊಳಿಸಿದ್ದಾರೆ.

ಇಸ್ಲಾಂ ಪ್ರತಿಪಾದಿಸುವ ದೇವರು ಮಹಾ ದಯಾವಂತನೂ ಕರುಣಾಮಯನೂ ಆಗಿದ್ದಾನೆ. ಪವಿತ್ರ ಖುರ್‌ಆನಿನ ಪ್ರಥಮ ವಚನ "ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ" ಎಂದಾಗಿದೆ. ಅದರ ಅರ್ಥ: "ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ (ದೇವನ) ನಾಮದಿಂದ" ಎಂದು. ಖುರ್‌ಆನಿನ 114 ಕಡೆಗಳಲ್ಲಿ ಈ ವಚನ ಪುನರಾವರ್ತಿಸಲ್ಪಟ್ಟಿದೆ. ಅಲ್ಲಾಹನ ಕುರಿತು ಖುರ್‌ಆನಿನ ಅನೇಕ ಕಡೆಗಳಲ್ಲಿ "ಗಫೂರುನ್‌ರ್ರಹೀಂ" – "ಕ್ಷಮೆ ನೀಡುವವನು ಮತ್ತು ಕರುಣೆ ತೋರಿಸುವವನು" ಎಂದು ಹೇಳಲಾಗಿದೆ.

"ಬಲ ಪ್ರಯೋಗ ಮಾಡಿ ನಂಬುವವರನ್ನು ಹೆಚ್ಚಿಸಬೇಕು" ಎಂದು ಇಸ್ಲಾಂ ಬೋಧಿಸುವುದಿಲ್ಲ. "ಧರ್ಮಸ್ವೀಕಾರ ವಿಚಾರದಲ್ಲಿ ಯಾವುದೇ ರೀತಿಯ ಬಲಾತ್ಕಾರ ಸಲ್ಲದು" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. (ಖುರ್‌ಆನ್ ಅಧ್ಯಾಯ 2 ವಚನ 256). ಬಲಪ್ರಯೋಗ ಮಾಡುವುದನ್ನು ಖುರ್‌ಆನಿನಲ್ಲಿ ತೀವ್ರವಾಗಿ ಖಂಡಿಸಲಾಗಿದೆ. ಈ ಕೆಳಗಿನ ವಚನಗಳನ್ನು ಪರಿಶೀಲಿಸಿರಿ:

"ನಿನ್ನ ಪ್ರಭು ಇಚ್ಛಿಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಪಡಿಸುವುದಿಲ್ಲ.) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ? (ಖುರ್‌ಆನ್ 10:100)

"ಹೇಳು: ಇದು ನಿನ್ನ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು (ನಂಬಲು) ಇಚ್ಛಿಸುತ್ತಾನೋ ಅವನು ನಂಬಲಿ. ಯಾರು (ನಿರಾಕರಿಸಲು) ಇಚ್ಛಿಸುತ್ತಾನೋ ಅವನು ನಿರಾಕರಿಸಲಿ." (ಖುರ್‌ಆನ್ 18:30)

"ನೀನು ಉಪದೇಶಿಸು; ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲ್ನೋಟಗಾರನಲ್ಲ." (ಖುರ್‌ಆನ್ 88 : 22, 23)

ಬಲಪ್ರಯೋಗದ ವಿರುದ್ಧವಾಗಿ ಖುರ್‌ಆನ್ ಹೀಗೆ ಉಪದೇಶಿಸುತ್ತದೆ:

'ನೀನು ಅವರ ಮೇಲೆ ಯಾವುದೇ ರೀತಿಯಲ್ಲಿ ಬಲಾತ್ಕಾರ ಮಾಡುವವನಲ್ಲ." (ಖುರ್‌ಆನ್ 50:46)

"ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು ಜನರನ್ನು ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು." (ಖುರ್‌ಆನ್ 16:126)

"(ಹೇಳು:) ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ." (ಖುರ್‌ಆನ್ 109:7)

ದೇವನಿಂದ ತನಗೆ ಈ ರೀತಿಯ ವಚನಗಳು ಅವತೀರ್ಣವಾಗಿರುವಾಗ ಮುಹಮ್ಮದ್ ಪೈಗಂಬರರು(ಸ) ಈ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸುವುದಾದರು ಹೇಗೆ? ವಾಸ್ತವಿಕವೇನೆಂದರೆ, ಪೈಗಂಬರರು(ಸ) ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಲು ಬಲಪ್ರಯೋಗ ಮಾಡಿದರು ಎಂಬ ವಾದವನ್ನು ಪುರಸ್ಕರಿಸುವ ಒಂದೇ ಒಂದು ಚಾರಿತ್ರಿಕ ಘಟನೆಯನ್ನು ಉಲ್ಲೇಖಿಸಲು ಸಾಧ್ಯವಿಲ್ಲ.

ಮಹಾತ್ಮಾ ಗಾಂಧೀಜಿ ಹೀಗೆ ಹೇಳಿದ್ದಾರೆ:

"ಮಿಲಿಯಾಂತರ ಜನರ ಹೃದಯಗಳ ಮೇಲೆ ಇಂದು ಆಧಿಪತ್ಯವನ್ನು ಹೊಂದಿರುವ ಮಹಾನುಭಾವರ ಜೀವಿತ ಕಥೆಯ ಉತ್ತಮ ಅಂಶಗಳನ್ನು ತಿಳಿದುಕೊಳ್ಳಲು ನಾನು ಬಯಸಿದೆನು... ಆ ಕಾಲದಲ್ಲಿ ಇಸ್ಲಾಮಿಗೆ ಮಾನವರ ಜೀವಿತದಲ್ಲಿ ಒಂದು ಸ್ಥಾನವನ್ನು ಗಳಿಸಿಕೊಟ್ಟದ್ದು ಖಡ್ಗವಲ್ಲವೆಂದು ನನಗೆ ಹಿಂದಿನ ಕಾಲಕ್ಕಿಂತ ಇಂದು ಹೆಚ್ಚು ಚೆನ್ನಾಗಿ ಮನವರಿಕೆಯಾಯಿತು. ಪ್ರವಾದಿಯ ಕಟ್ಟುನಿಟ್ಟಿನ ಸರಳತೆ, ಪರಿಪೂರ್ಣ ನಿಸ್ವಾರ್ಥತೆ, ಒಪ್ಪಂದ ಪಾಲನೆಯ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿ, ಸ್ನೇಹಿತರು ಮತ್ತು ಅನುಯಾಯಿಗಳ ಬಗ್ಗೆ ಅತ್ಯಂತ ಶ್ರದ್ಧೆ, ಶೌರ್ಯ, ನಿರ್ಭೀತಿ, ದೇವನಲ್ಲಿ ಮತ್ತು ತನ್ನ ದೌತ್ಯದ ಬಗ್ಗೆ ಪರಿಪೂರ್ಣ ನಂಬಿಕೆ ಇವುಗಳೇ ಹೊರತು ಖಡ್ಗವಲ್ಲ ತಮ್ಮ ಮುಂದಿರುವುದನ್ನು ಜಯಿಸಿದ್ದು ಮತ್ತು ಎಲ್ಲ ಅಡ್ಡಿ ಆತಂಕಗಳನ್ನು ನಿವಾರಿಸಿದ್ದು." ("Young India", 1924)

ಗುಲಾಮರ ಬಿಡುಗಡೆಗೆ ಮುಹಮ್ಮದ್ ಪೈಗಂಬರರು(ಸ) ಬಹಳ ಪ್ರಯತ್ನಿಸಿದವರಾಗಿದ್ದಾರೆ. ದಾಸ್ಯ ವಿಮೋಚನೆಗೆ ಧನ ವ್ಯಯಿಸುವವರು ನಿಜವಾದ ಪುಣ್ಯವಂತರೆಂದು ಖುರ್‌ಆನ್ ಘೋಷಿಸುತ್ತದೆ. (ಖುರ್‌ಆನ್ 2:178). ಪಾಪದ ಪ್ರಾಯಶ್ಚಿತ್ತವಾಗಿ ಗುಲಾಮನನ್ನು ಬಿಡುಗಡೆ ಮಾಡಬೇಕೆಂದು ಖುರ್‌ಆನಿನ ಅಧ್ಯಾಯ 4 ವಚನ 93ರಲ್ಲಿ ಹೇಳಲಾಗಿದೆ. ಹಾಕಿದ ಶಪಥದ ಉಲ್ಲಂಘನೆಯ ಪ್ರಾಯಶ್ಚಿತ್ತವಾಗಿಯೂ ಗುಲಾಮನನ್ನು ಬಂಧಮುಕ್ತಗೊಳಿಸಬೇಕೆಂದು ಅಧ್ಯಾಯ 5 ವಚನ 90ರಲ್ಲಿ ಹೇಳಲಾಗಿದೆ. ದಾನಧರ್ಮದ ನಿಧಿಯಿಂದ ದಾಸ್ಯ ವಿಮೋಚನೆ ಮಾಡಬೇಕೆಂದು ಅಧ್ಯಾಯ 9 ವಚನ 60ರಲ್ಲಿ ಹೇಳಲಾಗಿದೆ.

ಈ ಮೇಲಿನಂತೆ ಪವಿತ್ರ ಖುರ್‌ಆನ್ ಆಜ್ಞಾಪಿಸುವಾಗ, "ಗುಲಾಮರನ್ನು ತುಳಿದು ದುಡಿಸಿಕೊಳ್ಳುವ ವಿಧಾನವನ್ನು ಪ್ರವಾದಿ ಮಹಮದರು ಬೋಧಿಸಿದರು" ಎಂದು ಭೈರಪ್ಪನವರು ಹೇಳುವುದು ಹಾಸ್ಯಾಸ್ಪದವಾಗಿದೆ.

**ಮುಹಮ್ಮದ್ ಯೂಸುಫ್,**
ಮಂಗಳೂರು.

# ಅಹ್ಮದಿಯಾ ಜಮಾಅತಿನ ಮುನ್ನಡೆ

(ಹಝ್ರತ್ ಖಲೀಫತುಲ್ ಮಸೀಹ್ V ಅವರ ಭಾಷಣದಿಂದ ಆಯ್ದ ಭಾಗಗಳು)

* ನಾಲ್ಕು ಹೊಸ ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಯಿತು. ತಾಜಕಿಸ್ತಾನ್, ಪಿಲಾವೊ, ಐಸ್‌ಲ್ಯಾಂಡ್ ಮತ್ತು ಲಾಟ್‌ವಿಯ.
* ಒಟ್ಟು 193 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡಿದೆ.
* ಈ ವರ್ಷ 593 ಸ್ಥಳಗಳಲ್ಲಿ ಜಮಾಅತ್ ರೂಪುಗೊಂಡಿತು.
* ಎಂ.ಟಿ.ಎ. ಅಲ್‌ಅರಬಿಯ್ಯ ಚಾನೆಲ್ ಮೂಲಕ ಅನೇಕ ಸತ್ಯಾನ್ವೇಷಕರು ಜಮಾಅತನ್ನು ಪ್ರವೇಶಿಸಿದರು.
* 351 ಮಸೀದಿಗಳ ಹೆಚ್ಚಳವಾಯಿತು. ಇದರಲ್ಲಿ 149 ಮಸೀದಿಗಳನ್ನು ನಾವು ಹೊಸದಾಗಿ ನಿರ್ಮಿಸಿದ್ದು, ವಿಶ್ವಾಸಿಗಳೊಂದಿಗೆ 202 ಮಸೀದಿಗಳು ನಮಗೆ ಲಭಿಸಿದವು.
* 11 ರಾಷ್ಟ್ರಗಳಲ್ಲಿ ಮುದ್ರಣಾಲಯಗಳು ಕಾರ್ಯನಿರತವಾಗಿವೆ.
* ಲಂಡನಿನ ರಖೀಂ ಪ್ರೆಸ್ಸಿನಿಂದ ಈ ವರ್ಷ 2,40,500 ಪ್ರತಿಗಳು ಪುಸ್ತಕಗಳು ಮತ್ತು ಮಾಸಿಕಗಳು ಪ್ರಕಟಗೊಂಡಿವೆ. ಆಫ್ರಿಕದಲ್ಲಿ ಪ್ರಕಟಿಸಲ್ಪಟ್ಟ ಪುಸ್ತಕಗಳ ಪ್ರತಿಗಳ ಸಂಖ್ಯೆ 4,30,000.
* ಈ ವರ್ಷ 4 ಭಾಷೆಗಳಲ್ಲಿ ಖುರ್‌ಆನ್ ಅನುವಾದ ಬಿಡುಗಡೆಯಾಯಿತು – ಬೋಸ್ನಿಯನ್, ಕಿರ್ಗಿಸ್, ಥಯ್, ಮಲಗಾಸಿ. ಇಷ್ಟರ ವರೆಗೆ 68 ಭಾಷೆಗಳಲ್ಲಿ ಅಹ್ಮದಿಯಾ ಜಮಾಅತ್ ಖುರ್‌ಆನ್ ಪ್ರಕಟಿಸಿದೆ.
* ಮಸೀಹ್ ಮೌಊದ್[ಅ] ಅವರ ಕೆಲವು ಗ್ರಂಥಗಳನ್ನು ಅರಬಿ ಭಾಷೆಯಲ್ಲಿ ಅನುವಾದಿಸಿ ಪ್ರಕಟಿಸಲಾಗಿದೆ.
* 45 ರಾಷ್ಟ್ರಗಳಿಂದ ಲಭಿಸಿದ ವರದಿಯನುಸಾರ ಈ ವರ್ಷ 621 ಚಿಕ್ಕ ಮತ್ತು ದೊಡ್ಡ ಪುಸ್ತಕಗಳು ವಿವಿಧ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಆ ಪುಸ್ತಕಗಳ ಒಟ್ಟು ಪ್ರತಿಗಳು 21,24,400
* 957 ಎಗ್ಸಿಬಿಷನುಗಳನ್ನು ಏರ್ಪಡಿಸಲಾಯಿತು. ಬುಕ್‌ಸ್ಟಾಲ್‌ಗಳ ಮೂಲಕ ಎಂಟು ಲಕ್ಷಕ್ಕೂ ಮಿಕ್ಕಿ ಜನರಿಗೆ ಸಂದೇಶ ತಲಪಿಸಲು ಸಾಧ್ಯವಾಯಿತು.
* ಪತ್ರಿಕೆ ಮತ್ತು ಮಾಸಿಕ ಮೂಲಕ (987 ಪತ್ರಿಕೆ ಮತ್ತು ಮಾಸಿಕಗಳಲ್ಲಿ ಜಮಾಅತಿನ ವಾರ್ತೆಗಳು ಪ್ರಕಟವಾಗಿವೆ.) 75 ಕೋಟಿಗೂ ಮಿಕ್ಕಿ ಜನರಿಗೆ ಜಮಾಅತಿನ ಸಂದೇಶ ತಲಪಿಸಲು ಸಾಧ್ಯವಾಯಿತು.
* ವಖ್ಫೆ ನೌ ಯೋಜನೆಯಲ್ಲಿ 2325 ಮಕ್ಕಳ ಹೆಚ್ಚಳವಾಯಿತು. ಈ ಯೋಜನೆಯಲ್ಲಿ ಇಷ್ಟರ ವರೆಗೆ 23765 ಗಂಡು ಮಕ್ಕಳು ಮತ್ತು 13,771 ಹೆಣ್ಣು ಮಕ್ಕಳು; ಹಾಗೆ ಒಟ್ಟು 37,536 ಮಕ್ಕಳು ಸೇರಿದ್ದಾರೆ.
* ನುಸ್ರತ್ ಜಹಾನ್ ಯೋಜನೆಯ ಅಧೀನದಲ್ಲಿ 12 ಆಫ್ರಿಕನ್ ರಾಜ್ಯಗಳಲ್ಲಿ 36 ಆಸ್ಪತ್ರೆಗಳೂ ಕ್ಲಿನಿಕುಗಳೂ ಕಾರ್ಯನಿರತವಾಗಿವೆ. 40 ಡಾಕ್ಟರುಗಳು ಅಲ್ಲಿ ಸೇವೆಸಲ್ಲಿಸುತ್ತಿದ್ದಾರೆ. 11 ರಾಜ್ಯಗಳಲ್ಲಿ 510 ಸ್ಕೂಲುಗಳ ಕಾರ್ಯನಿರತವಾಗಿವೆ. ಹೈಯರ್ ಸೆಕಂಡರಿ ಸ್ಕೂಲುಗಳು, ಜೂನಿಯರ್ ಸೆಕಂಡರಿ ಸ್ಕೂಲುಗಳು, ಪ್ರೈಮರಿ ಸ್ಕೂಲುಗಳು, ನರ್ಸರಿ ಸ್ಕೂಲುಗಳು ಇದರಲ್ಲಿ ಸೇರುತ್ತವೆ.
* ನಮ್ಮ ಎಂ.ಟಿ.ಎ. ಚಾನೆಲ್ ಅಲ್ಲದೆ ಬೇರೆ ರಾಜ್ಯಗಳ ಟಿ.ವಿ. ನಿಲಯಗಳ ಮೂಲಕ ಸಹ ಇಸ್ಲಾಮಿಕ ಸಂದೇಶಗಳನ್ನು ತಲಪಿಸಲು ಸಂದರ್ಭ ಒದಗಿತು. 1051 ಟಿ.ವಿ. ಕಾರ್ಯಕ್ರಮಗಳನ್ನು ಹೀಗೆ ಪ್ರಸಾರ ಮಾಡಲಾಗಿದೆ. ಈ ಮೂಲಕ 699 ತಾಸುಗಳು ನಮಗೆ ಲಭಿಸಿದವು. ಸುಮಾರು 8 ಕೋಟಿ ಜನತೆಗೆ ಜಮಾಅತಿನ ಸಂದೇಶ ತಲಪಿತು.
* ವಿವಿಧ ರೇಡಿಯೋ ನಿಲಯಗಳಿಂದ 215 ತಾಸುಗಳ ಕಾಲ ನಮ್ಮ ಕಾರ್ಯಕ್ರಮಗಳು ಬಿತ್ತರಿಸಲ್ಪಟ್ಟವು. 251 ಕಾರ್ಯಕ್ರಮಗಳು ಪ್ರಸಾರಗೊಂಡವು. ಸುಮಾರು 6 ಕೋಟಿ ಜನರಿಗೆ ಈ ಮೂಲಕ ಸಂದೇಶ ತಲಪಿತು.
* ಬೊರ್ಕಿನೋಫಾಸೊದಲ್ಲಿ ನಮ್ಮ ರೇಡಿಯೋ ನಿಲಯ ಆರಂಭವಾಯಿತು.
* ಅಹ್ಮದಿಯಾ ಜಮಾಅತಿನ ವೆಬ್‌ಸೈಟನ್ನು ಪ್ರತಿ ಮಾಸ ಸುಮಾರು 10 ಲಕ್ಷ ಜನರು ಸಂದರ್ಶಿಸುತ್ತಾರೆ.
* ಈ ವರ್ಷ 3,54,638 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರು 121 ರಾಷ್ಟ್ರಗಳ 351 ವಿವಿಧ ವರ್ಗಗಳಿಗೆ ಸೇರಿದವರಾಗಿದ್ದಾರೆ.
* 2004ರಲ್ಲಿ "ವಸಿಯ್ಯತ್ ಯೋಜನೆ"ಯಲ್ಲಿ 38,183 ಮಂದಿ ಸೇರಿದ್ದರು. ಈಗ ಆ ಸಂಖ್ಯೆ 88,500 ಆಗಿದೆ.

# ಕರ್ನಾಟಕ ರಾಜ್ಯ ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸಮ್ಮೇಳನ

ಕರ್ನಾಟಕ ರಾಜ್ಯ ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸಮ್ಮೇಳಲನವು ಜೂನ್ ೮ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಪ್ರಾತಃಕಾಲ 10 ಗಂಟೆಗೆ ಮೌಲಾನ ಮುಹಮ್ಮದ್ ಉಮರ್ ಸಾಹೇಬ್ (ನಾಝಿರ್ ಇಸ್ಲಾಹೋ ಇರ್‌ಶಾದ್) ಅಹ್ಮದಿಯಾ ಧ್ವಜಾರೋಹಣ ಮಾಡಿದರು. ಬೆಳಗ್ಗಿನ ಅಧಿವೇಶನದ ಅಧ್ಯಕ್ಷತೆಯನ್ನೂ ಅವರೇ ವಹಿಸಿದರು. ಉಸ್ಮಾನ್ ಪಾಶ ಸಾಹೇಬ್ (ಮುಅಲ್ಲಿಂ) ಖುರ್‌ಆನ್ ಪಠಿಸಿದರು. ಮೌಲವಿ ತಾರೀಖ್ ಅಹ್ಮದ್ ಸಾಹೇಬ್ (ಮುಬಲ್ಲಿಗ್) ಭಾಷಾಂತರವನ್ನು ಓದಿದರು. ಶಾರಿಖ್ ಅಹ್ಮದ್ ಸಾಹೇಬ್ ನಝ್ಮ್ ಹಾಡಿದರು.

ಕರ್ನಾಟಕ ಅಹ್ಮದಿಯಾ ಅಮೀರ್ ಶಫೀಉಲ್ಲಾಹ್ ಸಾಹೇಬ್ ಸಮ್ಮೇಳನದ ಉದ್ದೇಶವನ್ನು ವಿವರಿಸುತ್ತಾ ಸಭಿಕರನ್ನು ಸ್ವಾಗತಿಸಿದರು. ಅಹ್ಮದಿಯಾ ಖಿಲಾಫತಿನ ಮಹತ್ವದ ಬಗ್ಗೆ ಅವರು ಬೆಳಕು ಚೆಲ್ಲಿದರು. ಮೌಲಾನ ಬುರ್ಹಾನ್ ಅಹ್ಮದ್ ಝುಫರ್ ಸಾಹೇಬ್ (ನಾಝಿರ್ ನಶ್‌ರೋ ಇಶಾಅತ್) ಖಿಲಾಫತಿನ ನೆರಳಿನಲ್ಲಿ ನೂರು ವರ್ಷಗಳಲ್ಲಿ ಅಹ್ಮದಿಯಾ ಜಮಾಅತಿನ ಪ್ರಗತಿ ಕುರಿತು ಭಾಷಣ ಮಾಡಿದರು. ನದೀಮ್ ಅಹ್ಮದ್ ಮತ್ತು ಸಲೀಮ್ ಅಹ್ಮದ್ ಜೊತೆಗೂಡಿ ನಝ್ಮ್ ಹಾಡಿದರು. ಮುಹಮ್ಮದ್ ಯೂಸುಫ್ ಸಾಹೇಬ್ (ಸಂಪಾದಕ, "ಯುಗರಶ್ಮಿ") ಕನ್ನಡ ಭಾಷೆಯಲ್ಲಿ ಮುಸ್ಲಿಂ ಲೋಕ ಮತ್ತು ಖಿಲಾಫತಿನ ಆವಶ್ಯಕತೆ ಕುರಿತು ಭಾಷಣ ಮಾಡಿದರು. ಮುಹಮ್ಮದ್ ಕಲೀಮ್ ಖಾನ್ ಸಾಹೇಬ್ (ಮುಬಲ್ಲಿಗ್, ಬೆಂಗಳೂರು) ಅಹ್ಮದಿಯಾ ಜಮಾಅತನ್ನು ಪರಿಚಯಪಡಿಸುತ್ತಾ ಅದರ ವಿಶ್ವಾಸಾದರ್ಶಗಳ ಬಗ್ಗೆ ಮಾತನಾಡಿದರು.

ಸಮ್ಮೇಳನದ ದಿನದಂದು ಬೆಂಗಳೂರಿನ ಉರ್ದು ದಿನಪತ್ರಿಕೆಯೊಂದರಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ಪ್ರಕಟವಾದ ಸುಳ್ಳಾರೋಪಗಳಿಗೆ ಮೌಲಾನ ಬುರ್ಹಾನ್ ಅಹ್ಮದ್ ಝುಫರ್ ಸಾಹೇಬ್ ತಕ್ಕುದಾದ ಉತ್ತರವನ್ನು ಕೊಟ್ಟರು. ಅಧಿವೇಶನದ ಅಧ್ಯಕ್ಷರು ಖಿಲಾಫತಿನ ಅನುಗ್ರಹ ಮತು ಮಹತ್ವದ ಕುರಿತು ವಿವರಿಸುತ್ತಾ ಇಂದಿನ ಮುಸ್ಲಿಂ ಲೋಕವು ಖಿಲಾಫತಿನ ಕೊರತೆಯಿಂದಲೇ ಸಂಕಷ್ಟಗಳಿಗೆ ತುತ್ತಾಗಿದೆ ಎಂದು ಹೇಳಿದರು.

ಸಾಯಂಕಾಲ ಐದು ಗಂಟೆಗೆ ಎರಡನೇ ಅಧಿವೇಶನ "ಸರ್ವಧರ್ಮ ಸಮ್ಮೇಳನ" ಆರಂಭವಾಯಿತು. ಈ ಸಭೆಯಲ್ಲಿ ಹಿಂದೂ, ಸಿಖ್ಖ್, ಕ್ರೈಸ್ತ, ಲಿಂಗಾಯಿತ್ ಇತ್ಯಾದಿ ಧರ್ಮಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಅಹ್ಮದಿಯಾ ಅಮೀರ್ ಮುಹಮ್ಮದ್ ಶಫೀಉಲ್ಲಾಹ್ ಸಾಹೇಬ್ ವಹಿಸಿದರು. ಮುಖ್ಯ ಅತಿಥಿಯಾಗಿ ನಾಡೋಜ ಜಸ್ಟಿಸ್ ಎಸ್.ಆರ್. ನಾಯಕ್ (ಮಾನವ ಹಕ್ಕು ಸಮಿತಿ ಅಧ್ಯಕ್ಷ) ಆಗಮಿಸಿದ್ದರು.

ಮುಸದ್ದಿಖ್ ಅಹ್ಮದ್ ಸಾಹೇಬ್ ಖುರ್‌ಆನ್ ಪಠಿಸಿದರು. ಸಲೀಂ ಅಹ್ಮದ್ ಸಾಹೇಬ್ ಕನ್ನಡ ತರ್ಜುಮೆ ಮತ್ತು ಕೆ.ಕೆ. ಬದ್ರುದ್ದೀನ್ ಸಾಹೇಬ್ ಇಂಗ್ಲೀಷ್ ಅನುವಾದ ಓದಿದರು. ಇಸ್‌ಹಾಖ್ ಅಹ್ಮದ್ ಸಾಹೇಬ್ (ತಿಮಾಪುರ) ನಝ್ಮ್ ಹಾಡಿದರು. ಮುಹಮ್ಮದ್ ಸಲೀಮುಲ್ಲಾಹ್ ಸಾಹೇಬ್ ಭಾಷಣಗಾರರನ್ನು ಪರಿಚಯಿಸಿದರು. ಮುಹಮ್ಮದ್ ಕಲೀಮ್ ಖಾನ್ ಸಾಹೇಬ್ ಅತಿಥಿಗಳಿಗೆ ಹಾರಾರ್ಪಣ ಮಾಡಿ ಅಹ್ಮದಿಯಾ ಸಾಹಿತ್ಯಗಳ ಉಡುಗೊರೆಗಳನ್ನು ನೀಡಿದರು.

ಮುಖ್ಯ ಅತಿಥಿ ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶ ಮತ್ತು ಸಮಾಜಸೇವೆಯ ಬಗ್ಗೆ ಶ್ಲಾಘಿಸಿದರು. ಮೌಲಾನ ಮುಹಮ್ಮದ್ ಕರೀಮುದ್ದೀನ್ ಸಾಹೇಬ್ (ಅಡಿಶನಲ್ ನಾಝಿಂ ವಖ್ಫೆ ಜದೀದ್ ಬೇರೂನ್) ಅಹ್ಮದಿಯಾ ಖಿಲಾಫತ್ ಮೂಲಕ ನಡೆಸಲಾಗುವ ಸರ್ವಧರ್ಮ ಸಮ್ಮೇಳನಗಳ ಬಗ್ಗೆ ಬೆಳಕು ಚೆಲ್ಲಿದರು. ಫಾದರ್ ಎ. ಕನಿಕರಾಜ್ (ಸಂಪಾದಕ, 'ದಾಹ' ಮಾಸಿಕ) ಕ್ರೈಸ್ತ ಧರ್ಮದ ಬಗ್ಗೆ, ಸ್ವಾಮಿ ಪರಶುರಾಮ್ ಮಹಾನಂದಿ (ಅಧ್ಯಕ್ಷ, ಮಾನವ ಸೇವಾ ಸಮಿತಿ) ಲಿಂಗಾಯಿತ ಧರ್ಮದ ಬಗ್ಗೆ ಮಾತನಾಡಿದರು. ಅನಂತರ ಶ್ರೀ ನಿ.ಪ್ರ. ಡಾ. ಶ್ರೀ ಶಾಂತವೀರ ಮಹಾಸ್ವಾಮೀಜಿ (ರಾಷ್ಟ್ರಾಧ್ಯಕ್ಷ, ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಳನ) ಭಾಷಣ ಮಾಡಿದರು. ಆ ಬಳಿಕ ಪ್ರೊಫೆಸರ್ ಹರ್‌ಮಂದರ್ ಸಿಂಘ್ ಭಾಟಿಯಾ (ಕಾರ್ಯದರ್ಶಿ ಗುರುದ್ವಾರ ಸಮಿತಿ, ಬೆಂಗಳೂರು) ಮಾತನಾಡಿ ಅಹ್ಮದಿಯಾ ಜಮಾಅತಿನ ಸಮಾಜ ಸೇವೆಯ ಬಗ್ಗೆ ಪ್ರಶಂಸಿಸಿದರು. ಉಮರ್ ಶರೀಫ್ ಸಾಹೇಬ್ (ಎಂ.ಟಿ.ಎ.) ಸುಶ್ರಾವ್ಯವಾಗಿ ನಝ್ಮ್ ಹಾಡಿದರು. ತಮೀಮ್ ಅಬ್ಬಾಸ್ ಸಾಹೇಬ್ (ಉಪಾಧ್ಯಕ್ಷ, ಮಡಿಕೇರಿ ಜಮಾಅತ್) ಕನ್ನಡ ಭಾಷೆಯಲ್ಲಿ ಇಸ್ಲಾಂ ಮತ್ತು ಲೋಕಶಾಂತಿ ಕುರಿತು ಭಾಷಣ ಮಾಡಿದರು. ಕೊನೆಗೆ ಬಶೀರ್ ಅಹ್ಮದ್ ಸಾಹೇಬ್ (ಅಧ್ಯಕ್ಷ, ಸೊರಬ ಜಮಾಅತ್) ಕೃತಜ್ಞತೆ ಸಲ್ಲಿಸಿದರು. ಸಭಾಧ್ಯಕ್ಷರ ನೇತೃತ್ವದಲ್ಲಿ ನಡೆದ ದುಆದೊಂದಿಗೆ ಸಭೆ ಮುಕ್ತಾಯವಾಯಿತು.

ಪ್ರಾತಃಕಾಲ ನಡೆಸಲಾದ ರಕ್ತದಾನ ಶಿಬಿರದಲ್ಲಿ ೬೭ ಮಂದಿ (ಪುರುಷರೂ ಸ್ತ್ರೀಯರೂ) ರಕ್ತದಾನ ಮಾಡಿದರು.

# ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರಿಂದ ಖಲೀಫರಿಗೆ ಸನ್ಮಾನ





ಬ್ರಿಟನಿನ ಹೌಸ್ ಆಫ್ ಪಾರ್ಲಿಮೆಂಟ್‌ನ 30 ಮಂದಿ ಸದಸ್ಯರ ಆತಿಥೇಯ ಸಂಘವು ವೆಸ್ಟ್ ಮಿನಿಸ್ಟರ್‌ನ ಬ್ರಿಟಿಷ್ ಪಾರ್ಲಿಮೆಂಟ್ ಸಂಕೀರ್ಣದಲ್ಲಿ ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರಿಗೆ ವಿಜೃಂಭಣೆಯ ಸನ್ಮಾನ ನೀಡಿತು. ಅಹ್ಮದಿಯಾ ಖಿಲಾಫತಿನ ಶತವಾರ್ಷಿಕ ಸಮಾರಂಭದ ಅಂಗವಾಗಿ ಈ ಸತ್ಕಾರವನ್ನು ಏರ್ಪಡಿಸಲಾಗಿತ್ತು. ಮಸ್‌ಜಿದ್ ಫಝ್ಲುಲ್ ಇರುವ ಚುನಾವಣಾ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯ ಜೆಸ್ಟಿನ್ ಗ್ರೀನಿಂಗ್ ಅವರು ಕಾರ್ಯಕ್ರಮವನ್ನು ಏರ್ಪಡಿಸಿದರು. ಉನ್ನತ ಸ್ಥಾನದಲ್ಲಿರುವ 30 ಪ್ರಮುಖ ಬ್ರಿಟಿಷ್ ಎಂ.ಪಿ.ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರನ್ನು ಅಭಿಸಂಬೋಧಿಸುತ್ತಾ ಇಸ್ಲಾಂ ಮತ್ತು ಮುಹಮ್ಮದ್ ಪೈಗಂಬರರ(ಸ) ಅಧ್ಯಾಪನೆಗಳಿಗೆ ಸಂಬಂಧಿಸಿ ಮತ್ತು ಇಸ್ಲಾಮಿನ ಶಾಂತಿ ಬೋಧನೆಗೆ ಸಂಬಂಧಿಸಿ ಹಝ್ರತ್ ಖಲೀಫ ಭಾಷಣ ಮಾಡಿದರು. ಜಗತ್ತಿನ ರಾಷ್ಟ್ರಗಳು ಕೈಗೊಳ್ಳುವ ರಾಜಕೀಯ ಮತ್ತು ಆರ್ಥಿಕ ಕ್ರಮಗಳು ಲೋಕ ಮಹಾಯುದ್ಧಗಳನ್ನು ಸೃಷ್ಟಿಮಾಡುವವೋ ಎಂದು ತಾನು ಭಯಪಡುತ್ತೇನೆಂದೂ ಒಂದು ಮೇಜಿನ ಸುತ್ತು ಕುಳಿತುಕೊಂಡು ಇದಕ್ಕೆ ಒಂದು ಪರಿಹಾರವನ್ನು ಹುಡುಕಬೇಕಾದುದು ಮಹಾಶಕ್ತಿಗಳ ಜವಾಬ್ದಾರಿಕೆಯಾಗಿದೆಯೆಂದೂ ಖಲೀಫರು ಹೇಳಿದರು.

ಬ್ರಿಟಿಷ್ ಎಂ.ಪಿ.ಗಳು ಅಹ್ಮದಿಯರ ಧರ್ಮ ಸಹಿಷ್ಣುತೆಯನ್ನು ಪ್ರಶಂಸಿಸಿ, ಪಾಕಿಸ್ತಾನದಲ್ಲಿ ಮತ್ತು ಇಂಡೋನೇಶ್ಯಾದಲ್ಲಿ ಅಹ್ಮದಿಯರು ಎದುರಿಸುತ್ತಿರುವ ಪೀಡನೆಗಳನ್ನು ಖಂಡಿಸಿದರು.


# ಜರ್ಮನಿಯಲ್ಲಿ ಮಸೀದಿ ಉದ್ಘಾಟನೆ



ಹಳೆಯ ಪೂರ್ವ ಜರ್ಮನಿಯ ಮೊತ್ತ ಮೊದಲಿನ ಅಹ್ಮದಿಯಾ ಮಸೀದಿಯನ್ನು ಹಝ್ರತ್ ಖಲೀಫರು ಒಕ್ಟೋಬರ್ 16ರಂದು ಉದ್ಘಾಟಿಸಿದರು. ಜಾಗತಿಕ ಅಹ್ಮದಿಯಾ ಮಹಿಳೆಯರ ಸಂಘಟನೆ ಲಜ್ನಾ ಇಮಾಇಲ್ಲಾಹ್ ನೀಡಿದ ದೇಣಿಗೆಯಿಂದ ಈ ಮಸೀದಿ ನಿರ್ಮಿಸಲ್ಪಟ್ಟಿದೆ. ಆದ್ದರಿಂದ ಇಸ್ಲಾಮಿನ ಅತ್ಯುನ್ನತ ಮಹಿಳಾ ರತ್ನವಾದ ಮುಹಮ್ಮದ್ ಪೈಗಂಬರರ(ಸ) ಧರ್ಮಪತ್ನಿಯಾದ ಹಝ್ರತ್ ಖದೀಜರ ನಾಮವನ್ನು ಈ ಮಸೀದಿಗೆ ಇಡಲಾಗಿದೆ.

ಇಸ್ಲಾಮಿನ ಬಗ್ಗೆ ಬಹಳವಾಗಿ ತಪ್ಪು ತಿಳಿದುಕೊಂಡಿದ್ದ ಜರ್ಮನ್ ಬಲಪಕ್ಷದ ನ್ಯಾಶನಲ್ ಡೆಮೋಕ್ರೆಟಿಕ್ ಪಾರ್ಟಿಯ 200ಕ್ಕೂ ಮಿಕ್ಕಿದ ಸದಸ್ಯರು **"Stop Islamisation of Europe"** ಎಂಬ ಬ್ಯಾನರ್‌ನೊಂದಿಗೆ ಉದ್ಘಾಟನಾ ವೇಳೆಯಲ್ಲಿ ಪ್ರದರ್ಶನ ನಡೆಸಿದರು. 2006ರಿಂದ ಮಸೀದಿ ನಿರ್ಮಾಣವನ್ನು ಬಲಪಕ್ಷ ತೀವ್ರವಾದಿಗಳು ಪ್ರತಿಭಟಿಸುತ್ತಿದ್ದರು. ಆದರೆ ಆಡಳಿತ ಪಕ್ಷದವರು ಅಹ್ಮದಿಯರಿಗೆ ಪೂರ್ಣ ಬೆಂಬಲ ನೀಡಿದರು. ಮಸೀದಿ ಜಿಹಾದ್ ನಡೆಸುವ ಸ್ಥಳವಲ್ಲವೆಂದೂ ಅದು ದೇವಾರಾಧನೆಯ ಜಾಗವೆಂದೂ ಖಲೀಫರು ಉದ್ಘಾಟನೆಯ ಸಂದರ್ಭದಲ್ಲಿ ತಿಳಿಹೇಳಿದರು.

# ಫ್ರಾನ್ಸ್‌ನಲ್ಲಿ ಮಸ್‌ಜಿದ್ ಮುಬಾರಕ್ ಉದ್ಘಾಟನೆ



ಪ್ಯಾರಿಸ್: ಫ್ರಾನ್ಸಿನ ಪ್ಯಾರಿಸಿನ ಸಮೀಪ ಸೆಂಟ್ ಪ್ರಿಕ್ಸ್ ಪಟ್ಟಣದಲ್ಲಿ ಒಕ್ಟೋಬರ್ 10ರಂದು ಶುಕ್ರವಾರ ಹಝ್ರತ್ ಖಲೀಫರು ಜುಮುಅ ಖುತುಬ ಮೂಲಕ ಫ್ರಾನ್ಸಿನ ಮಸ್‌ಜಿದ್ ಮುಬಾರಕನ್ನು ಉದ್ಘಾಟಿಸಿದರು. ಯುರೋಪಿನಲ್ಲಿ ಹರಡಿದ್ದ ಇಸ್ಲಾಮೋ ಫೋಬಿಯ ಕಾರಣದಿಂದ ಮೊದಲು ಸೆಂಟ್ ಪ್ರಿಕ್ಸ್ ಮೇಯರ್ ಜೀನ್ ಪಿಯರಿ ಮಸೀದಿ ನಿರ್ಮಾಣಕ್ಕೆ ವಿರೋಧಿಯಾಗಿದ್ದರು. ನಂತರ ಅಹ್ಮದಿಯರು ಇಸ್ಲಾಮಿನ ಬಗ್ಗೆ ಅಹ್ಮದಿಯಾ ವೀಕ್ಷಣವನ್ನು ಅವರಿಗೆ ಮನಗಾಣಿಸಿಕೊಟ್ಟ ಕಾರಣ ಇಸ್ಲಾಮಿನ ವಿರುದ್ಧವಿರುವ ಅವರ ಮನೋಭಾವ ಪೂರ್ಣ ಬದಲಾಗಿ ಮಸೀದಿ ನಿರ್ಮಾಣಕ್ಕೆ ಅವರು ಅನುಮತಿ ನೀಡಿದರು.

ಸೆಂಟ್ ಪ್ರಿಕ್ಸ್ ಪಟ್ಟಣದಲ್ಲಿ 1000ಕ್ಕೆ ಮಿಕ್ಕಿ ಅಹ್ಮದಿಯರಿದ್ದಾರೆ.

## ಸಂಪಾದಕರಿಗೆ ಪತ್ರ

ಮಿತ್ರರೇ,

ನೀವು ಪ್ರೀತಿಯಿಂದ ಕಳುಹಿಸಿದ "ಯುಗರಶ್ಮಿ" ತಲಪಿದೆ. ಲೇಖನಗಳನ್ನು ಓದಿ ಮುಗಿಸಿ ಇದೀಗ ಬರೆಯುತ್ತಿದ್ದೇನೆ.

ಲೇಖನಗಳು ಚೆನ್ನಾಗಿವೆ. ಖುರ್‌ಆನ್ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಉತ್ತಮ ಮಾಹಿತಿ ನೀಡುತ್ತಿದೆ.

ಪತ್ರಿಕೆಯ ಯಶಸ್ಸಿಗೆ ಅಧ್ಯಾತ್ಮ ವಿಚಾರಗಳೊಂದಿಗೆ ಜೀವನ ದರ್ಶನವನ್ನು ಒದಗಿಸಿದರೆ ಹಿತಕರ. ಅಧ್ಯಾತ್ಮದೊಂದಿಗೆ ಒಂದಿಷ್ಟು ವಿಜ್ಞಾನ (ಸುಜ್ಞಾನ). ಇದು ನನ್ನ ಸಲಹೆ ಮಾತ್ರ.

ಪತ್ರಿಕೆ ನಡೆಸುವುದು ಕಷ್ಟದ ಕೆಲಸ. ನಿಮ್ಮ ಸಾಹಸ ಮೆಚ್ಚಿದ್ದೇನೆ. ನನ್ನ ಪ್ರತಿಯನ್ನು ಆತ್ಮೀಯ ಮುಸ್ಲಿಂ ಕುಟುಂಬವೊಂದಕ್ಕೆ ನೀಡಿದ್ದೇನೆ. ಆ ಮನೆಯಲ್ಲಿ ಎಲ್ಲರೂ ಕನ್ನಡ ಓದುವವರು. (ಎಂಟು ಮಂದಿ).

ವಂದನೆಗಳು.

ಕಾಸರಗೋಡು
2 - 7 - 2008

ಪ್ರೀತಿಪೂರ್ವಕ
**ಕೆ.ಟಿ. ಶ್ರೀಧರ್**
ಲೇಖಕ

ಮಾನ್ಯರೇ,

ತಮ್ಮ ಪತ್ರಿಕೆ ತುಂಬಾ ಚೆನ್ನಾಗಿದ್ದು, ನಾನು ಗ್ರಂಥಾಲಯದಲ್ಲಿ ನೋಡಿದೆ. ಅತ್ಯಂತ ಕಡಿಮೆ ಬೆಲೆ ಅದಕ್ಕೆ ಇಟ್ಟಿರುವಿರಿ. ತಮ್ಮ ಧರ್ಮದ ಸಂಕೇತ ಸೂಚನೆಗಳನ್ನು ಗಮನಿಸಿದೆ. ಚೆನ್ನಾಗಿವೆ. ತಮ್ಮ ಪತ್ರಿಕೆ ಹೀಗೇ ಮುಂದುವರಿಯಲಿ ಎಂಬ ಬೇಡಿಕೆ.

**- ಮಂಜುನಾಥ**
ಸಂಬಾಳಗಲ್ಲಿ, ಮಾಳಾಪುರ,
ಧಾರವಾಡ.

# ನಿಧನ ವಾರ್ತೆಗಳು

## ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬ್



ಕೇರಳದ ಅಹ್ಮದಿಯರಿಗೆ ಸುಪರಿಚಿತರೂ ದೀರ್ಘಕಾಲ ಮುಅಲ್ಲಿಂ ಮತ್ತು ಮುಬಲ್ಲಿಗ್ ಆಗಿ ಸೇವೆಸಲ್ಲಿಸಿದವರೂ ಆದ ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬ್ ಎಪ್ರಿಲ್ 23ರಂದು ದಿವಂಗತರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".)

ಅವರು ಕೇರಳದ ಕೊಲ್ಲಂ ಜಿಲ್ಲೆಯ ಕರುನಾಗಪಳ್ಳಿ ಸಮೀಪದ ಕುಟ್ಟಿವಟ್ಟಂ ನಿವಾಸಿಯಾಗಿದ್ದರು. ಮೊದಲು ಅಹ್ಮದಿಯಾ ಜಮಾಅತಿನ ವಿರುದ್ಧವಾಗಿ ಭಾಷಣ ಮಾಡುತ್ತಿದ್ದ ಅವರಿಗೆ ಆಕಸ್ಮಿಕವಾಗಿ ಅಹ್ಮದಿಯಾ ಪುಸ್ತಕವೊಂದರ ಕೆಲವು ಪುಟಗಳು ಕೈಗೆ ಸಿಕ್ಕಿದಾಗ ಅದನ್ನು ಓದಿ, ಕ್ರಮೇಣ ಅಹ್ಮದಿಯಾ ಜಮಾಅತಿನ ಸತ್ಯವನ್ನು ಮನಗಂಡು 1962 ರಲ್ಲಿ ಅಹ್ಮದಿಯತ್ ಸ್ವೀಕರಿಸಿದರು. ಉತ್ತಮ ವಾಗ್ಮಿಯಾಗಿದ್ದ ಅವರು ಖುರ್‌ಆನ್, ಬೈಬಲ್, ಭಗವದ್ಗೀತೆ ಮೊದಲಾದ ಧಾರ್ಮಿಕ ಗ್ರಂಥಗಳನ್ನು ಉದ್ಧರಿಸಿಕೊಂಡು ಕೇರಳದ ಎಲ್ಲೆಲ್ಲೂ ಭಾಷಣಮಾಡುತ್ತಿದ್ದಾಗ ಜನರು ತಂಬಾ ಆಕರ್ಷಿತರಾಗುತ್ತಿದ್ದರು.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

## ಎಂ. ಆಲಿಕೋಯ ಸಾಹೇಬ್



ಕೇರಳ ಅಹ್ಮದಿಯಾ ಜಮಾಅತಿನ ಮುಖವಾಣಿ "ಮಿನಾರತ್" ಇಂಗ್ಲಿಷ್ ತ್ರೈಮಾಸಿಕದ ಸಂಪಾದಕರಾಗಿದ್ದ ಜನಾಬ್ ಎಂ. ಆಲಿಕೋಯ ಸಾಹೇಬ್ ಕಳೆದ ಸಪ್ಟೆಂಬರ್ 11ರಂದು ಕಲ್ಲಿಕೋಟೆಯ ಸ್ವಗೃಹದಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.") ಅವರಿಗೆ 83 ವರ್ಷ ಪ್ರಾಯವಾಗಿತ್ತು.

ಕೇರಳ ರಾಜ್ಯ ಅಹ್ಮದಿಯಾ ಮುಸ್ಲಿಂ ಸಮಿತಿ ಮತ್ತು ಕಲ್ಲಿಕೋಟೆ ಅಹ್ಮದಿಯಾ ಜಮಾಅತ್ ಸಮಿತಿಯಲ್ಲಿ ವಿವಿಧ ಹುದ್ದೆಗಳನ್ನು ಅವರು ವಹಿಸಿ ಸ್ತುತ್ಯರ್ಹವಾದ ಸೇವೆ ಸಲ್ಲಿಸಿದ್ದರು. ಅವರು ಚಿಂತಕನೂ ಲೇಖಕನೂ ಆಗಿದ್ದರು. ಅಹ್ಮದಿಯಾ ಪ್ರಚಾರ ಕಾರ್ಯದಲ್ಲಿ ಅವರು ನವನವೀನ ರೀತಿಗಳನ್ನು ಕೈಗೊಂಡಿದ್ದರು. "ಎಗ್ಸಿಬಿಶನ್ ಅಹ್ಮದಿಯಾ ಇಂಟರ್‌ನೇಶನಲ್" ಅವರು ಅಹ್ಮದಿಯಾ ಜಮಾಅತಿಗೆ ನೀಡಿದ ಅಮೂಲ್ಯ ಕೊಡುಗೆಯಾಗಿದೆ. ಅವರು ಮೃದುಭಾಷಿಯೂ ಸರಳಜೀವಿಯೂ ಆಗಿದ್ದರು.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.

## ಬಿ.ಎ. ಮೊಹಿದಿನ್ ಸಾಹೇಬ್

ಮಡಿಕೇರಿ ಅಹ್ಮದಿಯಾ ಜಮಾಅತಿನ ಮಾಜಿ ವೈಸ್ ಪ್ರೆಸಿಡೆಂಟ್ ಬಿ.ಎ. ಮೊಹಿದಿನ್ ಸಾಹೇಬರು 20-09-08 ರಂದು ನಿಧನಹೊಂದಿದರು. ಅವರಿಗೆ 58 ವರ್ಷ ಪ್ರಾಯವಾಗಿತ್ತು. ನಿಷ್ಠಾವಂತ ಅಹ್ಮದಿ ಆಗಿದ್ದ ಅವರು ಪ್ರಭಾವಶಾಲಿ ತನ್ನ ಅಹ್ಮದಿಯೇತರ ಬಂಧುಗಳ ಒತ್ತಡಗಳಿಗೆ ತಲೆಬಾಗಿರಲಿಲ್ಲ. ಅವರು ಕನ್ನಡ ಭಾಷೆಯ ಬಗ್ಗೆ ತುಂಬಾ ಅಭಿಮಾನ ಹೊಂದಿದ್ದರು. ಅವರು ಪತ್ನಿಯನ್ನೂ ಏಕಮಾತ್ರ ಪುತ್ರಿಯನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿ ಹೋಗಿದ್ದಾರೆ. ಮೃತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

## ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

### ಹಝ್ರತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.

2. ಪ್ರತಿ ದಿನ ಎರಡು ರಕ್ಅತ್ ನಫಲ್ ನಮಾಝ್ ಮಾಡಬೇಕು.

3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು.

☆ بِسْمِ اللّٰهِ الرَّحْمٰنِ الرَّحِيْمِ۔ اَلْحَمْدُ لِلّٰهِ رَبِّ الْعٰلَمِيْنَ ۔اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔اِيَّاكَ نَعْبُدُ وَاِيَّاكَ نَسْتَعِيْنُ۔

اِهْدِ نَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ ۔غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅರ್ಥ: ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ,) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ ۔

☆ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ۔

ಅರ್ಥ: ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು – ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು – ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ )

5 ☆ رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً ۔اِنَّكَ اَنْتَ الْوَهَّابُ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ )

6. ☆ رَبَّنَا اَفْرِغْ عَلَيْنَا صَبْرًا وَّثَبِّتْ اَقْدَامَنَا وَانْصُرْنَا عَلَى الْقَوْمِ الْكٰفِرِيْنَ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ )

7. ☆ اَللّٰهُمَّ اِنَّا نَجْعَلُكَ فِىْ نُحُوْرِهِمْ وَ نَعُوْذُبِكَ مِنْ شُرُوْرِهِمْ ۔

ಅರ್ಥ: ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ )


8. ☆ اَسْتَغْفِرُ اللّٰهَ رَبِّىْ مِنْ كُلِّ ذَنْبٍ وَّاَتُوْبُ اِلَيْهِ ۔

ಅರ್ಥ: ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು ನನ್ನ ಎಲ್ಲ ಪಾಪಗಳಿಗೆ ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ )

9. ☆ – سُبْحَانَ اللّٰهِ وَبِحَمْدِهٖ سُبْحَانَ اللّٰهِ الْعَظِيْمِ۔ اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ۔

ಅರ್ಥ: ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ ಸಕಲ ಸ್ತುತಿಸ್ತೋತ್ರಗಳು. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ )

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್





# ಮುಸ್ಲಿಂ ಟಿಲಿವಿಷನ್ ಅಹ್ಮದಿಯಾ ಇಂಟರ್‌ನೇಷನಲ್

# THE FIRST ISLAMIC SATELLITE CHANNEL

## BROADCASTING ROUND THE CLOCK

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5° EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alislam.org    Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ


ಬೆಲೆ : ರೂ. 200/-


ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001


MASJID
KHILAFAT CENTENARY YEAR
2008
Allah has promised to those among you
who believe and do good works
that He will, surely, make them Successors.
- Holy Qur-an 24:56


BAIT-UR RAHMAN
USA
KHILAFAT CENTENARY
2008
Prophethood shall remain among you as long as God wills. He will bring about its end and follow it with Khilafat on the precepts of prophethood for as long as He wills and then bring about its end. Kingship shall then follow to remain as long as God wills and then come to an end. There shall then be tyranny which shall remain as long as God wills and come to an end upon His decree. There will then emerge Khilafat on the precepts of Prophethood - Hadrat

Registered with the Registrar of Newspapers for India No. R.N. 27354/75
YUGARASHMI Kannada Quarterly, December - 2008
AHMADIYYA KHILAFAT CENTENARY SPECIAL ISSUE

